ಲೋಚನ

ಸಂಪುಟ ೫ ಜೂನ್ ೧೯೮೭ ಸಂಚಿಕೆ ೧

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

‘ ಲೋಚನ ’

ಸಂಪಾದಕ ಮಂಡಲಿ

ಲೇಖನಗಳು–ಟಿಪ್ಪಣಿಗಳು

19–12–1982ರಂದು ಪ್ರತಿಷ್ಠಾನದ ಕಾರ್ಯಸಮಿತಿಯಲ್ಲಿ ಅಂಗೀಕೃತವಾದ ನಿರ್ಣಯ: “ಸಂಶೋಧನಾತ್ಮಕ ಪಾಂಡಿತ್ಯಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು – ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ ಇವುಗಳಿಗೆ ಸಂಬಂಧಿಸಿದ ಟೀಕೆ ಟಿಪ್ಪಣಿಗಳು – ಇವುಗಳಿಗೆ ಮೀಸಲಾದ ವಿದ್ವತ್‌ಪತ್ರಿಕೆಯನ್ನು ವರ್ಷಕ್ಕೆ ಎರಡು ಸಲ (ಜೂನ್ ಮತ್ತು ಡಿಸೆಂಬರ್) ಪ್ರಕಟಿಸಬಹುದೆಂದೂ ಈ ಪತ್ರಿಕೆಗೆ “ಲೋಚನ” ಎಂಬ ಹೆಸರನ್ನು ಇಡಬಹುದೆಂದೂ ತೀರ್ಮಾನಿಸಲಾಯಿತು. ಪ್ರಾರಂಭದಲ್ಲಿ ಪತ್ರಿಕೆಯ ಗಾತ್ರ ಡೆಮಿ 1/8 ಆಕಾರದ 64 ಪುಟಗಳಷ್ಟು ಇರಬಹುದೆಂದು ಸೂಚಿಸಲಾಯಿತು.”

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ನಿರ್ಣಯದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾದ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. ‘ಲೋಚನ’ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಟಿಪ್ಪಣಿಗಳು 1–2 ಪುಟಗಳ ಪರಿಮಿತಿಯಲ್ಲಿರಬಹುದು. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

ವಿನಿಮಯ ಪತ್ರಿಕೆಗಳು

೧. ಸೋವಿಯತ್ ದೇಶ (ಮದರಾಸು), ೨. ಲಹರಿ (ಮದರಾಸು), ೩. ಅಂಕಣ (ಬೆಂಗಳೂರು), ೪. ಗ್ರಂಥಲೋಕ (ಮೈಸೂರು), ೫. ಅನ್ವೇಷಣೆ (ಬೆಂಗಳೂರು), ೬. ಚಿನ್ನಾಡಿ (ಶಿವಮೊಗ್ಗ), ೭. ತರಳಬಾಳು (ಸಿರಿಗೆರೆ), ೮. ಸಾಧನೆ (ಬೆಂಗಳೂರು), ೯-೧೧. ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ (ಮೈಸೂರು).

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಲೇಖಕರು ಕಳಿಸಬೇಕು.

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ; ಆದರೆ ಕಳಿಸಿದರೆ, ‘ಸ್ವೀಕಾರ’ ಭಾಗದಲ್ಲಿ ಗಮನಿಸಲಾಗುವುದು. ವೈಶಿಷ್ಟ್ಯವುಳ್ಳ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

For Distribution among Members only

LOCHANA

[Half-yearly Journal Published by B.M.Sri Memorial Foundation, 54, 3rd Cross, Gavipuram Extn., Bangalore-19]

Chief Editor: Prof. G. Venkatasubbiah
Editor: Prof. (Vidvan) T. Keshava Bhat

Vol. 5 *June 1987* *No. 1*

CONTENTS

ಸದಸ್ಯರಲ್ಲಿ ವಿತರಣೆಗೆ ಮಾತ್ರ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

[ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ೫೪, ೩ನೇ ಅಡ್ಡಬೀದಿ, ಗವಿಪುರ ವಿಸ್ತರಣ, ಬೆಂ-೧೯]

ಪ್ರಧಾನ ಸಂಪಾದಕ : ಪ್ರೊ|| ಜಿ. ವೆಂಕಟಸುಬ್ಬಯ್ಯ

ಸಂಪಾದಕ : ಪ್ರೊ|| ವಿದ್ವಾನ್ ಟಿ. ಕೇಶವ ಭಟ್ಟ

ಸಂಪುಟ ೫ ಜೂನ್ ೧೯೮೭ ಸಂಚಿಕೆ ೧

ಪರಿವಿಡಿ

ಮುಳುಬಾಗಿಲ ಮುದ್ದು ಹನುಮಂತ

ರಾಗ : ಕಲ್ಯಾಣಿ   ತಾಳ : ಮಿಶ್ರಛಾಪು

ಶರಣು ಶ್ರೀ ವೀರಹನುಮಂತ । ಶ್ರೀರಾಮರ ಬಂಟ ।
ಶರಣು ಶ್ರೀ ವೀರ ಹನುಮಂತ ॥ ಪಲ್ಲ ॥

ಅಂಜನಾದೇವಿ ಗರ್ಭದಿ ಬಂದೆ । ಸಂಜೀವ ತಂದೆ ।
ಕಂಜನಾಭನೆ ಗತಿಯೆಂದೆ ।
ಮೇಘಮಾರ್ಗದಿ ಬಂದು ಇಂದ್ರಜಿತನ ಕೊಂದು ।
ಪಾದದೊಳು ಮೆಟ್ಟಿದ ದಿಟ್ಟ ॥ ೧

ಅಸುರರ ಪಡೆಗಳನು ಬಡಿದೆ । ಅನಾಥರೊಡೆಯ ।
ದಶರಥರಾಮರ ಭಂಟ ।
[1][ದುಶ್ಮನರ][1] ಗಂಡ ದೂಷಕರಿಗೆ ಕೆಂಡ ।
ಬಹು ಕುಟಿಲಕುಹಕರಿಗೆ ನೀನೆ ಗಂಟಲ ಗಾಣ ॥ ೨

ಧರ್ಮೀಯ[2][ರನು][2] ಪೊರೆವ । ನಿಷ್ಕರ್ಮಿಯ ।
ಚಂಡನಾಡಿ ಬರುವ ।
ವರಮುನಿಗಳ ಪ್ರಿಯ ವಜ್ರಕೈ[3][ಯವನೆ][3]
ಗುರುನಿರತ ತಾರಕ ಬ್ರಹ್ಮ ॥ ೩

ಅಷ್ಟದಿಕ್ಕಿಗೆ ಅಧಿಕವಾದ । ಶೇಷಾದ್ರಿಗಿರಿಯ ।
ಶ್ರೀವೆಂಕಟರಮಣಗೆ ಭಕ್ತನಾದ ।
ಸದ್ಭಕ್ತಾದಿಗಳಿಗೆಲ್ಲ ಸಕಲ ಯಿಷ್ಟಾರ್ಥಗಳನೀವ ।
ಸ್ವಾಮಿಂದ್ರ[4][ಪ್ಪ್ಯ][4]ಳ್ಳ ಮೂರುತಿ [5][ಮುಳುಬಾಗಿಲ][5] ಮುದ್ದು ಹನುಮಂತ ॥ ೪

[ತಿಮ್ಮಪ್ಪದಾಸರ ‘ಶ್ರೀಕೃಷ್ಣಬಾಲಲೀಲೆ’ಯನ್ನು ಸಂಪಾದನೆ ಮಾಡುವ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ‘ಶ್ರೀಕೃಷ್ಣಬಾಲಲೀಲೆಯ ಕೀರ್ತನೆಗಳು’ ಎಂಬ ಹೆಸರಿನ, ಕೆ.ಬಿ. ೨೦೪ ಸಂಖ್ಯೆಯ, ಕಾಗದದ ಹಸ್ತಪ್ರತಿಯ ನಕಲನ್ನು ಪಾಠಪರಿಷ್ಕರಣಕ್ಕಾಗಿ ತರಿಸಿಕೊಳ್ಳಲಾಯಿತು. ಈ ಹಸ್ತಪ್ರತಿಯ ೨೦ ಕೀರ್ತನೆಗಳ ಪೈಕಿ ತಿಮ್ಮಪ್ಪದಾಸರವೇ ಎಂದು ಖಚಿತವಾಗಿ ಗೊತ್ತಾದವು ೧೦ ಕೀರ್ತನೆಗಳು ಮಾತ್ರ. ಬೇರೆಯವರಿಂದ ರಚಿತವಾದವು ಉಳಿದ ಹತ್ತು. ಇವುಗಳ ಪೈಕಿ ಮುಳುಬಾಗಿಲ ಹನುಮಂತನನ್ನು ಕುರಿತದ್ದೂ ಒಂದು. ವೆಂಕಟರಮಣನ ಮುದ್ರಿಕೆ ಇರುವುದರಿಂದ ಇದೂ ತಿಮ್ಮಪ್ಪದಾಸರದೆಂದು ತೋರಬಹುದು. ಆದರೆ ಭಾಷಾಶೈಲಿ, ಕೀರ್ತನೆಯ ಬಂಧ, ಇವುಗಳು ತಿಮ್ಮಪ್ಪದಾಸರವು ಎನ್ನಿಸುವುದಿಲ್ಲ. ಶ್ರೀಪಾದರಾಜರದು ಎನ್ನೋಣವೆಂದರೆ ‘ರಂಗವಿಠಲ’ ಮುದ್ರಿಕೆಯಿಲ್ಲ. ಬಹುಶಃ ಶ್ರೀಪಾದರಾಜರ ಶಿಷ್ಯಪರಂಪರೆಯವರು ಯಾರೋ ರಚಿಸಿದ್ದು ಇರಬಹುದು. ಕೀರ್ತನೆ ಯಾರದ್ದಾದರೂ ಆಗಿರಲಿ, ದೇವನಹಳ್ಳಿಯಲ್ಲಿ ಹುಟ್ಟಿದರೂ ಮುಳುಬಾಗಿಲಿನವರಾದ ಪೂಜ್ಯ

---

1 ದುಸುಮ್ಮಾನರ   2 ಸಂ. ಸೇರ್ಪಡೆ   3 ಕೈಪನೆ   4 ಪ್ಪ   5 ಮುಳ್ಳುಬಾಗಲ

ಡಿ. ವಿ. ಜಿ. ಯವರಿಗೆ ಮುಳುಬಾಗಿಲಿನ ಆಂಜನೇಯಸ್ವಾಮಿ ಇಷ್ಟದೈವ. ಡಿ. ವಿ. ಜಿ. ಅವರ ಜನ್ಮಶತಮಾನೋತ್ಸವದ ಉದ್ಘಾಟನೆ ಈ ವರ್ಷ ಮಾರ್ಚಿ ೧೭ರಂದು ಮುಳುಬಾಗಿಲಿನಲ್ಲಿ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ಬಹುಶಃ ಅಪ್ರಕಟಿತವಾದ ಮೋಲ್ಕಂಡ ಕೀರ್ತನೆಯನ್ನು ಪ್ರಕಟಿಸುವುದು ಉಚಿತವೆಂದು ಭಾವಿಸಿ ಪ್ರಕಟಿಸಲಾಗಿದೆ.

ಡಿ.ವಿ.ಜಿ.ಯವರೇ ಆಂಜನೇಯಸ್ವಾಮಿಯನ್ನು ಕುರಿತು ರಚಿಸಿರುವ ಪದ್ಯಮಾಲಿಕೆಯಿಂದ ಕೆಲವನ್ನು ಈ ಕೆಳಗೆ ಎತ್ತಿಕೊಟ್ಟಿದೆ. —ಎಂ.ವಿ.ಸೀ.]

ಶ್ರೀಮದಾಂಜನೇಯ ಸ್ವಾಮಿ

ಶ್ರೀ ಹನುಮಂತಂ ನಿರವಧಿ-
ಸಾಹಸರತನಂತು ಸೂನೃತ ಶ್ರೀಮಂತಂ
ಮೋಹವಿದೂರ ಸ್ವಾಂತಂ
ಸ್ವಾಹಂವರ್ಜಿತ ಮಹಾತ್ಮಸೇವೈಕಾಂತಂ

ಯೋಗಿಯುಮಂ ಸರ್ವಸ್ವ-
ತ್ಯಾಗಿಯುಮಂ ಧರ್ಮಪುರುಷಕೈಂಕರ್ಯೈಕೋ-
ದ್ಯೋಗಿಯುಮಂ ಸ್ವಾತ್ಮಾರ್ಪಣ-
ಭೋಗಿಯುಮಂ ವಾಯುಸೂನು ಸಾರ್ಥಕಜೀವನ್

ಮರೆತಂ ತನ್ನನೆ ತಾನಾ
ಮರುತ್ಸುತಂ ರಾಮದಾಸ್ಯಸಂರಂಭಗಳೊಳ್
ಪರಿದುದು ಬಾಳ್ವೆಯ ಭಾರಂ
ಶಿರಕಾಯ್ತುದವಂಗೆ ದೇವಪದ ವರಕುಸುಮಂ

ಜೀವನ್ಮುಕ್ತಂ ಮಾರುತಿ
ಸೇವಾಸಂಭ್ರಮದೆ ಜಾರಿತಾತನ ಬಂಧಂ
ಆವಗಮೆಲ್ಲೆಡೆಯುಂ ನಿಜ
ದೈವವನೇ ಕಾಣ್ಬ ಕಣ್ಣಿಗೆತ್ತಣ ಬಂಧಂ

ವಾರಿಧಿ ಲಂಘನ ಸಂಜೀವಗಿರ್ಯಾನಯನಾದಿ ಮಹಾದ್ಭುತವೋ
ವೀರವೊ ದಾನವ ವಿಧ್ವಂಸನದೊಳ್ ಹಾಸ್ಯವೊ ದಶಮುಖ ಸಂಮುಖದೊಳ್
ಶ್ರೀ ರಾಘವ ಸೀತಾ ಶೃಂಗಾರದ ದೌತ್ಯವೊ ಶರಣಾಗತ ಜನದೊಳ್
ಕಾರುಣ್ಯವೊ ಬಹು ರಸರುಚಿ ಹನುಮನ ಕಾವ್ಯದಿ ಭಕ್ಷ್ಯಧಿರಸ ಪಾಕಂ.

[ಡಿ.ವಿ.ಜಿ. ಪದ್ಯಗಳಿಗೆ ಆಧಾರ: "ಶ್ರೀಮಾನ್ ಡಿ. ವಿ. ಜಿ. ಅವರು ಚಿತ್ರಿಸಿರುವ ಶ್ರೀಮದಾಂಜನೇಯ ಸ್ವಾಮಿ"; ಲೇಖಕರು: ಶ್ರೀ ಡಿ.ಆರ್. ವೆಂಕಟರಮಣನ್; ಪ್ರಕಾಶಕರು: ವ್ಯಾಸಂಗ ಗೋಷ್ಠಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ.]

ಪ್ರಾಚೀನ ಕನ್ನಡ ವ್ಯಾಕರಣಗಳಲ್ಲಿ ಕಾರಕಗಳ ನಿರೂಪಣೆ

—ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಕನ್ನಡದ ಪ್ರಥಮ ವ್ಯಾಕರಣವೆನ್ನಬಹುದಾದ[1] ಶಬ್ದಸ್ಮೃತಿಯಲ್ಲಿ ಎರಡನೆಯ ನಾಗವರ್ಮನು

ಧಾತು ವಿವರ್ಜಿತಮರ್ಥೋರ್ । ಪೇತಂ ಲಿಂಗಂ ಮಮಿಂಕೆಯುದದೋಳ್[2] ಎಂದಿಂ
ತೀ ತೆಱದಿಂದೇೞಕ್ಕುಂ । ಖ್ಯಾತ ವಿಭಕ್ತಿಗಳದರ್ಕೆ ಕಾರಕವಶದಿಂ ॥ ಸೂತ್ರ ೧೫

ಪರಿವಿಡಿಯೆ ಕರ್ತೃ ಕರ್ಮಂ । ಕರಣಾಖ್ಯಂ ಸಂಪ್ರದಾನಮುಪನಯನಾಖ್ಯಾ
ನಿರತಮುಪಾದಾನಮುಮಧಿ । ಕರಣಮುಮೆನೆ ಕಾರಕಂಗಳಾಱುಂ ನೆಗೞ್ಗುಂ ॥
ಸೂತ್ರ ೧೬

ಎಂಬ ಪದ್ಯಗಳಲ್ಲಿ ಕಾರಕವಶದಿಂದ ಲಿಂಗಕ್ಕೆ ಏಳು ವಿಭಕ್ತಿಗಳಾಗುವುದೆಂದು ಹೇಳಿ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣಗಳೆಂದು ಆರು ಕಾರಕಗಳನ್ನು ಹೇಳಿದ್ದಾನೆ.

---

1 ಕಾವ್ಯಾವಲೋಕನದ ಪ್ರಥಮಾಧಿಕರಣವಾದ ಶಬ್ದಸ್ಮೃತಿ, ಸ್ವತಂತ್ರ ಗ್ರಂಥವೆನಿಸುವಷ್ಟು ದೊಡ್ಡದು. ಇದರ ಗಾತ್ರ ಉಳಿದ ನಾಲ್ಕು ಅಧಿಕರಣಗಳ ಒಟ್ಟು ಗಾತ್ರಕ್ಕಿಂತ ಸ್ವಲ್ಪ ಕಡಿಮೆ. ಈ ಗ್ರಂಥಕ್ಕಿಂತ ಸುಮಾರು ಇನ್ನೂರು ವರ್ಷಗಳ ಹಿಂದೆ ರಚಿತವಾದ ಕವಿರಾಜಮಾರ್ಗದಲ್ಲಿ ವ್ಯಾಕರಣ ಭಾಗವಿಲ್ಲ. ಅದರ ಪ್ರಥಮ ಪರಿಚ್ಛೇದದಲ್ಲಿ ಕಾವ್ಯದೋಷಗಳನ್ನು ಹೇಳುವಾಗ ಆನುಷಂಗಿಕವಾಗಿ ಕೆಲವು ವ್ಯಾಕರಣ ವಿಷಯಗಳ ಪ್ರಸ್ತಾಪವಿದೆ.

ಕಾವ್ಯಾವಲೋಕನದಲ್ಲಿ ಕವಿರಾಜಮಾರ್ಗವನ್ನು ಉಲ್ಲೇಖಿಸಿಲ್ಲವಾದರೂ ಗ್ರಂಥಕಾರನು ಅದನ್ನು ನೋಡಿರಬಹುದು. ಮೊದಲು ಕನ್ನಡ ವ್ಯಾಕರಣವಾದ ಶಬ್ದಸ್ಮೃತಿಯನ್ನು ಬರೆದು ಅದು ವಿದ್ವನ್ಮಾನ್ಯತೆಯನ್ನು ಪಡೆದು ತಾನು **ಅಭಿನವ ಶರ್ವವರ್ಮ**ನೆಂಬ ಹೊಗಳಿಕೆಗೆ ಪಾತ್ರನಾದ ಮೇಲೆ, ಕವಿರಾಜಮಾರ್ಗವನ್ನು ಮೀರಿಸಬೇಕೆಂಬ ಅಭಿಲಾಷೆಯಿಂದ, ಶಬ್ದಸ್ಮೃತಿಯನ್ನು ಮೊದಲನೆಯ ಅಧಿಕರಣವನ್ನಾಗಿ ಮಾಡಿ, ಅದಕ್ಕೆ ಅಲಂಕಾರಶಾಸ್ತ್ರ ವಿಷಯಕವಾದ ಮುಂದಿನ ಭಾಗವನ್ನು ಸೇರಿಸಿ ಪೂರ್ಣ ಗ್ರಂಥವನ್ನು ಕಾವ್ಯಾವಲೋಕನವೆಂದು ಕರೆದಿರುವ ಸಾಧ್ಯತೆ ಇದೆ.

ಸಂಸ್ಕೃತದಲ್ಲಿ ಭೋಜಕೃತವಾದ **ಸರಸ್ವತೀಕಂಠಾಭರಣ**ವೆಂಬ ಒಂದೇ ಹೆಸರುಳ್ಳ ಎರಡು ಗ್ರಂಥಗಳಿವೆ—ಒಂದು ವ್ಯಾಕರಣ, ಮತ್ತೊಂದು ಅಲಂಕಾರಶಾಸ್ತ್ರ. (ಭೋಜನ ಕಾಲ ಕ್ರಿಸ್ತಶಕ 10-11 ಶತಮಾನ).

2 ಮೈಸೂರು ವಿಶ್ವವಿದ್ಯಾನಿಲಯದಿಂದ 1967ರಲ್ಲಿ ಪ್ರಕಟಿತವಾದ ಕಾವ್ಯಾವಲೋಕನದಲ್ಲಿ **ಮಮಿಂಕೆಯುದದೋಳ್** ಎಂದಿದೆ. ಇತರ ಕನ್ನಡ ವ್ಯಾಕರಣಗಳ ಪ್ರಕಾರ ಸಪ್ತಮೀ

ಕರ್ಣಾಟಕ ಭಾಷಾಭೂಷಣಕಾರ ನಾಗವರ್ಮನಾದರೋ[3] 'ಅಥ ಕಾರಕಂ ನಿರೂಪ್ಯತೇ'[4] ಎಂಬ ಸೂತ್ರವನ್ನೂ, ಅದಕ್ಕೆ "ಸಂಜ್ಞಾಸಂಧಿ ವಿಭಕ್ತಿನಿಯಮಾನನ್ತರಂ ಕರ್ತೃ ಕರ್ಮ ಕರಣ ಸಂಪ್ರದಾನಾಪಾದಾನ ಸ್ವಾಮ್ಯಾಧಿಕರಣಾಖ್ಯಂ ಕಾರಕಂ ಯಥಾಕ್ರಮಂ ನಿರೂಪ್ಯತೇ" ಎಂಬ ವೃತ್ತಿಯನ್ನೂ ಕೊಟ್ಟು, 'ಸ್ವಾಮ್ಯ' ಎಂಬ ಕಾರಕವನ್ನು ಹೆಚ್ಚಾಗಿ ಹೇಳಿದ್ದಾನೆ. ಈ ಸೂತ್ರದನಂತರ ಕಾರಕ ಮತ್ತು ವಿಭಕ್ತಿಗಳಿಗೆ ಸಂಬಂಧಿಸಿದ 14 ಸೂತ್ರಗಳಿವೆ, ಇವುಗಳ ಪೈಕಿ 3 ಸೂತ್ರಗಳು 'ಅಪಾದಾನೇ ಪಂಚಮೀ', 'ಸಂಬಂಧೇ ಷಷ್ಠೀ' ಮತ್ತು 'ಅಧಿಕರಣೇ ಸಪ್ತಮೀ'.[5] 'ಸಂಬಂಧೇ ಷಷ್ಠೀ' ಸೂತ್ರಕ್ಕೆ 'ಸ್ವಸ್ವಾಮಿ ಭಾವಾದಿ ಸಂಬಂಧೇ ಷಷ್ಠೀ ವಿಭಕ್ತಿರ್ಭವತಿ' ಎಂಬ ವೃತ್ತಿಯಿದೆ.

ವಿಭಕ್ತಿ ಪ್ರತ್ಯಯ 'ಒಳ್' ಆದುದರಿಂದಲೂ, ಮುಂದಿನ ಪದ್ಯ (೮೬)ದಲ್ಲಿನ 'ನೆಲದೊಳೊದವಿಸು ಜಸಮಂ' ಎಂಬ ಪ್ರಯೋಗದಲ್ಲಿ ಒಳ್ ಪ್ರತ್ಯಯವೇ ಇರುವುದರಿಂದಲೂ 'ದೋಳ್' ಎಂಬುದು ಅಚ್ಚಿನ ದೋಷವಿರುವಂತೆ ತೋರುತ್ತದೆ. ಹಿಂದಿನ ಮುದ್ರಣದ ಪ್ರತಿ ನನಗೆ ದೊರಕಲಿಲ್ಲ.*

---

* ಶಿ. ಶಿ. ಬಸವನಾಳ ಮತ್ತು ಕೇಪು ಶಂಕರನಾರಾಯಣ, ಇವರಿಂದ ಸಂಪಾದಿತವಾಗಿ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ 1939ರಲ್ಲಿ ಪ್ರಕಾಶಿತವಾದ ಕಾವ್ಯಾವಲೋಕನಂ ಪ್ರತಿಯಲ್ಲಿ 'ಮಮಿಂಕೆಯದದೊಳ್' ಎಂಬ ಶುದ್ಧರೂಪವೇ ಇದೆ.

—ಸಂ.

3 ಕಾವ್ಯಾವಲೋಕನ ಭಾಷಾಭೂಷಣಗಳು ಭಿನ್ನ ಕರ್ತೃಕಗಳೆಂದೂ, ಭಾಷಾಭೂಷಣವು ಕ್ರಿ.ಶ. 1120ರ ಅನಂತರ ರಚಿತವಾಯಿತೆಂದೂ ನನ್ನ ಅಭಿಪ್ರಾಯ. ವಿವರಗಳಿಗೆ ನೋಡಿ—

ಶಂ. ಬಾ. ಜೋಶಿ ಅಭಿನಂದನ ಗ್ರಂಥ 'ಅಧ್ಯಯನ' (ಬೆಂಗಳೂರು, 1980) :

ನಾಗವರ್ಮರು (ಒಂದು ಸಮೀಕ್ಷೆ) ಎಂಬ ಲೇಖನ, ಪುಟ 541–554.

ಪ್ರೊ॥ ಪಿ. ಶ್ರೀಕೃಷ್ಣಭಟ್ಟರು ಸಹ ಈ ಗ್ರಂಥಗಳು ಭಿನ್ನ ಕರ್ತೃಕಗಳೆಂಬ ತೀರ್ಮಾನಕ್ಕೆ ಬಂದಿದ್ದಾರೆ. (ಕರ್ನಾಟಕ ಭಾರತಿ ಸಂಪುಟ ೮, ಸಂಚಿಕೆ ೪–ಮೇ 1976)–'ಕರ್ಣಾಟಕ ಭಾಷಾಭೂಷಣದ ಕರ್ತೃ?' ಎಂಬ ಲೇಖನ, ಪುಟ ೩–೨೩. ಈ ಲೇಖನ ಪ್ರಕಟವಾಗುವ ಮುಂಚೆಯೇ ನನ್ನ ಲೇಖನವನ್ನು ಬರೆದಾಗಿತ್ತು. ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಈ ಲೇಖನವನ್ನು ನನ್ನ ಗಮನಕ್ಕೆ ತರುವ ಹೊತ್ತಿಗೆ 'ಅಧ್ಯಯನ' ಗ್ರಂಥದ ಬಹುಭಾಗ ಅಚ್ಚಾಗಿತ್ತು. ಆದುದರಿಂದ ಭಟ್ಟರ ಲೇಖನವನ್ನು ನಾನು ಉಲ್ಲೇಖಿಸಲು ಆಗಲಿಲ್ಲ.

ಈಚೆಗೆ ಶ್ರೀಮಾನ್ ಸೀತಾರಾಮ ಜಾಗೀರ್‌ದಾರ್ ಸಹ ಕಾವ್ಯಾವಲೋಕನ ಭಾಷಾಭೂಷಣಗಳ ನಾಗವರ್ಮರು ಭಿನ್ನರೆಂದು ಬರೆದಿದ್ದಾರೆ. (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೭೦, ಸಂಚಿಕೆ ೨, ಡಿಸೆಂಬರ್ 1985–ಪುಟ ೧೧೫–೧೧೮ ಮತ್ತು ೧೧೬ನೇ ಪುಟದಲ್ಲಿನ ಅಡಿ ಟಿಪ್ಪಣಿ ೫). 'ಪಂಪ, ಅಭಿನವ ಪಂಪ : ಕೆಲವು ಸಮಸ್ಯೆಗಳು' ಎಂಬ ಲೇಖನ.

4 ಕರ್ಣಾಟಕ ಭಾಷಾಭೂಷಣ (Ed. Lewis Rice 1984) ಸೂತ್ರ 75.

5 ಆರ್. ನರಸಿಂಹಾಚಾರ್ಯರಿಂದ ಸಂಪಾದಿತವಾದ ಕರ್ಣಾಟಕ ಭಾಷಾಭೂಷಣಂ (ಶಾರದಾ ಮಂದಿರದ ಪುನರ್ಮುದ್ರಣ, 1975), ಸೂತ್ರಗಳು 84–86.

ಕೇಶಿರಾಜನ ಶಬ್ದಮಣಿದರ್ಪಣದ ನಾಮಪ್ರಕರಣದಲ್ಲಿ

ಸಂದಿಸಿ ಮಮಿಂಕೆಯುದ ದೊಳೆ।ಯೆಂದಿರ್ಪುವು ಸಪ್ತವಿಧ ವಿಭಕ್ತಿಗಳವು ಮಾ
ರ್ಗಂದಪ್ಪದರ್ಥವಶದಿಂ । ಪಿಂದೆಣಿಸಿದ ವಿವಿಧವಿಧದ ಲಿಂಗಕ್ಕೆಲ್ಲಂ ॥ 6

ಎಂಬ ವಿಭಕ್ತಿಗಳನ್ನು ಹೇಳುವ ಸೂತ್ರದಲ್ಲಿ ಕಾರಕಗಳ ನಿರ್ದೇಶವಿಲ್ಲ. ಕಾರಕ ಮತ್ತು ವಿಭಕ್ತಿಗಳ ಯೋಗವನ್ನು ಹೇಳುವ ಸೂತ್ರಗಳಲ್ಲಿ (೧೨೬ ರಿಂದ ೧೩೩) ಬೇರೆ ಬೇರೆ ಕಾರಕಗಳ ಹೆಸರುಗಳಿವೆಯೇ ಹೊರತು 'ಕಾರಕ' ಎಂಬ ಪದವಿಲ್ಲ. ಮುಂದೆ ೧೩೮, ೧೪೦ ಮತ್ತು ೧೪೫ನೆಯ ಸೂತ್ರಗಳಲ್ಲಿ ಕಾರಕ ಪದವನ್ನು ಉಪಯೋಗಿಸಿದ್ದರೂ ಕಾರಕಗಳೆಷ್ಟೆಂದು ಯಾವ ಸೂತ್ರದಲ್ಲಿಯೂ ಹೇಳಿಲ್ಲ. ಆದರೆ ಮೇಲೆ ಕೊಟ್ಟಿರುವ ೯೩ರ ವೃತ್ತಿಯು

"ಪಿಂತೆ ಪೇೞ್ದ ನಾನಾ ತೆಱದ ಲಿಂಗಂಗಳ್ಗೆ ಪರವಾಗಿ ನಾಮ ವಿಭಕ್ತಿಗಳ್, ...ಏೞಾಗಿ, ಕಾರಕವಶದಿಂ ಪತ್ತುಗುಂ. ಆ ಕಾರಕಮೆಂಬುದು ಕ್ರಿಯಾ ನಿಮಿತ್ತಂ; ಅದು ಕರ್ತೃವೆಂದುಂ, ಕರ್ಮವೆಂದುಂ, ಕರಣಮೆಂದುಂ, ಸಂಪ್ರದಾನಮೆಂದುಂ, ಅಪಾದಾನಮೆಂದುಂ, ಅಧಿಕರಣಮೆಂದುಂ ಷಡ್ವಿಧಮಾಗಿರ್ಪುದು; ಷಷ್ಠಿಯೆಂದು ಸಂಬಂಧಾರ್ಥಂ" ಎಂದಿರುವುದರಿಂದಲೂ ವೃತ್ತಿ ಕೇಶಿರಾಜನದೇ ಎಂಬ ವಿಷಯ ದಲ್ಲಿ ಭಿನ್ನಾಭಿಪ್ರಾಯವಿಲ್ಲವಾದುದರಿಂದಲೂ ಕೇಶಿರಾಜನು ಶಬ್ದಸ್ಮೃತಿಯಲ್ಲಿನ ಕಾರಕ ನಿರೂಪಣೆಯನ್ನು ಪೂರ್ಣವಾಗಿ ಒಪ್ಪಿದಂತಾಯಿತು.

ಶಬ್ದಾನುಶಾಸನದ ಯಾವ ಸೂತ್ರದಲ್ಲಿಯೂ ಕಾರಕವೆಂಬ ಪದವಿಲ್ಲ. ಶಾಸನದ ವೃತ್ತಿ ಭಾಷಾಮಂಜರಿಯಲ್ಲಿ **'ಕರ್ಮಣ್ಯಮ್'** (ಸೂ. 204) ಮತ್ತು 'ಗೆದಾಪ್ಯೇ-ದೇಯ್ಯೈಃ' (ಸೂ. 213) ಎಂಬ ಸೂತ್ರಗಳ ವೃತ್ತಿಯಲ್ಲಿ ಕಾರಕವೆಂಬ ಪದವಿರುವುದ ರಿಂದ'ಕರ್ಮ' ಮತ್ತು 'ದೇಯ್ಯೈರಾಪ್ಯ' ಎಂದರೆ ಸಂಪ್ರದಾನ[7] ಇವು ಕಾರಕಗಳೆಂದು ಹೇಳಿದಂತಾಯಿತು. ವೃತ್ತಿಯಲ್ಲಿ ಎಲ್ಲಿಯೂ ಇತರ ಕಾರಕಗಳ ಹೆಸರಾಗಲೀ ಕಾರಕಗಳೆಷ್ಟೆಂದಾಗಲೀ ಹೇಳಿಲ್ಲ.

ಸೂತ್ರ, ವೃತ್ತಿಗಳಿಗೆ ವ್ಯಾಖ್ಯಾನವಾದ ಮಂಜರೀಮಕರಂದದಲ್ಲಿ 'ಕರ್ಮಣ್ಯಮ್' ಸೂತ್ರದ ವ್ಯಾಖ್ಯಾನದಲ್ಲಿ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ ಮತ್ತು ಅಧಿಕರಣಗಳ ವಿವರಣೆಯಿದೆ. 'ಕರೋತೀತಿ ಕಾರಕಂ' (ಮಾಡು ವವನು ಕಾರಕ) ಎಂದು ಕಾರಕಪದದ ವ್ಯುತ್ಪತ್ತಿಯಾದುದರಿಂದ ಕರ್ತೃವಿಗೆ ಮಾತ್ರ

---

6 ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ (ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು, 1920). ಸೂತ್ರ ೯೩.

7 'ಕರ್ಮಣ್ಯಮ್' ಸೂತ್ರದ ವೃತ್ತಿ–ಕ್ರಿಯಾ ವ್ಯಾಪ್ಯಂ ಕರ್ಮ. ತಸ್ಮಿನ್ ಅನುಕ್ತೇ ಕಾರಕೇ ಲಿಂಗಾತ್ ಅಮ್ ಪ್ರತ್ಯಯೋ ಭವತಿ.

'ಗೆದಾಪ್ಯೇ ದೇಯ್ಯೈಃ' ಸೂತ್ರದ ವೃತ್ತಿ–ದೇಯ್ಯೈರಾಪ್ಯೇ ಕಾರಕೇ ಲಿಂಗಾತ್ ಗೆರ್ಭವತಿ. ಕರ್ಣಾಟಕ ಶಬ್ದಾನುಶಾಸನಂ (Ed. ಆರ್. ನರಸಿಂಹಾಚಾರ್, Bangalore 1923)

ಕಾರಕತ್ವವಲ್ಲವೇ ಎಂಬ ಪೂರ್ವ ಪಕ್ಷವನ್ನೆತ್ತಿ, ಕ್ರಿಯೆಯಲ್ಲಿ ಮುಖ್ಯ ಮತ್ತು ಉಪಸರ್ಜನ ಎಂದು ಎರಡು ಭೇದಗಳಿವೆಯೆಂದೂ ಸ್ವತಂತ್ರವಾಗಿ ಮುಖ್ಯಕ್ರಿಯೆಯನ್ನು ಕರ್ತೃಕಾರಕವು ನಿರ್ವಹಿಸುವುದೆಂದೂ ಅಂಗಕ್ರಿಯೆಗಳನ್ನು ಕರ್ಮಾದಿ ಕಾರಕಗಳು ನಿರ್ವಹಿಸುವುವೆಂದೂ ಸಮಾಧಾನ ಹೇಳಿದ್ದಾನೆ. ತನ್ನ ಹೇಳಿಕೆಗೆ ಪ್ರಮಾಣವಾಗಿ ಕಾರಿಕೆಯೊಂದನ್ನೂ ಉದಾಹರಿಸಿದ್ದಾನೆ[8].

ಪ್ರೊ॥ ಶಿ. ಶಿ. ಬಸವನಾಳರ ಸಂಪಾದಕತ್ವದಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ 1941ರಲ್ಲಿ ಪ್ರಕಾಶಿತವಾದ ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆಯ 302ನೇ ಪುಟದಲ್ಲಿರುವ

ಕರ್ತಾ ಕರ್ಮ ಚ ಕರಣಂ ಸಂಪ್ರದಾನಂ ತಥೈವ ಚ।
ಅಪಾದಾನಂ ಚಾಧಿಕರಣಂ ಷಡ್ವಿಧಂ ಕಾರಕಂ ಮತಂ ॥

ಎಂಬ ಶ್ಲೋಕವು ಶಬ್ದಾನುಶಾಸನ ಅದರ ವೃತ್ತಿ ವ್ಯಾಖ್ಯಾನಗಳಲ್ಲಿಲ್ಲ. ಅದು ವಿದ್ವಾನ್ ಕುಂಡಲಿಗಿರಿಯಾಚಾರ್ಯರಿಂದ ಉದಾಹೃತವಾದ ಪ್ರಾಚೀನ ಶ್ಲೋಕ.

ಮಂಜರೀ ಮಕರಂದದಲ್ಲಿನ ಕಾರಕನಿರೂಪಣೆ ಶಬ್ದಸ್ಮೃತಿ ಮತ್ತು ಶಬ್ದಮಣಿ ದರ್ಪಣಗಳ ನಿರೂಪಣೆಗಳೊಂದಿಗೆ ಹೊಂದುತ್ತದೆ. ಮಂಜರೀ ಮಕರಂದ

---

8 ನನು ಕಥಂ ಕರ್ಮಾದೇಃ ಕಾರಕತ್ವಂ? ಯತಃ ಕರೋತೀತಿ ಕಾರಕಮಿತಿ ವ್ಯುತ್ಪತ್ತ್ಯಾ ಕರ್ತುರೇವ ಕಾರಕತಾ, ಕರ್ಮಾದೀನಾಂತು ಕ್ರಿಯತ ಇತಿ ಕರ್ಮ, ಕ್ರಿಯತೇ ಅನೇನೇತಿ ಕರಣಂ, ಸಂಪ್ರದೀಯತೇ ಅಸ್ಮಾತ್ ಇತಿ ಸಂಪ್ರದಾನಂ, ಅಪಾದೀಯತೇ ಅಸ್ಮಾದಿತ್ಯಪಾದಾನಂ, ಅಧಿಕ್ರಿಯತೇ ಅಸ್ಮಿನ್ನಿತ್ಯಧಿಕರಣಂ—ಇತಿ ವ್ಯುತ್ಪತ್ತ್ಯಾ ಕರ್ತೃಸಾಧನಕಾರಕಪದೇನ ಸಾಮಾನಾಧಿಕರಣ್ಯಾಭಾವಾದಿತಿ ಚೇತ್–ಸತ್ಯಂ. ಕ್ರಿಯಾ ಹಿ ದ್ವೇಧಾಃ ಮುಖ್ಯೋಪಸರ್ಜನ ಭೇದಾತ್. ತತ್ರ ಯಾ ಸಾಕ್ಷಾದ್ಧಾತುನೋಚ್ಯತೇ ಸಾ ಮುಖ್ಯಾ. ಯಾ ತು ನಾನ್ತರೀಯಕ ಸಿದ್ಧಾ ಸಾ ಉಪಸರ್ಜನಾ....ಸಾಮಾನ್ಯತಃ ಕಾರಕಮಾತ್ರಸ್ಯ ಕರ್ತೃತ್ವೇಽಪಿ ವಿಶೇಷೇಣ ತು ಯದ್ವ್ಯಾಪಾರಾಯತ್ತೇ ಕಾರಕಾಂತರ ಪ್ರವೃತ್ತಿನಿವೃತ್ತೀ ಸಕಲಕಾರಕ ಸಾಕಲ್ಯ ಸಾಧ್ಯಾಯಾಂ ಕ್ರಿಯಾಯಾಂ ಯತ್ ಸ್ವತಂತ್ರತಯಾ ಕಾರಕಾಂತರಸ್ಯ ಯಥಾ ಸ್ವಂ ಸ್ವಯಮೇವ ಪ್ರವರ್ತಕಂ ನಿವರ್ತಕಂ ವಾ ಸ್ವಯಂ ಕೇನಚಿತ್ ಅಪ್ರಯುಕ್ತಮಿತಿ ಅಪರತಂತ್ರಂ ತತ್ ಕರ್ತೃಕಾರಕಮುಚ್ಯತೇ; ಸ್ವತಂತ್ರಃ ಕರ್ತಾ ಇತಿ ವಚನಾತ್. ಇತರತ್ ಸಾಧಕತಮತ್ವಾದಿ ಧರ್ಮ ವಿವಕ್ಷಾಯಾಂ ಕರಣಾದಿ ವ್ಯಪದೇಶ ಭಾಗ್ಭವತಿ. ತದುಕ್ತಂ–ಸ್ವವ್ಯಾಪಾರೇಷು ಕರ್ತೃತ್ವಂ ಸರ್ವತ್ರೈವಾಸ್ತಿ ಕಾರಕೇ।
ವ್ಯಾಪಾರಭೇದಾಪೇಕ್ಷಾಯಾಂ ಕರಣತ್ವಾದಿ ಸಂಭವಃ ॥ ಇತಿ.

(ಮೇಲಿನ ಶ್ಲೋಕದ ಆಕರ ತಿಳಿಯದು. ಅದಕ್ಕೂ ಭರ್ತೃಹರಿಕೃತ ವಾಕ್ಯಪದೀಯದ ಸಾಧನ ಸಮುದ್ದೇಶದ 18ನೇ ಕಾರಿಕೆಗೂ ಮೊದಲ ಪದದಲ್ಲಿ ಮಾತ್ರ ವ್ಯತ್ಯಾಸವಿದೆ. ಆ ಕಾರಿಕೆಯಲ್ಲಿ ಮೊದಲ ಪದ 'ನಿಷ್ಪತ್ತಿ ಮಾತ್ರೇ').

ತಮ್ಮ ತಮ್ಮ (ಅಂಗ) ಕ್ರಿಯೆಗಳಲ್ಲಿ ಎಲ್ಲ ಕಾರಕಗಳಿಗೂ ಕರ್ತೃತ್ವವಿದೆ. (ಪ್ರಧಾನ ಕ್ರಿಯೆಯಲ್ಲಿ) ಇವುಗಳ ಪಾತ್ರಭೇದವನ್ನು ಹೇಳುವಾಗ ಕರಣಾದಿ ಸಂಜ್ಞೆಗಳು ಉಂಟಾಗುತ್ತವೆ, ಎಂದು ಶ್ಲೋಕದ ತಾತ್ಪರ್ಯ.

ವ್ಯಾಖ್ಯಾನಕಾರನು ಸೂತ್ರಕಾರನಲ್ಲವೆಂಬ ಅನೇಕ ವಿದ್ವಾಂಸರ ಅಭಿಪ್ರಾಯವು ಇಲ್ಲಿ ಉಲ್ಲೇಖನೀಯು[9].

ಈ ನಾಲ್ಕು ವ್ಯಾಕರಣಗಳಿಗಿಂತಲೂ ಪ್ರಾಚೀನವಾದ ಕವಿರಾಜಮಾರ್ಗವು ವ್ಯಾಕರಣ ಗ್ರಂಥವಲ್ಲವಾದರೂ ಅದರಲ್ಲಿ ಕಾರಕಗಳ ಪ್ರಸ್ತಾಪವಿರುವುದರಿಂದ ಅಲ್ಲಿನ ನಿರೂಪಣೆಯನ್ನೂ ಈಗ ಪರಿಶೀಲಿಸಬಹುದು. ಈ ಗ್ರಂಥದ ಪ್ರಥಮ ಪರಿಚ್ಛೇದದ ೧೧೪ನೇ ಪದ್ಯ ಇಂತಿದೆ :

ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿ ಭೇದ ನಿ
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞಿನಿಕ್ಕುಮಾ ।
ಚಾರುಗುಣೋದಯಂ ವಚನಮೇಕ ಬಹುಕ್ರಮದಿಂದೆರ ಡ್ತಿಱ
ಕ್ಕಾರಯೆ ಪೇೞ್ವಿನಿತಿವಱ ಜಾತಿವಿಭಾಗ ಗುಣಾಗುಣಂಗಳಂ ॥

ಇಲ್ಲಿ ಕರ್ಮಕರಣಾದಿ ಭೇದದಿಂದ ಕಾರಕ ಆರು ಬಗೆ, ಪ್ರಥಮಾದಿ ಭೇದದಿಂದ ಅದನ್ನು ಹಿಡಿದು ನಿಲ್ಲುವ ವಿಭಕ್ತಿಗಳು ಏಳು ಎಂದು ಹೇಳಿದೆಯೇ ಹೊರತು ಆ ಆರು ಕಾರಕಗಳ ಹೆಸರಿಲ್ಲ.

---

9 (i) ಇವನು ಬರೆದಿರುವ ವೃತ್ತಿಯನ್ನೂ ವ್ಯಾಖ್ಯಾನವನ್ನೂ ಲಕ್ಷ್ಯಗಳನ್ನೂ ಪರಾಮರ್ಶಿಸಿ ನೋಡಿದಲ್ಲಿ ಇವನು ಸೂತ್ರಕಾರನಲ್ಲವೆಂಬ ನಿಶ್ಚಯವು ಹುಟ್ಟದಿರಲಾರದು.

ಪಂಡಿತ ಕಾನಕಾನಹಳ್ಳಿ ವರದಾಚಾರ್ಯರ ಲೇಖನ "ಕರ್ಣಾಟಕ ಶಬ್ದಾನುಶಾಸನ ತತ್ತ್ವಾಲೋಕಂ".

—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ; ಸಂಪುಟ ೧, ಸಂಚಿಕೆ ೩ (ಅಕ್ಟೋಬರ್ ೧೯೧೬), ಪುಟ ೨೧೨.

(ii) ವೃತ್ತಿ ವ್ಯಾಖ್ಯಾನಗಳ ಬಗ್ಗೆ ಭಟ್ಟಾಕಳಂಕನ ಹೆಸರೇ ನಿಬಂಧಿತವಾದರೂ ಬೇರೆ ಯುವರ ಕೈವಾಡವೂ ವೃತ್ತಿವ್ಯಾಖ್ಯಾನಗಳ ರಚನೆಯ ಬಗ್ಗೆ ಸೇರಿದೆಯೆಂಬ ಊಹೆಯೂ ಬರಲು ಅಲ್ಲಲ್ಲಿ ಕಾರಣಗಳು ಮೂಡಿ ಬರುತ್ತಿವೆ....ಸೂತ್ರವೃತ್ತಿಗಳ ನಿರ್ಮಾಣ ಕರ್ತೃ ಮಾತ್ರ ಭಟ್ಟಾಕಳಂಕ ದೇವನೆಂದೂ ವ್ಯಾಖ್ಯಾನಕಾರನು ಕೃತಿಕಾರ ನಿಂದಅಥವಾ ಸೂತ್ರಕಾರನಿಂದ ಭಿನ್ನನೆಂದೂ ತಿಳಿದು ಬರುತ್ತದೆ.

—ಟಿ. ವೆಂಕಟರಾಮಯ್ಯನವರ ಲೇಖನ "ಭಟ್ಟಾಕಳಂಕ ದೇವ"—
ಜಯ ಕರ್ನಾಟಕ ಸಂಪುಟ ೩೮, ಸಂಚಿಕೆ ೭ (ಜುಲೈ ೧೯೬೦), ಪುಟ ೧೨.

ಏನೇ ಇರಲಿ ಶಾಸನ ನಿರ್ಮಾಣದ ಬಗ್ಗೆ ಪೂರ್ಣ ಸ್ವಾಮ್ಯವು ಭಟ್ಟಾಕಳಂಕ ದೇವನಿಗೆ ಸಂದಿದೆ. ಬಹುಶಃ ಈ ವಿಧದ ಭಿನ್ನತೆಯನ್ನು ತಾನೇ ಹುಟ್ಟಿಸಿ ಪಕ್ಷ ಪ್ರತಿಪಕ್ಷಗಳನ್ನು ಕಲ್ಪಿಸಿಕೊಂಡು ಸಮಾಧಾನ ತೋರಿಸಿರಬಹುದು. ಹಾಗಿದ್ದರೆ ಇದು ಇವನ ಅಗಾಧ ಪಾಂಡಿತ್ಯ ತರ್ಕಶಕ್ತಿಯ ನಿಲುವುಗಳನ್ನು ಸೂಚಿಸುತ್ತದೆ ಎಂದರೆ ತಪ್ಪಾಗದು.

—ಟಿ. ವೆಂಕಟರಾಮಯ್ಯನವರ ಮತ್ತೊಂದು ಲೇಖನ—ಜಯಕರ್ನಾಟಕ ಸಂಪುಟ ೩೮, ಸಂಚಿಕೆ ೧೧ (ನವೆಂಬರ್ ೧೯೬೦), ಪುಟ ೧೭.

ಶಬ್ದಸ್ಮೃತಿ, ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನಗಳಲ್ಲಿನ ಕಾರಕ ನಿರೂಪಣೆಯ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಉಂಟಾಗಿಲ್ಲ. ಆದರೆ ಭಾಷಾಭೂಷಣ ಮತ್ತು ಕವಿರಾಜಮಾರ್ಗಗಳಲ್ಲಿನ ನಿರೂಪಣೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಕಂಡು ಬಂದಿವೆ. ಇವುಗಳನ್ನು ಈಗ ವಿವೇಚಿಸಬಹುದು.

ಭಾಷಾಭೂಷಣದಲ್ಲಿನ ನಿರೂಪಣೆ :–ರೈಸರು ಸಂಪಾದಿಸಿರುವ ಭಾಷಾಭೂಷಣದಲ್ಲಿ 75ನೇ ಸೂತ್ರವಾಗಿರುವ 'ಅಥ ಕಾರಕಂ ನಿರೂಪ್ಯತೇ' ಎಂಬುದನ್ನು ಆರ್. ನರಸಿಂಹಾಚಾರ್ಯರು ತಮ್ಮ ಆವೃತ್ತಿಯಲ್ಲಿ ಸೂತ್ರವಾಗಿ ಪರಿಗಣಿಸಿಲ್ಲ. ಅದರ ವೃತ್ತಿಯನ್ನೂ ಕೊಟ್ಟಿಲ್ಲ. ಅಡಿ ಟಿಪ್ಪಣಿಯಲ್ಲಿ (ಶಾರದಾ ಮಂದಿರದ ಪುನರ್ಮುದ್ರಣ, ಪುಟ ೩೩) "ಇದು ಸೂತ್ರವಾಗಿ ಕಾಣುವುದಿಲ್ಲ" ಎಂದು ಹೇಳಿದ್ದಾರೆ. ಈಚೆಗೆ ಪ್ರೊ॥ ಎಂ. ವಿ. ಸೀತಾರಾಮಯ್ಯನವರು "ನರಸಿಂಹಾಚಾರ್ಯರ ಮುದ್ರಣದಲ್ಲಿನ ಟೀಕೆಯಲ್ಲಿ ವೃತ್ತಿಯ ಮೂಲವಾಕ್ಯಗಳು ದೊರೆಯುವುದರಿಂದ, ಟೀಕಾಕಾರನು

ಈ ಲೇಖನಗಳಿರುವ ಜಯ ಕರ್ನಾಟಕ ಸಂಪುಟ ನನಗೆ ನೋಡ ಸಿಗಲಿಲ್ಲ. ಈ ಮೇಲಿನ ವಾಕ್ಯಗಳನ್ನು ತಮ್ಮ ಲೇಖನದಲ್ಲಿ ಉದ್ಧರಿಸಿರುವ ಶ್ರೀ ಪಿ. ರಾಮಭಟ್ಟರು, ಶ್ರೀ ವೆಂಕಟರಾಮಯ್ಯನವರು "ಈ ಕೃತಿಯ ಭಿನ್ನಕರ್ತೃತ್ವದ ಸಂದೇಹದ ಅವಕಾಶಗಳನ್ನು ಹಲವೆಡೆಯಲ್ಲಿ ಎತ್ತಿ ತೋರಿಸಿದರೂ ಕೊನೆಯಲ್ಲಿ ಏಕಕರ್ತೃಕತೆಯ ಕಡೆಗೆ ಒಲ್ಲದ ಮನಸ್ಸಿನಿಂದ ಮಣಿದಂತಿದೆ" ಎಂದಿದ್ದಾರೆ.

—ಕರ್ನಾಟಕ ಶಬ್ದಾನುಶಾಸನದ ಕರ್ತೃ (ಕರ್ನಾಟಕ ಭಾರತಿ : ಸಂಪುಟ ೧೦, ಸಂಚಿಕೆ ೪–ಮೇ ೧೯೭೮) ಪುಟ ೩.

(iii) ಶ್ರೀ ರಾಮ ಭಟ್ಟರು, "ಕೇವಲ ಒಂದೆರಡು ಕಡೆ, ಸೂತ್ರಕಾರ ಬೇರೆ, ವೃತ್ತಿಕಾರ ಬೇರೆ, ವ್ಯಾಖ್ಯಾನಕಾರ ಬೇರೆ–ಎಂದು ಭಾವಿಸಲೂ ಅವಕಾಶವಿದೆ. ಆದರೆ ಅದು ನಗಣ್ಯ. ಸೂತ್ರವೃತ್ತಿಕಾರ ಒಬ್ಬನಿದ್ದು ವ್ಯಾಖ್ಯಾನಕಾರ ಇನ್ನೊಬ್ಬನಿರಬಹುದೆಂಬುದಕ್ಕೆ ಹೆಚ್ಚಿನ ಅವಕಾಶ ಇದೆ." (ಪುಟ ೪) ಎಂದೂ "ಒಬ್ಬನೇ ಕರ್ತೃವಾಗಿರಬಹುದೆಂಬುದಕ್ಕೆ ಆಧಾರವಿದ್ದರೂ ಸಂಶಯಕ್ಕೆ ಆಸ್ಪದವಿದೆಯೆಂಬುದು ನಮ್ಮ ಪ್ರತಿಪಾದನೆಯ ಉದ್ದೇಶ. ಒಬ್ಬನದನ್ನು ಇನ್ನೊಬ್ಬನಿಗೆ ಕಟ್ಟಬೇಕೆಂಬ ದುರುದ್ದೇಶವಿಲ್ಲ" (ಪುಟ ೬) ಎಂದೂ ಹೇಳಿದ್ದಾರೆ.

—ಮೇಲಿನ ಲೇಖನ.

(iv) ಶ್ರೀ ಎಚ್. ನಂಜೇಗೌಡರು ತಮ್ಮ ಲೇಖನದಲ್ಲಿ, ಪಂಡಿತ ಕಾನಕಾನಹಳ್ಳಿ ವರದಾಚಾರ್ಯರ ಲೇಖನದ ವಿಷಯವನ್ನು ಪ್ರಸ್ತಾಪಿಸಿ,

"ಶ್ರೀ ಆರ್. ನರಸಿಂಹಾಚಾರ್ಯರು ಶಬ್ದಾನುಶಾಸನದ ಮುನ್ನುಡಿಯಲ್ಲಿ ಅದನ್ನು ಅಲ್ಲಗಳೆದಿದ್ದಾರೆ. ಅಲ್ಲದೆ ಸ್ವಲ್ಪಮಟ್ಟಿಗೆ ವ್ಯಂಗ್ಯವಾಗಿಯೂ ಕಟಕಿಯಾಡಿದ್ದಾರೆ. ಆದರೆ ಶ್ರೀ ನರಸಿಂಹಾಚಾರ್ಯರು ವರದಾಚಾರ್ಯರು ಎತ್ತಿರುವ ಆಕ್ಷೇಪವನ್ನು ಸುಲಭವಾಗಿ ತಳ್ಳಿಹಾಕಿರುವುದು ಸಮಂಜಸವಾಗಿ ಕಾಣಲಾರದು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಲೇಖನದ ಕೊನೆಯಲ್ಲಿ ಸೂತ್ರವೃತ್ತಿಗಳು ಅನ್ಯರಚಿತ, ವರದಾಚಾರ್ಯರು ಹೇಳಿದಂತೆ ಅವೆರಡನ್ನೂ ತನ್ನ ಹೆಸರಿನಲ್ಲಿ ಪ್ರಕಟಿಸಿಕೊಂಡನೇನೋ ? ಎಂದು ಅಭಿಪ್ರಾಯಪಟ್ಟಿದ್ದಾರೆ.

ಉಪಯೋಗಿಸಿದ ಮೂಲ ಮಾತೃಕೆಯಲ್ಲಿ ವೃತ್ತಿ ಇದ್ದಿರಬೇಕು ಎಂದು ಅನುಮಾನವಾಗುತ್ತದೆ. ಎಂದ ಮೇಲೆ, ವೃತ್ತಿ ನಾಗವರ್ಮಕೃತ ಎಂದೆನ್ನಬೇಕಾಗುತ್ತದೆ. ಸೂತ್ರವಿಲ್ಲದೆ, ವೃತ್ತಿಯಿರದಷ್ಟೆ? ಹೀಗೆ 'ಸೂತ್ರವೂ ನಾಗವರ್ಮಕೃತವೇ' ಎಂದು ಸಿದ್ಧವಾಗುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ[10]. ಟೀಕಾಕಾರನು ಎಲ್ಲ ಕಡೆಯೂ ಸೂತ್ರದಲ್ಲಿರುವ ಪದಗಳನ್ನು ಕೊಟ್ಟು ಅನಂತರ ಅರ್ಥವನ್ನು ಹೇಳಿರುವುದರಿಂದಲೂ ನರಸಿಂಹಾಚಾರ್ಯರ ಆವೃತ್ತಿಯಲ್ಲಿನ ಟೀಕೆಯಲ್ಲಿಯೂ ಸೂತ್ರದ ಮೂರು ಪದಗಳೂ ಇರುವುದರಿಂದಲೂ, ಟೀಕಾಕಾರನ ಮುಂದಿದ್ದ ಮೂಲ ಗ್ರಂಥದಲ್ಲಿ ಇದು ಸೂತ್ರವಾಗಿದ್ದಿರಲೇ ಬೇಕು[10a]

ಇತರ ವೈಯಾಕರಣರು ಹೇಳಿರುವ ಷಟ್ಕಾರಕಗಳ ಜೊತೆಗೆ ಏಳನೆಯದಾಗಿ ಭಾಷಾಭೂಷಣಕಾರನು ಸೇರಿಸಿರುವ 'ಸ್ವಾಮ್ಯ'ಕಾರಕವು ಟೀಕೆಗೆ ಗುರಿಯಾದ ಮತ್ತೊಂದು ವಿಷಯ.

ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರು "ಷಷ್ಠೀ ವಿಭಕ್ತಿಯುಕ್ತ ಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ ಸಂಬದ್ಧಕಾರಕ ಎಂದು ಕರೆಯಬಹುದು" ಎಂದೂ "ಪ್ರಾಕೃತ ದೇಶಿಗಳಲ್ಲಿ ಷಷ್ಠೀ ವಿಭಕ್ತಿಕ ಪದಕ್ಕೆ ಕರ್ಮಾದಿಯಾದ ಕೆಲವು ಕಾರಕಗಳ ಅಧಿಕಾರವೂ ಇದ್ದಂತೆ ಗೊತ್ತಾಗುತ್ತಿದೆ", ಎಂದೂ ಹೇಳಿ ಲಕ್ಷ್ಮೀಧರನ ಷಡ್ಭಾಷಾ ಚಂದ್ರಿಕೆಯಿಂದ ಎರಡು ಶ್ಲೋಕಗಳನ್ನೂ ಇತರ ವಿಭಕ್ತಿಗಳ ಸ್ಥಾನದಲ್ಲಿ ಷಷ್ಠೀ ವಿಭಕ್ತಿ ಬಂದಿರುವ ಕೆಲವು ದೃಷ್ಟಾಂತಗಳನ್ನೂ ಕೊಟ್ಟು, "ಈ ವಿಚಾರವನ್ನೆಲ್ಲ ಮಥನವೆಸಗಿಯೆ ಆಗಿರಬೇಕು – ನಾಗವರ್ಮನು ತನ್ನ ಭಾಷಾಭೂಷಣದಲ್ಲಿ" 'ಅಥ ಕಾರಕಂ ನಿರೂಪ್ಯತೇ' ಎಂಬ ಸೂತ್ರವನ್ನೂ ಅದರ ವೃತ್ತಿಯನ್ನೂ ರಚಿಸಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.[11]

ಕರ್ಣಾಟಕ ಶಬ್ದಾನುಶಾಸನ–ಒಂದು ವಿವೇಚನೆ. (ನಂದನವನ–ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳವರ ಅಭಿನಂದನಾ ಸಮಿತಿ, ಮಲ್ಲಾಡಿಹಳ್ಳಿ, 1978) ಭಾಗ ೨. ಪುಟ ೨೦೯ ಮತ್ತು ೨೧೫.

10 ಪ್ರಾಚೀನ ಕನ್ನಡ ವ್ಯಾಕರಣಗಳು–ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1979. ಪುಟ ೫೦. ಅಡಿಟಿಪ್ಪಣಿ 47.

10a ನರಸಿಂಹಾಚಾರ್ಯರ ಆವೃತ್ತಿಯಲ್ಲಿ ಟೀಕೆ ಹೀಗಿದೆ: ಅಥ = ಸಂಜ್ಞಾ ಸಂಧಿ ವಿಭಕ್ತಿ ವ್ಯಾಖ್ಯಾನಾನಂತರಂ, ಕಾರಕಂ = ಕರ್ತೃ ಕರ್ಮ ಕರಣ ಸಂಪ್ರದಾನಾಪಾದಾನ ಸ್ವಾಮ್ಯಾಧಿಕರಣಂಗಳೆಂಬ ಪೆಸರನುಳ್ಳ ಕಾರಕಂ, ಯಥಾಕ್ರಮದಿಂ, ನಿರೂಪ್ಯತೇ = ಪೇಳಲ್ಪಡುತ್ತಿರ್ಪುದು.

11 ಕವಿರಾಜಮಾರ್ಗ ವಿವೇಕ—ಗೀತಾ ಬುಕ್ ಹೌಸ್, ಮೈಸೂರು. 1973. ಪುಟ 146–7.

ಕಾರಕ ವಿಚಾರದಲ್ಲಿ ಮುಳಿಯ ತಿಮ್ಮಪ್ಪಯ್ಯನವರ ನಿಲುವನ್ನು ಒಪ್ಪಿರುವ ಪ್ರೊ|| ಎಂ. ವಿ. ಸೀತಾರಾಮಯ್ಯನವರು "ನಾಗವರ್ಮನು ಭಾಷಾಭೂಷಣದಲ್ಲಿ ಕಾರಕ ವಿಚಾರಕ್ಕೆ ಸಂಬಂಧಪಟ್ಟಂತೆ ಕವಿರಾಜಮಾರ್ಗವನ್ನು ಅನುಸರಿಸಿರುವಂತೆ ಕಾಣುತ್ತದೆ ಎನ್ನುತ್ತಾರೆ.[12]

ಭಾಷಾಭೂಷಣದ ಸೂತ್ರ ವೃತ್ತಿಗಳನ್ನು ನೋಡಿದರೆ ಅದರಲ್ಲಿ ಕಾಣಬರುವುದು ಸಂಸ್ಕೃತ ವ್ಯಾಕರಣದ ಪ್ರಭಾವ: ಪ್ರಾಕೃತ ವ್ಯಾಕರಣದ ಪ್ರಭಾವವಿದ್ದಂತಿಲ್ಲ. ಕಾವ್ಯಾವಲೋಕನದ ಐದು ಅಧಿಕರಣಗಳ ಪೈಕಿ ನಾಲ್ಕು ಅಲಂಕಾರಶಾಸ್ತ್ರ ವಿಷಯಕಗಳಾದುದರಿಂದ ಕಾವ್ಯಾವಲೋಕನಕಾರ ಕವಿರಾಜಮಾರ್ಗದಿಂದ ಪ್ರಭಾವಿತನಾಗಿರಬಹುದು. ಆದರೆ ಭಾಷಾಭೂಷಣಕಾರನು ಸ್ವಾಮ್ಯವನ್ನು ಕಾರಕಪಂಕ್ತಿಯಲ್ಲಿ ಸೇರಿಸಿದ್ದರೂ, ಅವನು ಹೇಳಿರುವುದು ಏಳು ಕಾರಕಗಳನ್ನು; ಕವಿರಾಜಮಾರ್ಗಕಾರನಂತೆ ಆರನ್ನಲ್ಲ. ಇದೂ ಅಲ್ಲದೆ ಕವಿರಾಜಮಾರ್ಗದಲ್ಲಿ ಹೇಳಿರುವ ಆರು ಕಾರಕಗಳಲ್ಲಿ ಸ್ವಾಮ್ಯ ಸೇರಿದೆಯೋ ಎಂಬುದೇ ವಾದಗ್ರಸ್ತ ವಿಷಯವಾಗಿದೆ. (ಈ ಲೇಖನದಲ್ಲಿ ಮುಂದೆ ಈ ವಿಷಯವನ್ನು ಪರಿಶೀಲಿಸಿದೆ). ಈ ಕಾರಣದಿಂದ ಭಾಷಾಭೂಷಣಕಾರನು ಕವಿರಾಜಮಾರ್ಗವನ್ನು ಅನುಸರಿಸಿದ್ದಾನೆನ್ನುವುದು ಯುಕ್ತವಾಗಿ ಕಾಣುವುದಿಲ್ಲ.

ಡಾ|| ಕೆ. ಕೃಷ್ಣಮೂರ್ತಿಗಳು ಸಂಪಾದಿಸಿರುವ ಕವಿರಾಜಮಾರ್ಗದ ನೂತನ ಸಂಸ್ಕರಣದ ವಿಮರ್ಶಾತ್ಮಕವಾದ ಲೇಖನದಲ್ಲಿ ವಿದ್ವಾನ್ ರಂಗನಾಥ ಶರ್ಮರು "ಅಧೀಶ್ವರನ ಮನೆ, ಮರದ ಹಣ್ಣು, ನನ್ನ ಮಡದಿ–ಮೊದಲಾದ ಸ್ಥಳದಲ್ಲಿ ಕ್ರಿಯಾಶಬ್ದವಿಲ್ಲದ್ದರಿಂದ ಷಷ್ಠಿಯು ಎಂದಿಗೂ ಕಾರಕವಿಭಕ್ತಿ ಎನ್ನಿಸುವುದಿಲ್ಲ. ನಾಗವರ್ಮನು ಭಾಷಾಭೂಷಣದಲ್ಲಿ ಸ್ವಾಮ್ಯಾರ್ಥವನ್ನು ಕಾರಕವೆಂದಿರುವುದು ಪ್ರಾಮಾದಿಕ" ಎಂದು ಹೇಳಿದ್ದಾರೆ.[13]

ನಾಗವರ್ಮನು ಏಳು ಕಾರಕಗಳನ್ನು ಹೇಳಿರುವುದನ್ನು ನಾವು ಒಪ್ಪಲಿ ಅಥವಾ ಒಪ್ಪದಿರಲಿ. ಕಾರಕಗಳು ಏಳೆಂಬುದಕ್ಕೆ ಏನಾದರೂ ಪೂರ್ವಾಧಾರಗಳಿವೆಯೋ ಅಥವಾ ಅದು ಸ್ವಕಪೋಲಕಲ್ಪಿತವೇ ಎಂದು ವಿಚಾರ ಮಾಡುವುದು ಬೋಧಪ್ರದ.

ಪಾಣಿನ್ಯಷ್ಟಾಧ್ಯಾಯಿಯ ಪ್ರಥಮಾಧ್ಯಾಯ ಚತುರ್ಥ ಪಾದದಲ್ಲಿ ಆರು ಕಾರಕಗಳ ನಿರೂಪಣೆಯಿದೆ. ದ್ವಿತೀಯಾಧ್ಯಾಯ ತೃತೀಯ ಪಾದದಲ್ಲಿ ಪ್ರಥಮಾದಿಂದ ಪಂಚಮೀ ವರೆಗಿನ ಮತ್ತು ಸಪ್ತಮೀ ವಿಭಕ್ತಿಗಳ ವಿಷಯವನ್ನು ಹೇಳಿಯಾದ ಮೇಲೆ "ಷಷ್ಠೀ ಶೇಷೇ" (2–3–50) ಎಂಬ ಸೂತ್ರವಿದೆ. ಪತಂಜಲಿಯು ಈ ಸೂತ್ರದ ಭಾಷ್ಯದಲ್ಲಿ ಮೊದಲು ಶೇಷವೆಂದರೇನು ಎಂದು ಪ್ರಶ್ನಿಸಿ ಕರ್ಮಾದಿಗಳಿಂದ

---

12 ಪ್ರಾಚೀನ ಕನ್ನಡ ವ್ಯಾಕರಣಗಳು, ಪುಟ ೫೦.

13 ಕವಿರಾಜಮಾರ್ಗದ ನೂತನ ಸಂಸ್ಕರಣ (ಗ್ರಂಥ ಸಮೀಕ್ಷೆ)–
ಲೋಚನ. ಸಂಪುಟ ೧–ಸಂಚಿಕೆ ೨ (ಡಿಸೆಂಬರ್ ೧೯೮೩)–ಪುಟ 49.

ಭಿನ್ನವಾದ ಅರ್ಥವೇ ಶೇಷವೆಂದು ಉತ್ತರಿಸಿದ್ದಾನೆ. ಅನಂತರ "ರಾಜ್ಞಃ ಪುರುಷಃ" (ರಾಜನ ಸೇವಕ) ಎನ್ನುವಲ್ಲಿ 'ರಾಜ' ಕರ್ತೃ, ಅವನಿಂದ ಧನವನ್ನು ಪಡೆಯುವ ಕಾರಣದಿಂದ 'ಪುರುಷ' ಸಂಪ್ರದಾನ; "ವೃಕ್ಷಸ್ಯ ಶಾಖಾ" (ಮರದ ಕೊಂಬೆ) ಎನ್ನುವಲ್ಲಿ 'ವೃಕ್ಷ'ವು ಶಾಖೆಯ ಅಧಿಕರಣ; ಹೀಗೆ ಕರ್ಮಾದಿಗಳಿಂದ ಭಿನ್ನವಾದ ಅರ್ಥಗಳಿಲ್ಲ ಎಂಬ ಆಕ್ಷೇಪವನ್ನೆತ್ತಿ 'ಹಾಗಾದರೆ, ಕರ್ಮಾದಿಗಳ ಅವಿವಕ್ಷೆಯೇ ಶೇಷ' ಎಂದು ಸಮಾಧಾನವನ್ನು ಹೇಳಿದ್ದಾನೆ.[14] (ಅವಿವಕ್ಷೆಯೆಂದರೆ ಕರ್ಮಾದಿ ಸಂಬಂಧವನ್ನು ಹೇಳಬೇಕೆಂಬ ಇಷ್ಟವಿಲ್ಲದಿರುವುದು.

ಕಾಶಿಕಾವೃತ್ತಿಕಾರನು (ಕ್ರಿ.ಶ. 7ನೆಯ ಶತಮಾನ) ಮೇಲಿನ ಸೂತ್ರದ ವೃತ್ತಿಯಲ್ಲಿ, ಕರ್ಮಾದಿಗಳಿಂದಲೂ ಪ್ರಾತಿಪದಿಕಾರ್ಥದಿಂದಲೂ ಭಿನ್ನವಾದ ಸ್ವಸ್ವಾಮಿ ಸಂಬಂಧ ಮೊದಲಾದುವು ಶೇಷವೆಂದು ಹೇಳಿ, 'ಪಶೋಃ ಪಾದಃ'(ಹಸುವಿನ ಕಾಲು), ಪಿತುಃ ಪುತ್ರಃ (ತಂದೆಯ ಮಗ) ಎಂಬ ಉದಾಹರಣೆಗಳನ್ನು ಕೊಟ್ಟಿದ್ದಾನೆ.[15] ಕರ್ಮಾದಿಗಳ ಅವಿವಕ್ಷೆಯೇ ಶೇಷವೆಂಬ ಮಹಾಭಾಷ್ಯದ ವಿವರಣೆಯನ್ನು ಬಿಟ್ಟಿದ್ದಾನೆ. ಆದರೆ ಶೇಷಷಷ್ಠಿಗೇ ಸಂಬಂಧಿಸಿದ ಮುಂದಿನ ಸೂತ್ರಗಳ ವೃತ್ತಿಯಲ್ಲಿ, 'ಮಾತುರಧ್ಯೇತಿ', 'ಮಾತುಃ ಸ್ಮರತಿ' (ತಾಯಿಯನ್ನು ಸ್ಮರಿಸುತ್ತಾನೆ), 'ಏಧೋದಕಸ್ಯೋಪಸ್ಕುರುತೇ' (ಕಟ್ಟಿಗೆಯು ನೀರನ್ನು ಪರಿಷ್ಕರಿಸುತ್ತದೆ), 'ಚೌರಸ್ಯ ರುಜತಿ ರೋಗಃ' (ರೋಗವು ಕಳ್ಳನನ್ನು ಭಂಗಪಡಿಸುತ್ತದೆ) ಮೊದಲಾದ ಪ್ರಯೋಗಗಳಿವೆ. ಇವೆಲ್ಲ ವೃತ್ತಿಯಲ್ಲಿ 'ಶೇಷತ್ವೇನ ವಿವಕ್ಷಿತೇ' ಎಂದು ಹೇಳಿದೆ. ಕಾಶಿಕಾವೃತ್ತಿಯ ವ್ಯಾಖ್ಯಾನವಾದ 'ಪದಮಂಜರಿ'ಯಲ್ಲಿ ಹರದತ್ತನು (ಕ್ರಿ.ಶ. 10–11ನೆಯ ಶತಮಾನ), ಮೇಲಿನ ಪ್ರಯೋಗಗಳಲ್ಲಿ ಕ್ರಿಯಾಪದವಿದ್ದು ಮಾತೃ ಮೊದಲಾದವುಗಳಿಗೆ ಕರ್ಮತ್ವವಿದ್ದರೂ ಅದು ಅವಿವಕ್ಷಿತವಾಗಿರುವುದರಿಂದ (ಕರ್ಮತ್ವವನ್ನು ಹೇಳುವ ಅಪೇಕ್ಷೆ ಇಲ್ಲದ್ದರಿಂದ) ಮತ್ತು ಮಾತೃಸಂಬಂಧಿಯಾದ

---

14 ಕಃ ಶೇಷಃ ? ಕರ್ಮಾದಿಭ್ಯೋ ಯೋಽನ್ಯೋ ಅರ್ಥಃ ಸ ಶೇಷಃ । ಯದ್ಯೇವಂ ಶೇಷೋ ನ ಪ್ರಕಲ್ಪತೇ । ನ ಹಿ ಕರ್ಮಾದಿಭ್ಯೋಽನ್ಯೋ ಅರ್ಥಃ ಸಂತಿ । ಇಹ ತಾವದ್— 'ರಾಜ್ಞಃ ಪುರುಷಃ' ಇತಿ ರಾಜಾ ಕರ್ತಾ ಪುರುಷಃ ಸಂಪ್ರದಾನಂ । 'ವೃಕ್ಷಸ್ಯ ಶಾಖಾ' ಇತಿ ವೃಕ್ಷಃ ಶಾಖಾಯಾ ಅಧಿಕರಣಂ । ....ಅತ್ರ ಚ ಸರ್ವತ್ರ ಕರ್ಮಾದಯಸ್ಸಂತಿ । ಏವಂ ತರ್ಹಿ ಕರ್ಮಾದೀನಾಮವಿವಕ್ಷಾ ಶೇಷಃ ।

ಶ್ರೀಮದ್ಭಗವತ್ಪತಂಜಲಿಮುನಿ ವಿರಚಿತಂ ಮಹಾಭಾಷ್ಯಂ (ಮೋತಿಲಾಲ್ ಬನಾರಸೀದಾಸ್, 1967) ; ದ್ವಿತೀಯ ಖಂಡ; ಪುಟ 518–9.

15 ಕರ್ಮಾದಿಭ್ಯೋ ಯೋಽನ್ಯಃ ಪ್ರಾತಿಪದಿಕಾರ್ಥವ್ಯತಿರಿಕ್ತಃ ಸ್ವಸ್ವಾಮಿ ಸಂಬಂಧಾದಿಃ ಶೇಷಃ ತತ್ರ ಷಷ್ಠೀ ವಿಭಕ್ತಿರ್ಭವತಿ । ರಾಜ್ಞಃ ಪುರುಷಸ್ಯ ಗೃಹಂ । ಪಶೋಃ ಪಾದಃ, ಪಿತುಃ ಪುತ್ರಃ ।

ಕಾಶಿಕಾ ವೃತ್ತಿಃ, ದ್ವಿತೀಯೋ ಭಾಗಃ (ಪ್ರಾಚ್ಯ ಭಾರತೀ ಪ್ರಕಾಶನಂ, ವಾರಾಣಸೀ, 1965), ಪುಟ 209, 211

ಸ್ಮರಣೆ ಇತ್ಯಾದಿ ಸಂಬಂಧಮಾತ್ರ ವಿವಕ್ಷಿತವಾಗಿರುವುದರಿಂದ ಶೇಷತ್ವವುಂಟಾಗಿ ಮಾತೃ ಮೊದಲಾದ ಪದಗಳಿಗೆ ಷಷ್ಠೀ ವಿಭಕ್ತಿ ಬಂದಿದೆಯೆಂದು ವಿವರಿಸಿ. ಈ ವಿಧದ ಇನ್ನೂ ಕೆಲವು ಪ್ರಯೋಗಗಳನ್ನು—'ನ ಮಾಷಾಣಾಮಶ್ನೀಯಾತ್'. (ಉದ್ದನ್ನು ತಿನ್ನಬಾರದು), 'ಅನುಕರೋತಿ ಭಗವತೋ ನಾರಾಯಣಸ್ಯ' (ಭಗವಾನ್ ನಾರಾಯಣನನ್ನು ಹೋಲುತ್ತಾನೆ ಅಥವಾ ಅನುಕರಿಸುತ್ತಾನೆ) ಇತ್ಯಾದಿ—ಕೊಟ್ಟಿದ್ದಾನೆ.[16]

ಮೇಲೆ ಹೇಳಿರುವ ರಾಜ್ಞಃ ಪುರುಷಃ, ಪಶೋಃ ಪಾದಃ ಮೊದಲಾದ ಪ್ರಯೋಗಗಳಲ್ಲಿ ಕ್ರಿಯಾಪದವೇ ಇಲ್ಲವಾದುದರಿಂದ ಕಾರಕತ್ವದ ಪ್ರಸಕ್ತಿಯಿಲ್ಲ. ಆದರೆ 'ಮಾತುಃ ಸ್ಮರತಿ' ಇತ್ಯಾದಿ ಪ್ರಯೋಗಗಳಲ್ಲಿ ಕ್ರಿಯಾಪದವಿದ್ದು ಕರ್ಮತ್ವ ಅವಿವಕ್ಷಿತವಾಗಿ ಶೇಷಷಷ್ಠಿ ಬಂದಿದ್ದರೂ ಆ 'ಶೇಷ'ಕ್ಕೆ ಕಾಶಿಕಾವೃತ್ತಿಕಾರನು ಕಾರಕತ್ವವನ್ನು ಹೇಳಿಲ್ಲ.

ಜೈನೇಂದ್ರ ವ್ಯಾಕರಣ, ಹೇಮಚಂದ್ರನ ಶಬ್ದಾನುಶಾಸನ, ಭೋಜನ ಸರಸ್ವತೀ ಕಂಠಾಭರಣಗಳಲ್ಲಿ ಶೇಷಷಷ್ಠಿಯನ್ನು ವಿಧಿಸುವ ಸೂತ್ರಗಳಿವೆ. ಕಾತಂತ್ರದಲ್ಲಿ ಸ್ವಾಮ್ಯಾದಿಗೆ ಷಷ್ಠಿಯನ್ನು ಹೇಳಿದೆ. ಸ್ವಾಮ್ಯಾದಿಯನ್ನು ಕಾರಕಗಳ ಸಾಲಿನಲ್ಲಿ ಸೇರಿಸಿಲ್ಲ. ಚಾಂದ್ರ ವ್ಯಾಕರಣದಲ್ಲಿ "ಷಷ್ಠೀ ಸಂಬಂಧೇ" ಎಂಬ ಸೂತ್ರವು ಇದೆ. (ಭಾಷಾಭೂಷಣದ ಸೂತ್ರ 'ಸಂಬಂಧೇ ಷಷ್ಠೀ'.) ಶಾಕಟಾಯನ ವ್ಯಾಕರಣದಲ್ಲಿನ 'ಜಸೋಽಸಾಮ್' (1-3-163) ಸೂತ್ರದ ಅಮೋಘ ವೃತ್ತಿಯಲ್ಲಿ ಶೇಷಷಷ್ಠಿಗೆ ಉದಾಹರಣೆಗಳಿವೆ.[17] ಈ ಎಲ್ಲ ವ್ಯಾಕರಣಗಳಲ್ಲಿಯೂ ಅಷ್ಟಾಧ್ಯಾಯಿ

---

16 ಏವಂ ಚ ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್. ಅನುಕರೋತಿ ಭಗವತೋ ನಾರಾಯಣಸ್ಯೇತ್ಯಾದೌ ಶೇಷಪ್ರಯೋಗೇಽಪಿ ಕ್ರಿಯಾಪದೇ ಮಾತೃಸಂಬದ್ಧಂ ಸ್ಮರಣಮಿತಿ ಸಂಬಂಧಮಾತ್ರಂ ವಿವಕ್ಷಿತಂ, ಕರ್ಮತ್ವಂ ತು ಸದಪ್ಯವಿವಕ್ಷಿತಮಿತಿ ಷಷ್ಠೀ ಭವತಿ.
ಮೇಲಿನ ಗ್ರಂಥ, ಪುಟ 210

17 (i) ತಾ ಶೇಷೇ 1–4–57 ("ತಾ" ಈ ವ್ಯಾಕರಣದಲ್ಲಿ ಷಷ್ಠೀ ವಿಭಕ್ತಿಗೆ ಸಂಜ್ಞೆ.) ಜೈನೇಂದ್ರ ವ್ಯಾಕರಣಂ ದೇವನಂದಿ ವಿರಚಿತಂ ಅಭಯನಂದಿ ವಿರಚಿತ ಮಹಾವೃತ್ತಿ ಸಹಿತಂ (Reprint from Pandit)—ಇದರ ಕಾಲ ಸು. ಕ್ರಿ.ಶ. 5ನೇ ಶತಮಾನ.

(ii) ಶೇಷೇ 2-2-81 (ಹಿಂದಿನ ಸೂತ್ರದಿಂದ 'ಷಷ್ಠೀ' ಎಂಬುದರ ಅನುವೃತ್ತಿ.) ಸಿದ್ಧಹೇಮಚಂದ್ರಾಭಿಧಾನಶಬ್ದಾನುಶಾಸನ (Sri Jain Yasovijaya Series–3. 1905, Benares). ಹೇಮಚಂದ್ರನ ಕಾಲ ಕ್ರಿ.ಶ. 1088–1172.

(iii) ಷಷ್ಠೀ ಶೇಷೇ—ಸರಸ್ವತೀ ಕಂಠಾಭರಣ ಸೂತ್ರ 3-1-280. ಈ ಗ್ರಂಥ ನನಗೆ ಸಿಕ್ಕಿಲ್ಲ. ಮುಂದೆ ಹೇಳಿರುವ ಚಾಂದ್ರ ವ್ಯಾಕರಣದಲ್ಲಿ ಇದರ

ಯಲ್ಲಿರುವ ಆರು ಕಾರಕಗಳನ್ನೇ ಹೇಳಿದೆಯೋ ಹೊರತು ಎಲ್ಲಿಯೂ ಏಳನೆಯ ಕಾರಕವನ್ನು ಹೇಳಿಲ್ಲ. ಕಾರಕಗಳ ಹೆಸರುಗಳಲ್ಲಿ ಮಾತ್ರ ವ್ಯತ್ಯಾಸಗಳಿವೆ. ಕರ್ಮ ಕಾರಕವನ್ನು ಜೈನೇಂದ್ರದಲ್ಲಿ 'ಆಪ್ಯ' ಎಂದೂ ಚಾಂದ್ರದಲ್ಲಿ 'ವ್ಯಾಪ್ಯ'ವೆಂದೂ ಕರೆದಿದ್ದಾರೆ. ಹೀಗೆಯೇ ಚಾಂದ್ರ ಶಾಕಟಾಯನಗಳಲ್ಲಿ ಅಪಾದಾನ ಅಧಿಕರಣಗಳಿಗೆ ಕ್ರಮವಾಗಿ ಅವಧಿ, ಆಧಾರವೆಂದೂ, ಶಾಕಟಾಯನದಲ್ಲಿ ಸಂಪ್ರದಾನಕ್ಕೆ 'ದೇಯೈರಾಪ್ಯ'ವೆಂದೂ ಹೆಸರುಗಳಿವೆ.

ಕಾಶಿಕಾವೃತ್ತಿ ಮತ್ತು ಶಾಕಟಾಯನ ಮೊದಲಾದ ವ್ಯಾಕರಣಕಾರರಿಗಿಂತ ಪ್ರಾಚೀನನಾದ ಭರ್ತೃಹರಿಯ[18] ವಾಕ್ಯಪದೀಯದ ಸಾಧನ ಸಮುದ್ದೇಶದಲ್ಲಿ

ಸಂಪಾದಕರು ಪ್ರತಿ ಸೂತ್ರದ ಪಕ್ಕದಲ್ಲೂ ಅನುವಾದಿಯಾದ ಪಾಣಿನಿಯ ಮತ್ತು ಸರಸ್ವತೀ ಕಂಠಾಭರಣದ ಸೂತ್ರಗಳನ್ನು ಕೊಟ್ಟಿದ್ದಾರೆ.

(iv) ಕಾತಂತ್ರಸೂತ್ರಗಳು :—ಪ್ರಥಮಾ ವಿಭಕ್ತಿರ್ಲಿಂಗಾರ್ಥವಚನೇ (2–4–17)
ಆಮಂತ್ರಣೇ ಚ । 2–4–18
ಶೇಷಾಃ ಕರ್ಮಕರಣ ಸಂಪ್ರದಾನಾಪಾದಾನ ಸ್ವಾಮ್ಯಾದ್ಯಧಿಕರಣೇಷು । 2–4–19
ಕಾತಂತ್ರ ವ್ಯಾಕರಣ ನನಗೆ ಸಿಕ್ಕಿಲ್ಲ. ಡಾ॥ ಜಾನಕೀಪ್ರಸಾದ ದ್ವಿವೇದಿಗಳ 'ಕಾತಂತ್ರ ವ್ಯಾಕರಣ ವಿಮರ್ಶಃ'(ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸೀ 1975) ಎಂಬ ಗ್ರಂಥದಿಂದ ಕಾತಂತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿದ್ದೇನೆ.

(v) ಚಾಂದ್ರಸೂತ್ರ 2–1–95. Chandra Vyakarana of Chandragomin, Part I (Ed. Kshitish Chandra Chatterjee (Deccan College Poona 1953) ಇದರ ಕಾಲ ಕ್ರಿ.ಶ. 500ಕ್ಕೆ ಹಿಂದೆ.

(vi) ಶಾಕಟಾಯನ ವ್ಯಾಕರಣಂ, ಅಮೋಘ ವೃತ್ತಿಸಮಲಂಕೃತಂ—ಭಾರತೀಯ ಜ್ಞಾನಪೀಠ ಪ್ರಕಾಶನ, 1971. ಈ ವ್ಯಾಕರಣದ ಕಾಲ ಕ್ರಿ.ಶ. 9ನೇ ಶತಮಾನ.

18 ಮುಂದಿನ ಸಂಸ್ಕೃತ ವೈಯಾಕರಣರು ಮುನಿತ್ರಯರೆಂದು ಕರೆದಿರುವ ಪಾಣಿನಿ, ಕಾತ್ಯಾಯನ, ಪತಂಜಲಿಗಳಿಗೆ ಪಾಣಿನಿ ವ್ಯಾಕರಣ ಸಂಪ್ರದಾಯದಲ್ಲಿ ಅಗ್ರಸ್ಥಾನ; ಅದರ ಮುಂದಿನ ಸ್ಥಾನವೇ ಭರ್ತೃಹರಿಯದು. ಇವನ ವಾಕ್ಯಪದೀಯದಲ್ಲಿ ವ್ಯಾಕರಣ ವಿಷಯಗಳ ದಾರ್ಶನಿಕ ಮತ್ತು ತಾತ್ತ್ವಿಕ ವಿವೇಚನೆಯಿದೆ. ವೈಯಾಕರಣರೂ ದಾರ್ಶನಿಕರೂ (ವೈದಿಕ ಮತ್ತು ಅವೈದಿಕರು ಸಹ) ತಮ್ಮ ಗ್ರಂಥಗಳಲ್ಲಿ ಭರ್ತೃಹರಿಯ ಅನೇಕ ಕಾರಿಕೆಗಳನ್ನು ಉದಾಹರಿಸಿದ್ದಾರೆ. ಇವನು ಪತಂಜಲಿ ಮಹಾಭಾಷ್ಯಕ್ಕೆ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಅದರ ಸ್ವಲ್ಪ ಭಾಗ ಮಾತ್ರ ದೊರಕಿ ಮಹಾಭಾಷ್ಯ ದೀಪಿಕೆ ಎಂಬ ಹೆಸರಿನಲ್ಲಿ ಅಚ್ಚಾಗಿದೆ.

ಮಹಾಭಾಷ್ಯದ ಪ್ರಖ್ಯಾತ ವ್ಯಾಖ್ಯಾನಕಾರನಾದ ಕೈಯಟನು ತಾನು "ಅಗಾಧವಾದ ಮಹಾಭಾಷ್ಯ ಸಮುದ್ರವನ್ನು, ಭರ್ತೃಹರಿಯು ಕಟ್ಟಿದ ಸುದೃಢವಾದ ಗ್ರಂಥಸೇತುವಿನ ಮೇಲೆ ಹೆಳವನಂತೆ ಮೆಲ್ಲನೆ ತೆವಳುತ್ತಾ ದಾಟಿದೆ"ನೆಂದು ಹೇಳಿಕೊಂಡಿದ್ದಾನೆ—

ಕಾರಕಗಳ ತಾತ್ತ್ವಿಕವಾದ ವಿವೇಚನೆಯಿದೆ. ಈ ಸಮುದ್ದೇಶದಲ್ಲಿನ 44ನೆಯ ಕಾರಿಕೆ :—

ಸಾಮಾನ್ಯಂ ಕಾರಕಂ ತಸ್ಯ ಸಪ್ತಾದ್ಯಾ ಭೇದಯೋನಯಃ ।
ಷಟ್ ಕರ್ಮಾಖ್ಯಾದಿ ಭೇದೇನ ಶೇಷ ಭೇದಸ್ತು ಸಪ್ತಮೀ ॥

ತಾತ್ಪರ್ಯ—(ಸಾಧನ) ಸಾಮಾನ್ಯವೇ ಕಾರಕ. ಅದರ ಭೇದಗಳಿಗೆ, ಪ್ರಧಾನವಾದ ಏಳು (ಕಾರಕಶಕ್ತಿಗಳು) ಕಾರಣ, ಕರ್ಮ ಮೊದಲಾದ ಹೆಸರುಳ್ಳ ಭೇದಗಳು ಆರು. **ಶೇಷ**ವೆಂಬುದು ಏಳನೆಯದು.

ಭರ್ತೃಹರಿಯು, ಮಹಾಭಾಷ್ಯದಲ್ಲಿ ಬೀಜರೂಪದಲ್ಲಿ ಕಾಣಬರುವ ಎಷ್ಟೋ ವಿಷಯಗಳನ್ನು ತನ್ನ ಕಾರಿಕೆಗಳಲ್ಲಿ ವಿಸ್ತರಿಸಿ ಹೇಳಿರುವುದು ಕಂಡುಬರುತ್ತದೆ. ಇಲ್ಲಿ "ಕರ್ಮಾದೀನಾಮವಿವಕ್ಷಾ ಶೇಷಃ" ಎಂಬ ಭಾಷ್ಯವಾಕ್ಯವನ್ನು ಅನುಸರಿಸದೆ "ಕರ್ಮಾದಿಭ್ಯೋ ಯೋಽನ್ಯೋ ಅರ್ಥಾ ಸ ಶೇಷಃ" (ಕರ್ಮಾದಿಗಳಿಂದ ಭಿನ್ನವಾದ ಅರ್ಥವೇ ಶೇಷ) ಎಂಬರ್ಥವನ್ನು ಶೇಷಕ್ಕೆ ಸ್ವೀಕರಿಸಿರುವುದಲ್ಲದೆ 'ಶೇಷ'ಕ್ಕೆ ಕಾರಕತ್ವವನ್ನೂ ಹೇಳಿದ್ದಾನೆ. ಆದರೆ ಉಳಿದ ಕಾರಕಗಳ ಸಾಲಿನಲ್ಲಿ ಇದನ್ನು ಸೇರಿಸದೆ ಏಳನೆಯದೆಂದು ಹೇಳಿರುವುದರಿಂದ ಶೇಷಕಾರಕಕ್ಕೆ ಗೌಣಸ್ಥಾನ ಕೊಟ್ಟಂತೆ ಕಾಣುತ್ತದೆ.

ಮುಂದೆ ಇದೇ ಸಮುದ್ದೇಶದಲ್ಲಿ ಶೇಷಾಧಿಕಾರದ ಮೊದಲ ಕಾರಿಕೆ :

ಸಂಬಂಧಃ ಕಾರಕೇಭ್ಯೋಽನ್ಯಃ ಕ್ರಿಯಾಕಾರಕಪೂರ್ವಕಃ
ಶ್ರುತಾಯಾಮಶ್ರುತಾಯಾಂ ವಾ ಕ್ರಿಯಾಯಾಂ ಸೋಽಭಿಧೀಯತೇ ॥ 156 ॥

(ತಾತ್ಪರ್ಯ) ಕ್ರಿಯೆ ಉಕ್ತವಾಗಿರಲಿ ಅಥವಾ ಉಕ್ತವಾಗಿಲ್ಲದಿರಲಿ ಕ್ರಿಯಾ ಕಾರಕ ಸಂಬಂಧವನ್ನು ಅನುಸರಿಸುವ ಆದರೆ (ಕರ್ಮವೇ ಮೊದಲಾದ ಆರು) ಕಾರಕಗಳಿಂದ ಭಿನ್ನವಾದ (ಶೇಷರೂಪವಾದ) ಸಂಬಂಧವು (ಈಗ) ಹೇಳಲ್ಪಡುತ್ತದೆ.

ವಾಕ್ಯಪದೀಯದ ವ್ಯಾಖ್ಯಾನಕಾರ ಹೇಲಾರಾಜನು[19] ಮೇಲಿನ ಕಾರಿಕೆಯ ವ್ಯಾಖ್ಯಾನವನ್ನು "ಇದಾನೀಂ ಷಷ್ಠ್ಯರ್ಥಃ ಸಪ್ತಮಃ ಕಾರಕಭೇದೋ ವಿಚಾರ್ಯತೇ"

ಭಾಷ್ಯಾಬ್ಧಿಃ ಕ್ವಾತಿಗಂಭೀರಃ ಕ್ವಾಹಂ ಮಂದಮತಿಸ್ತತಃ ।
ಛಾತ್ರಾಣಾಮುಪಹಾಸ್ಯತ್ವಂ ಯಾಸ್ಯಾಮಿ ಪಿಶುನಾತ್ಮನಾಂ ॥
ತಥಾಪಿ ಹರಿಬದ್ಧೇನ ಸಾರೇಣ ಗ್ರಂಥ ಸೇತುನಾ
ಕ್ರಮಮಾಣಃ ಶನೈಃ ಪಾರಂ ತಸ್ಯ ಪ್ರಾಪ್ತಾಸ್ಮಿ ಪಂಗುವತ್ ॥

ಭರ್ತೃಹರಿಯ ಕಾಲ ಕ್ರಿ.ಶ. 6ನೆಯ ಶತಮಾನಕ್ಕೆ ಹಿಂದೆ. ನೋಡಿ Bhartrhari by K. A. Subramania Iyer (Deccan College, Poona 1969). ಪುಟ 2.

19 ಹೇಲಾರಾಜನ ಕಾಲ 10ನೇ ಶತಮಾನದ ಪೂರ್ವಾರ್ಧ. ಮೇಲಿನ ಗ್ರಂಥ, ಪುಟ 40.

(ಈಗ ಷಷ್ಠಿಯ ಅರ್ಥವಾದ ಏಳನೇ ಕಾರಕಭೇದವನ್ನು ವಿವೇಚಿಸಲಾಗುತ್ತದೆ) ಎಂಬ ಅವತರಣಿಕೆಯೊಡನೆ ಪ್ರಾರಂಭಿಸಿ, ಕಾರಿಕೆಯಲ್ಲಿ 'ಕ್ರಿಯಾಕಾರಕ ಸಂಬಂಧವನ್ನು ಅನುಸರಿಸುವ' ಎಂದು ಹೇಳಿರುವುದರಿಂದ ಕಾರಿಕಾಕಾರನು ಶೇಷಕ್ಕೆ ಕಾರಕತ್ವವನ್ನು ಕೊಟ್ಟಿದ್ದಾನೆ—ಎಂದು ಮುಂದುವರಿಸಿ ಅಶ್ರೂಯಮಾಣ ಕ್ರಿಯೆ (ಉಕ್ತವಾಗಿಲ್ಲದ ಕ್ರಿಯೆ) ಮತ್ತು ಶ್ರೂಯಮಾಣ ಕ್ರಿಯೆ (ಉಕ್ತವಾದ ಕ್ರಿಯೆ)ಗಳನ್ನು ಅನುಸರಿಸುವ ಸಂಬಂಧಗಳನ್ನು ಹೀಗೆ ವಿವರಿಸುತ್ತಾನೆ:

ಅಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಂಬಂಧ. 'ರಾಜ್ಞಃ ಪುರುಷಃ, ವೃಕ್ಷಸ್ಯ ಶಾಖಾ, ಪಶೋಃ ಪಾದಃ, ಪಿತುಃ ಪುತ್ರಃ' ಇವುಗಳಲ್ಲಿ ಕ್ರಿಯೆಯನ್ನು ಹೇಳಿಲ್ಲವಾದರೂ ಸ್ವಸ್ವಾಮಿ ಭಾವ, ಅವಯವ ಅವಯವೀ ಭಾವ, ಜನ್ಯ ಜನಕ ಭಾವ ಸಂಬಂಧಗಳು ದಾನ, ಸ್ಥಿತಿ (ಇರುವಿಕೆ), ಜನನ ಕ್ರಿಯೆಗಳಿಂದ ಉಂಟಾಗಿರುವುದರಿಂದ, ಆ ಕ್ರಿಯೆಗಳಿಂದ ಉಂಟಾದ ಹಿಂದಿನ ಕಾರಕತ್ವ ಮುಂದೆಯೂ ಅನುಗತವಾಗಿ ಶೇಷವು ಕಾರಕವೇ ಆಗುತ್ತದೆ. ರಾಜನು ಸೇವಕನಿಗೆ ಧನವನ್ನು ಕೊಡುವುದರಿಂದ ಸ್ವಾಮಿ ಭೃತ್ಯ ಸಂಬಂಧವುಂಟಾಗುತ್ತದೆ. ದಾನಕ್ರಿಯೆಗೆ ಕರ್ತೃ ಮತ್ತು ಸಂಪ್ರದಾನರೂಪವಾಗಿ ಉಂಟಾದ ಕ್ರಿಯಾಕಾರಕ ಸಂಬಂಧವು ಕಾರಣ; ಅನಂತರದ ಸ್ವಸ್ವಾಮಿರೂಪವಾದ ಶೇಷಸಂಬಂಧವು ಫಲ.

ಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಂಬಂಧ. ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್–ಇತ್ಯಾದಿ ಪ್ರಯೋಗಗಳಲ್ಲಿ ಕಂಡುಬರುವ ಸಂಬಂಧವು ಕಾರಕಭೇದವೇ. ಇಲ್ಲಿ ಮಾತೃ, ಮಾಷ ಇವು ನಿಜವಾಗಿ ಕರ್ಮಕಾರಕಗಳೇ ಆದರೂ ಆ ವಿಶೇಷ ಸಂಬಂಧವನ್ನು ಹೇಳುವ ಉದ್ದೇಶವಿಲ್ಲದೆ ಸಾಮಾನ್ಯಸಂಬಂಧವನ್ನು ಮಾತ್ರ ಹೇಳಿರುವುದರಿಂದ, ಆ ಸಾಮಾನ್ಯ ಸಂಬಂಧವೂ ಕ್ರಿಯಾಕಾರಕ ಸಂಬಂಧವೇ. ಹಿಂದಿನ ಬೇರೊಂದು ಕ್ರಿಯೆಯನ್ನು ಅನುಸರಿಸಿ ಬಂದ ಸಂಬಂಧವಲ್ಲ. ಹಾಗೆಯೇ 'ಸರ್ಪಿಷೋ ಜಾನೀತೇ' (ತುಪ್ಪದಿಂದ ಯಜ್ಞಕ್ರಿಯೆಯಲ್ಲಿ ತೊಡಗುತ್ತಾನೆ) ಎನ್ನುವಲ್ಲಿ 'ಸರ್ಪಿಃ' ಕರಣಕಾರಕವಾದರೂ ಆ ಸಂಬಂಧ ಅವಿವಕ್ಷಿತವಾಗಿ ಸಾಮಾನ್ಯ ಸಂಬಂಧ ಮಾತ್ರ ಉಕ್ತವಾಗಿದೆ. ಹೀಗೆ ಕರ್ಮಕರಣ ಕಾರಕಭೇದಗಳೇ ಅವಿವಕ್ಷಿತವಾಗಿ 'ಶೇಷ' ಭೇದವಾಯಿತು. **ಈ ಶೇಷವು ಕಾರಕವೇ.**[20]

---

20 (i) ಕ್ರಿಯಾಕಾರಕಪೂರ್ವಕಃ ಇತ್ಯನೇನ ಕಾರಕತ್ವಂ ವ್ಯಾಚಷ್ಟೇ ಶೇಷಸ್ಯ ।
ತಥಾ ಹಿ 'ರಾಜ್ಞಃ ಪುರುಷಃ, ವೃಕ್ಷಸ್ಯ ಶಾಖಾ, ಪಶೋಃ ಪಾದಃ, ಪಿತುಃ ಪುತ್ರಃ'
ಇತ್ಯಾದಾವಶ್ರೂಯಮಾಣ ಕ್ರಿಯಾವಿಷಯೇ ಸ್ವಸ್ವಾಮಿಭಾವಾವಯವಾವ-
ಯವಿಭಾವಜನ್ಯಜನಕಭಾವಾದೌ ಸಂಬಂಧೇ ದದಾತಿ ಸ್ಥಿತಿಜನ್ಯಾದಿ ಕ್ರಿಯಾ-
ಪ್ರಭಾವಿತೇ ಪೂರ್ವಭಾವಿ ಕಾರಕತ್ವಂ ಉತ್ತರಾವಸ್ಥಾಯಾಮಪಿ ಅನುಗತಮಿತಿ
ಭವತ್ಯೇವ ಶೇಷಃ ಕಾರಕಂ ।

ಇದೇ ಸಮುದ್ದೇಶದ 129ನೇ ಕಾರಿಕೆಯ ವ್ಯಾಖ್ಯಾನದಲ್ಲಿ ಹೇಲಾರಾಜನು ಸಂಪ್ರದಾನವೆಂಬ ಶಬ್ದವನ್ನು ವಿವರಿಸುತ್ತಾ, "ದಾನವು ತ್ಯಾಗರೂಪವಾದದ್ದು. ಆ ದಾನಕ್ರಿಯೆಯ ಫಲವಾಗಿ ದಾನ ಕೊಟ್ಟ ವಸ್ತುವಿನ ಮೇಲಿನ ಸ್ವಾಮ್ಯವು ಕರ್ತೃವಿನಿಂದ ಸಂಪ್ರದಾನಕ್ಕೆ ಹೋಗುತ್ತದೆ"ಯೆಂದು ಹೇಳಿ ಈ ಉದಾಹರಣೆಗಳನ್ನು ಕೊಟ್ಟಿದ್ದಾನೆ :—

1. ಉಪಾಧ್ಯಾಯಾಯ ಗಾಂ ದದಾತಿ (ಗುರುವಿಗೆ ಹಸುವನ್ನು ಕೊಡುತ್ತಾನೆ). ಇಲ್ಲಿ ಹಸುವಿನ ಸ್ವಾಮ್ಯವು ಕರ್ತೃವಿನಿಂದ ಸಂಪ್ರದಾನ ಕಾರಕ ಗುರುವಿಗೆ ಹೋಗುತ್ತದೆ.

2. ಕನ್ಯಾಂ ದದಾತಿ (ಕನ್ಯೆಯನ್ನು ದಾನಮಾಡುತ್ತಾನೆ). ಇಲ್ಲಿ ಕರ್ತೃ ಮತ್ತು ಕನ್ಯೆಯರ ಜನ್ಯಜನಕ ಭಾವಸಂಬಂಧ ಮುಂದೆಯೂ ಇದ್ದರೂ, ಕನ್ಯೆಯ ಸ್ವಾಮಿತ್ವ ದಾನ ಪಡೆಯುವವನಿಗೆ ಹೋಗುತ್ತದೆ. (ಆದುದರಿಂದ ದಾನ ಪಡೆಯುವವನಿಗೆ ಸಂಪ್ರದಾನತ್ವ.)

ರಾಜಾ ಹಿ ಪುರುಷಾಯ ದದಾತಿ ಯತಸ್ತತೋ ರಾಜ್ಞಃ ಪುರುಷ ಇತಿ ಸ್ವಸ್ವಾಮಿ ಭಾವಃ ಅವತಿಷ್ಠತಿ । ತತ್ರ ಕ್ರಿಯಾಕಾರಕ ಸಂಬಂಧಃ ಕಾರಣಭೂತಃ ಶೇಷ ಸಂಬಂಧಸ್ತು ಫಲಭೂತಃ । (ಪುಟ 366)

ಶ್ರೂಯಮಾಣ ಕ್ರಿಯಾ ವಿಷಯಸ್ತು ಸಂಬಂಧಃ ಕಾರಕಭೇದ ಏವ, ಅವಿವಕ್ಷಿತ ಕರ್ಮಾದಿ ವಿಶೇಷಃ ಸಂಬಂಧ ಸಾಮಾನ್ಯ ಸ್ವಭಾವಃ ಕ್ರಿಯಾಕಾರಕ ಸಂಬಂಧ ಏವ ಸ ಇತಿ ನ ತತ್ಪೂರ್ವಕಃ ।........**ಕಾರಕೇಭ್ಯೋऽನ್ಯಃ ಅಯಂ ಶೇಷಃ ಕಾರಕ ಏವ ।** ತಥಾ ಚೋಪಯೋಗ ಗ್ರಹಣಂ ಅರ್ಥವದಿತ್ಯುಕ್ತಂ ।, ಏವಂ ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್, ಸರ್ಪಿಷೋ ಜಾನೀತೇ ಇತ್ಯಾದೌ ಕರ್ಮಾದಿ ಕಾರಕಭೇದ ಏವ ಅವಿವಕ್ಷಿತ ತದ್ರೂಪಃ ಶೇಷ ಇತ್ಯುಕ್ತಂ ।
(ಪುಟ 368, 369)

—ವಾಕ್ಯಪದೀಯಂ [ತೃತೀಯಂ ಕಾಂಡಂ, ದ್ವಿತೀಯೋ ಭಾಗಃ], ಪಂಡಿತ ರಘುನಾಥ ಶರ್ಮಣಾ ವಿರಚಿತಯಾ ಅಂಬಾಕರ್ತ್ರೀ ವ್ಯಾಖ್ಯಯಾ ಸಮಲಂಕೃತಂ•

Sampurnanand Sanskrit Vishvavidyalaya,
Varanasi, 1979.

(ii) ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್, ಸರ್ಪಿಷೋ ಜಾನೀತೇ ಇತ್ಯಾದೌ ಯಥಾಕ್ರಮಂ ಪ್ರಥಮ ದ್ವಿತೀಯಯೋಃ ಕರ್ಮಕಾರಕಭೇದಃ, ತೃತೀಯೇ ಕರಣರೂಪಃ ಕಾರಕಭೇದ ಏವ ಅವಿವಕ್ಷಿತ ಕರ್ಮಕರಣಾದಿ ಭೇದ ರೂಪಃ ಶೇಷ ಇತ್ಯುಕ್ತಂ । (ಅಂಬಾ ಕರ್ತ್ರೀ ವ್ಯಾಖ್ಯಾನ)
ಮೇಲಿನ ಗ್ರಂಥ, ಪುಟ 369.

3. ಖಂಡಿಕೋಪಾಧ್ಯಾಯಃ ತಸ್ಮೈ ಚಪೇಟಾಂ ದದಾತಿ (ಕ್ರುದ್ಧನಾದ ಗುರುವು ಅವನಿಗೆ ಕೆನ್ನೆಯೇಟು ಕೊಡುತ್ತಾನೆ). ಇಲ್ಲಿ ಕೆನ್ನೆಯೇಟಿನ ಮೇಲೆ, ವಾಸ್ತವವಾಗಿ, ಯಾರ ಸ್ವಾಮ್ಯವೂ ಇಲ್ಲದಿದ್ದರೂ ಅದನ್ನು ಕೊಡುವ ಗುರು ಕರ್ತೃ. ಆ ಏಟಿನಿಂದಾಗಿ ಶಿಷ್ಯನು ಅಭ್ಯಾಸನಿರತ ನಾಗುವುದರಿಂದ ಏಟಿನ ಫಲ ಅವನಿಗೆ ಹೋಗುತ್ತದೆ.

4. ರಜಕಸ್ಯ ವಸ್ತ್ರಂ ದದಾತಿ (ಅಗಸನಿಗೆ ಬಟ್ಟೆಯನ್ನು ಕೊಡುತ್ತಾನೆ). ಇಲ್ಲಿ ವಸ್ತ್ರದ ಸ್ವಾಮ್ಯ ಕರ್ತೃವಿನಲ್ಲೇ ಉಳಿದಿದ್ದು ಅಗಸನಿಗೆ ಹೋಗು ವುದಿಲ್ಲವಾದ ಕಾರಣ 'ದದಾತಿ' ಎಂಬ ಪದದ ಪ್ರಯೋಗ ಗೌಣ. ಅದಕ್ಕೆ ದಾನವೆಂಬ ಅರ್ಥವಿಲ್ಲ.[21] (ಈ ಬಗೆಯ ಮತ್ತೊಂದು ಪ್ರಯೋಗ 'ದೇವದತ್ತಸ್ಯ ವಸ್ತ್ರಂ ದರ್ಶಯತಿ' — ದೇವದತ್ತನಿಗೆ ಬಟ್ಟೆಯನ್ನು ತೋರಿಸುತ್ತಾನೆ.) (ಜೈನೇಂದ್ರ ಮಹಾವೃತ್ತಿ),

ಮೊದಲಿನ ಮೂರು ಉದಾಹರಣೆಗಳಲ್ಲಿ ಸಂಪ್ರದಾನತ್ವವಿರುವುದರಿಂದ ಚತುರ್ಥೀ ವಿಭಕ್ತಿ ಪ್ರಯೋಗಕ್ಕೆ ಅವಕಾಶವಿದೆ. ನಾಲ್ಕನೆಯ ಉದಾಹರಣೆಯಲ್ಲಿ ರಜಕನಿಗೆ ಸಂಪ್ರದಾನತ್ವವಾಗಲೀ ಕರ್ತೃ, ಕರ್ಮ, ಕರಣ, ಅಪಾದಾನ, ಅಧಿಕರಣತ್ವ ವಾಗಲೀ ಇಲ್ಲ. ಆದುದರಿಂದ ಇಲ್ಲಿ ಷಷ್ಠೀಪ್ರಯೋಗವಾಗಿದೆ. ಇಲ್ಲಿ ಅವಿವಕ್ಷಿತ ಕರ್ಮಾದಿ ಕಾರಕತ್ವವಿಲ್ಲ. ಅವುಗಳೆಲ್ಲಕ್ಕಿಂತ ಭಿನ್ನವಾದ ಬೇರೆ ಬಗೆಯ ಸಂಬಂಧವಿದೆ.

---

21 ಅನ್ವರ್ಥತ್ವಾತ್ ಸಂಪ್ರದಾನಶಬ್ದಸ್ಯ 'ತ್ಯಾಗಾಂಗಂ' ಇತಿ ಲಕ್ಷಣ ಲಾಭಃ ।
ತ್ಯಾಗೋ ದೀಯಮಾನಸ್ಯ ಸ್ವತ್ವನಿವೃತ್ತ್ಯಾ ಪರಸ್ವತ್ವಾಪಾದನಂ ॥
—ಮೇಲಿನ ಗ್ರಂಥ, ಪುಟ 313

'ಉಪಾಧ್ಯಾಯಾಯ ಗಾಂ ದದಾತಿ' ಇತ್ಯಾದೌ ತ್ಯಜ್ಯಮಾನಂ ಕರ್ಮ ಗವಾದಿ ಉಪಾಧ್ಯಾಯಾದಿನಾ ಸಂಬಧ್ಯತೇ, ತದಭಿಪ್ರಾಯೇಣೈವ ತ್ಯಾಗಾತ್ ।....ತಥಾ ಚ ತ್ಯಾಗೋಪಕಾರಿತ್ವಾತ್ ತ್ಯಾಗಾಂಗಂ ಭವತ್ಯೇವ ಕಾರಕಂ ಸಂಪ್ರದಾನಂ । —ಅದೇ ಪುಟ 314

'ಕನ್ಯಾಂ ದದಾತಿ' ಇತಿ ಜನ್ಯಜನಕ ಭಾವಾವ್ಯಾಪೃತ್ತಾವಪಿ ಸ್ವಸ್ವಾಮಿಸಂಬಂಧಸ್ಯ ನಿವೃತ್ತೇರ್ಮುಖ್ಯ ಏವ ದದಾತ್ಯರ್ಥಃ । 'ಖಂಡಿಕೋಪಾಧ್ಯಾಯಸ್ತಸ್ಮೈ ಚಪೇಟಾಂ ದದಾತಿ' ಇತ್ಯಾದೌ ವಸ್ತುತಃ ಅಸತ್ಯಪಿ ಚಪೇಟಾದಿ ಸ್ವಾಮ್ಯೇ ತದುಪಕಾರಿತಯಾ ದಾತುಃ ಸ್ವಾಮಿತ್ವಾಭಿಸಂಧಿರಸ್ತ್ಯೇವ । ಯದ್ಯಪಿ ಪ್ರತಿಕೂಲ ರೂಪತ್ವಾತ್ ಚಪೇಟಾಯಾಃ ತದಾನೀಮುಪಯೋಗೋ ನಾಸ್ತಿ, ತಥಾಪಿ ಫಲದ್ವಾರೇಣಾಸ್ತ್ಯೇವ ಪರೋಪಯೋಗಿತ್ವಂ । ಚಪೇಟಾಸಹತ್ವೇ ಶಾಸ್ತ್ರಾಭ್ಯಾಸ ಯೋಗ್ಯತ್ವಾತ್ ಸಲಾವಾಪ್ತೇಃ । —ಪುಟ 316

'ರಜಕಸ್ಯ ವಸ್ತ್ರಂ ದದಾತಿ' 'ಭೃತ್ಯಃ ಪೃಷ್ಠಂ ದದಾತಿ' ಇತ್ಯಾದೌ ತು ದದಾತ್ಯರ್ಥೋ ನಾಸ್ತಿ । ತ್ಯಾಗೋ ಹಿ ಸಃ । ತೇನ ಚ ಹಾನಾತ್ಮಕೇನ ಮಮತಾವಿಚ್ಛೇದಸ್ಯ ಆಕ್ಷೇಪಾದೇವ ಪರೋಪಯೋಗಾಭಿಸಂಧಿನಾ ಪರಸ್ವತ್ವಾಪಾದನಮಪಿ ಸ್ವೀಕೃತಂ । ಅತ್ರ ಚ ತದಭಾವ ಇತಿ ಗೌಣೋऽಯಂ ದದಾತೇಃ ಪ್ರಯೋಗಃ । —ಅದೇ ಪುಟ 315

ರಜಕನಿಗೆ ಕ್ರಿಯಾನ್ವಯಿತ್ವವಿರುವುದರಿಂದ ಕಾರಕತ್ವವಿದೆ. ಇದು ಮೇಲೆ ಹೇಳಿದ ಅಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಂಬಂಧ ಮತ್ತು ಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಅವಿವಕ್ಷಿತ ಕರ್ಮಾದಿ ಸಂಬಂಧಗಳಿಂದ ಭಿನ್ನವಾದ ಮೂರನೆಯ ಬಗೆಯ ಶೇಷಕಾರಕ.

ಭರ್ತೃಹರಿಯ ಕಾರಿಕೆಗಳನ್ನು ಪ್ರಮಾಣವಾಕ್ಯಗಳಾಗಿ ಬಹಳವಾಗಿ ಉದಾಹರಿಸಿರುವ ಮುಂದಿನ ವೈಯಾಕರಣರು ಯಾರೂ, ಶೇಷಕ್ಕೆ ಕಾರಕತ್ವವನ್ನು ಹೇಳುವ ಭರ್ತೃಹರಿಯ ಅಭಿಪ್ರಾಯವನ್ನು, ಅದು ಯುಕ್ತಿಯುಕ್ತವಾಗಿದ್ದರೂ,-ಬಹುಶಃ ಅದು ಅಪಾಣಿನೀಯವೆಂಬ ಕಾರಣದಿಂದ-ಅನುಮೋದಿಸಲಿಲ್ಲ. ಆದರೆ ಗಮನಾರ್ಹವಾದ ವಿಷಯವೆಂದರೆ ಅದನ್ನು ಯಾರೂ ಖಂಡಿಸಿರುವಂತೆಯೂ ಕಾಣುವುದಿಲ್ಲ.

ಭಾಷಾಭೂಷಣಕಾರನು, ವಾಕ್ಯಪದೀಯ ಮತ್ತು ಹೇಲಾರಾಜನ ವ್ಯಾಖ್ಯಾನಗಳಿಂದ ಪ್ರಭಾವಿತನಾಗಿ, ಏಳು ಕಾರಕಗಳನ್ನು ಹೇಳಿರಬಹುದೆಂದು ತೋರುತ್ತದೆ. ಆದರೆ ಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಾಮಾನ್ಯ ಸಂಬಂಧ ಸೂಚಕ ಶೇಷಕಾರಕ ಮತ್ತು ಮೂರನೆಯ ಬಗೆಯ ಶೇಷಕಾರಕಗಳ (ಮೇಲಿನ) ಉದಾಹರಣೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದಾಗ ಶೇಷಷಷ್ಠಿಗೆ ಬದಲು ದ್ವಿತೀಯಾ, ತೃತೀಯಾ, ಚತುರ್ಥೀ ವಿಭಕ್ತಿಗಳೇ ಬಂದು ಅವು ಕರ್ಮಾದಿ ಕಾರಕಗಳೇ ಆಗುವುದರಿಂದ, ಅಲ್ಲಿ ಶೇಷಕಾರಕದ ಪ್ರಸಕ್ತಿಯೇ ಬರುವುದಿಲ್ಲ. ಆದುದರಿಂದ ಭಾಷಾಭೂಷಣಕಾರನು (ಅಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ) ಸ್ವಸ್ವಾಮಿಭಾವಾದಿ ಸಂಬಂಧದ ಷಷ್ಠಿಯನ್ನು ಮಾತ್ರ ಹೇಳಿ, ನಾಡೆಜೀಯಂ, ಮರದ ಕೊಂಬು ಇತ್ಯಾದಿ ಉದಾಹರಣೆಗಳನ್ನು ಕೊಟ್ಟು ಕಾರಕವನ್ನು 'ಸ್ವಾಮ್ಯ'ವೆಂದು ಕರೆಯಬೇಕಾಯಿತು.[22] ನಾಡೆಜೀಯ, ಮರದ ಕೊಂಬು ಇತ್ಯಾದಿಗಳನ್ನು ವಾಕ್ಯದಲ್ಲಿ ತಂದಾಗ ಷಷ್ಠೀವಿಭಕ್ತ್ಯಂತವಾದ ನಾಡು, ಮರ ಇವುಗಳ ಶೇಷಕಾರಕತ್ವವು ವಾಕ್ಯದಲ್ಲಿಲ್ಲದ ಬೇರೊಂದು ಕ್ರಿಯೆಗೆ ಸಂಬಂಧಿಸಿರುವುದೇ ಹೊರತು ವಾಕ್ಯದಲ್ಲಿನ ಕ್ರಿಯೆಗೂ ಇವುಗಳಿಗೂ ಕ್ರಿಯಾಕಾರಕ ಸಂಬಂಧವಿರುವುದಿಲ್ಲ. ಆದುದರಿಂದ ಸ್ವಾಮ್ಯಾರ್ಥವನ್ನು ಕಾರಕವೆಂದಿರುವುದು ಪ್ರಾಮಾದಿಕವೆಂಬ ವಿದ್ವಾನ್ ರಂಗನಾಥ ಶರ್ಮರ ಅಭಿಪ್ರಾಯವನ್ನು ತಳ್ಳಿಹಾಕುವುದು ಕಷ್ಟ.

---

22 ನೆನೆಯಬೇಕು ಹರಿಯ, ದುರ್ಜನರ ಸೇರದಿರು ಮನವೇ ಎಂಬ ಪ್ರಯೋಗಗಳಲ್ಲಿ ದ್ವಿತೀಯೆಯನ್ನು ಪ್ರಯೋಗಿಸದೆ ಷಷ್ಠಿಯನ್ನು ಪ್ರಯೋಗಿಸಿದೆ. ಇವನ್ನು ವಿಭಕ್ತಿವ್ಯತ್ಯಯವೆನ್ನಬಹುದಾದರೂ ಈ ಪ್ರಯೋಗಗಳು 'ಮಾತುಃ ಸ್ಮರತಿ' ಎಂಬ ವಾಕ್ಯವನ್ನು ಹೋಲುತ್ತವೆ ಎಂಬುದು ಗಮನಾರ್ಹ. ಈ ಬಗೆಯ ಪ್ರಾಚೀನ ಪ್ರಯೋಗಗಳಿವೆಯೇ ?

ಈಗ ಷಷ್ಠೀವಿಭಕ್ತಿಯಿರುವ ಕೆಲವು ವಾಕ್ಯಗಳನ್ನು ಪರಿಶೀಲಿಸಬಹುದು :

(1) ನ್ಯಾಯಾಧೀಶನ ಭೃತ್ಯನು ಆಹಾರ ಪದಾರ್ಥಗಳನ್ನು ಮುಟ್ಟುಗೋಲು ಹಾಕಿಕೊಂಡನು. ಇಲ್ಲಿ ಭೃತ್ಯನು ಪದಾರ್ಥಗಳನ್ನು ಮುಟ್ಟುಗೋಲು ಹಾಕಿಕೊಂಡದ್ದು ನ್ಯಾಯಾಧೀಶನ ಪರವಾಗಿ, ಅವನ ಆಜ್ಞಾಧಾರಕನಾಗಿ. ಆದುದರಿಂದ ನ್ಯಾಯಾಧೀಶನಿಗೆ ಮುಟ್ಟುಗೋಲು ಹಾಕಿಕೊಳ್ಳುವ ಕ್ರಿಯೆಯೊಡನೆ ಪ್ರತ್ಯಕ್ಷವಾಗಿ ಸಂಬಂಧವಿಲ್ಲದಿದ್ದರೂ ಅವನ ಆಜ್ಞೆಯಿಂದ ಭೃತ್ಯನು ಕ್ರಿಯೆಯಲ್ಲಿ ಪ್ರವೃತ್ತನಾದುದರಿಂದ ನ್ಯಾಯಾಧೀಶ ಪ್ರಯೋಜಕ ಕರ್ತೃವೆನ್ನಬಹುದು.

(2) (i) ಅನ್ನದಲ್ಲಿ ತಲೆಯ ಕೂದಲು ಸಿಕ್ಕಿತು.

(ii) ತಲೆಯ ಕೂದಲುಗಳು ಉದುರುತ್ತಿವೆ.

ಮೊದಲನೆಯ ವಾಕ್ಯದಲ್ಲಿ ತಲೆಗೂ ಸಿಕ್ಕುವ ಕ್ರಿಯೆಗೂ ಸಂಬಂಧವಿಲ್ಲ. ಆದರೆ ಎರಡನೆಯ ವಾಕ್ಯದಲ್ಲಿ, ಕೂದಲು ತಲೆಯಿಂದ ಉದುರುತ್ತಿರುವುದರಿಂದ, ಉದುರುವ ಕ್ರಿಯೆಗೆ ತಲೆ ಅಪಾದಾನಕಾರಕ. ಆದರೆ ಈ ಕಾರಕ ಅವಿವಕ್ಷಿತವಾಗಿ ಶೇಷ ಷಷ್ಠೀ ಪ್ರಯೋಗವಿರುವುದರಿಂದ, ತಲೆ ಶೇಷಕಾರಕವಾಗುತ್ತದೆ.

(3) (i) ಮರದ ಎಲೆಗಳು ಹಾರಾಡುತ್ತಿವೆ.

(ii) ಮರದ ಎಲೆಗಳೆಲ್ಲ ಉದುರಿಹೋದುವು.

ಮೊದಲನೆಯ ವಾಕ್ಯದಲ್ಲಿ ಮರಕ್ಕೂ ಹಾರಾಡುವ ಕ್ರಿಯೆಗೂ ಸಂಬಂಧವಿಲ್ಲ. ಎರಡನೆಯ ವಾಕ್ಯದಲ್ಲಿ, ಮರಕ್ಕೆ ಅಪಾದಾನತ್ವವಿದ್ದರೂ ಅದು ಅವಿವಕ್ಷಿತವಾಗಿರುವುದರಿಂದ, ಮರ ಶೇಷಕಾರಕ.

(4) (i) ಮಳೆ ಹನಿಹನಿಯಾಗಿ ಬೀಳುತ್ತಿದೆ.

(ii) ಮಳೆಯ ಹನಿಗಳು ಬೀಳುತ್ತಿವೆ.

ಈ ಎರಡು ವಾಕ್ಯಗಳೂ ಸಮಾನಾರ್ಥಕವಾದರೂ, ಮಳೆ ರಭಸದಿಂದ ಬೀಳದೆ ಹನಿಹನಿಯಾಗಿ ಬೀಳುತ್ತಿರುವುದೆಂಬ ವಿಷಯವನ್ನು ಒತ್ತಿ ಹೇಳುವುದಕ್ಕಾಗಿ ಎರಡನೆಯ ವಾಕ್ಯದಲ್ಲಿ ಹನಿಗಳಿಗೆ ಕರ್ತೃತ್ವ ಬಂದಿದೆ. ಆದರೆ ಮಳೆಯು ಹನಿಗಳಿಂದ ಭಿನ್ನವಲ್ಲ. ಬೀಳುತ್ತಿರುವುದು ಮಳೆಯೇ. ಆದುದರಿಂದ ಮಳೆಗೆ ಕರ್ತೃತ್ವವಿದ್ದೇ ಇದೆ. ಅದು ಇಲ್ಲಿ ಅವಿವಕ್ಷಿತವಾಗಿ ಶೇಷಕಾರಕತ್ವ ಬಂದಿದೆ ಎನ್ನಬಹುದು.

(5) (i) ರಾಮನು ಬಾಣದಿಂದ ಸಪ್ತಸಾಲವೃಕ್ಷಗಳನ್ನು ಭೇದಿಸಿದನು.

(ii) ರಾಮನ ಬಾಣವು ಸಪ್ತಸಾಲವೃಕ್ಷಗಳನ್ನು ಭೇದಿಸಿತು.

ಮೊದಲ ವಾಕ್ಯದಲ್ಲಿ ರಾಮ ಕರ್ತೃ, ಬಾಣ ಕರಣ. ಬಾಣಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವ ಎರಡನೆಯ ವಾಕ್ಯದಲ್ಲಿ ಬಾಣ ಕರ್ತೃ. ಆದರೆ ರಾಮನಿಲ್ಲದೆ ಬಾಣವು ಸಾಲವೃಕ್ಷಗಳನ್ನು ಭೇದಿಸಲಾರದು. ಆದುದರಿಂದ ರಾಮನಿಗೆ ಕ್ರಿಯಾಸ್ವಾಮಿತ್ವವಿದೆ. ಕರ್ತೃತ್ವ ಅವಿವಕ್ಷಿತವಾಗಿರುವುದರಿಂದ ಶೇಷತ್ವ ಬಂದು 'ರಾಮ' ಶೇಷಕಾರಕವಾಯಿತು ಎನ್ನಬಹುದು.

ಮೇಲಿನ ಉದಾಹರಣೆಗಳಿಂದ ಕನ್ನಡದಲ್ಲಿಯೂ ಶೇಷಕಾರಕವುಂಟೆಂದು ಹೇಳಲು ಅಡ್ಡಿಯಿಲ್ಲ. ಪ್ರಾಚೀನ ಕಾವ್ಯಗಳಲ್ಲಿಯೂ ಹುಡುಕಿದರೆ ಇಂತಹ ಪ್ರಯೋಗಗಳು ಸಿಕ್ಕುವ ಸಾಧ್ಯತೆಯಿದೆ. ಭಾಷಾಭೂಷಣಕಾರನು ಹಾಗೆ ಹುಡುಕಿ ಪ್ರಯೋಗಗಳನ್ನು ಕೊಟ್ಟಿದ್ದು ಸ್ವಾಮ್ಯಕ್ಕೆ ಬದಲು ಶೇಷಕಾರಕವೆಂದೋ ಸಾಮಾನ್ಯ ಕಾರಕವೆಂದೋ ಹೇಳಿದ್ದರೆ, ಭರ್ತೃಹರಿ ಹೇಲಾರಾಜರಂತೆ ಏಳು ಕಾರಕಗಳನ್ನು ಹೇಳಿರುವುದು ಸಮಂಜಸವಾಗುತ್ತಿತ್ತು. ಆದರೆ ಅವನು ಶಬ್ದಸ್ಮೃತಿಕಾರ ಮತ್ತು ಕೇಶಿರಾಜರಂತೆ ಪೂರ್ವಕವಿ ಪ್ರಯೋಗಗಳನ್ನೇ ಉದಾಹರಣೆಗಳಾಗಿ ಕೊಡುವ ಪ್ರಯತ್ನವನ್ನು ಮಾಡಲಿಲ್ಲ. ಅವನ ಬಹುಪಾಲು ಉದಾಹರಣೆಗಳು ಒಂದೆರಡು ಪದಗಳೇ. ಪೂರ್ವಕವಿ ಪ್ರಯೋಗಗಳು ಇಪ್ಪತ್ತಕ್ಕೂ ಕಡಮೆ. ಅವುಗಳಲ್ಲೂ ಅರ್ಧದಷ್ಟು ಶಬ್ದಸ್ಮೃತಿಯಿಂದ ಎತ್ತಿಕೊಂಡವು.

ಕವಿರಾಜಮಾರ್ಗದಲ್ಲಿನ ನಿರೂಪಣೆ

ಕವಿರಾಜಮಾರ್ಗಕಾರನು ಆರು ಕಾರಕಗಳ ಹೆಸರುಗಳನ್ನು ಹೇಳಿಲ್ಲವಾದುದರಿಂದ ಅವು ಯಾವುವು ಎಂಬ ಚರ್ಚೆಗೆ ಅವಕಾಶವಾಯಿತು.

ಮದರಾಸು ಯೂನಿವರ್ಸಿಟಿಯ ಮುದ್ರಣದಲ್ಲಿ ಅದರ ಸಂಪಾದಕರು, "ಷಷ್ಠಿಗೆ ಕಾರಕತ್ವವಿಲ್ಲವಾಗಿ ಕಾರಕಗಳು ಆಱಾದುದರಿಂದ ಇಲ್ಲಿ 'ವಿಭಕ್ತಿಗಳಾಱೆ-ನಿಕ್ಕುಂ' ಎಂದಿರಬಹುದೆಂದು ತೋರುವುದು. ಆದರೆ ಲಕ್ಷ್ಯದಲ್ಲಿ ಷಷ್ಠಿಯ ವಿಭಕ್ತಿಯನ್ನೂ ಕಾರಕಕ್ಕೆ ಉದಾಹರಣೆಯಾಗಿ[23] ಕವಿಯು ಕೊಟ್ಟಿರುವನು :—

---

23 ಉದಾಹರಣ ಪದ್ಯ :—(ಪ್ರಥಮ ಪರಿಚ್ಛೇದದಲ್ಲಿ ೧೧೫ನೆಯದು)

ನರಪತಿ ಬಂದನಾ ನೃಪನನಟ್ಟಿಯೆ ಕಾಣ್ಬುದು ತನ್ನರೇಂದ್ರನಂ

ಅಧೀಶ್ವರನಾ ದಯೆ-ಈ ಕವಿಗೆ ಕಾರಕವೆಂದರೆ ನಾಮ ವಿಭಕ್ತಿ ಪ್ರತ್ಯಯವೆಂಬ ಅಭಿಪ್ರಾಯವಿದ್ದಂತೆ ಕಾಣುವುದು" ಎಂದು ಹೇಳಿದ್ದಾರೆ.[24]

'ವಿಭಕ್ತಿಗಳಾಜಿಸಿಕ್ಕುಂ'[25] ಎಂದು ಮೊದಲನೆಯ ವಾಕ್ಯದಲ್ಲಿ ಸೂಚಿಸಿರುವ ಊಹಿತಪಾಠವನ್ನು ಸಂಪಾದಕರೇ ಕೈಬಿಟ್ಟಿರುವುದು ಎರಡನೆಯ ವಾಕ್ಯದಿಂದ ಸ್ಪಷ್ಟವಾಗುತ್ತದೆ. ಬೇರೆ ಯಾರೂ ಈ ಪಾಠವನ್ನು ಒಪ್ಪಿಲ್ಲ. ಷಷ್ಠಿಯ ವಿಭಕ್ತಿಯನ್ನೂ

ಧರಣಿ ಸನಾಥೆ ಭೂಪತಿಗೆ ಕಪ್ಪವನೀಗವನೀಶ[a]ನತ್ರಣಂ ।
ಪರಿಭವಮಂ ಕಟಿಲ್ಪ್ಪುವುದಧೀಶ್ವರನಾ ದಯೆ ಸಾಲ್ಗುಮಾ ಮಹೀ
ಶ್ವರನೊಳಿದಪ್ಪುದೆಂಬುದಿದು ಕಾರಕಯುಕ್ತ ವಿಭಕ್ತ್ಯನುಕ್ರಮಂ ॥

---

a. ಇದು ಮದರಾಸು ಮುದ್ರಣದ ಮತ್ತು ಮುಳಿಯ ತಿಮ್ಮಪ್ಪಯ್ಯನವರ ಪಾಠ.

ಪಾಠಾಂತರಗಳು :

ಕಪ್ಪವನೀಯವನೀಶ (ಡಾ॥ ಕೆ. ಕೃಷ್ಣಮೂರ್ತಿ),

ಕಪ್ಪವನಿತ್ತವನೀಶ (ಪ್ರೊ॥ ಎಂ. ವಿ. ಸೀತಾರಾಮಯ್ಯ)—ಈ ಪಾಠವನ್ನು ತೆಗೆದುಕೊಂಡರೆ ಚತುರ್ಥೀ ಪಂಚಮೀ ವಿಭಕ್ತಿಗಳೆರಡಕ್ಕೂ ಸೇರಿ ಒಂದೇ ಉದಾಹರಣವಾಕ್ಯವಾಗುತ್ತದೆ. ಆದರೆ ಉಳಿದ ವಿಭಕ್ತಿಗಳಿಗೆ ಪ್ರತಿಯೊಂದಕ್ಕೂ ಬೇರೆ ಬೇರೆ ಉದಾಹರಣ ವಾಕ್ಯಗಳಿವೆ.

24 ಕರ್ಣಾಟಕ ಕವಿರಾಜಮಾರ್ಗಂ (Ed. A. Venkata Rau & H. Sesha Aiyangar) ; University of Madras, Reprint 1973. 22ನೇ ಪುಟದಲ್ಲಿ ಅಡಿಟಿಪ್ಪಣಿ.

25 ಸಂಸ್ಕೃತ ವ್ಯಾಕರಣದಲ್ಲಿ, 'ಸುಪ್' ಎಂದು ಕರೆಯಲ್ಪಡುವ 21 ಪ್ರತ್ಯಯಗಳನ್ನು ಹೇಳಿದೆ. ಇವುಗಳನ್ನು ಮೂರುಮೂರಾಗಿ ತೆಗೆದುಕೊಂಡು ಅವುಗಳಿಗೆ ವಿಭಕ್ತಿ ಎಂಬ ಸಂಜ್ಞೆ ಕೊಟ್ಟಿದೆ. ಪ್ರತಿಯೊಂದು ವಿಭಕ್ತಿಯಲ್ಲಿನ ಮೂರು ಪ್ರತ್ಯಯಗಳು ಕ್ರಮವಾಗಿ ಏಕ, ದ್ವಿ, ಬಹುವಚನಗಳಿಗೆ ಅನ್ವಯಿಸುತ್ತವೆ. ಕರ್ತೃ ಕರ್ಮಗಳು ಕ್ರಿಯಾಪದದಿಂದ ಅಭಿಹಿತವಾದಾಗ (ನಿರ್ದಿಷ್ಟವಾದಾಗ) ಪ್ರಥಮಾ ವಿಭಕ್ತಿಯಲ್ಲಿರುತ್ತವೆ. ಷಷ್ಠೀ ವಿಭಕ್ತಿ ಸಂಬಂಧ ಸೂಚಕ. ಉಳಿದ ವಿಭಕ್ತಿಗಳು ಕ್ರಮವಾಗಿ ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣಗಳನ್ನು ನಿರ್ದೇಶಿಸುತ್ತವೆ. (ಇದು ಸಾಮಾನ್ಯ ನಿಯಮ. ಆದರೆ ಒಂದೇ ಕಾರಕವು ಬೇರೆ ಬೇರೆ ವಿಭಕ್ತಿಗಳಿಂದ ನಿರ್ದಿಷ್ಟವಾಗುವುದು ಅಪೂರ್ವವಲ್ಲ.) ಹೀಗೆ ಸುಪ್ ಪ್ರತ್ಯಯಗಳು-ಕಾರಕಾದಿಗಳು ಮತ್ತು ವಚನಗಳು ಇವೆರಡನ್ನೂ ನಿರ್ದೇಶಿಸುತ್ತವೆ.

ಕನ್ನಡ ವ್ಯಾಕರಣದಲ್ಲಿ ಹೇಳಿರುವ ಸುಪ್ ಅಥವಾ ನಾಮವಿಭಕ್ತಿ ಪ್ರತ್ಯಯಗಳು ಏಳು ಮಾತ್ರ. ಇವು ಕಾರಕಾದಿಗಳನ್ನು ಮಾತ್ರ ನಿರ್ದೇಶಿಸುತ್ತವೆ. ಆಗಮಗಳೆಂದು ಕರೆಯಲ್ಪಟ್ಟಿರುವ ಗಳ್, ಅರ್, ಮೊದಲಾದುವು ವಾಸ್ತವವಾಗಿ ಬಹುವಚನ ಸೂಚಕ ಪ್ರತ್ಯಯಗಳು. ಪ್ರಥಮಾ ವಿಭಕ್ತಿ ಪ್ರತ್ಯಯವೆಂದು ಹೇಳಿರುವ 'ಮ್' ಅಕಾರಾಂತ ಶಬ್ದಗಳ ಏಕವಚನದಲ್ಲಿ ಮಾತ್ರ ಬರುತ್ತದೆ. ಆದ್ದರಿಂದ ಇದು ವಚನಸೂಚಕ ಪ್ರತ್ಯಯ. ಆದಕಾರಣ ನಿಜವಾದ ವಿಭಕ್ತಿಪ್ರತ್ಯಯಗಳು ಆರೇ.

ಕಾರಕಕ್ಕೆ ಉದಾಹರಣೆಯಾಗಿ ಕವಿ ಕೊಟ್ಟಿದ್ದಾನೆಂದು ಹೇಳಿರುವುದು ನಿರಾಧಾರವಾದುದು. ಅವನು ಕೊಟ್ಟಿರುವುದು ಏಳು ವಿಭಕ್ತಿಗಳಿಗೆ ಏಳು ಉದಾಹರಣೆಗಳು.

ವಿಭಕ್ತಿಗಳು ಪ್ರತ್ಯಯಗಳೇ ಹೊರತು ಪ್ರಕೃತಿಯಲ್ಲ. ವಿಭಕ್ತಿಯು ಕಾರಕವನ್ನು ನಿರ್ದೇಶಿಸುತ್ತದೆಯೇ ವಿನಾ ಅದೇ ಕಾರಕವಲ್ಲ.[26] ಹೀಗಿರುವಾಗ 'ಕವಿಗೆ ಕಾರಕವೆಂದರೆ ನಾಮವಿಭಕ್ತಿಪ್ರತ್ಯಯವೆಂಬ ಅಭಿಪ್ರಾಯ'ವೆಂದು ಹೇಳಿದರೆ ಕವಿಗೆ ಅಪಚಾರವೆಸಗಿದಂತಾಗುತ್ತದೆ.

ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ಮತ್ತು ಪ್ರೊ॥ ಎಂ. ವಿ. ಸೀತಾರಾಮಯ್ಯನವರ ಮತದಂತೆ ಕವಿರಾಜಮಾರ್ಗಕಾರನು ಹೇಳಿರುವ ಆರು ಕಾರಕಗಳು ಕರ್ಮ, ಕರಣ, ಸಂಪ್ರದಾನ, ಅಪಾದಾನ, ಸಂಬದ್ಧಕಾರಕ (ಅಥವಾ ಷಷ್ಠೀಕಾರಕ) ಮತ್ತು ಅಧಿಕರಣ ; ಹಾಗೂ ಕರ್ತೃ ಕಾರಕವಲ್ಲ.[27] ಇತರರು ಇದನ್ನು

ಹಾಗೆಂದಮಾತ್ರಕ್ಕೆ ಈ ವಿಶ್ಲೇಷಣೆಯಿಂದ ಕಂಡುಬರುವ ಅಭಿಪ್ರಾಯವನ್ನು, ವಿಭಕ್ತಿಗಳ ವಿಷಯದಲ್ಲೂ ಸಂಸ್ಕೃತ ವ್ಯಾಕರಣವನ್ನೇ ಅನುಸರಿಸಿರುವ ಹಿಂದಿನ ಕನ್ನಡ ವ್ಯಾಕರಣಕಾರರಿಗೆ ಆರೋಪಿಸುವುದು ಎಂದಿಗೂ ಸರಿಯಾಗದು.

ವಿಭಕ್ತಿಗಳು ಆರೆಂದು ಹೇಳಿದ ಮಾತ್ರಕ್ಕೆ ಈ ಆರು ವಿಭಕ್ತಿಗಳೂ ಕ್ರಮವಾಗಿ ಆರು ಕಾರಕಗಳನ್ನು ನಿರ್ದೇಶಿಸುತ್ತವೆಯೆಂದಾಗಲೀ ಕರ್ತೃವು ಕಾರಕವಲ್ಲವೆಂದಾಗಲೀ ಅರ್ಥವಲ್ಲ.

26 (i) ವಿಭಕ್ತಿ ಶಬ್ದಸ್ಸುಪಾಂ ವಾಚಕಃ ವಿಭಾಗವಚನೋ ವಾ. —ಪಾಣಿನಿ ಸೂತ್ರದ (1-2-44 ಏಕ ವಿಭಕ್ತಿ ಚಾಪೂರ್ವನಿಪಾತೇ) ಕಾಶಿಕಾವೃತ್ತಿಗೆ ನ್ಯಾಸ ವ್ಯಾಖ್ಯಾನದಲ್ಲಿ.

(ii) ವಿಭಕ್ತಿ ಶಬ್ದಃ ಸುಪಾಂ ವಾಚಕಃ ಕಾರಕಶಕ್ತಿವಚನೋ ವಾ ;
ವಿಭಜ್ಯತೇ ಅನಯಾ ಪ್ರಾತಿಪದಿಕಾರ್ಥ ಇತಿ ಕೃತ್ವಾ
—ಅದೇ ಸೂತ್ರದ ಪದಮಂಜರೀ ವ್ಯಾಖ್ಯಾನದಲ್ಲಿ.

(iii) ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಇತಿ ತಾಃ ಪುನಃ ಸಪ್ತ ವಿಭಕ್ತಯೋ ಜ್ಞಾತವ್ಯಾಃ —ಭಾಷಾಭೂಷಣದ 39ನೇ ಸೂತ್ರಕ್ಕೆ ವೃತ್ತಿ.

27 (i) ಪ್ರಥಮಾ ವಿಭಕ್ತಿ ಪ್ರತ್ಯಯಯುತ 'ಕರ್ತೃ' ಪದವೊಂದು ಮಾತ್ರ 'ಕಾರಕವಲ್ಲ'—ಉಳಿದುವೆಲ್ಲ ಕಾರಕಗಳು ಎಂಬ ಭಾವನೆ ಅವನಿಗೆ ಇದ್ದಂತೆ ತೋರುತ್ತದೆ. (ಪುಟ ೧೪೫)

(ii) ಷಷ್ಠೀ ವಿಭಕ್ತಿಯುಕ್ತ ಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ 'ಸಂಬದ್ಧಕಾರಕ' ಎಂದು ಕರೆಯಬಹುದು. (ಪುಟ ೧೪೬)
—ಕವಿರಾಜಮಾರ್ಗ ವಿವೇಕ.

ವಿರೋಧಿಸಿದ್ದಾರೆ.[28]

'ಕಾರಕಮಾಜು' ಪದ್ಯದ ಹೊಸಗನ್ನಡ ಅನುವಾದ ಭಾಗದಲ್ಲಿ ಡಾ॥ ಕೆ. ಕೃಷ್ಣಮೂರ್ತಿಗಳು "ಕನ್ನಡದಲ್ಲಿ ಷಷ್ಠಿಗೂ ಕಾರಕತ್ವವುಂಟೆನ್ನುವುದಾದರೆ ಕರ್ತೃವಿಗೆ ಕಾರಕತ್ವವಿಲ್ಲವೆಂದು ಭಾವಿಸಬೇಕು" ಎಂದು ಹೇಳಿದ್ದಾರೆ.[29]

ವಿದ್ವಾನ್ ತಿಮ್ಮಪ್ಪಯ್ಯನವರು ತಮ್ಮ ನಿಲುವಿಗೆ ಕೊಡುವ ಕಾರಣಗಳು :—

(1) 'ಕಾರಯತೀತಿ' (ಮಾಡಿಸುತ್ತಿದೆ) ಎಂಬ ವ್ಯುತ್ಪತ್ತಿಗನುವಾಗಿ 'ಕಾರಕ' ಎಂಬುದು ಸಂಸ್ಕೃತದಲ್ಲಿ ರೂಪಿತವಾದ ಪ್ರಕೃತಿ ಅಥವಾ ಲಿಂಗ...ಇದರಿಂದ 'ಕಾರಕ' ಎಂದರೆ 'ಮಾಡಿಸುವ' ಇಲ್ಲವೆ 'ಮಾಡಿಸುವ ಪದಾರ್ಥವನ್ನು ಸೂಚಿಸುವ' ಎಂದಾಗುತ್ತದೆ.[30]

'ಕಾರಕಂ' ಎಂಬ ಪದವು ಸಂಸ್ಕೃತ ವ್ಯಾಕರಣಾನುಸಾರವಾದ ವ್ಯುತ್ಪತ್ತಿಯಂತೆ 'ಮಾಡಿಸುವ ವ್ಯಕ್ತಿ'ಯನ್ನು ಸೂಚಿಸುವುದಲ್ಲದೆ 'ಮಾಡುವ ವ್ಯಕ್ತಿ'ಯನ್ನಲ್ಲ..... 'ಕರೋತಿ ಇತಿ ಕರ್ತಾ' ಎಂದು ಕರ್ತೃ ಪದವು ರೂಪಿತವಾಗಿದೆ. ಇಂಥ 'ಕರ್ತೃ' ಎಂಬ ಪದವು ಕಾರಕವೆನ್ನಿಸುವುದು ಹೇಗೆ?[31]

(2) ಗ್ರಂಥಕಾರನು 'ಕಾರಕಮಾಜು ಕರ್ಮಕರಣಾದಿಕದಿಂ' ಎಂದೂ 'ಪ್ರಥಮಾದಿ ಭೇದ ನಿರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞಿನಿಕ್ಕುಂ' ಎಂದಿದ್ದಾನಷ್ಟೆ. ಇದನ್ನು ಅವಗಾಹಿಸಿ ನೋಡಿದಲ್ಲಿ ಅವನೆಣಿಕೆಯಂತೆ, 'ಕರ್ಮ'ವನ್ನು ಹಿಡಿದು ಮೊದಲ್ಗೊಂಡು 'ಅಧಿಕರಣ'ದ ವರೆಗಿನವೆಲ್ಲ—ಎಂದರೆ 'ಸಂಬಂಧ' (ಷಷ್ಠಿ) ಸಹಿತವಾಗಿ—ಕಾರಕಗಳು ಎಂಬ ಭಾವನೆ ಹೊಳೆಯುತ್ತಿದೆ. ಅಲ್ಲವಾಗಿದ್ದರೆ

(iii) ಅವನ ಮತದಂತೆ,—ಕಾರಕಗಳು ಆರು, ಅವುಗಳಲ್ಲಿ ಕರ್ತೃ ಸೇರುವುದಿಲ್ಲ; ಷಷ್ಠಿಗೂ ಕಾರಕತ್ವ ಉಂಟು.

—ಶ್ರೀ ವಿಜಯಕೃತ ಕವಿರಾಜಮಾರ್ಗಂ (ಸಂ. ಎಂ. ವಿ. ಸೀತಾರಾಮಯ್ಯ), ಕರ್ಣಾಟಕ ಸಂಘ, ಸರಕಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೆಂಗಳೂರು, 1968, ಪುಟ ೧೭೨.

28 (i) ವಿ. ಕೃಷ್ಣಸ್ವಾಮಿ ಅಯ್ಯಂಗಾರ್: 'ಕವಿರಾಜಮಾರ್ಗದಲ್ಲಿ ಕಾರಕ ವಿಚಾರ', ಸಾಧನೆ, ಸಂಪುಟ 2, ಸಂಚಿಕೆ 2 (1973), ಪುಟಗಳು 24–43.

(ii) ವಿದ್ವಾನ್ ರಂಗನಾಥ ಶರ್ಮರ ಲೇಖನ. (ವಿವರಕ್ಕೆ ಅಡಿಟಿಪ್ಪಣಿ 13 ನೋಡಿ.) ಪುಟ 43–51.

29 ಕವಿರಾಜಮಾರ್ಗಂ (ಐಬಿಎಚ್ ಪ್ರಕಾಶನ, ಬೆಂಗಳೂರು, 1983), ಪುಟ 29.

30 ಕವಿರಾಜಮಾರ್ಗ ವಿವೇಕ, ಪುಟ 142.

31 ಅದೇ ಪುಟ 145.

'ಕಾರಕಮಾಱು ಕರ್ತೃಕರ್ಮಾದಿಕದಿಂ' ಎನ್ನಬೇಕಾಗಿತ್ತು. ಹಾಗೆಂದರೆ, ಛಂದೋ ಭಂಗವಾಗುತ್ತಿತ್ತು ಎಂದೆನ್ನಬಾರದು. 'ಇಲ್ಲಿಗಿದು ತಕ್ಕುದಿಲ್ಲಿಗೆ ಪೊಲ್ಲದಿದೆಂದಱಿದು' ಪದಗಳನ್ನು ಬಳಸಬೇಕು ಎಂದು ಬೋಧಿಸಿದ 'ವಾಗಧಿಪ'ನಿಗೆ ತಕ್ಕಂತೆ ಪದಗಳನ್ನು ಪ್ರಯೋಗಿಸಲು ತಿಳಿಯುತ್ತಿದ್ದಿಲ್ಲವೆ ?[32]

(3) 'ಅಧೀಶ್ವರನಾ ದಯೆ ಸಾಲ್ಗುಂ' ಎಂಬುದನ್ನು ಮನನವೆಸಗುವ. ಇಲ್ಲಿ 'ಅಧೀಶ್ವರನಾ' ಎಂಬ ಷಷ್ಠೀ ವಿಭಕ್ತಿಯುತವಾದ ಪದವು 'ಸಾಲ್ಗುಂ' ಎಂಬ ಕ್ರಿಯೆಯ ಕಾರಕವಲ್ಲವೆಂಬುದೇನೋ ಸರಿ. ಆ ಕ್ರಿಯೆಗೆ ಕರ್ತೃ 'ದಯೆ'. ಅಂತಹ ಕರ್ತೃರೂಪದ ದಯೆ 'ಅಧೀಶ್ವರನ ಸಂಬಂಧವಾದುದು.' ಮೇಲಿನ ವಿವೇಚನೆಗನುವಾಗಿ 'ಕರ್ತೃ' ಕಾರಕವಾಗದು ಎಂಬುದು ಸರಿಯಾದರೆ, ಈ ವಾಕ್ಯದಲ್ಲಿ 'ಕಾರಕ'ವೇ ಇಲ್ಲವೆನಿಸುತ್ತದೆ. ಆದರಿಂದ, ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನು ಮಾತ್ರ ಕೊಡುವ 'ಅಧೀಶ್ವರನಾ' ಎಂಬ ಪದವು ಆ ಸ್ವಸಂಬಂಧಿಯಾದ 'ದಯೆ' ಎಂಬ ಕರ್ತೃವಿನ ಮೂಲಕವಾಗಿ 'ಸಾಲ್ಗುಂ' ಎಂಬ ಭಾವನಾತ್ಮಕ ಕ್ರಿಯೆಯನ್ನು ಮಾಡಿಸುವುದಲ್ಲವೆ ? ಇನ್ನೊಬ್ಬನ ದಯೆಯಾದರೆ, ಅದು 'ಸಾಲ್ಗುಂ' ಎಂಬುದಕ್ಕೆ ಕರ್ತೃವಾಗಲಾರದು. ಆದರಿಂದಲೇ ಷಷ್ಠೀ ವಿಭಕ್ತಿಯುಕ್ತ ಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ 'ಸಂಬದ್ಧಕಾರಕ' ಎಂದು ಕರೆಯಬಹುದು.[33]

'ಕಾರಕ' ಶಬ್ದದ ವ್ಯುತ್ಪತ್ತಿಯ ವಿಷಯ.

(i) ಕಾವ್ಯಗಳಲ್ಲಿ ಒಂದೇ ಶಬ್ದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸುವುದು ಸಾಮಾನ್ಯ. ಶ್ಲೇಷಕ್ಕಾಗಿಯೋ ಚಮತ್ಕಾರ ಪ್ರದರ್ಶನಕ್ಕಾಗಿಯೋ ಅಪ್ರಸಿದ್ಧಾರ್ಥದಲ್ಲಿ ಅಥವಾ ಹೊಸ ವ್ಯುತ್ಪತ್ತಿಯನ್ನನುಸರಿಸಿ ಪದಪ್ರಯೋಗ ಮಾಡುವುದುಂಟು.[34] ಆದರೆ ಶಾಸ್ತ್ರದಲ್ಲಿ ಇದು ಸಲ್ಲದು. ಪಾರಿಭಾಷಿಕ ಶಬ್ದಗಳ ಅರ್ಥ ನಿಷ್ಕೃಷ್ಟ. ಕಾರಕ ಎನ್ನುವುದು ವ್ಯಾಕರಣ ಶಾಸ್ತ್ರದಲ್ಲಿ ಒಂದು ಪಾರಿಭಾಷಿಕ ಶಬ್ದ. ಎರಡು ಸಾವಿರ ವರ್ಷಗಳಿಗೂ ಹಿಂದೆಯೇ ಪತಂಜಲಿಯು 'ಕಾರಕ' ಎಂಬುದು ಅನ್ವರ್ಥಸಂಜ್ಞೆಯೆಂದು ಹೇಳಿ 'ಕರೋತೀತಿ ಕಾರಕಂ' ಎಂಬ ವ್ಯುತ್ಪತ್ತಿಯನ್ನು ತೋರಿಸಿದ್ದಾನೆ. ಅಲ್ಲಿಂದೀಚೆಗೆ ಎಲ್ಲ

---

32 ಅದೇ ಪುಟ 144–5.

33 ಅದೇ ಪುಟ 145–6.

34 ಟಿ. ಪಿ. ಕೈಲಾಸಂ ಅವರು, ತಮ್ಮ ನಾಟಕವೊಂದರಲ್ಲಿ, 'ಕೇ ಸರತೀತಿ ಕೇಸರೀ' (ನೀರಿನಲ್ಲಿ ಓಡಾಡುವುದು) ಎಂಬ ವ್ಯುತ್ಪತ್ತಿ ಹೇಳಿ 'ಕೇಸರಿ' ಎಂದರೆ ಮೀನು ಎಂದು ಅರ್ಥ ಮಾಡಿದ್ದಾರೆ.

ವೈಯಾಕರಣರೂ ಇದೇ ಅರ್ಥದಲ್ಲಿಯೇ ಈ ಪದವನ್ನು ಪ್ರಯೋಗಿಸಿರುವುದಲ್ಲದೆ ಕ್ರಿಯೆಗೆ ಹೇತುವೇ ಕಾರಕವೆಂದು ವಿವರಿಸಿಯೂ ಇದ್ದಾರೆ.[35]

(ii) ವಿದ್ವಾನ್ ತಿಮ್ಮಪ್ಪಯ್ಯನವರು, ಸಂಸ್ಕೃತ ವ್ಯಾಕರಣಾನುಸಾರವಾದ ವ್ಯುತ್ಪತ್ತಿಯಂತೆ 'ಕಾರಕ' ಪದವು ಸೂಚಿಸುವುದು ಮಾಡಿಸುವ ವ್ಯಕ್ತಿಯನ್ನು; ಮಾಡುವ ವ್ಯಕ್ತಿಯನ್ನಲ್ಲ ಎನ್ನುತ್ತಾರಷ್ಟೆ.[36]

'ಣ್ವುಲ್ ತೃಚೌ' (ಪಾಣಿನಿ 3-1-133) ಎಂಬ ಸೂತ್ರದಲ್ಲಿ ವಿಧಿಸಿರುವ ಣ್ವುಲ್ ಮತ್ತು ತೃಚ್ ಈ ಕೃತ್ಪ್ರತ್ಯಯಗಳೆರಡೂ ಒಂದೇ ಅರ್ಥವನ್ನು ಬೋಧಿಸುತ್ತವೆ. ಯಾವ ಧಾತುವಿಗೆ ಈ ಪ್ರತ್ಯಯಗಳು ಸೇರುತ್ತವೆಯೋ ಆ ಧಾತುವಿನ ಅರ್ಥವಾದ ಕ್ರಿಯೆಗೆ ಈ ಕೃದಂತ ಪದವು ಕರ್ತೃ ಎಂಬುದೇ ಈ ಅರ್ಥ.[37]

---

35 (i) ಮಹತ್ಯಾಃ ಸಂಜ್ಞಾಯಾಃ ಕರಣೇ ಏತತ್ಪ್ರಯೋಜನಂ–ಅನ್ವರ್ಥ ಸಂಜ್ಞಾ ಯಥಾ ವಿಜ್ಞಾಯೇತ । ಕರೋತೀತಿ ಕಾರಕಮಿತಿ ।

—'ಕಾರಕೇ' (ಪಾಣಿನಿ 1-4-23) ಸೂತ್ರಕ್ಕೆ ಪತಂಜಲಿಯ ಭಾಷ್ಯ (ಪುಟ 242)

(ii) ಕಾರಕ ಶಬ್ದಶ್ಚ ನಿಮಿತ್ತಪರ್ಯಾಯಃ । ಕಾರಕಂ ಹೇತುರಿತ್ಯನರ್ಥಾಂತರಂ । ಕಸ್ಯ ಹೇತುಃ ? ಕ್ರಿಯಾಯಾಃ । —ಕಾಶಿಕಾ ವೃತ್ತಿ (ಮೇಲಿನ ಸೂತ್ರಕ್ಕೆ)

(iii) ಕಾರಕ ಶಬ್ದೋಯಮಸ್ತಿ ಣ್ವುಲಂತಃ :— ಕರೋತೀತಿ ಕಾರಕಮಿತಿ. ಅಸ್ಯ ವ್ಯುತ್ಪನ್ನಃ ಸಂಜ್ಞಾಶಬ್ದೋ ನಿಮಿತ್ತಪರ್ಯಾಯಃ । (ಅದೇ ಸೂತ್ರಕ್ಕೆ ಹರದತ್ತನ ಪದಮಂಜರೀ)

(iv) ಕಾರಕಂ ನಿರ್ವರ್ತಕಂ ಹೇತುರ್ವಾ । ಕಸ್ಯ ? ಕ್ರಿಯಾಯಾಃ ।

—ಜೈನೇಂದ್ರ ವ್ಯಾಕರಣದ 1-2-108 ಸೂತ್ರದ ಮಹಾವೃತ್ತಿ.

(v) ಕ್ರಿಯಾ ಹೇತುಃ ಕಾರಕಂ ।

—ಹೇಮಚಂದ್ರನ ಶಬ್ದಾನುಶಾಸನ ಸೂತ್ರ 2-2-1.

36 ವಿದ್ವಾನ್ ರಂಗನಾಥ ಶರ್ಮರು ತಮ್ಮ ಲೇಖನದಲ್ಲಿ (ಪುಟ 47) "ಇದು ಅತ್ಯಂತ ನಿರಾಧಾರವೂ ಪ್ರಮಾಣ ವಿರುದ್ಧವೂ ಆದ ಹೇಳಿಕೆ. 'ಕಾರಯತೀತಿ ಕಾರಕಃ' ಎಂದು ಈ ಕಾರಕ ಶಬ್ದಕ್ಕೆ ಯಾವನು ಎಲ್ಲಿ ವ್ಯುತ್ಪತ್ತಿಯನ್ನು ತೋರಿಸಿದ್ದಾನೆ" ಎಂದು ಪ್ರಶ್ನಿಸಿ ಕರ್ತೃ ಕಾರಕವಲ್ಲ ಮತ್ತು ಪ್ರಥಮಾಂತ ಪದವೂ ಕಾರಕವಲ್ಲ ಎಂಬ ನಿಲುವಿನಿಂದ ಉಂಟಾಗುವ ಗೊಂದಲವನ್ನು ಉದಾಹರಣೆಗಳೊಡನೆ ತೋರಿಸಿದ್ದಾರೆ.

37 'ಕರ್ತರಿ ಕೃತ್' (ಪಾಣಿನಿ 3-4-67) ಎಂಬ ಸೂತ್ರದ ಪ್ರಕಾರ ಕೃತ್ಪ್ರತ್ಯಯವು (ಅದಕ್ಕೆ ಬೇರೆ ವಿಶೇಷಾರ್ಥವನ್ನು ವಿಧಿಸದಿದ್ದಾಗ) ಬೋಧಿಸುವುದು ಕರ್ತೃವನ್ನೇ.

ಕೃತ್ಸಂಜ್ಞಕಾಃ ಪ್ರತ್ಯಯಾಃ ಕರ್ತರಿ ಕಾರಕೇ ಭವಂತಿ ।

—ಮೇಲಿನ ಸೂತ್ರಕ್ಕೆ ಕಾಶಿಕಾ ವೃತ್ತಿ.

ಣ್ವುಲ್ ಪ್ರತ್ಯಯದ ಅನುಬಂಧಗಳಾದ ಣಕಾರ ಲಕಾರಗಳು ಹೋಗಿ ಉಳಿಯುವ 'ವು'ಗೆ 'ಅಕ' ಎಂಬ ಆದೇಶವಾಗುತ್ತದೆ. ತೃಚ್ ಪ್ರತ್ಯಯದ ಅನುಬಂಧ ಚಕಾರವು ಹೋಗಿ 'ತೃ' ಉಳಿಯುತ್ತದೆ. ಈ 'ತೃ' 'ಅಕ'ಗಳನ್ನು ಶುದ್ಧ ಧಾತುವಿಗಾಗಲೀ ಣ್ಯಂತ (ಪ್ರೇರಕಾರ್ಥ ಪ್ರತ್ಯಯ ಸೇರಿದ) ಧಾತುವಿಗಾಗಲೀ ಸೇರಿಸಬಹುದು. ಉದಾಹರಣೆಗೆ :

ದಾ (ದಾನ ಕೊಡು) ಧಾತುವಿನಿಂದ—ದಾತೃ, ದಾಯಕ (ಕೊಡುವವನು) ; ದಾಪಯಿತೃ, ದಾಪಕ (ಕೊಡಿಸುವವನು). ಅಧೀ (ಕಲಿ) ಧಾತುವಿನಿಂದ—ಅಧ್ಯೇತೃ, ಅಧ್ಯಾಯಕ (ಕಲಿಯುವವನು) ; ಅಧ್ಯಾಪಯಿತೃ, ಅಧ್ಯಾಪಕ (ಕಲಿಸುವವನು). ಗೈ (ಹಾಡು) ಧಾತುವಿನಿಂದ—ಗಾತೃ, ಗಾಯಕ (ಹಾಡುವವನು) ; ಗಾಪಯಿತೃ, ಗಾಪಕ (ಹಾಡಿಸುವವನು).

ಶುದ್ಧ ಮತ್ತು ಣ್ಯಂತ ಧಾತುಗಳಿಗೆ 'ತೃ' ಸೇರಿದಾಗ ನಿಷ್ಪನ್ನವಾಗುವ ರೂಪಗಳು ಯಾವಾಗಲೂ ಭಿನ್ನವಾಗಿರುತ್ತವೆ. 'ಅಕ' ಸೇರಿದಾಗ ಕೆಲವು ಧಾತುಗಳಿಂದ ಭಿನ್ನರೂಪಗಳು ನಿಷ್ಪನ್ನವಾಗುತ್ತವೆ. ಮತ್ತೆ ಕೆಲವು ಧಾತುಗಳಿಂದ ಸಮಾನ ರೂಪಗಳು ನಿಷ್ಪನ್ನವಾಗುತ್ತವೆ. ದಹ್ (ಸುಡು), ಕೃ (ಮಾಡು) ಇವು ಎರಡನೆಯ ಬಗೆಯ ಧಾತುಗಳು.

ದಹ್ ಧಾತುವಿನಿಂದ—**ದಗ್ಧೃ** (ಸುಡುವವನು), **ದಾಹಯಿತೃ** (ಸುಡಿಸುವವನು) ; **ದಾಹಕ** (ಸುಡುವವನು/ಸುಡಿಸುವವನು.)

ಕೃ ಧಾತುವಿನಿಂದ — **ಕರ್ತೃ** (ಮಾಡುವವನು), **ಕಾರಯಿತೃ** (ಮಾಡಿಸುವವನು) ; **ಕಾರಕ** (ಮಾಡುವವನು/ಮಾಡಿಸುವವನು).

ರೂಪನಿಷ್ಪತ್ತಿ ಪ್ರಕಾರವಾಗಿ ಹೀಗೆ ಕಾರಕ ಶಬ್ದಕ್ಕೆ ಮಾಡುವವನು, ಮಾಡಿಸುವವನು ಎರಡೂ ಅರ್ಥಗಳಿರುವಾಗ, ಈ ಶಬ್ದ ಸೂಚಿಸುವುದು ಮಾಡುವ ವ್ಯಕ್ತಿಯನ್ನಲ್ಲ ಎಂದು ವಿದ್ವಾನ್ ತಿಮ್ಮಪ್ಪಯ್ಯನವರು ಹೇಳಿರುವುದು ಸರಿಯಲ್ಲ.

ಕಾರಕ ಪಾರಿಭಾಷಿಕ ಶಬ್ದವೆಂಬುದನ್ನು ಸದ್ಯಕ್ಕೆ ಪರಿಗಣಿಸದೆ, ರೂಪನಿಷ್ಪತ್ತಿಯಂತೆ ಎರಡು ಅರ್ಥಗಳನ್ನು ತೆಗೆದುಕೊಂಡರೂ, ಎರಡು ಅರ್ಥಗಳಲ್ಲಿ ಯಾವುದು ಸಂದರ್ಭಕ್ಕೆ ಹೊಂದುವುದೋ ಅದನ್ನು ಪರಿಗ್ರಹಿಸಬೇಕಾಗುತ್ತದೆ.

ಒಬ್ಬನು ಕ್ರಿಯೆಯನ್ನು ಮಾಡುವವನು, ಮತ್ತೊಬ್ಬನು ಮಾಡಿಸುವವನು ಎನ್ನಬೇಕಾದರೆ, ಮಾಡುವವನು ಮಾಡಿಸುವವನಿಗೆ ಅಧೀನನಾಗಿರಬೇಕು ಎಂದರೆ ಅವನ ಆಜ್ಞಾನುಸಾರ ಕೆಲಸ ಮಾಡಬೇಕು, ಅಥವಾ ಅವನಿಂದ ಪ್ರೇರಿತನಾಗಿ ಕೆಲಸ ಮಾಡಬೇಕು.

ಉದಾಹರಣೆಗೆ,

ಗುರುವು ರಾಜನಿಂದ ದಾನ ಮಾಡಿಸಿದನು.

ಗುರುವು ಶಿಷ್ಯನಿಂದ ಅಧ್ಯಯನ ಮಾಡಿಸಿದನು.—ಎಂಬ ವಾಕ್ಯಗಳಲ್ಲಿ ಕೆಲಸ ಮಾಡಿಸುವವನು ಗುರು. ಮೊದಲನೆಯ ವಾಕ್ಯದಲ್ಲಿ ರಾಜ ಅವನಿಗೆ ಅಧೀನನಲ್ಲ; ಅವನಿಂದ ಪ್ರೇರಿತ. ಎರಡನೆಯ ವಾಕ್ಯದಲ್ಲಿ ಶಿಷ್ಯ ಅವನ ಅಧೀನ.

ಆದುದರಿಂದ ವಿದ್ವಾನ್ ತಿಮ್ಮಪ್ಪಯ್ಯನವರು ಹೇಳುವುದು ಸರಿಯಾದರೆ, ಕ್ರಿಯೆಯನ್ನು ಮಾಡುವ ಕರ್ತೃವು, ಕ್ರಿಯೆಯನ್ನು ನಡೆಸಲು ಕರ್ಮ ಕರಣಾದಿಗಳಿಂದ ಪ್ರೇರಿತನಾಗಿರಬೇಕು; ಅಥವಾ ಅವುಗಳ ಅಧೀನನಾಗಿ ಕ್ರಿಯೆಯನ್ನು ಮಾಡಬೇಕು.

ಇದು ವಸ್ತುಸ್ಥಿತಿಗೆ ಹೊಂದುವುದೇ ಎಂದು ನೋಡಲು ಈ ಉದಾಹರಣೆಗಳನ್ನು ಪರಿಶೀಲಿಸಬಹುದು :—

1. **ಬಡಗಿಯು ಗರಗಸದಿಂದ ಹಲಗೆಯನ್ನು ಕೊಯ್ದನು.**

2. **ಅಡಿಗೆಯವನು ಸೌದೆಯಿಂದ ತಪ್ಪಲೆಯಲ್ಲಿ ಅನ್ನವನ್ನು ಅಟ್ಟನು.**

ವಿದ್ವಾನ್ ತಿಮ್ಮಪ್ಪಯ್ಯನವರ ಮತದಂತೆ ಈ ವಾಕ್ಯಗಳಲ್ಲಿ ಕ್ರಮವಾಗಿ ಬಡಗಿ ಮತ್ತು ಅಡಿಗೆಯವನು ಕಾರಕಗಳಲ್ಲ, ಕರ್ತೃಗಳು. ಗರಗಸ ಹಲಗೆಗಳೂ ಸೌದೆ ತಪ್ಪಲೆ ಅನ್ನಗಳೂ ಕಾರಕಗಳು. ಈ ಕಾರಕಗಳು ಕೊಯ್ಯುವ ಮತ್ತು ಅಡುವ ಕೆಲಸಗಳನ್ನು ಮಾಡಿಸುತ್ತವೆ. ಬಡಗಿ ಮತ್ತು ಅಡಿಗೆಯವನು ಈ ಕೆಲಸಗಳನ್ನು ಮಾಡುತ್ತಾರೆ. ಆದರೆ ಗರಗಸ ಹಲಗೆಗಳನ್ನು ನೋಡಿದಾಗಲೆಲ್ಲ ಬಡಗಿ ಕೊಯ್ಯಲು ಹೊರಡುವುದಿಲ್ಲ. ಅವನಿಗೆ ಸಣ್ಣ ಹಲಗೆಗಳ ಆವಶ್ಯಕತೆಯಿದ್ದಾಗ ಮಾತ್ರ ಸಾಧನಗಳನ್ನು ಸಿದ್ಧಪಡಿಸಿಕೊಂಡು ಕೊಯ್ಯುವ ಕ್ರಿಯೆಯಲ್ಲಿ ತೊಡಗುತ್ತಾನೆ. ಆದುದರಿಂದ ಅವನು ಗರಗಸ ಹಲಗೆಗಳಿಂದ ಪ್ರೇರಿತನಾಗಿ ಕೊಯ್ಯುವುದಿಲ್ಲ. ಅವುಗಳಿಗೆ ಅಧೀನನಲ್ಲ, ಸ್ವತಂತ್ರನೆಂಬುದಂತೂ ಸುಸ್ಪಷ್ಟ.[38] ಹೀಗೆಯೇ ಅಡಿಗೆಯವನು ಸೌದೆ ಇತ್ಯಾದಿಗಳಿಂದ ಪ್ರೇರಿತನೂ ಅಲ್ಲ, ಅವುಗಳಿಗೆ ಅಧೀನನೂ ಅಲ್ಲ. ಆದುದರಿಂದ ವಿದ್ವಾನ್ ತಿಮ್ಮಪ್ಪಯ್ಯನವರು ಕೊಟ್ಟಿರುವ ವ್ಯುತ್ಪತ್ತಿ ಶಾಸ್ತ್ರವಿರುದ್ಧವಷ್ಟೇ ಅಲ್ಲ, ಲೋಕವ್ಯವಹಾರಕ್ಕೂ ವಿರುದ್ಧ.[39]

---

38 **'ಸ್ವತಂತ್ರಃ ಕರ್ತಾ'** ಎಂಬ ಪಾಣಿನಿಸೂತ್ರ (1-4-54) ಲೋಕವ್ಯವಹಾರಕ್ಕೆ ಅನುಗುಣವಾಗಿಯೇ ಇದೆ.

39 **'ಕರೋತೀತಿ ಕಾರಕಂ'** ಎಂದು 'ಕಾರಕ'ದ ವ್ಯುತ್ಪತ್ತಿಯಾದರೆ, ಕರ್ಮಕರಣಾದಿಗಳಿಗೆ ಹೇಗೆ ಕಾರಕತ್ವ ಬರುತ್ತದೆ ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಮಂಜರೀ ಮಕರಂದಕಾರನು ಕೊಟ್ಟಿರುವ ವಿವರಣೆಯನ್ನೂ ಅವನು ತನ್ನ ವಿವರಣೆಗೆ ಪ್ರಮಾಣವಾಗಿ ಕೊಟ್ಟಿರುವ

ವಿದ್ವಾನ್ ತಿಮ್ಮಪ್ಪಯ್ಯನವರ ಮತದಂತೆ, **'ನರಪತಿ ಶಿಲ್ಪಿಯಿಂ ರಥಮಂ ಮಾಡಿಸಿದಂ'** ಎಂಬ ವಾಕ್ಯದಲ್ಲಿ ನರಪತಿ ಕರ್ತೃ, ಶಿಲ್ಪಿ ರಥಗಳು ಕಾರಕಗಳು.

ಕಾರಿಕೆಯನ್ನೂ ಹಿಂದೆ (ಅಡಿಟಿಪ್ಪಣಿ 8) ಉಲ್ಲೇಖಿಸಿದೆ. ಈ ವಿವರಣೆ ಪಾಣಿನಿಯ ಕಾರಕೇ (1–4–23) ಎಂಬ ಸೂತ್ರದ ವಾರ್ತಿಕಗಳಲ್ಲೂ ಪತಂಜಲಿಮಹಾಭಾಷ್ಯ ವಾಕ್ಯಪದೀಯಗಳಲ್ಲೂ ಕೊಟ್ಟಿರುವ ವಿವರಣೆಗಳಿಗೆ ಅನುಸಾರವಾಗಿಯೇ ಇದೆ.

ದೇವದತ್ತಃ ಸ್ಥಾಲ್ಯಾಂ ಏಧೋಭಿಃ ಪಚತಿ (ದೇವದತ್ತನು ತಪ್ಪಲೆಯಲ್ಲಿ ಸೌದೆಯಿಂದ ಅಡುತ್ತಾನೆ) ಎಂಬ ವಾಕ್ಯದಲ್ಲಿನ ಕಾರಕಗಳು, ಪಚನಕ್ರಿಯೆಯಲ್ಲಿ ಯಾವ ರೀತಿ ಕರ್ತೃತ್ವವನ್ನು ಹೊಂದುತ್ತವೆ ಎಂದು ವಿವರಿಸುವ ವಾರ್ತಿಕಗಳಿಗೆ ಪತಂಜಲಿಯ ಭಾಷ್ಯ ಇಂತಿದೆ:—

ಅಧಿಶ್ರಯಣೋದಕಾಸೇಚನ ತಂಡುಲಾವಪನೈಧೋಪಕರ್ಷಣಾದಿ ಕ್ರಿಯಾಃ ಕುರ್ವನ್ನೇವ ದೇವದತ್ತಃ ಪಚತೀತ್ಯುಚ್ಯತೇ । ತತ್ರ ತದಾ ಪಚಿರ್ವರ್ತತೇ । ಏಷ ಪ್ರಧಾನಸ್ಯ ಕರ್ತುಃ ಪಾಕಃ । ಏತತ್ಪ್ರಧಾನ ಕರ್ತುಃ ಕರ್ತೃತ್ವಮ್ ।

ದ್ರೋಣಂ ಪಚತ್ಯಾಢಕಂ ಪಚತೀತಿ ಸಂಭವನ ಕ್ರಿಯಾಂ ಧಾರಣ ಕ್ರಿಯಾಂ ಚ ಕುರ್ವತೀ ಸ್ಥಾಲೀ ಪಚತೀತ್ಯುಚ್ಯತೇ । ತತ್ರ ತದಾ ಪಚಿರ್ವರ್ತತೇ । ಏಷಃ ಅಧಿಕರಣಸ್ಯ ಪಾಕಃ । ಏತದಧಿಕರಣಸ್ಯ ಕರ್ತೃತ್ವಮ್ ।

ಏಧಾಃ ಪಕ್ಷ್ಯನ್ತ್ಯಾ ವಿಕ್ಲಿತ್ತೇಃ ಜ್ವಲಿಷ್ಯಂತೀತಿ ಜ್ವಲನಕ್ರಿಯಾಂ ಕುರ್ವಂತಿ ಕಾಷ್ಠಾನಿ ಪಚಂತೀತ್ಯುಚ್ಯಂತೇ । ತತ್ರ ತದಾ ಪಚಿರ್ವರ್ತತೇ । ಏಷ ಕರಣಸ್ಯ ಪಾಕಃ । ಏತತ್ಕರಣಸ್ಯ ಕರ್ತೃತ್ವಂ । — ಮಹಾಭಾಷ್ಯಂ ಪುಟ 242–3

ಕಥಂ ಪುನರ್ಜ್ಞಾಯತೇ—ಕರ್ತಾ ಪ್ರಧಾನಮಿತಿ? ಯತ್ಸರ್ವೇಷು ಸಾಧನೇಷು ಸಂನಿಹಿತೇಷು ಕರ್ತಾ ಪ್ರವರ್ತಯಿತಾ ಭವತಿ । —ಪುಟ 245

ಸಾಮಾನ್ಯ ಭೂತಾ ಕ್ರಿಯಾ ವರ್ತತೇ । ತಸ್ಯಾ ನಿರ್ವರ್ತಕಂ ಕಾರಕಂ ।

—ಪುಟ 246

(ಮೇಲಿನ ಭಾಷ್ಯದ ಸಾರಾಂಶ) ತಪ್ಪಲೆಯನ್ನು ಒಲೆಯ ಮೇಲಿಡುವುದು, ಅದರಲ್ಲಿ ನೀರು ಸುರಿಯುವುದು, ಅಕ್ಕಿ ಹಾಕುವುದು, ಸೌದೆಯನ್ನು ಹತ್ತಿಸುವುದು, ಅನ್ನವಾದಮೇಲೆ ಉರಿಯುವ ಸೌದೆಯನ್ನು ತೆಗೆಯುವುದು, ಇವು ಪ್ರಧಾನ ಕರ್ತೃ ದೇವದತ್ತನ ಕ್ರಿಯೆಗಳು.

ನೀರು ಅಕ್ಕಿಗಳನ್ನು ತನ್ನಲ್ಲಿ ಧರಿಸುವುದು, ಶಾಖವು ಎಲ್ಲೆಡೆಗೆ ಹೋಗುವಂತೆ ಮಾಡುವುದು, ಅಧಿಕರಣವಾದ ಸ್ಥಾಲಿ (ತಪ್ಪಲೆ)ಯ ಕ್ರಿಯೆಗಳು.

ಅನ್ನವಾಗುವ ವರೆಗೂ ಉರಿದು ಶಾಖವನ್ನು ಕೊಡುವುದು ಕರಣವಾದ ಏಧಸ್ (ಸೌದೆ) ಮಾಡುವ ಕ್ರಿಯೆ.

(ಹೀಗೆಯೇ ಅಕ್ಕಿಯಾಗಿದ್ದುದು ನೀರು ಶಾಖಗಳಿಂದ ಅನ್ನವಾಗಿ ರೂಪಾಂತರ ಹೊಂದುವುದು ಕರ್ಮಕಾರಕದ ಕ್ರಿಯೆ).

ಈ ಎಲ್ಲ ಅಂಗಕ್ರಿಯೆಗಳೂ ಸೇರಿದ ಸಾಮೂಹಿಕ ಕ್ರಿಯೆಯೇ ಅಡುವುದು. ದೇವದತ್ತ ತಪ್ಪಲೆ ಇತ್ಯಾದಿಗಳೆಲ್ಲ ಸೇರಿ ಈ ಸಾಮೂಹಿಕ ಕ್ರಿಯೆಯನ್ನು ನಿರ್ವಹಿಸುವುದರಿಂದ ಎಲ್ಲವೂ ಕಾರಕ (ಮಾಡುವ ವ್ಯಕ್ತಿ)ಗಳು. ಅವುಗಳ ಪಾತ್ರವನ್ನನುಸರಿಸಿ ಕರ್ತೃ, ಕರ್ಮ ಮೊದಲಾದ

ಆದರೆ ಮಾಡಿಸುವವನು ನರಪತಿಯೇ ಆದುದರಿಂದ, ಅವನು ಕಾರಕವೂ ಆಗಬೇಕಾಗುತ್ತು, ಆದುದರಿಂದ ಅವರ ಮತದಂತೆಯೇ ಇಲ್ಲಿ ಕರ್ತೃವೂ ಕಾರಕವಾಗಬೇಕಾಗುತ್ತದೆ.

ಕರ್ತೃ ಕರ್ಮಾದಿಕದಿಂ ಎಂದು ಹೇಳದೆ ಕರ್ಮಕರಣಾದಿಕದಿಂ ಎಂದು ಹೇಳಿರುವ ವಿಚಾರ.

ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಕಾರಕಗಳನ್ನು ನಿರೂಪಿಸುವಾಗ ಅವುಗಳನ್ನು ಅಪಾದಾನ, ಸಂಪ್ರದಾನ, ಕರಣ, ಅಧಿಕರಣ, ಕರ್ಮ, ಕರ್ತೃ ಈ ಕ್ರಮದಲ್ಲಿ ಹೇಳಿದೆ. ಜೈನೇಂದ್ರ ವ್ಯಾಕರಣದಲ್ಲಿಯೂ ಇದೇ ಕ್ರಮ. ಕಾತಂತ್ರದಲ್ಲಿ ಈ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸಮಾಡಿ ಅಧಿಕರಣವಾದ ಮೇಲೆ ಕರಣವನ್ನು ಹೇಳಿದೆ. ಈ ಕ್ರಮದಲ್ಲಿ, ಕ್ರಿಯಾನಿರ್ವಹಣೆಯಲ್ಲಿ ಬೇರೆ ಬೇರೆ ಕಾರಕಗಳ ಪಾತ್ರದ ಮಹತ್ತ್ವಾನುಸಾರವಾಗಿ, ಅತಿ ಮಹತ್ತ್ವವುಳ್ಳ ಕರ್ತೃವನ್ನು ಕೊನೆಯಲ್ಲಿ ಕೊಟ್ಟಿದೆ.[40] ಕಾರಕ ವಿಭಕ್ತಿಗಳೆರಡನ್ನೂ ಒಟ್ಟಿಗೆ ನಿರೂಪಿಸಿರುವ ವ್ಯಾಕರಣಗಳಲ್ಲಿ ವಿಭಕ್ತಿಕ್ರಮವನ್ನನುಸರಿಸಿ ಕರ್ಮ, ಕರ್ತೃ ಕರಣಗಳು, ಸಂಪ್ರದಾನ, ಅಪಾದಾನ, ಅಧಿಕರಣ ಈ ಕ್ರಮದಲ್ಲಿ ಕಾರಕಗಳು ಬರುತ್ತವೆ. ವಾಕ್ಯಪದೀಯದ ಸಾಧನಸಮುದ್ದೇಶದಲ್ಲಿ ಕರ್ಮ, ಕರಣ, ಕರ್ತೃ, ಸಂಪ್ರದಾನ, ಅಪಾದಾನ, ಅಧಿಕರಣ ಈ ಕ್ರಮದಲ್ಲಿ ಆರು ಕಾರಕಗಳನ್ನು ಹೇಳಿ, ಅನಂತರ ಶೇಷಕಾರಕವನ್ನು ನಿರೂಪಿಸಿದೆ.

ಸಂಜ್ಞೆಗಳು ಬರುತ್ತವೆ. ಇತರ ಕಾರಕಗಳು ತಮ್ಮ ಕ್ರಿಯೆಗಳನ್ನು ಮಾಡುವಂತೆ ದೇವದತ್ತನು ಯೋಜಿಸುವುದರಿಂದ ಅವನಿಗೆ ಪ್ರಾಧಾನ್ಯ, ಮತ್ತು ಸ್ವತಂತ್ರನಾದುದರಿಂದ ಕರ್ತೃಸಂಜ್ಞೆ.

40 In the Karaka sections of Panini, Katantra and most other grammars that distinguish between Karaka and Vibhakti, the order of the cases is as follows Ablative, Dative, Instrumental, Locative, Accusative and Nominative. This order is fixed according to Panini's paribhasha: ವಿಪ್ರತಿಷೇಧೇ ಪರಂ ಕಾರ್ಯಂ 1–4–2 i.e. in case of conflict between two rules the later is to prevail over the earlier. Thus the order of the cases in Panini shows the relative importance of the cases according to the view-point of Indian Grammarians.

Kshitish chandra chatterjee—Technical terms and technique of Sanskrit Grammar, Part I, University of Calcutta, 1964. page 375.

ವ್ಯಾಕರಣದ ಪಾರಿಭಾಷಿಕ ಶಬ್ದಗಳ ವಿಷಯದಲ್ಲಿ ಅಭಿರುಚಿಯುಳ್ಳವರು ಅವಶ್ಯ ನೋಡಬೇಕಾದ ಗ್ರಂಥವಿದು.

ಕರಣಕಾರಕವು ತೃತೀಯಾ ವಿಭಕ್ತಿಯಿಂದಲೇ ಹೇಳಲ್ಪಡುವುದರಿಂದಲೂ, ಕರ್ತೃವು ತೃತೀಯಾ ಷಷ್ಠೀ ವಿಭಕ್ತಿಗಳೆರಡರಿಂದಲೂ ಹೇಳಲ್ಪಡುವುದರಿಂದಲೂ ಮೊದಲು ಕರಣ ವಿಚಾರವನ್ನೂ ಅನಂತರ ಕರ್ತೃವಿಚಾರವನ್ನೂ ಭರ್ತೃಹರಿ ಹೇಳಿದ್ದಾನೆಂದು ವ್ಯಾಖ್ಯಾಕಾರರು ವಿವರಿಸಿದ್ದಾರೆ.[41] (ಕ್ರಿಯಾಪದಕ್ಕೆ ಬದಲು ಕೃದಂತವನ್ನು ಉಪಯೋಗಿಸಿದಾಗ ಕರ್ತೃವಿಗೆ ಷಷ್ಠೀವಿಭಕ್ತಿ ಬರುತ್ತದೆ.—ಉದಾ. ರಘುವಂಶವು ಕಾಳಿದಾಸನ ಕೃತಿ.) ಆದುದರಿಂದ ವಿಭಕ್ತಿಕಾರಕಗಳೆರಡನ್ನೂ ಒಟ್ಟಿಗೆ ಹೇಳಿರುವ ಕವಿರಾಜಮಾರ್ಗಕಾರನು, ಅವನಿಗಿಂತ ಪ್ರಾಚೀನರಾದ ವೈಯಾಕರಣರ ಮಾರ್ಗವನ್ನನುಸರಿಸಿ 'ಕರ್ಮಕರಣಾದಿಕದಿಂ' ಎಂದು ಹೇಳಿರುವುದು ಸಹಜವೇ. ಇದರಿಂದ ಅವನು ಕರ್ತೃವು ಕಾರಕವಲ್ಲವೆಂದು ತಿಳಿದಿದ್ದನೆಂದು ಹೇಳುವುದು ಸಲ್ಲದು.

'ಅಧೀಶ್ವರನಾ ದಯೆ ಸಾಲ್ಗುಂ'. 'ಅಧೀಶ್ವರನಾ' ಎಂಬ ಪದ 'ಸಾಲ್ಗುಂ' ಎಂಬ ಕ್ರಿಯೆಗೆ ಕಾರಕವಲ್ಲವೆಂಬುದು ಸರಿಯೆಂದು ಮೊದಲೇ ಒಪ್ಪಿಕೊಂಡು, ಅನಂತರ ತಮ್ಮ ಪ್ರಕಾರ ಕರ್ತೃವು ಕಾರಕವಲ್ಲವಾದುದರಿಂದ ವಾಕ್ಯದಲ್ಲಿ ಕಾರಕವೇ ಇಲ್ಲವೆನಿಸುವುದರಿಂದ ಕಾರಕವನ್ನು ತೋರಿಸುವುದಕ್ಕಾಗಿ 'ಅಧೀಶ್ವರ'ನಿಗೆ ಕಾರಕತ್ವ ಕೊಡುವ ಪ್ರಯತ್ನ ನಡೆದಿರುವಂತೆ ತೋರಿಬರುತ್ತಿದೆ. ಉದಾಹರಣ ಪದ್ಯದ 'ನರಪತಿ ಬಂದಂ' ಎಂಬ ಮೊದಲ ವಾಕ್ಯದಲ್ಲಿಯೇ ತಮ್ಮ ಪ್ರಕಾರ ಕಾರಕವಿಲ್ಲವೆಂಬುವನ್ನು ಶ್ರೀಯುತರು ಗಮನಿಸಿಲ್ಲ. 'ಅಧೀಶ್ವರನಾ' ಎಂಬ ಪದಕ್ಕೆ ಸಂಬಂಧವಿರುವುದು 'ದಯೆ'ಯೊಡನೆ. ಕ್ರಿಯೆಗೆ 'ದಯೆ' ಕರ್ತೃವಾದುದರಿಂದ, ಅದರ ಮೂಲಕ ಕ್ರಿಯೆಗೆ ಸಂಬಂಧವಿದೆಯೆಂದೂ ಆದಕಾರಣ 'ಅಧೀಶ್ವರ'ಕಾರಕವೆಂದೂ ಹೇಳುವುದಾದರೆ, 'ಮಾನ್ಯಖೇಟದ ಅಧೀಶ್ವರನಾ ದಯೆ ಸಾಲ್ಗುಂ' ಎನ್ನುವ ವಾಕ್ಯದಲ್ಲಿ 'ಮಾನ್ಯಖೇಟ'ಕ್ಕೂ ಕಾರಕತ್ವವುಂಟೆನ್ನಬೇಕಾದೀತು! ಏಕೆಂದರೆ ಶ್ರೀಯುತರು ಹೇಳಿರುವಂತೆ ಇನ್ನೊಬ್ಬನ ದಯೆ ಸಾಲದಾದರೆ, ಮಾನ್ಯಖೇಟಕ್ಕೆ ಅಧೀಶ್ವರನಾದುದರಿಂದ ತಾನೆ ಅವನ ದಯೆ ಸಾಕಾಗುವುದು? ಈ ರೀತಿಯ ಸಂಬಂಧಕ್ಕೆ ಕೊನೆಯುಂಟೆ?

---

41 ದ್ವಿತೀಯಾರ್ಥೇ ಕರ್ಮಣಿ ವಿಚಾರಿತೇ ತೃತೀಯಾರ್ಥಃ ಕರಣಂ ಪೂರ್ವಂ ವಿಚಾರ್ಯತೇ । ಕರ್ತಾ ತು ಷಷ್ಠ್ಯಾ ಅಪ್ಯರ್ಥ ಇತಿ ಸಾಧಾರಣತ್ವಾತ್ ನ್ಯೂನತ್ವೇನ ಪಶ್ಚಾದ್ವಿಚಾರಯಿಷ್ಯತೇ । —ಹೇಲಾರಾಜನ ವ್ಯಾಖ್ಯಾನದಲ್ಲಿ ಸಾಧನ ಸಮುದ್ದೇಶದ 90ನೇ ಕಾರಿಕೆಯ ವ್ಯಾಖ್ಯಾನಕ್ಕೆ ಅವತರಣಿಕೆ.

ಯದ್ಯಪಿ ಕರ್ತಾಪಿ ತೃತೀಯಾರ್ಥ ಇತಿ ತಸ್ಯಾಪಿ ಪೂರ್ವಂ ವಿಚಾರ್ಯತ್ವ ಪ್ರಾಪ್ತೌ ಕರಣಸ್ಯ ಪೂರ್ವಂ ವಿಚಾರ್ಯತ್ವೇ ವಿನಿಗಮನಾವಿರಹಸ್ತಥಾಪಿ = ಕರ್ತುಃ ತೃತೀಯಾರ್ಥತ್ವೇಽಪಿ ಕರ್ತಾ ತು ಷಷ್ಠ್ಯಾ ಅಪ್ಯರ್ಥ ಇತಿ ಕರ್ತುಃ ಷಷ್ಠೀ ತೃತೀಯಯೋಃ ಸಾಧಾರಣಾರ್ಥತ್ವಾತ್ ಅಸಾಧಾರಣ ತೃತೀಯಾರ್ಥ ಕರಣಾಪೇಕ್ಷಯಾ ತಸ್ಯ ನ್ಯೂನತ್ವೇನ ಪಶ್ಚಾದ್ವಿಚಾರಯಿಷ್ಯತೇ । (ಅಂಬಾ ಕರ್ತ್ರೀ) ವಾಕ್ಯಪದೀಯ, ಪುಟ 2:4.

ವಿದ್ವಾನ್ ತಿಮ್ಮಪ್ಪಯ್ಯನವರ ಮತವನ್ನು ಒಪ್ಪಿರುವ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಕೊಟ್ಟಿರುವ ಇತರ ಕಾರಣಗಳು :—

(i) ಆಧುನಿಕ ಭಾಷಾ ಶಾಸ್ತ್ರಜ್ಞರ ಪ್ರಕಾರ, ಕನ್ನಡದಲ್ಲಿ ಪ್ರಥಮಾ ವಿಭಕ್ತಿಯಿದ್ದರೂ ಅದನ್ನು ಸಂಕೇತಿಸುವ ಪ್ರತ್ಯಯ ನುಡಿಯ ಜಾಯಮಾನಕ್ಕೆ ಹೊರತು. ನಾಮ ಪ್ರಕೃತಿಯೇ ಪ್ರಥಮೆಯ ಅರ್ಥದಲ್ಲಿ ಪ್ರಯೋಗವಾಗುತ್ತದೆ......ಕನ್ನಡದಲ್ಲಿ ಸಹಜವಾಗಿಯೆ ಪ್ರಥಮಾ ಮೂಲಕವಾದ ಕರ್ತೃಕಾರಕತ್ವಕ್ಕೆ ಎಡೆಯಿಲ್ಲವೆಂದು ಕಂಡುಬರುತ್ತದೆ.[42]

(ii) ಲಕ್ಷಣಪದ್ಯದಲ್ಲಿ (೧೧೪) 'ಕಾರಕಮಾಱು ಕರ್ಮಕರಣಾದಿಕದಿಂ' ಎಂದಿರುವಲ್ಲಿ ಮಾರ್ಗಕಾರನು 'ಕರ್ತೃ'ಕಾರಕವನ್ನು ಹೆಸರಿಸದೆ ಬಿಟ್ಟಿರುವುದು ಕಂಡುಬರುತ್ತದೆ. ಎಂದರೆ ಅವನು 'ಷಷ್ಠಿ'ಗೆ ಕಾರಕತ್ವವನ್ನು ಆರೋಪಿಸಿದಂತಾಯಿತು.[43]

(iii) ಮಾರ್ಗಕಾರನು ಕರ್ತೃವನ್ನು ಕಾರಕಾನುಕ್ರಮದಲ್ಲಿ ಸೇರಿಸಿಲ್ಲ; ಹಾಗೂ ಕಾರಕಗಳು ಆರೆಂದು ಸ್ಪಷ್ಟವಾಗಿ ಹೇಳಿ, 'ಇದು ಕಾರಕಯುಕ್ತ ವಿಭಕ್ತ್ಯ-ನುಕ್ರಮಂ' ಎಂದು ಉಪಲಕ್ಷಿಸುವಲ್ಲಿ ಷಷ್ಠಿಯನ್ನೂ ಆ ಅನುಕ್ರಮದಲ್ಲಿ ಸೇರಿಸಿಕೊಂಡಿರುವುದರಿಂದ ಅವನು ಷಷ್ಠಿಗೂ ಕಾರಕತ್ವವನ್ನು ಆರೋಪಿಸಿರುವನೆಂದು ಅನುಮಾನಿಸಬೇಕಾಗುತ್ತದೆ. ಅವನ ಅಭಿಪ್ರಾಯದಂತೆ, ಕರ್ತೃ ಕಾರಕವಲ್ಲದಿದ್ದರೂ ಅದು ಪ್ರಥಮಾ ವಿಭಕ್ತಿಯಿಂದ ನಿರ್ದಿಷ್ಟವಾಗಿ, ವಿಭಕ್ತಿಗಳು ಏಳು; ಇದರಲ್ಲಿ ಸಂದೇಹವಿಲ್ಲ.[44]

ಮೇಲಿನ ಅಭಿಪ್ರಾಯಗಳ ಪರಿಶೀಲನೆ.

ಪ್ರಥಮಾ ಮೂಲಕವಾದ ಕರ್ತೃ ಕಾರಕತ್ವಕ್ಕೆ ಎಡೆಯಿಲ್ಲವೆಂಬ ಮಾತ್ರಕ್ಕೆ ಕರ್ತೃಕಾರಕವೇ ಇಲ್ಲವೆನ್ನಲಾಗುವುದಿಲ್ಲ. ಮಾರ್ಗಕಾರನ ಅಭಿಪ್ರಾಯದಂತೆ ಕರ್ತೃ ಪ್ರಥಮಾ ವಿಭಕ್ತಿಯಿಂದ ನಿರ್ದಿಷ್ಟವಾಗುವುದೆಂಬ ಶ್ರೀಯುತರ ಹೇಳಿಕೆಗೆ ಆ ಗ್ರಂಥದಲ್ಲಿ ಆಧಾರವಿಲ್ಲ. ಇವನಿಗಿಂತ ಹಿಂದಿನ ಮತ್ತು ಈಚಿನ ಎಲ್ಲ ಸಂಸ್ಕೃತ ವೈಯಾಕರಣರ ಮತದಂತೆಯೂ, ಭಾಷಾಭೂಷಣ, ಶಬ್ದಮಣಿದರ್ಪಣ, ಶಬ್ದಾನುಶಾಸನಗಳ ಪ್ರಕಾರವೂ, ಕರ್ತೃವು ವಿಭಕ್ತಿಯಿಂದ ನಿರ್ದಿಷ್ಟವಾದಾಗ ತೃತೀಯಾ ವಿಭಕ್ತಿ ಪ್ರಯೋಗವಾಗುತ್ತದೆ, ಪ್ರಥಮಾವಿಭಕ್ತಿಯಲ್ಲ.[45]

---

42 ಶ್ರೀ ವಿಜಯಕೃತ ಕವಿರಾಜಮಾರ್ಗಂ—ಪುಟ 168.

43 ಅದೇ ಪುಟ 163–4

44 ಅದೇ ಪುಟ 166

45 ಭಾಷಾಭೂಷಣ ಸೂತ್ರಗಳು 78, 74, 75
ಶಬ್ದಮಣಿದರ್ಪಣ ಸೂತ್ರಗಳು ೧೨೮, ೧೨೬
ಶಬ್ದಾನುಶಾಸನ ಸೂತ್ರ 209

ಮಾರ್ಗಕಾರನು ಕರ್ತೃಕಾರಕವನ್ನು ಹೆಸರಿಸಿಲ್ಲವಾದರೂ, ಅದರ ಸ್ಥಾನ ಕರಣದ ಅನಂತರವಾದುದರಿಂದ 'ಆದಿ' ಪದದಿಂದ ಅದು ಸೂಚಿಸಲ್ಪಡುತ್ತದೆ. ಅವನು ಷಷ್ಠಿಗೆ ಕಾರಕತ್ವವನ್ನು ಆರೋಪಿಸಿಲ್ಲ.

ಕಾರಕಾನುಕ್ರಮ ವಿಷಯ. ಶ್ರೀಯುತರು 'ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂಬ ಪದಪುಂಜಕ್ಕೆ 'ಕಾರಕಗಳೊಡನೆ ಕೂಡಿದ ವಿಭಕ್ತಿಗಳ ಅನುಕ್ರಮ' ಎಂದು ಪದಶಃ ಅರ್ಥಮಾಡಿದಂತಿದೆ. ಹೀಗೆ ಅರ್ಥಮಾಡಿದರೆ, ವಿಭಕ್ತಿಗಳ ಅನುಕ್ರಮದಲ್ಲಿ ಪ್ರಥಮಾ ವಿಭಕ್ತಿಯೂ ಸೇರಿರುವುದರಿಂದ ಏಳು ವಿಭಕ್ತಿಗಳೂ 'ಕಾರಕಯುಕ್ತ ವಿಭಕ್ತಿ'ಗಳಾಗಬೇಕಾಗುತ್ತದೆ. ವಿದ್ವಾನ್ ತಿಮ್ಮಪ್ಪಯ್ಯನವರು 'ನರಪತಿ ಬಂದಂ' ಮೊದಲಾದ ಏಳು ವಾಕ್ಯಗಳನ್ನು ಕೊಟ್ಟು 'ಇದು ಕಾರಕಯುಕ್ತ ಸಪ್ತ ವಿಭಕ್ತಿಗಳ ಅನುಕ್ರಮ' ಎಂದೇ ಹೇಳಿದ್ದಾರೆ.[46] ಆದರೆ ಗ್ರಂಥಕಾರನು ಹೇಳಿರುವುದು ಆರೇ ಕಾರಕಗಳನ್ನು. ಹೀಗೆಯೇ ೧೧೪ನೇ ಪದ್ಯದಲ್ಲಿನ 'ಅದಂ ಪಿಡಿದು ನಿಲ್ವ ವಿಭಕ್ತಿಗಳೇೞಿನಿಕ್ಕುಂ' ಎನ್ನುವುದಕ್ಕೆ ಪದಶಃ ಅರ್ಥ 'ಅದನ್ನು ಆಧಾರವಾಗಿ ಹೊಂದಿರುವ ವಿಭಕ್ತಿಗಳು ಏಳು' ಎಂದಾಗಿ, 'ಅದಂ' ಎನ್ನುವುದು 'ಕಾರಕಂ' ಎಂಬ ಪದಕ್ಕೆ ಅನ್ವಯಿಸುವುದರಿಂದ ಆರು ಕಾರಕಗಳನ್ನು ಏಳು ವಿಭಕ್ತಿಗಳು ನಿರ್ದೇಶಿಸುತ್ತವೆ ಎಂದಂತಾಗುತ್ತದೆ. ಅಂದರೆ ಯಾವುದಾದರೂ ಎರಡು ವಿಭಕ್ತಿಗಳು ಒಂದೇ ಕಾರಕವನ್ನು ನಿರ್ದೇಶಿಸಬೇಕಾಗುತ್ತದೆ, ಆದರೆ ಉದಾಹರಣ ಪದ್ಯದಲ್ಲಿ ಹೀಗಿರುವುದು ಕಂಡುಬರುವುದಿಲ್ಲ. ಬಹುಶಃ, ಪ್ರತಿಪದಾರ್ಥ ಮಾಡಿದರೆ ಉಂಟಾಗುವ ಇಂತಹ ಅರ್ಥಕ್ಲೇಶಗಳನ್ನು ಕಂಡೇ ಡಾ॥ ಕೆ. ಕೃಷ್ಣಮೂರ್ತಿಗಳು "ಕವಿರಾಜಮಾರ್ಗಕಾರನು ಶಾಸ್ತ್ರವನ್ನು ಛಂದೋಬದ್ಧವಾಗಿ ಬರೆದಿದ್ದಾನೆ. ಆ ಛಂದೋನಿಯಮಗಳ ಸಲುವಾಗಿ, ಪ್ರಾಸಾದಿಗಳ ನಿರ್ಬಂಧಕ್ಕಾಗಿ, ಎಷ್ಟೋ ಪಾದ ಪೂರಣ ಪದಗಳನ್ನೂ ಬಳಸಬೇಕಾಗುತ್ತದೆ. ಅವಕ್ಕೆ ವಿಶೇಷಾರ್ಥದ ವಿವಕ್ಷೆಯಿರುವುದಿಲ್ಲ. ಅವನ್ನು ಅರ್ಥಮಾಡುವಾಗ ವಿಶಿಷ್ಟ ತಾತ್ಪರ್ಯಕ್ಕೆ ನಮ್ಮ ಮುಖ್ಯ ಗಮನವಿರಬೇಕೇ ಹೊರತು, ಒಂದೊಂದು ಶಬ್ದಕ್ಕೂ ಪ್ರತಿಶಬ್ದ ಕಲ್ಪಿಸಿಕೊಳ್ಳುವ ಹಟವೂ ಸಲ್ಲದು" ಎಂದು ಹೇಳಿದಂತೆ ತೋರುತ್ತದೆ.[47] ೧೧೪ನೇ ಪದ್ಯದ ಅನುವಾದ ಮಾಡುವಾಗ ಅವರು 'ಅದಂ ಪಿಡಿದು ನಿಲ್ವ ವಿಭಕ್ತಿಗಳೇೞಿನಿಕ್ಕುಂ' ಎಂಬ ಭಾಗವನ್ನು ಬಿಟ್ಟುಬಿಟ್ಟಿದ್ದಾರೆ ಮತ್ತು ೧೧೫ನೇ ಪದ್ಯದ 'ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂಬ ಭಾಗಕ್ಕೆ 'ಅನುಕ್ರಮವಾಗಿ ನಾಮವಿಭಕ್ತಿಗಳಿಗೆ ಉದಾಹರಣೆಗಳು' ಎಂದು ಅರ್ಥ ಕೊಟ್ಟಿದ್ದಾರೆ.

---

46 ಕವಿರಾಜಮಾರ್ಗ ವಿವೇಕ, ಪುಟ 142

47 ಕವಿರಾಜಮಾರ್ಗಂ, ಪೀಠಿಕೆ ಪುಟ 28-9

ಪ್ರತಿಪದಾರ್ಥ ಮಾಡಹೊರಟರೆ ಇತರ ಕನ್ನಡ ವ್ಯಾಕರಣಗಳಲ್ಲೂ ಅರ್ಥ ಕ್ಲೇಶಗಳುಂಟಾಗುತ್ತವೆ. ಈ ಲೇಖನದ ಆರಂಭದಲ್ಲಿ ಕೊಟ್ಟಿರುವ ಶಬ್ದಸ್ಮೃತಿಯ ಪದ್ಯದಲ್ಲಿ 'ಏಟಕ್ಕುಂ ಖ್ಯಾತ ವಿಭಕ್ತಿಗಳದರ್ಕೆ ಕಾರಕವಶದಿಂ' ಎಂದು ಹೇಳಿರುವುದ ರಿಂದ ಏಳು ವಿಭಕ್ತಿಗಳೂ ಕಾರಕಗಳನ್ನು ನಿರ್ದೇಶಿಸುತ್ತವೆ ಎಂದಂತಾಯಿತು. ಆದರೆ ಆಱನೇ ಪದ್ಯದಲ್ಲಿ ಷಷ್ಠೀ ವಿಭಕ್ತಿಗೆ ಕೊಟ್ಟಿರುವ 'ನೆಲದೆಱೆಯ' ಎಂಬ ಪ್ರಯೋಗದಲ್ಲಿ ಕ್ರಿಯಾಪದವೇ ಇಲ್ಲವಾದುದರಿಂದ, ನೆಲದ ಎಂಬ ಪದದಲ್ಲಿನ ಷಷ್ಠೀ ವಿಭಕ್ತಿ ಗ್ರಂಥಕಾರ ಹೇಳಿರುವ ಆರು ಕಾರಕಗಳಲ್ಲಿ ಯಾವುದನ್ನೂ ನಿರ್ದೇಶಿಸು ವುದಿಲ್ಲ. ಹೀಗೆಯೇ ಕೇಶಿರಾಜನು ೯೩ನೆಯ ಸೂತ್ರದ ವೃತ್ತಿಯಲ್ಲಿ ಮೊದಲು 'ನಾಮವಿಭಕ್ತಿಗಳ್...ಏೞಾಗಿ ಕಾರಕವಶದಿಂ ಪತ್ತುಗುಂ' ಎಂದು ಹೇಳಿ, ಮುಂದೆ 'ಷಷ್ಠಿಯೆಂದು ಸಂಬಂಧಾರ್ಥಂ' ಎಂದು ಹೇಳಿರುವುದರಲ್ಲಿ ಪೂರ್ವಾಪರ ವಿರೋಧ ಕಂಡುಬರುತ್ತದೆ. ಆದುದರಿಂದ "ಕನ್ನಡದ ಅಲಂಕಾರ ವ್ಯಾಕರಣ ಲಕ್ಷಣಗ್ರಂಥ ಗಳೆಲ್ಲವೂ (ಭಟ್ಟಾಕಳಂಕನ ಶಬ್ದಾನುಶಾಸನವೊಂದನ್ನು ಹೊರತಾಗಿಸಿ) ಸಾಮಾನ್ಯ ರೂಪದಲ್ಲಿ ಬರೆದವು. ಈ ಲಾಕ್ಷಣಿಕರು ಹೇಳುವ ಲಕ್ಷಣಗಳು ಕೇವಲ ಪರಿಚಯಾ- ತ್ಮಕವಾದವು. ಅವ್ಯಾಪ್ತಿ, ಅತಿವ್ಯಾಪ್ತಿ ದೋಷಗಳಿಂದ ಇವು ಮುಕ್ತವಾಗಿಲ್ಲ"[48] ಎಂಬ ವಿದ್ವಾನ್ ರಂಗನಾಥ ಶರ್ಮರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಳ್ಳು ವುದು ಅಗತ್ಯ.

ಪ್ರತಿಪದಾರ್ಥವನ್ನು ತೆಗೆದುಕೊಂಡರೆ ಉಂಟಾಗುವ ಅರ್ಥಕ್ಲೇಶವನ್ನು ನಿವಾರಿಸಬೇಕಾದರೆ 'ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂಬ ಪದಪುಂಜಕ್ಕೆ 'ಕಾರಕ ಗಳು ಮತ್ತು ಅನುಕ್ರಮವಾಗಿ ವಿಭಕ್ತಿಗಳು' ಎಂದು ಅರ್ಥಮಾಡಬೇಕಾಗುತ್ತದೆ.

ಮೇಲಿನ ಪರಿಶೀಲನೆಯಿಂದ 'ಕಾರಯತೀತಿ ಕಾರಕಂ' ಎಂಬ ವ್ಯುತ್ಪತ್ತಿಯೂ ಮಾರ್ಗಕಾರನು ಹೇಳಿರುವ ಆರು ಕಾರಕಗಳಲ್ಲಿ ಕರ್ತೃ ಸೇರಿಲ್ಲ, ಸಂಬದ್ಧ ಅಥವಾ ಷಷ್ಠೀಕಾರಕ ಸೇರಿದೆಯೆಂಬುದೂ ನಿಲ್ಲುವುದಿಲ್ಲ.

ಭರ್ತೃಹರಿ ಮತ್ತು ಹೇಲಾರಾಜರಿಂದ ಭಾಷಾಭೂಷಣಕಾರನು ಪ್ರಭಾವಿತ ನಾಗಿರಬಹುದೆಂದು ಹಿಂದೆ ಹೇಳಿದೆಯಷ್ಟೆ. ಹಾಗೆಯೇ ಕವಿರಾಜಮಾರ್ಗಕಾರನೂ ಭರ್ತೃಹರಿಯನ್ನನುಸರಿಸಿ—ಹೇಲಾರಾಜ ಮಾರ್ಗಕಾರನಿಗಿಂತ ಈಚಿನವನು—ಷಷ್ಠೀ ಕಾರಕವನ್ನು ಹೇಳಿರಬಹುದೆಂಬ ಶಂಕೆ ಉದ್ಭವಿಸಬಹುದು. ಆದರೆ ಅವನು ಹಾಗೆ ಭರ್ತೃಹರಿಯನ್ನನುಸರಿಸಿದ್ದರೆ, ಏಳು ಕಾರಕಗಳನ್ನು ಹೇಳಬೇಕಾಗಿತ್ತು. ಹಾಗೆ ಮಾಡದೆ ಕಾರಕಗಳಲ್ಲೆಲ್ಲಾ ಪ್ರಧಾನವಾದ ಕರ್ತೃವನ್ನು ಬಿಟ್ಟು ಗೌಣಸ್ಥಾನದಲ್ಲಿರುವ 'ಶೇಷ'ವನ್ನು ಕಾರಕವೆಂದು ಮಾರ್ಗಕಾರ ಹೇಳಿರುವುದು ತೀರ ಅಸಂಭಾವ್ಯ.

---

48 'ಲೋಚನ'ದಲ್ಲಿನ ಲೇಖನ, ಪುಟ 51

ಮಾರ್ಗಕಾರನಿಗೆ ಹಿಂದಿನ ಅಥವಾ ಈಚಿನ ಸಂಸ್ಕೃತ ಕನ್ನಡ ವ್ಯಾಕರಣಕಾರರು ಯಾರೂ ಕೊಡದ ಹೊಸ ವ್ಯುತ್ಪತ್ತಿಯನ್ನು ಪಾರಿಭಾಷಿಕ ಶಬ್ದವಾದ 'ಕಾರಕ'ಕ್ಕೆ ಕೊಟ್ಟು, ಅದು ಮಾರ್ಗಕಾರನಿಂದ ಮಾನ್ಯ ಮಾಡಲ್ಪಟ್ಟಿತೆಂದು ಹೇಳುವುದು ಎಂದಿಗೂ ಸರಿಯಲ್ಲ. ಮಾರ್ಗಕಾರನು ಹೇಳಿರುವ ಆರು ಕಾರಕಗಳು ಇತರ ವೈಯಾಕರಣರು ಹೇಳಿರುವ ಆರು ಕಾರಕಗಳೇ ಎನ್ನುವುದರಲ್ಲಿ ಸಂದೇಹಕ್ಕೆ ಎಡೆಯಿಲ್ಲ.

ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನ ಸಮಸ್ಯೆಗಳು

—ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ

೧

ಪ್ರಾಚೀನ ಕನ್ನಡ ಸಾಹಿತ್ಯ ಎನ್ನುವುದು, ವಿಶಾಲವಾದ ಅರ್ಥವ್ಯಾಪ್ತಿಯಲ್ಲಿ, ಆಧುನಿಕ ಕನ್ನಡ ಸಾಹಿತ್ಯ, ಹೊಸಗನ್ನಡ ಸಾಹಿತ್ಯ ಎಂದು ಈಗ ನಾವು ಹೇಳುತ್ತಿರುವ ಅವಧಿಯ ಪೂರ್ವಕಾಲಕ್ಕೆ ಸೇರಿದ್ದು ಎಂದು ಹೇಳಬಹುದಾದರೂ, ಹೀಗೆ ಹೇಳುವಾಗಲೂ ಅದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಹಿಂದಿನದು ಎಂದು ಸಾಮಾನ್ಯವಾಗಿ ತಿಳಿಯಬಹುದಾದರೂ, ಕನ್ನಡ ಸಾಹಿತ್ಯದ ಆರಂಭಕಾಲದಿಂದ ಹಿಡಿದು ಸ್ವಾಭಾವಿಕ ಹಳಗನ್ನಡ ಸಾಹಿತ್ಯದ ಹನ್ನೆರಡನೆಯ ಶತಮಾನದ ವರೆಗೆ ಮಾತ್ರವೇ ಆ ಪ್ರಾಚೀನ ಕನ್ನಡ ಸಾಹಿತ್ಯದ ಅವಧಿಯನ್ನು ಗುರುತಿಸುವುದು ಕನ್ನಡ ಸಾಹಿತ್ಯೇತಿಹಾಸದ ಅಭ್ಯಾಸದಲ್ಲಿ ಒಂದು ಮಾನ್ಯವಾದ ಧೋರಣೆಯಾಗಿದೆ. ಇಲ್ಲಿಯೂ ಕ್ರಿ.ಶ. ಐದನೆಯ ಶತಮಾನದ ಮಧ್ಯಭಾಗದಿಂದ ಹದಿನೈದನೆಯ ಶತಮಾನದ ಆದಿಭಾಗದ ವರೆಗೆ. ಎಂದರೆ ಹಲ್ಮಿಡಿ ಶಾಸನದ ಕಾಲದಿಂದ ಮಧುರ ಕವಿಯ ಕಾಲದ ವರೆಗೆ, ಪ್ರಾಚೀನ ಸಾಹಿತ್ಯವೆಂದು, ಅದರ ಆರಂಭದಶೆ ಹಾಗೂ ಪ್ರಧಾನವಾಹಕವಾದ ಚಂಪೂಕಾವ್ಯಪದ್ಧತಿಯ ವಿಕಾಸ ಅವನತಿಗಳ ಜಾಡು ಹಿಡಿದು, ಹೇಳುವ ಸಡಿಲವಾದ ಇನ್ನೊಂದು ಧೋರಣೆಯೂ ಉಂಟು. ಪ್ರಾಚೀನ ಕನ್ನಡ ಸಾಹಿತ್ಯವೆಂದರೆ ಹಳಗನ್ನಡ ಸಾಹಿತ್ಯವೆಂದೇ ತಿಳಿಯುವ ಸಾಮಾನ್ಯ ರೂಢಿಯಿರುವುದರಿಂದ, ಈ ರೂಢಿಯನ್ನು ಭಾಷಾದೃಷ್ಟಿಯಿಂದ ಸಮರ್ಥಿಸುವುದೂ ಸಾಧ್ಯವಿರುವುದರಿಂದ, 'ಚಂಪೂ ಪದ್ಧತಿಯ ಅವಸಾನವನ್ನು ಸಾರುವ ಹಂಸಗೀತೆ'ಯೆಂದು ವಿದ್ವಾಂಸರು ತಿಳಿದಿರುವ ಮಧುರ ಕವಿಯ 'ಧರ್ಮನಾಥ ಪುರಾಣ'ದ ರಚನಾಕಾಲದ ವರೆಗೆ (1410) ಪ್ರಾಚೀನ ಕನ್ನಡ ಸಾಹಿತ್ಯವೆಂದು ವ್ಯವಹರಿಸಿದರೆ, ಅದು ತಪ್ಪೇನಾಗದು ; ಎಂದರೆ ಸುಮಾರು ಸಾವಿರ ವರ್ಷಗಳ ಅವಧಿಯ ಸಾಹಿತ್ಯ ಸಮಸ್ಯೆಗಳು ಇಲ್ಲಿ ಪ್ರಸ್ತುತವಾಗುತ್ತವೆ. ಆ ಸಮಸ್ಯೆಗಳನ್ನು ಕುರಿತ ವಿಚಾರಗಳ ತಿರುಳು ಮುಂದಿನ ಅವಧಿಗಳಿಗೆ ಕೂಡ ಅನ್ವಯಿಸುತ್ತದೆ ಎನ್ನಬಹುದು.

೨

ಎತ್ತಿಕೊಂಡ ಸಾಹಿತ್ಯಭಾಗದ ಅಧ್ಯಯನದಲ್ಲಿ ಒದಗುವ ಸಮಸ್ಯೆಗಳೆಲ್ಲವನ್ನೂ ವಿಚಾರ ಮಾಡುವುದು ಈ ಅಲ್ಪ ಕಾಲಾವಧಿಯಲ್ಲಿ ಸಾಧ್ಯವಾಗತಕ್ಕುದಲ್ಲ : ಮುಖ್ಯವಾದ ಒಂದೆರಡು ಸಮಸ್ಯೆಗಳನ್ನಷ್ಟೇ ಇಲ್ಲಿ ಸ್ವಲ್ಪ ಮಟ್ಟಿಗೆ ವಿಚಾರಮಾಡಬಹುದು.

ಪ್ರಾಚೀನ ಕನ್ನಡ ಸಾಹಿತ್ಯವೆಂದು ನಾವು ತಿಳಿದಿರುವ ಸಾಹಿತ್ಯಭಾಗ ದೊರೆಯುವುದು ಮುಖ್ಯವಾಗಿ ಓಲೆಪ್ರತಿಗಳಲ್ಲಿ, ಸ್ವಲ್ಪಮಟ್ಟಿಗೆ ಹಳೆಯ ಕಾಗದ ಪ್ರತಿಗಳಲ್ಲಿ. ಇವು ದೊರೆಯುವ ಸ್ಥಳಗಳು ಸಾಮಾನ್ಯವಾಗಿ ವಿಶ್ವವಿದ್ಯಾನಿಲಯಗಳ ಗ್ರಂಥಸಂಪಾದನ ವಿಭಾಗದ ಹಸ್ತಪ್ರತಿ ಭಂಡಾರಗಳು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಗ್ರಂಥಸಂಗ್ರಹಗಳು ಮತ್ತು ಖಾಸಗಿ ವ್ಯಕ್ತಿಗಳ ಸ್ವಂತ ಸಂಗ್ರಹಗಳು. ದೊರೆಯುವ ಸಾಮಗ್ರಿ ಎಷ್ಟು ಎನ್ನುವುದು ವಿಶ್ವವಿದ್ಯಾನಿಲಯಗಳ ಹಸ್ತಪ್ರತಿಭಂಡಾರಗಳು ಆಗಿಂದಾಗ್ಗೆ ಪ್ರಕಟಿಸುವ ಸೂಚಿಗಳಿಂದ, ಇತರ ಮೂಲಗಳು ಹೊರಡಿಸುವ ಅಂತಹ ಇತರ ಪ್ರಕಟನೆಗಳಿಂದ ವಿದಿತವಾಗುತ್ತದೆ. ಹಸ್ತಪ್ರತಿಗಳ ಸಂಗ್ರಹಣೆ ಸಂರಕ್ಷಣೆಗಳ ವಿಷಯದಲ್ಲಿ ವಿಶ್ವವಿದ್ಯಾನಿಲಯಗಳ ಪ್ರಯತ್ನಗಳೇ ಹೆಚ್ಚು ವ್ಯವಸ್ಥಿತವಾದವು; ಆ ಕಾರ್ಯಗಳು ಅವುಗಳಿಂದ ಇನ್ನೂ ಹುಲುಸಾಗಿ, ಹುರುಪಾಗಿ ನಡೆಯಬೇಕಾಗಿವೆ. ಇತರ ಮೂಲಗಳ ಪ್ರಯತ್ನಗಳು ಸಹ ಉಲ್ಲೇಖಿಸತಕ್ಕವಾದರೂ, ಇವುಗಳಿಗೆ ಸಾಧನಸಂಪತ್ತಿಗಳು ಕಡಮೆ, ಸೀಮಿತಗಳು ಹೆಚ್ಚು. ವಾಸ್ತವವಾಗಿ ಇವು ವಿಶ್ವವಿದ್ಯಾನಿಲಯಗಳೊಂದಿಗೆ ಸಹಕರಿಸಿ, ಅವುಗಳ ಹಸ್ತಪ್ರತಿ ಭಂಡಾರವನ್ನು ಬೆಳೆಸಬೇಕು. ಹಾಗೆಯೇ ವಿಶ್ವವಿದ್ಯಾನಿಲಯಗಳು ಸಹ ಆ ಮೂಲಗಳೊಂದಿಗೆ ಆತ್ಮೀಯ ಸಂಬಂಧವನ್ನಿಟ್ಟುಕೊಂಡು, ಅವುಗಳಿಂದಲೂ ಗ್ರಂಥಸಂಪಾದನೆಯ ಕೆಲಸ ವಿಚಕ್ಷಣೆಯಿಂದ ನಡೆಯುವಂತೆ ಮಾಡಬೇಕು. ವೈಯಕ್ತಿಕ ಸಂಗ್ರಹಗಳು ವಿಶ್ವವಿದ್ಯಾನಿಲಯಗಳ ಇಲ್ಲವೆ ಸುಸ್ಥಿತಿಯ ಸಂಘ ಸಂಸ್ಥೆಗಳ ಸಂಗ್ರಹಗಳೊಳಗೆ ಸೇರಿಬಿಡುವುದೇ ಒಳ್ಳೆಯದು; ಇಲ್ಲವೆ ಅವು ಬಹುಬೇಗ ನಷ್ಟವಾಗಿ ಹೋಗುವ ಅಪಾಯವಿರುತ್ತದೆ.

ವಿಶ್ವವಿದ್ಯಾನಿಲಯಗಳನ್ನೂ ಒಳಕೊಂಡು, ಸಂಘಸಂಸ್ಥೆಗಳಲ್ಲಿ ನಡೆಯುತ್ತಿರುವ ಪ್ರಾಚೀನ ಕನ್ನಡ ಸಾಹಿತ್ಯದ ಸಂಗ್ರಹಣೆ, ಸಂರಕ್ಷಣೆ ಹಾಗೂ ಸಂಪಾದನೆಗಳ ಕೆಲಸ, ನಡೆಯಬೇಕಾಗಿರುವ ಕೆಲಸಗಳ ಮೊತ್ತದ ದೃಷ್ಟಿಯಿಂದ ನೋಡಿದರೆ, ಏನೇನೂ ಸಾಲದು ಎನ್ನಬೇಕು. ಇದಕ್ಕೆ ಆಡಳಿತದ ಮತ್ತು ಇತರ ರೀತಿಯ ತೊಂದರೆಗಳು ಏನಿದ್ದರೂ, ಅವು ಪರಿಹಾರಗೊಂಡು, ನಾಡಿನ ಪಿತ್ರಾರ್ಜಿತ ಸಾಹಿತ್ಯನಿಧಿಯ ಅಂದಾಜು ನಮಗೆ ಸ್ಪಷ್ಟವಾಗುವುದು ಮಾತ್ರವಲ್ಲದೆ, ಅದಕ್ಕೆ ನಾವು ಭಾಗಸ್ಥರೂ ಆಗುವಂತಾಗಬೇಕು. ಈಗಾಗಲೇ ಕೆಲವರು ವಿಚಾರಮಾಡುತ್ತಿರುವಂತೆ, ಒಂದು ಸ್ವಯಮಧಿಕಾರದ ಪ್ರತ್ಯೇಕ ಹಸ್ತಪ್ರತಿಭಂಡಾರ ರಾಜ್ಯಮಟ್ಟದಲ್ಲಿ ಸ್ಥಾಪನೆಯಾಗುವುದು ಎಷ್ಟರಮಟ್ಟಿಗೆ ಕಾರ್ಯಸಾಧ್ಯ ಎನ್ನುವುದನ್ನು ಆಲೋಚಿಸಬೇಕಾಗಿದೆ. ಅದು ಕಾರ್ಯಸಾಧ್ಯವಾಗುವುದಾದರೆ, ರಾಜ್ಯದ ಕೇಂದ್ರ ಗ್ರಂಥಾಲಯ, ಪತ್ರಾಗಾರ (Archives) ಹಾಗೂ ದೇಶವಿಚಾರಕೋಶ (Gazetteer) ಕಛೇರಿಗಳ ಹಾಗೆ ಇದು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಶ್ರಮಿಸಬೇಕಾಗುತ್ತದೆ.

ಪ್ರಾಚೀನ ಕಾಲದ ನಾಣ್ಯ, ಶಾಸನಗಳ ಹಾಗೆಯೇ ಪ್ರಾಚೀನ ಹಸ್ತಪ್ರತಿಗಳು ಸಹ ದೇಶದ ಆಸ್ತಿಯೆಂದು ಘೋಷಿಸಲ್ಪಡುವ ಕಾಯಿದೆಯಾಗುವುದು ಅತ್ಯವಶ್ಯ.

೩

ಕವಿರಾಜಮಾರ್ಗಕಾರನು ಉಲ್ಲೇಖಿಸಿರುವ ಗದ್ಯಪದ್ಯಕವಿಗಳಲ್ಲಿ ಯಾರೊಬ್ಬರ ಯಾವ ಒಂದು ಕೃತಿಯೂ ಈವರೆಗೆ ದೊರೆತಿಲ್ಲ; ಜಯಕೀರ್ತಿ ಎಂಬ ಪ್ರಾಚೀನ ಸಂಸ್ಕೃತ ಲಾಕ್ಷಣಿಕನು ಉಲ್ಲೇಖಿಸಿರುವ ಕೆಲವು ಕನ್ನಡ ಕಾವ್ಯಗಳಲ್ಲಿ ಯಾವುದೊಂದೂ ದೊರೆತಿಲ್ಲ. ಅಷ್ಟೇಕೆ, ಈಚೆಗೆ ಆರ್. ನರಸಿಂಹಾಚಾರ್ಯರು ತಮ್ಮ 'ಕರ್ಣಾಟಕ ಕವಿಚರಿತೆ'ಯ ಸಂಪುಟಗಳಲ್ಲಿ ಕುರಿತಿರುವ ಕೃತಿಗಳಲ್ಲಿಯೇ ಕೆಲವು ಇಂದು ಲಭಿಸು ತ್ತಿಲ್ಲ. ಇವುಗಳೊಂದಿಗೆ, ನಮ್ಮ ಪ್ರಾಚೀನ ಕಾವ್ಯಸಂಕಲನ ಗ್ರಂಥಗಳಲ್ಲಿ ಆಕರ ಗಳನ್ನು ಗೊತ್ತುಹಚ್ಚಲು ಇನ್ನೂ ಸಾಧ್ಯವಾಗಿರದ ಉದ್ಧೃತ ಪದ್ಯಗಳ ಅನುಪಲಬ್ಧ ಆಕರಗಳ ನಷ್ಟವನ್ನೂ ಪರಿಭಾವಿಸಿದರೆ, ನಮ್ಮ ಪ್ರಾಚೀನ ಸಾಹಿತ್ಯದ ಸುಮಾರು ಮೂರನೆಯ ಒಂದು ಭಾಗದಷ್ಟು ಸಾಹಿತ್ಯ ಬಹುಶಃ ಇಂದು ನಷ್ಟವಾಗಿದೆ ಇಲ್ಲವೆ ಇನ್ನೂ ಬೆಳಕಿಗೆ ಬಂದಿಲ್ಲ ಎನ್ನಬೇಕಾಗುತ್ತದೆ. ಅನ್ವೇಷಣೆಯನ್ನು ತೀವ್ರಗೊಳಿಸಿ, ಕೊನೆಯ ಪ್ರಯತ್ನಗಳನ್ನು ಕೈಕೊಳ್ಳುವುದು ಆಸಕ್ತರ ಅವಶ್ಯಕರ್ತವ್ಯವಾಗಿದೆ.

ನಷ್ಟವಾಗಿರುವ ಇಲ್ಲವೆ ಅನುಪಲಬ್ಧವಾಗಿರುವ ಪ್ರಾಚೀನ ಸಾಹಿತ್ಯದ ದೆಸೆ ಯಿಂದ ಕರ್ಣಾಟಕದ ಇತಿಹಾಸ ಸಂಸ್ಕೃತಿಗಳ ಹಾಗೂ ಭಾಷೆ ಸಾಹಿತ್ಯಗಳ ಅಧ್ಯಯನ ಎಷ್ಟರ ಮಟ್ಟಿಗೆ ಕುಂಠಿತಗೊಂಡಿದೆ, ಅವು ದೊರೆತಿದ್ದರೆ ಆಗುತ್ತಿದ್ದ ಹೆಚ್ಚಿನ ಪ್ರಯೋಜನಗಳೇನು ಎನ್ನುವುದನ್ನು ನಿದರ್ಶನಗಳನ್ನು ಕೊಟ್ಟು ನಿರೂಪಿಸುವುದು ಸಾಧ್ಯವಿದೆ. ಆದರೆ ಆ ನಿರೂಪಣೆಗೆ ತೊಡಗಿದರೆ, ಅದೊಂದು ದೀರ್ಘಪ್ರಸಂಗ ವಾದೀತು! ವಾಸ್ತವವಾಗಿ, ಲುಪ್ತಸಾಹಿತ್ಯದ ಪೂರ್ತಿ ಅಂದಾಜು ತೆಗೆದು, ನಷ್ಟದ ಪ್ರಮಾಣವನ್ನೂ ಪರಿಣಾಮವನ್ನೂ ಗೊತ್ತುಹಚ್ಚುವುದು ಒಂದು ಗಂಭೀರ ಅಧ್ಯಯನದ ವಿಷಯವೇ ಸರಿ.

ದೊರೆಯುತ್ತಿರುವ ಪ್ರಾಚೀನ ಸಾಹಿತ್ಯದ ಬಗ್ಗೆಯೇ ಈಗ ನೋಡೋಣ. ಈ ಸಾಹಿತ್ಯ ಭಾಗದ ಪ್ರಕಟನೆ ಈಗ ತಿಳಿದಿರುವಂತೆ ಹತ್ತೊಂಬತ್ತನೆಯ ಶತಮಾನದ ನಾಲ್ಕನೆಯ ದಶಕದಿಂದ ತೊಡಗಿದಂತೆ ತೋರುವುದು. ಮೊದಲು ವಿಶೇಷವಾಗಿ ಕಲ್ಲಚ್ಚಿನ ಪುಸ್ತಕಗಳೂ, ಬಳಿಕ ಅಚ್ಚಿನ ಪುಸ್ತಕಗಳೂ ಬಂದುವು. ಆಗ್ಗೆ ಈ ಪ್ರಕಟನೆಗಳನ್ನಾರಂಭಿಸಿದ ವಿದೇಶೀಯರು ಯಾವ ರೀತಿಯಲ್ಲಿ ಗ್ರಂಥಸಂಪಾದನ ಕಾರ್ಯಗಳನ್ನು ಕೈಕೊಂಡರು ಎನ್ನುವುದನ್ನು ಶಾಸ್ತ್ರೀಯವಾಗಿ ಗುರುತಿಸುವ ಅಧ್ಯಯನ ಇನ್ನೂ ನಡೆದಿಲ್ಲ: ನಡೆಯುವುದು ಅವಶ್ಯ. ಅವರು ಪ್ರಾಯಶಃ ಜರ್ಮನ್ ಮತ್ತು ಇಂಗ್ಲಿಷ್ ಭಾಷೆಯ ಸಾಹಿತ್ಯಾಧ್ಯಯನದಲ್ಲಿ ತಮಗೆ ಪರಿಚಯ ವಿದ್ದ ತತ್ತ್ವಗಳನ್ನು ಸ್ಥೂಲವಾಗಿ ಅನ್ವಯಿಸಿ, ಆ ಕೆಲಸವನ್ನು ನಿರ್ವಹಿಸಿರಬಹುದು.

ಕಾಲ ಸಂದಂತೆ, ಕೃತಿಗಳ ಜನಪ್ರಿಯತೆಗೆ ಅನುಗುಣವಾಗಿ, ಅವುಗಳ ಮರು ಮುದ್ರಣಗಳೂ ಪರಿಷ್ಕರಣಗಳೂ ಬರತೊಡಗಿದುವು. ಕಿಟ್ಟೆಲ್-ರೈಸ್ ಅವರ ಕೆಲಸಗಳ ಪರಿಶೀಲನದಿಂದಲೂ ಸ್ವಬುದ್ಧಿಯಿಂದಲೂ ಆರ್. ನರಸಿಂಹಾಚಾರ್ಯರು ಕನ್ನಡ ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಶಾಸ್ತ್ರೀಯ ಪರಿಕ್ರಮಗಳನ್ನು ಮೊದಲಿಗೆ ರೂಢಿಸಿದರೆಂದು ತೋರುತ್ತದೆ. ಕಾಲಕಾಲಕ್ಕೆ ಈ ಪರಿಕ್ರಮಗಳು ವ್ಯವಸ್ಥೆಗೊಂಡು, ಸಾಧನಸಂಪತ್ತಿಗಳು ಹೆಚ್ಚಿದಂತೆ ಒಳ್ಳೆಯ ಪರಿಷ್ಕರಣಗಳು ಬರತೊಡಗಿದುವು. ಒಂದು ಕೃತಿ ಎಷ್ಟು ಸಲ ಪರಿಷ್ಕೃತಗೊಳ್ಳಬಹುದು ಎನ್ನುವುದು, ಅದರ ಖ್ಯಾತಿ, ಹಿಂದಿನ ಪರಿಷ್ಕರಣಗಳ ಸ್ವರೂಪ ಹಾಗೂ ಹೊಸ ಸಂಪಾದನ ಸಾಮಗ್ರಿ ಇವನ್ನು ಅವಲಂಬಿಸಿರುತ್ತದೆ. ಈ ವಿಷಯದಲ್ಲಿ ಈಚಿನ ಸಂಪಾದಕರು ಹೆಚ್ಚಿನ ಸಂಯಮ ವಿಚಕ್ಷಣೆಗಳನ್ನು ತೋರುತ್ತಿರುವರೇ ? ಪ್ರಯತ್ನಗಳನ್ನು ನಡಸುತ್ತಿರುವರೇ ಎನ್ನುವುದಕ್ಕೆ ತಮಗೆ ತಾವೇ ಪ್ರಶ್ನೆಮಾಡಿ, ಉತ್ತರ ಪಡೆದುಕೊಳ್ಳಬೇಕಾಗಿದೆ, ಈ ಪರಿಸ್ಥಿತಿಯನ್ನು ಹೀಗೆ ಸೂತ್ರೀಕರಿಸಬಹುದು :

(i) ಸಂಪಾದಿತ ಪ್ರಾಚೀನ ಗ್ರಂಥಗಳು ಹಲವು ಹಾಗೆಯೇ ಉಳಿದುಕೊಂಡಿವೆ. (ii) ಸಂಪಾದಿತವಾದವು ಸುಸಂಪಾದಿತವಾಗದೆ, ಅವು ಸರಿಯಾಗಿ ಉಪಯೋಗಕ್ಕೆ ಬರುತ್ತಿಲ್ಲ. (iii) ಸುಸಂಪಾದಿತವಾದವು ಸಹ ಅನಾವಶ್ಯಕವಾಗಿ ಪುನಸ್ಸಂಪಾದನೆಗೊಳ್ಳುತ್ತಿವೆ, ರೂಪುಗೆಡುತ್ತಲೂ ಇವೆ.

ಅಪ್ರಕಟಿತ ಪ್ರಾಚೀನ ಗ್ರಂಥಗಳಲ್ಲಿ ಮಾರ್ಗ ಸಾಹಿತ್ಯದ ಹೆಚ್ಚು ಪಾಲು ಈಗಾಗಲೇ ಪ್ರಕಟಗೊಂಡಿದೆ. ಕೆಲವು ಪುನಸ್ಸಂಪಾದನೆಗೊಳ್ಳುವುದು ಅವಶ್ಯ; ಇನ್ನು ಕೆಲವು ಪುನರ್ಮುದ್ರಣಗೊಂಡರೆ ಸದ್ಯಕ್ಕೆ ಸಾಕು. ಒಡೆಯರ ಕಾಲವನ್ನೂ ಒಳಗೊಂಡು ಮಧ್ಯಕಾಲೀನ ಸಾಹಿತ್ಯದ ಬಹುಪಾಲು ಇನ್ನೂ ಕತ್ತಲ ಗರ್ಭದಲ್ಲಿಯೇ ಹುದುಗಿದೆ. ಹಿಂದೆ ಬೆಳಕು ಕಂಡವುಗಳಲ್ಲಿ ಕೆಲವಕ್ಕೆ ಪುನಸ್ಸಂಪಾದನೆ, ಪುನರ್ಮುದ್ರಣಗಳ ಅಗತ್ಯವಿದೆ. ವಚನ ಸಾಹಿತ್ಯದ ಹೊರತು ಉಳಿದವುಗಳ ಪ್ರಕಟನೆ ತೀರ ಮಂದಗತಿಯಲ್ಲಿದೆ. ಇಲ್ಲಿಯೂ ಪುನಸ್ಸಂಪಾದನೆ–ಮುದ್ರಣಗಳ ಅಗತ್ಯವಿದೆ. ಮಧ್ಯಕಾಲೀನ ಜೈನ ಸಾಹಿತ್ಯ ಹಾಗೂ ಒಡೆಯರ ಕಾಲದ ಸಾಹಿತ್ಯ ಅವಜ್ಞೆಗೆ ಗುರಿಯಾಗಿವೆ. ಇವೆಲ್ಲ ಪ್ರಕಟಗೊಂಡರೆ ಆಗುವ ಪ್ರಯೋಜನಗಳನ್ನು ಇಲ್ಲಿ ಮತ್ತೆ ಎತ್ತಿ ಹೇಳಬೇಕಾಗಿಲ್ಲ. ಉದಾರಿ ಜೈನ ಸಂಘಸಂಸ್ಥೆಗಳೂ ಮೈಸೂರು ಅರಸುಮನೆತನದವರೂ ವಿಶ್ವವಿದ್ಯಾನಿಲಯಗಳೊಂದಿಗೆ ವ್ಯವಹರಿಸಿ, ಯಥೋಚಿತ ದತ್ತಿನಿಧಿಗಳನ್ನು ನೀಡಿ, ಅಪ್ರಕಟಿತ ಸಾಹಿತ್ಯವೆಲ್ಲ ಅನತಿಕಾಲದಲ್ಲಿಯೇ ಪ್ರಕಟವಾಗುವಂತೆ ಮಾಡಬೇಕು. ಕರ್ನಾಟಕ ವಿಶ್ವವಿದ್ಯಾಲಯ ವಚನ ಸಾಹಿತ್ಯದ ವಿಷಯದಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ದಾಸ ಸಾಹಿತ್ಯ ಪ್ರಕಟನೆಯ ವಿಷಯದಲ್ಲಿ ವಹಿಸಿರುವ ಆಸ್ಥೆ ಸ್ತುತ್ಯವಾಗಿದೆ. ದಾಸ ಸಾಹಿತ್ಯದ ಪ್ರಕಟನೆ ಇನ್ನೂ ತ್ವರಿತವಾಗಿ, ವ್ಯಾಪಕವಾಗಿ ನಡೆಯಬೇಕಾಗಿದೆ.

ಕನ್ನಡ ಭಾಷೆಯ ಅಗ್ರಮಾನ್ಯ ಹಿರಿಯ ಕವಿಗಳ ಹಾಗೂ ಲಕ್ಷಣಗ್ರಂಥಕಾರರ ಪ್ರಮುಖ ಕೃತಿಗಳಿಗಾದರೂ ಸವಿಮರ್ಶಪರಿಷ್ಕರಣಗಳು ಸಿದ್ಧವಾಗಬೇಕಾಗಿವೆ. ಪಂಪಭಾರತದ ಪರಿಷ್ಕರಣದಲ್ಲಿ ಪರಿಷತ್ತು ವಹಿಸಿದ ಶ್ರದ್ಧೆ ಆಸಕ್ತಿಗಳು, ತೋರಿಸಿದ ಪರಿಶ್ರಮ ಪಾಂಡಿತ್ಯಗಳು ಈಗಲೂ ನಮಗೆ ಮಾದರಿಯಾಗಬೇಕಾಗಿವೆ. ಲಬ್ಧವಿರುವ ಸಹಾಯ ಸಲಕರಣೆಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದ, ಪಾಂಡಿತ್ಯ ವಿಚಕ್ಷಣೆಗಳ ಶ್ರೇಷ್ಠ ಸಂಪಾದಕರ ಪ್ರಯೋಜನ ಸಿಕ್ಕದ ದೆಸೆಯಿಂದ ಈಚೆಗೆ ಕುಸಂಪಾದಿತ ಗ್ರಂಥಗಳು ಕೆಲವು ಪ್ರಕಟವಾಗತೊಡಗಿವೆ! ಇವುಗಳಲ್ಲಿಯ ದೋಷಗಳನ್ನೆಲ್ಲ ವಿವರವಾಗಿ, ನಿದರ್ಶನಗಳ ಸಹಿತವಾಗಿ ನಿರೂಪಿಸಿದರೆ, ಅದು ಇನ್ನೊಂದು ದೀರ್ಘಪ್ರಸಂಗವಾದೀತು; ಈ ಕುಸಂಪಾದಿತ ಗ್ರಂಥಗಳೇ ಮುಂದೆ ಮಾದರಿಗಳಾಗುವ ಅಪಾಯವೂ ಇದೆ; ಈಗಂತೂ ಇವು ನಿರುಪಯುಕ್ತವೂ ವ್ಯರ್ಥವೂ ಆಗಿವೆ. ಇಂತಹ ಪ್ರಯತ್ನಗಳನ್ನು, ನಮ್ಮ ಭಾಷೆಗೆ ನಾವು ಮಾಡುವ ದ್ರೋಹ, ಆಯಾ ಪ್ರಾಚೀನ ಕವಿಗೆ ನಮ್ಮಿಂದ ಆಗುವ ಅನ್ಯಾಯ ಎಂದೇ ಹೇಳಬೇಕು. ಈ ಸಮಸ್ಯೆಗೆ ಪರಿಹಾರ ಹೇಗೆ? ಸಂಪಾದಕನ ವ್ಯುತ್ಪತ್ತಿ ಕಾರ್ಯಕ್ಷಮತೆ ಹಾಗೂ ವ್ಯವಸ್ಥಾಪಕನ ಮೇಲ್ವಿಚಾರಣೆ ಮಾರ್ಗದರ್ಶನ ಇವುಗಳಲ್ಲಿ ಪರಿಹಾರ ಅಡಗಿದೆ ; ಹಾಗೆಯೇ ವಿದ್ವಾಂಸರ ರಚನಾತ್ಮಕ ವಿಮರ್ಶೆಗಳನ್ನು ಸ್ವಾಗತಿಸಿ ಸ್ವೀಕರಿಸುವುದರಲ್ಲಿಯೂ ಪ್ರಶ್ನೆಗೆ ಉತ್ತರವಿದೆ. ಒಪ್ಪಿಸಿದ ಕೆಲಸವನ್ನು ಹೇಗೆಯೋ ಮಾಡಿ ಮುಗಿಸುವುದೆಂಬ ಕರ್ತವ್ಯಪಾಲನೆಯ ದೃಷ್ಟಿ, ಕೀರ್ತಿ ಮತ್ತು ಹಣದ ಲೋಭ, ಇವುಗಳಿಂದ ಕೆಲಸಮಾಡಿದರೆ, ಹೇಗೆ ತಾನೆ ಅದು ಉತ್ತಮವಾಗಿರಲು ಸಾಧ್ಯ ?

ಪ್ರಾಚೀನ ಸಾಹಿತ್ಯವನ್ನು ಓದುವವರ ಹಾಗೂ ವಿಮರ್ಶಿಸುವವರ ಸಂಖ್ಯೆ ತೀರ ಕಡಮೆ ಎನ್ನುವ ಪರಿಸ್ಥಿತಿ ಮೊದಲು ತಪ್ಪಬೇಕು. ಈ ಸಾಹಿತ್ಯಭಾಗದ ಕೃತಿಗಳು ಪುಸ್ತಕಭಂಡಾರಗಳ ಕಪಾಟುಗಳನ್ನು ಸೇರಿ, ನೀರವವಾಗಿ ಕುಳಿತು, ಗಾಜಿನ ಬೊಂಬೆಗಳಾಗಿಬಿಡುವ ಅಪಾಯ ದಿನದಿನಕ್ಕೆ ಹೆಚ್ಚುತ್ತಿದೆ. ಸುಸಂಪಾದಿತ ಪರಿಷ್ಕರಣಗಳು ಬರುವುದರ ಜೊತೆಗೆ, ಪ್ರಾಚೀನ ಸಾಹಿತ್ಯದ ಪ್ರಚಾರಕಾರ್ಯ ಸಹ, ವಾಚನ, ಅಧ್ಯಯನ, ವ್ಯಾಖ್ಯಾನ ರಚನೆ, ವಿಮರ್ಶೆ, ವಿಚಾರ ಸಂಕಿರಣ ಈ ದಿಕ್ಕುಗಳಲ್ಲಿ ನಿರಂತರವಾಗಿ ನಡೆಯಬೇಕಾಗಿದೆ. ಸಾಹಿತ್ಯ ಪರಿಷತ್ತು ಪ್ರಾಚೀನ ಸಾಹಿತ್ಯ ಕೃತಿಗಳ ಮೂಲ ಗದ್ಯಾನುವಾದಗಳನ್ನು ಒಟ್ಟಿಗೆ ಒದಗಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿರುವುದು ಸ್ತುತ್ಯವಾದೊಂದು ಪ್ರಯತ್ನ. ಕೆಲವರು ಇದರ ಔಚಿತ್ಯ ಪ್ರಶ್ನಿಸಿದ್ದೂ ಉಂಟು: ಪ್ರಶ್ನಿಸಲು ಯೋಗ್ಯವಾದ ಕಾರಣಗಳೂ ಇಲ್ಲದಿಲ್ಲ. ಮೂಲದ ಸಂಪಾದಕೀಯ ಕ್ರಮಗಳೂ ಮೌಲ್ಯಗಳೂ, ಗದ್ಯಾನುವಾದಗಳ ಗುಣ ದೋಷಗಳೂ ಅಂತಹ ಪ್ರಶ್ನೆಗಳು ಹುಟ್ಟಿಕೊಳ್ಳಲು ದಾರಿಮಾಡಿರುವುದುಂಟು. ಆದರೆ ಭಾರತೀಯ ಭಾಷೆಗಳಲ್ಲಿ, ಮುಖ್ಯವಾಗಿ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ, ಈ ಬಗೆಯ ಪ್ರಕಟನೆಗಳಿಗೆ ಒಂದು ಇತಿಹಾಸವಿದೆ. ಪ್ರಯೋಜನವಿರುವುದರಿಂದಲೇ

ಆ ಇತಿಹಾಸ ಸಾಧ್ಯವಾಗಿದೆ. ಸಾಮಾನ್ಯಜನ ಮೂಲವನ್ನು ಓದಿ ತಿಳಿಯಲು ವ್ಯುತ್ಪತ್ತಿ ಸಾಲದೆ, ಹಳೆಯ ಸಾಹಿತ್ಯ ಎಲ್ಲೋ ಹಿಡಿಮಂದಿಯ ಸಲುವಾಗಿ ಎನ್ನುವಂತಾಗದೆ, ಕಾಲಕ್ರಮದಲ್ಲಿ ಪೂರ್ತಿಯಾಗಿಯೇ ಮೂಲೆಗುಂಪಾದೀತು, ಅಳಿದು ಹೋದೀತು ಎಂಬ ಭಯದಿಂದಾಗಿ ಈ ಪ್ರಯತ್ನಗಳನ್ನು ನಾವು ಸ್ವಾಗತಿಸುವುದು ತಪ್ಪಿಲ್ಲ. ಆದರೆ ಸುಸಂಪಾದಿತ ಮೂಲ, ನಿಖರವಾದ ಅನುವಾದ ಸಿದ್ಧವಾಗುವುದು ನಮ್ಮ ವಿದ್ವಾಂಸರ ಶಕ್ತಿಸಾಮರ್ಥ್ಯಗಳನ್ನು ಅವಲಂಬಿಸಿದೆ. ಅಲ್ಲದೆ ನೇರವಾಗಿ ಮೂಲವನ್ನು ಓದಿ, ಸ್ವಾರಸ್ಯಗ್ರಹಣಮಾಡುವ ಪ್ರವೃತ್ತಿಗೆ ಇವು ಅಡ್ಡ ಬಾರದಂತೆಯೂ ನೋಡಿಕೊಳ್ಳಬೇಕಾಗಿದೆ.

ಇನ್ನೊಂದು ಸಮಸ್ಯೆಯನ್ನು ಇಲ್ಲಿ ಪ್ರಸ್ತಾಪಿಸಲು ನನಗೆ ಸಂಕೋಚವೆನಿಸುತ್ತದೆ, ಅದೆಂದರೆ, ಸುಸಂಪಾದಿತ ಗ್ರಂಥಗಳು ಅನಾವಶ್ಯಕವಾಗಿ ಪುನಸ್ಸಂಪಾದನೆಗೊಳ್ಳುವುದು, ಹಾಗೆ ಸಂಪಾದನೆಗೊಳ್ಳುವಾಗ ರೂಪಗೆಡುವುದು. ಪ್ರಾಯಶಃ ಇದಕ್ಕೆ ವ್ಯಾವಹಾರಿಕ ಕಾರಣಗಳೇ ಮುಖ್ಯವಾಗಿರಬೇಕು. ನಮ್ಮ ವಿದ್ವತ್ತಿನ ಏಳು ಬೀಳುಗಳ ಬಗೆಗೆ ಲಕ್ಷ್ಯಕೊಡುವವರು ಇದನ್ನು ಅವಶ್ಯವಾಗಿ ಗಮನಿಸಬೇಕು. ಇಂತಹವುಗಳನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನಮಾಡಿ, ಇವಕ್ಕೆ ತಡೆಹಾಕಲು ಸಾಧ್ಯವಿಲ್ಲದಿದ್ದರೂ ತಕ್ಕ ಎಚ್ಚರವನ್ನು ವಿದ್ವತ್ತಿನ ಕ್ಷೇತ್ರದಲ್ಲಿ ಉಂಟುಮಾಡಬೇಕು ; ಅಶಿಸ್ತಿನ ವಿಜೃಂಭಣೆ ಬೆಳೆಯದಂತೆ ನೋಡಿಕೊಳ್ಳಬೇಕು.

೪

ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಎಷ್ಟೋ ಉಪಯುಕ್ತ ಗ್ರಂಥಗಳು ಪುನರ್ಮುದ್ರಣಗೊಳ್ಳದ ಕಾರಣ, ಅಭ್ಯಾಸಕ್ಕೆ ಒದಗದೆ ಇವೆ : ಪುನಸ್ಸಂಪಾದಿತವಾಗಬೇಕಾದವೂ ಇವೆ. ಇದು ಒಂದು ತೆರನಾದರೆ ಅಭ್ಯಾಸ ಪರಿಕರಗಳ ಅಭಾವ ಇನ್ನೊಂದು ತೆರನಾದುದು. ಶಬ್ದಕೋಶಗಳು, ವಿಷಯ ಕೋಶಗಳು, ಪದಪಟ್ಟಿಗಳು, ವ್ಯಾಕರಣಗಳು, ವ್ಯಾಖ್ಯಾನಗಳು ಇವೆಲ್ಲ ಹೆಚ್ಚಿದಲ್ಲದೆ ನಮ್ಮ ಹಳೆಯ ಸಾಹಿತ್ಯದ ಅಭ್ಯಾಸ ಸುಕರವಾಗದು, ಫಲಪ್ರದವಾಗದು. ಅನಂತರದಲ್ಲಿ, ಐತಿಹಾಸಿಕ ಸಾಂಸ್ಕೃತಿಕ ಸಮೀಕ್ಷೆಗಳೂ ವಿಮರ್ಶಾತ್ಮಕ ತೌಲನಿಕ ಅಧ್ಯಯನಗಳೂ ಸಿದ್ಧವಾಗುವುದರಿಂದ, ಆ ಸಾಹಿತ್ಯಭಾಗದ ಲಾಭ ನಮಗೆ ಸಾಕಷ್ಟು ಆದಂತಾಗುತ್ತದೆ. ತತ್ಕಾಲೀನ ಸಾಮಾಜಿಕ ಸಂದರ್ಭಗಳಿಗೆ ಅವು ಅಗತ್ಯವಿಲ್ಲ. ಹೊಂದುವುದಿಲ್ಲ ಎಂದು ಅವನ್ನು ನಿಸ್ಸಾರವಾಗಿ ತಿಳಿಯುವುದು ನ್ಯಾಯವಾದುದಲ್ಲ. ಆಯಾ ಕಾಲಘಟ್ಟದ ಹಾಗೂ ಸಾಮಾಜಿಕ ಸಂದರ್ಭಗಳ ರೀತಿನೀತಿಗಳ ಹಿನ್ನೆಲೆಯಲ್ಲಿ ಅವನ್ನು ನಾವು ಪರಿಶೀಲಿಸುವುದೇ ಸೂಕ್ತ. ಕಾವ್ಯಪ್ರಯೋಜನ ಹಾಗೂ ತತ್ಕಾಲೀನ ಸಾಮಾಜಿಕ ಅಗತ್ಯ ಇವುಗಳ ದೃಷ್ಟಿಯಿಂದ, ನಾವು ಸಾರವನ್ನಷ್ಟೇ ಹೀರಿಕೊಂಡು. ಉಳಿದುದನ್ನು ಉಪೇಕ್ಷಿಸಬಹುದು. ಈ ಸಾರಗ್ರಹಣಕ್ಕೆ ಅವಶ್ಯ

ವಾದ ಪ್ರಮಾಣದಲ್ಲಿ ಓದುಗ ತನ್ನ ವ್ಯುತ್ಪತ್ತಿಯನ್ನು ಬೆಳೆಸಿಕೊಳ್ಳುವುದೇ ನಿಜವಾದ ಸಮಸ್ಯೆ. ಈ ದಿಕ್ಕಿನಲ್ಲಿ ನಮ್ಮ ಓದುಗರೂ ಸಂಶೋಧಕರೂ ಈಗೀಗ ಸ್ವಲ್ಪ ಗಮನ ಹರಿಸುತ್ತಿರುವುದು ಸಮಾಧಾನದ ಸಂಗತಿ. ಆದರೆ ಅಧ್ಯಯನದಲ್ಲಿ ಇನ್ನೂ ಅಧೈರ್ಯ, ಹಿಂಜರಿಕೆಗಳೇ ಹೆಚ್ಚಾಗಿವೆ. ವಾಸ್ತವವಾಗಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನೂರರಲ್ಲಿ ಹತ್ತು-ಹದಿನೈದು ಪಾಲು ಕೆಲಸ ಕೂಡ ಇನ್ನೂ ನಡೆದಿಲ್ಲ. ಕನ್ನೆನೆಲವೆಂದು ಹೇಳಬಹುದಾದ ಕೃಷಿಕ್ಷೇತ್ರಗಳು ಇಲ್ಲಿ ಹಲವಾರಿವೆ. ಆ ಕ್ಷೇತ್ರಗಳು ಯಾವುವೆಂದು ಲೆಕ್ಕಿಸಿ ಪಟ್ಟಿಮಾಡಿದರೆ, ಅದೇ ನಾಲ್ಕಾರು ಪುಟಗಳಷ್ಟಾಗಬಹುದು. ಅದನ್ನಿಲ್ಲಿ ನಾನು ವಿವರಿಸಲು ಹೋಗುವುದಿಲ್ಲ. ನಮ್ಮ ಅತಿ ದೊಡ್ಡ ಕವಿಗಳ ವಿಷಯದಲ್ಲಿಯೇ ಸರಿಯಾಗಿ, ಪೂರ್ಣವಾಗಿ ಅಭ್ಯಾಸ ನಡೆದಿಲ್ಲ ಎಂದು ಇಲ್ಲಿ ಹೇಳಲು ನನಗೆ ನಾಚಿಕೆಯಾಗುತ್ತದೆ. ಮಾಡತಕ್ಕ ದೊಡ್ಡ ಕೆಲಸಗಳನ್ನು ಕೀರ್ತಿ ಹಾಗೂ ಲಾಭಗಳಿಗಾಗಿಯಾದರೂ ಮಾಡುವಂತಹ ಜನ ನಮ್ಮಲ್ಲಿ ಸಿಕ್ಕುತ್ತಿಲ್ಲ. ಆದರೆ ಹಾಗೆಂದು ಅದಕ್ಕಾಗಿ ನಾವು ಜಾಹೀರಾತು ಕೊಡುವಂತೆಯೂ ಇಲ್ಲ! ಬದುಕಿದ್ದರೆ ಒಳ್ಳೆಯದನ್ನು ಕಾಣಬಹುದು ಎಂಬ ಹಾರೈಕೆಯೊಂದೇ ನಮ್ಮ ಪಾಲಿಗಿರುವುದು!

'ಹಸ್ತಪ್ರತಿ ವಿಜ್ಞಾನ': ಕೆಲವು ಪಾರಿಭಾಷಿಕ ಪದಗಳು

—ಡಾ॥ ಆರ್. ಎಸ್. ಶಿವಗಣೇಶ ಮೂರ್ತಿ

ಈಗ್ಗೆ ಸುಮಾರು 200–250 ವರ್ಷಗಳ ಹಿಂದೆ ಪುಸ್ತಕಗಳನ್ನು ಕೈ ಬರೆವಣಿಗೆಯಲ್ಲಿಯೇ ಬರೆಯಬೇಕಾಗಿತ್ತಷ್ಟೆ. ಆಗ ಓಲೆಯ ಮೇಲೋ ಕಾಗದದ ಮೇಲೋ ಬರೆಯುತ್ತಿದ್ದರು. ಅಂಥ ಪುಸ್ತಕಗಳನ್ನು ಈಗ 'ಹಸ್ತಪ್ರತಿಗಳು' ಎನ್ನುತ್ತೇವೆ. ಇಂಗ್ಲಿಷಿನಲ್ಲಿ 'ಮ್ಯಾನಸ್ಕ್ರಿಪ್ಟ್ಸ್' ಎನ್ನುತ್ತೇವೆ; ಈ ಶಬ್ದದಲ್ಲಿ ಕೈಯಲ್ಲಿ ಬರೆದುದೆಲ್ಲವೂ—ಪತ್ರಾದಿಗಳೂ—ಸೇರುತ್ತವೆಯಾದರೂ ಅದನ್ನು ಸೀಮಿತ ಅರ್ಥದಲ್ಲಿ ತೆಗೆದುಕೊಳ್ಳಲಾಗುತ್ತದೆ. ಇಂಥ ಪುಸ್ತಕಗಳನ್ನು ಕುರಿತ ಅಧ್ಯಯನವನ್ನು 'ಹಸ್ತಪ್ರತಿ ಶಾಸ್ತ್ರ' ಅಥವಾ 'ಹಸ್ತಪ್ರತಿ ವಿಜ್ಞಾನ' 'ಮ್ಯಾನಸ್ಕ್ರಿಪ್ಟಾಲಜಿ' ಎನ್ನುತ್ತೇವೆ. ಈ ವಿಜ್ಞಾನದ ಮುಖಗಳು ಮುಖ್ಯವಾಗಿ ಎರಡು; ಪುಸ್ತಕಗಳ ಸ್ವರೂಪ, ರಕ್ಷಣೆ ಮೊದಲಾದವನ್ನು ಕುರಿತ ಅಧ್ಯಯನ ಒಂದಾದರೆ, ಗ್ರಂಥಗಳ ಪಾಠಮೀಮಾಂಸೆ ಮತ್ತೊಂದು. 'ಮ್ಯಾನಸ್ಕ್ರಿಪ್ಟಾಲಜಿ' ಎಂಬ ಹೆಸರನ್ನು ಮೊದಲಿಗೆ ಪ್ರಯೋಗಿಸಿದವರು ಪ್ರೊ॥ ಆರ್. ಸಿ. ಹಿರೇಮಠ್ ಅವರು ಮತ್ತು ಅದು 1974ರಲ್ಲಿ ಎಂದು ಡಾ॥ ಕಲಬುರ್ಗಿ ತಿಳಿಸುತ್ತಾರೆ.[1]

'ಮ್ಯಾನಸ್ಕ್ರಿಪ್ಟಾಲಜಿ' ಶಬ್ದ ಇನ್ನೂ ಆಂಗ್ಲಕೋಶಕ್ಕೆ ಪ್ರವೇಶಿಸಬೇಕಾಗಿದೆ. ಅದಕ್ಕೆ ಅಗತ್ಯವಾದ ಪ್ರಯೋಗಬಾಹುಳ್ಯವನ್ನು ಅದು ಭಾರತದಲ್ಲಿ ಈಗಾಗಲೇ ಹೊಂದಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅದು ಎಂ.ಎ. (ಸಂಸ್ಕೃತ ಮತ್ತು ಕನ್ನಡ) ತರಗತಿಗಳಲ್ಲಿ ಅಧ್ಯಯನ ವಿಷಯವಾಗಿರುತ್ತದೆ. ಅಲ್ಲದೆ ಈ ವಿಜ್ಞಾನದಲ್ಲಿ ಎಂ.ಎ. ಅನಂತರದ ಡಿಪ್ಲೊಮಾ ಕೋರ್ಸ್ ಕೂಡ ಏರ್ಪಡಿಸಲು ಸಂಸ್ಕೃತ ವಿಭಾಗ ಯತ್ನಿಸುತ್ತಿದೆ. ಇತರ ಕೆಲವು ವಿಶ್ವವಿದ್ಯಾಲಯಗಳಲ್ಲಿ ಅದನ್ನು ಎಂ.ಫಿಲ್.ಗೆ ವಿಧಾಯಕಮಾಡಲಾಗಿದೆ. ಈ ಕಾರಣದಿಂದ ಪ್ರಾಂತೀಯ ಭಾಷೆಗಳಲ್ಲಿಯೂ ಈ ಶಾಸ್ತ್ರದ ಕೃತಿಗಳು ರಚಿತವಾಗತೊಡಗಿವೆ. ಈ ಸಂದರ್ಭದಲ್ಲಿ ರಾಷ್ಟ್ರಾದ್ಯಂತ ಪಾರಿಭಾಷಿಕ ಪದಗಳಲ್ಲಿ ಸಮಾನತೆಯನ್ನು ತರುವುದು ಈ ಶಾಸ್ತ್ರದ ಬೆಳವಣಿಗೆ ದೃಷ್ಟಿಯಿಂದ ಅವಶ್ಯಕ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈ ಉದ್ದೇಶದಿಂದ ಇಲ್ಲಿ ಕೆಲವು ಪದಗಳ ಬಗೆಗೆ ವಿವೇಚಿಸಲಾಗಿದೆ.

---

1 'ಹಸ್ತಪ್ರತಿ ಶಾಸ್ತ್ರ'. ಸಂ. ಪ್ರೊ॥ ಎಂ. ವಿ. ಸೀತಾರಾಮಯ್ಯ, ಡಾ॥ ಎಂ. ಚಿದಾನಂದ ಮೂರ್ತಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು–19, 1983; ಇದರಲ್ಲಿ ಡಾ॥ ಎಂ. ಎಂ. ಕಲಬುರ್ಗಿ; 'ಹಸ್ತಪ್ರತಿಶಾಸ್ತ್ರ: ಅದರ ವಿವಿಧ ಮುಖಗಳು'; ಪು. 23

ಇಂದಿನ ನಮ್ಮ ಪುಸ್ತಕಗಳಲ್ಲಿ ಪಾರಿಭಾಷಿಕ ಪದಗಳನ್ನು ಬಳಸುತ್ತೇವೆ. ಕೆಲವು ಶಬ್ದಗಳು ಪ್ರಾಚೀನ ಸಾಹಿತ್ಯದಲ್ಲಿ ಅದೇ ಅರ್ಥದಲ್ಲಿ ದೊರೆಯುತ್ತವೆ. ಕೆಲವನ್ನು ಪ್ರಾಚೀನ ಅರ್ಥವ್ಯಾಪ್ತಿಯಲ್ಲಿ ಹೆಚ್ಚುಕಡಮೆ ಮಾಡಿಕೊಂಡು ಬಳಸುತ್ತೇವೆ. ಇನ್ನು ಕೆಲವನ್ನು ಹೊಸತಾಗಿ ಸೃಷ್ಟಿಮಾಡಿಕೊಳ್ಳುತ್ತೇವೆ. ಪದಗಳಿಗೆ ಪ್ರಾಚೀನತೆಯಿದ್ದರೆ —ಮುಖ್ಯವಾಗಿ ಸಂಸ್ಕೃತ ಸಾಹಿತ್ಯದಲ್ಲಿ ಬಳಕೆಯಿದ್ದರೆ—ಅಂಥವುಗಳಿಗೆ ಸಾರ್ವತ್ರಿಕ ಸಮರ್ಥನೆ, ಪುರಸ್ಕಾರ ದೊರೆಯುತ್ತದೆ. ಅವಕ್ಕೊಂದು ಐತಿಹಾಸಿಕ ಮಹತ್ತ್ವವೂ ಇರುತ್ತದೆ. ಈ ಅಂಶವನ್ನು ಈ ಅಧ್ಯಯನದಲ್ಲಿ ಗಮನಕ್ಕೆ ಇಟ್ಟುಕೊಳ್ಳಲಾಗಿದೆ.

1. **ಮ್ಯಾನಸ್ಕ್ರಿಪ್ಟ್; 'ಮ್ಯಾನಸ್ಕ್ರಿಪ್ಟಾಲಜಿ'** ಎಂಬುದಕ್ಕೆ ಕನ್ನಡದಲ್ಲಿ 'ಹಸ್ತಪ್ರತಿ' 'ಹಸ್ತಪ್ರತಿಶಾಸ್ತ್ರ' ಎಂದು ಹೇಳುತ್ತೇವೆ. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ ಪ್ರಕಟಿಸಿರುವ ಸೂಚಿಗಳನ್ನು 'ಹಸ್ತಲಿಖಿತ ಗ್ರಂಥಸೂಚಿ' ಎಂದು ಹೆಸರಿಸಲಾಗಿದೆ. ಅದರ ಪ್ರಕಾರ 'ಹಸ್ತಲಿಖಿತ ಗ್ರಂಥಗಳು' 'ಹಸ್ತಲಿಖಿತ ಗ್ರಂಥ ವಿಜ್ಞಾನ' ಎನ್ನಬೇಕಾಗುತ್ತದೆ. ಹಿಂದಿಯಲ್ಲಿ 'ಪಾಂಡುಲಿಪಿ ವಿಜ್ಞಾನ' ಎಂದು ಬಳಸುತ್ತಾರೆ.[2]

ಮೇಲೆ ಹೇಳಿದ ಶಬ್ದಗಳಲ್ಲಿ 'ಹಸ್ತಲಿಖಿತ ಗ್ರಂಥವಿಜ್ಞಾನ' ಎಂದಾಗ 'ಕೈಯಲ್ಲಿ ಬರೆದ ಗ್ರಂಥವಿಜ್ಞಾನ (ಲೈಬ್ರರಿ ಸೈನ್ಸ್)' ಎಂದೂ ಅರ್ಥಮಾಡಬಹುದಾಗಿದೆ. ಆದ್ದರಿಂದ ಈ ಶಬ್ದ ಉಚಿತವಲ್ಲ. ಆದ್ದರಿಂದಲೇ 'ಹಸ್ತಲಿಖಿತ ಗ್ರಂಥ' ಎನ್ನುವುದು ಸರಿಯಲ್ಲ. ಇದು ಸ್ವಲ್ಪ ದೀರ್ಘವಾಯಿತು ಎನಿಸುತ್ತದೆ. ಅಲ್ಲದೆ ಒಂದು ಪದ ಪ್ರಯೋಗಿಸಿದರೆ ಅದು ಇತರ ಪದಗಳಿಗೆ ಜನಕವಾಗಿರುವಂತೆಯೂ ಇರಬೇಕು. 'ಪಾಂಡುಲಿಪಿ' ಒತ್ತಕ್ಷರವಿಲ್ಲದೆ ಶ್ರುತಿಸುಖವಾದ ಉಕ್ತಿಯಾಗಬಹುದು. ಇದರೊಡನೆ 'ಹಸ್ತಪ್ರತಿ' ಶಬ್ದವನ್ನು ಹೋಲಿಸಿ ಅವೆರಡರ ಔಚಿತ್ಯ ಪರಿಶೀಲಿಸಲು ಯೋಗ್ಯ ವಾದುದು.

ಈ ಸಂದರ್ಭಕ್ಕೆ ಅನುಗುಣವಾದ ಯಾವುದಾದರೂ ಶಬ್ದ ಪ್ರಾಚೀನ ಸಾಹಿತ್ಯ ದಲ್ಲಿ—ಸಂಸ್ಕೃತದಲ್ಲಿ—ದೊರೆಯುತ್ತದೆಯೇ ಎಂದು ಪರಿಶೀಲಿಸುವುದು ವ್ಯರ್ಥವಷ್ಟೆ. ಏಕೆಂದರೆ, ಮುದ್ರಣಕಲೆ—ಅದು ಯಾವ ತೆರನಾದರೂ ಸರಿ—ಬಳಕೆಗೆ ಬರುವ ವರೆಗೆ ಮುದ್ರಿತ ಪ್ರತಿಗೂ ಅದಕ್ಕೆ ಆಧಾರವಾದ ಕೈಬರೆಹದ ಪ್ರತಿಗೂ ಪೃಥಕ್ಕರಿಸು ವಂತೆ ಯಾವ ಮಾತೂ ಅಸ್ತಿತ್ವಕ್ಕೆ ಬಂದಿರಲು ಸಾಧ್ಯವಿಲ್ಲ. ಆ ಕಾಲದಲ್ಲಿ ಅಂಥ ಆವಶ್ಯಕತೆಯೇ ಇರಲಿಲ್ಲ. 'ಮುದ್ರಿತ ಪ್ರತಿಗೆ' ಸಮಾನವಾದ ಪ್ರತಿಯೂ

---

2 ಡಾ॥ ಸತ್ಯೇಂದ್ರ; 'ಪಾಂಡುಲಿಪಿ ವಿಜ್ಞಾನ', ರಾಜಸ್ಥಾನ ಹಿಂದೀ ಗ್ರಂಥ ಅಕಾದೆಮಿ, ಜೈಪುರ 1978; ಡಾ॥ ರಾಮಗೋಪಾಲ ಶರ್ಮ (ಸಂ) : 'ಪಾಂಡುಲಿಪಿ ಸಂಪಾದನ ಕಲಾ', ಪ್ರಭಾತ ಪ್ರಕಾಶನ, ದೆಹಲಿ 1979.

ತತ್ಪೂರ್ವದ ಪ್ರತಿಯೂ ಕೈಯಿಂದ ಬರೆದವುಗಳೇ ಆಗಿದ್ದವು. ಏನಿದ್ದರೂ 'ಪರಿಷ್ಕೃತವಾದುದರ ಪ್ರತಿ' 'ಪರಿಷ್ಕೃತವಾಗಬೇಕಾದ ಪ್ರತಿ' ಎಂದು ಬೇರ್ಪಡಿಸಬಹುದು. ಎಂದರೆ—'ಶುದ್ಧಪ್ರತಿ' (ಫೇರ್ ಕಾಪಿ) ಮತ್ತು 'ಕರಡು ಪ್ರತಿ' (ಡ್ರಾಫ್ಟ್) ಎಂಬಂಥ ಶಬ್ದಗಳಿದ್ದಿರಬಹುದಷ್ಟೆ.

ಕನ್ನಡದಲ್ಲಿ 'ಹಸ್ತಪ್ರತಿ' ಶಬ್ದ ಸಾಕಷ್ಟು ಪ್ರಯೋಗ ಹೊಂದಿದೆ. 'ಕಾಪಿ' ಅರ್ಥದಲ್ಲಿರುವ 'ಪ್ರತಿ', 'ಹಸ್ತ'ದೊಂದಿಗೆ ಸಮಾಸವಾಗಿ ಅರ್ಥವತ್ತಾಗಿದೆ. ಆದರೆ 'ಹಸ್ತಪ್ರತಿ' ಸಂಸ್ಕೃತ ಭಾಷೆಯಲ್ಲಿ ಸಾಧುವಾಗಲಾರದು. 'ಲೇಶ' 'ತುಣುಕು' ಎಂಬ ಅರ್ಥದಲ್ಲಿ 'ಪ್ರತಿ' (ಅವ್ಯಯ) ಸಮಾಸದಲ್ಲಿ ಎರಡನೇ ಅವಯವವಾಗಿ ಬಂದು ಅವ್ಯಯೀಭಾವ ಸಮಾಸವಾಗುವ ಉದಾಹರಣೆಗಳಿವೆ.[3] 'ಪ್ರತಿ' ಪೂರ್ವಾವಯವವಾಗಿಯೂ ಬರುತ್ತದೆ. ಇದಕ್ಕೆ 'ಸದೃಶ' 'ಹೋಲುವ' ಎಂಬ ಅರ್ಥಗಳಿವೆ. ಇದರಿಂದ ಪ್ರತಿರೂಪ, ಪ್ರತಿಬಿಂಬ, ಪ್ರತಿಲಿಪಿ (ಟ್ರಾನ್ಸ್‌ಕ್ರಿಪ್ಟ್' 'ಹಸ್ತಲಿಖಿತ'), ಪ್ರತಿಲೇಖ ('ಪ್ರತ್ಯುತ್ತರ') ಮುಂತಾದ ಶಬ್ದಗಳು ಹುಟ್ಟುತ್ತವೆ.

'ಪಾಂಡುಲಿಪಿ' ಅಥವಾ 'ಪಾಂಡುಲೇಖ' ಸ್ಮೃತಿಗಳಲ್ಲಿ ಕಂಡುಬರುತ್ತದೆ. ಆದರಿಂದ ಆಪಾತತಃ ಅದಕ್ಕೆ ಸಾಧುತ್ವವಿದೆ. ಆದರೆ ಸ್ಮೃತಿಯಲ್ಲಿ ಅದಕ್ಕೆ ಕರಡು (ಡ್ರಾಫ್ಟ್) ಎಂಬ ಅರ್ಥವಿದೆ ಎಂಬುದು ಗಮನಾರ್ಹ. (ಕಪ್ಪು) ಹಲಗೆಯ ಮೇಲೆ ಬಿಳಿ ಬಳಪದಿಂದ ಬರೆದ 'ಬಿಳಿಯ' ಬರಹವೇ 'ಪಾಂಡು-ಲಿಪಿ'. ಮೊದಲು ಹಲಗೆಯ ಮೇಲೆ ಬರೆದು ಅನಂತರ ಪುಸ್ತಕಗಳಲ್ಲಿ ಬರೆಯುವಂತೆ ಸ್ಮೃತಿ ನಿರ್ದೇಶಿಸುತ್ತದೆ.[4] ಕುಮಾರವ್ಯಾಸನೂ ಅಂಥ ಬರೆಹಕ್ಕೆ ಸೂಚನೆ ಕೊಡುತ್ತಾನೆ: ಅದಕ್ಕೆ ಹೆಸರು ಏನೆಂದು ತಿಳಿಸುವುದಿಲ್ಲ. (ಹೋಲಿಸಿ: 'ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ...')

ಶ್ರೀಹರ್ಷ ತನ್ನ 'ನೈಷಧೀಯ ಚರಿತ'ದಲ್ಲಿ ಹಸ್ತಲೇಖ ಶಬ್ದವನ್ನು ಪ್ರಯೋಗಿಸುತ್ತಾನೆ: "ಎಣೆಯಿಲ್ಲದ ಚೆಲುವೆಯಾದ ದಮಯಂತಿಯನ್ನು ನಿರ್ಮಿಸಲು ಬ್ರಹ್ಮನಿಗೆ ಆ ಮೊದಲಿನ ಹೆಣ್ಣುಸೃಷ್ಟಿ 'ಹಸ್ತಲೇಖ'ವಷ್ಟೇ ಆಗಿತ್ತು: ಮುಂದಿನ ಸ್ತ್ರೀಸೃಷ್ಟಿ ಹಿಂದಿನ ಸೃಷ್ಟಿಯನ್ನು ಮೀರಿಸಿದ ಅವಳಿಗೆ ಯಶಸ್ಸು ಕೊಡುವುದಕ್ಕಾಗಿ ಮಾತ್ರವಾಯಿತು." ಇದರ ಮೇಲೆ ವ್ಯಾಖ್ಯಾನಿಸುತ್ತ ಮಲ್ಲಿನಾಥನು 'ಹಸ್ತಲೇಖ'ವನ್ನು ಹೀಗೆ ವಿವರಿಸುತ್ತಾನೆ: "ಲೇಖನಾಭ್ಯಾಸಿಗಳು ಹಸ್ತಕೌಶಲ

3 'ಶಾಕಪ್ರತಿ' ಅಂಥದೊಂದು.

4 'ಪೂರ್ವಪಕ್ಷಂ ಸ್ವಭಾವೋಕ್ತಂ ಪ್ರಾಡ್ವಿವಾಕೋಽಭಿಲೇಖಯೇತ್ ।
ಪಾಂಡುಲೇಖೇನ ಫಲಕೇ ತತಃ ಪತ್ರೇ ವಿಶೋಧಯೇತ್ ॥ (ಕಾತ್ಯಾಯನಸ್ಮೃತಿ)

ವೃದ್ಧಿಗಾಗಿ ಏನು ಬರೆಯುತ್ತಾರೆಯೋ ಅದು ಹಸ್ತಲೇಖ".[5] ಎಂದರೆ "ಕಾಪಿ" ಬರೆಯುವುದು ಎಂದಂತಾಯಿತು. ಅದನ್ನೇ ಕೊಂಚ ವಿಸ್ತರಿಸಿ ಡ್ರಾಫ್ಟ್ ಎನ್ನಬಹುದು.

ಪಾಂಡುಲಿಪಿ/ಪಾಂಡುಲೇಖ/ಹಸ್ತಲೇಖ ಶಬ್ದಗಳನ್ನು ಬಳಸುವುದಕ್ಕೆ ಆ ಶಬ್ದಗಳ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬೇಕಾಗಿರುವುದು ಸ್ಪಷ್ಟವಾಯಿತು. ಆದರೆ ಡ್ರಾಫ್ಟ್ ಎಂಬುದಕ್ಕೂ ಒಂದು ಶಬ್ದ ಬೇಕಷ್ಟೆ. ಹೆಚ್ಚುಕಡಮೆ ಈ ಅರ್ಥದಲ್ಲಿಯೇ 'ಹಸ್ತಪ್ರತಿ' ಶಬ್ದವನ್ನು ಈಗಲೂ ಬಳಸಲಾಗಿದೆ ; ಕೆಲವೆಡೆ ಭ್ರಾಂತಿಗೂ ಎಡೆಯಾಗುತ್ತದೆ. ಉದಾಹರಣೆಗೆ : "ಲೇಖನಗಳ ಹಸ್ತಪ್ರತಿಯನ್ನು ಅಚ್ಚಿನ ಮನೆಗೆ..." "...ಪ್ರಾಚೀನ ಕಾಗದ ಪತ್ರ, ಅಚ್ಚಿಗಾಗಿ ಸಿದ್ಧಪಡಿಸುವ ಹಸ್ತಪ್ರತಿ (press copy) ಇತ್ಯಾದಿಗಳನ್ನು ಹೊರತುಪಡಿಸಿಕೊಂಡು ಪ್ರಾಚೀನ (ಮುದ್ರಣ ಯಂತ್ರಾಗಮನದ ಪೂರ್ವಕಾಲೀನ) ಹಸ್ತಪ್ರತಿಗಳಿಗೆ ಮಾತ್ರ..."[6] ಡ್ರಾಫ್ಟ್ ಎಂಬ ಅರ್ಥದಲ್ಲಿಯೇ ಬಳಕೆಯಾದ ಪದವನ್ನು ಅದೇ ಅರ್ಥದಲ್ಲಿ ನಾವೂ ಬಳಸುವುದು ಸಾರ್ವತ್ರಿಕವಾಗಿ ಸಾಧುವಾಗಿರುತ್ತದೆ. ಆದಕಾರಣ ಈ ಶಬ್ದಗಳನ್ನು ಮ್ಯಾನಸ್ಕ್ರಿಪ್ಟ್‌ಗೆ ಬದಲಾಗಿ ಪ್ರಯೋಗಿಸುವುದು ಯುಕ್ತವಲ್ಲ.

'ಹಸ್ತಪ್ರತಿ' ರಾಷ್ಟ್ರೀಯವಾಗಿ ಬಳಕೆಗೆ ಬರಲು ಕೊರತೆಯಿದೆ ಎಂದು ಮೇಲೆ ವಿಮರ್ಶಿಸಿದೆ. ಆದಕಾರಣ ಸಂಸ್ಕೃತಭಾಷೆಯಲ್ಲಿ ನಮ್ಮ ಉದ್ದಿಷ್ಟ ಅರ್ಥವನ್ನೇ ಹೊಂದಿರುವ 'ಪ್ರತಿಲಿಪಿ' ಶಬ್ದವೇ ಸೂಕ್ತವಾದುದೆಂದು ನಿರ್ಣಯಿಸಬಹುದು. 'ಪ್ರತಿಲಿಪಿಶಾಸ್ತ್ರ/ವಿಜ್ಞಾನ', 'ಓಲೆ/ತಾಳ–ಪ್ರತಿಲಿಪಿ', 'ಕಾಕಲ/ಕಾಗದ–ಪ್ರತಿಲಿಪಿ', 'ಸ್ವಹಸ್ತ–ಪ್ರತಿಲಿಪಿ', 'ಪ್ರತಿಲಿಪಿಭಂಡಾರ', ಪ್ರತಿಲಿಪಿಸೂಚಿ ಇತ್ಯಾದಿ ಪದಗಳನ್ನು ರೂಪಿಸಬಹುದು. '...ಅದರ ಪ್ರಮಾಣಶುದ್ಧ ಪ್ರತಿಲಿಪಿ ದೊರೆಯುವಂತಿದ್ದರೆ..." ಎಂಬುದಾಗಿ ಡಾ॥ ಕೆ. ಕೃಷ್ಣಮೂರ್ತಿಗಳು ಪ್ರಯೋಗಿಸಿದ್ದಾರೆ.[7]

2. **ಟೆಕ್‌ಶ್ಚುಯಲ್ ಕ್ರಿಟಿಸಿಸಂ :** ಇದಕ್ಕೆ 'ಪಾಠವಿಮರ್ಶೆ'ಗಿಂತಲೂ

---

5 'ಪುರಾಕೃತಿ ಸ್ತ್ರೈಣಮಿಮಾಂ ವಿಧಾತುಂ
ಅಭೂದ್ ವಿಧಾತುಃ ಖಲು ಹಸ್ತಲೇಖಃ ।
ಯೋಽಯಂ ಭವೇದ್ ಭಾವಿ ಪುರಂಧ್ರಿ–ಸೃಷ್ಟಿಃ
ಸಾಸ್ಮೈ ಯಶಸ್ತಜ್ಜಯಜಂ ಪ್ರದಾತುಂ ॥ ನೈಷಧೀಯ ಚರಿತ 7–15
ಮಲ್ಲಿನಾಥ : 'ಲೇಖನಾಭ್ಯಾಸಿಭಿಃ ಹಸ್ತ ಕೌಶಲಾರ್ಥಮೇವ ಯಲ್ಲಿಖ್ಯತೇ ಸ ಹಸ್ತಲೇಖಃ ।'

6 'ಹಸ್ತಪ್ರತಿಶಾಸ್ತ್ರ' ಪು. 4 ಮತ್ತು 23

7 ಅಲ್ಲಿಯೇ ; ಪು. 38

‘ಪಾಠಮೀಮಾಂಸೆ’ ಅತ್ಯಂತ ಸಮರ್ಪಕವಾದುದು. ಇದಕ್ಕೂ ಗ್ರಂಥಸಂಪಾದನೆಗೂ ಇಂಗ್ಲಿಷಿನಲ್ಲಿರುವಂತೆ ಅರ್ಥದಲ್ಲಿ ಅಂತರವನ್ನು ಸ್ಪಷ್ಟೀಕರಿಸಬೇಕು.

3. **ಎಡಿಟಿಂಗ್, ಎಡಿಟರ್, ಎಡಿಶನ್ ; ಕ್ರಿಟಿಕಲ್ ಎಡಿಟಿಂಗ್ ಇತ್ಯಾದಿ.**

ಸಂಪಾದನೆ, ಸಂಪಾದಕ ಶಬ್ದಗಳು ದೇಶಾದ್ಯಂತ ಪ್ರಚಾರಕ್ಕೆ ಬಂದಿವೆ. ಅವನ್ನು ಬದಲಿಸುವುದು ಬೇಕಿಲ್ಲ. ಆದರೆ ಪತ್ರಿಕಾದಿಗಳ ಸಂಪಾದನೆಗೂ ಗ್ರಂಥಗಳ ಸಂಪಾದನೆಗೂ ವ್ಯತ್ಯಾಸವನ್ನು ತೋರಲು ‘ಗ್ರಂಥಸಂಪಾದನೆ’, ಎನ್ನಬೇಕು.[8] ಗ್ರಂಥಸಂಪಾದನೆಯೆಲ್ಲವೂ ಕ್ರಿಟಿಕಲ್ ಎಡಿಟಿಂಗ್ ಆಗಿರುವುದಿಲ್ಲವಾಗಿ ‘ಸವಿಮರ್ಶ ಗ್ರಂಥಸಂಪಾದನೆ’ ಎಂಬ ಉದ್ದವಾದ ಶಬ್ದ ಬಳಸಬೇಕಾಗುತ್ತದೆ. ಅದರಲ್ಲಿ ಅರ್ಥ ಪುಷ್ಟಿಯೂ ಇಲ್ಲ. ಅಲ್ಲದೆ ಅದರಿಂದ ಬೇರೆ ರೂಪಗಳನ್ನು ಸಾಧಿಸಲಾಗುವುದಿಲ್ಲ, ಎಂದರೆ ‘ಗ್ರಂಥಸಂಪಾದಿತ’ ಎಂದು ಹೇಳಲು ಸಾಧ್ಯವೇ ? ಇದಕ್ಕೆ ಬದಲಾಗಿ ಪರಿಷ್ಕರಣ (ಕ್ರಿ. ಎಡಿಶನ್), ಪರಿಷ್ಕಾರ (ಕ್ರಿ. ಎಡಿಟಿಂಗ್) ಪರಿಷ್ಕೃತ/ಪರಿಷ್ಕಾರಕ ಮೊದಲಾದ ಪದಗಳು ಅತ್ಯಂತ ಸಮಂಜಸವಾಗಿವೆ. ಸಮರ್ಪಕ ಪಾಠವನ್ನು ನಿರ್ಧರಿಸುವುದರ ಜೊತೆಗೆ ಅಧ್ಯಯನೋಪಯೋಗಿಯಾದ ಇತರ ಸೌಲಭ್ಯಗಳನ್ನೂ (ಪಾಠಾಂತರ ಪಟ್ಟಿ, ಪೀಠಿಕೆ, ಸೂಚಿಗಳು ಇತ್ಯಾದಿ) ಅಳವಡಿಸುವ ಸಮಗ್ರಕ್ರಿಯೆಯ ಅರ್ಥವನ್ನು ಈ ಶಬ್ದ ಒದಗಿಸುತ್ತದೆ ಎಂದು ಭಾವಿಸುತ್ತೇನೆ.

4. **ಎಮೆಂಡೇಶನ್ :** ‘ಪರಿಷ್ಕರಣ’ವನ್ನು ಬೇರೆ ಅರ್ಥದಲ್ಲಿ ಬಳಸಲು ಮೀಸಲಿಟ್ಟರೆ. ಎಮೆಂಡೇಶನ್‌ಗೆ ಈಗ ಪ್ರಯೋಗದಲ್ಲಿ ಕಂಡುಬರುವಂತೆ[9] ‘ಪಾಠಪರಿಷ್ಕರಣ’ ಎನ್ನಲಾಗುವುದಿಲ್ಲ. ‘ಶೋಧನೆ’, ‘ಪಾಠಶೋಧನೆ’, ‘ಪಾಠಶುದ್ಧೀಕರಣ’ ಇತ್ಯಾದಿಗಳಲ್ಲಿ ಏನೋ ಕೊರತೆ ಕಾಣುತ್ತದೆ. ಅದಕ್ಕಾಗಿ ‘ಸಂಸ್ಕರಣ’, ‘ಪಾಠಸಂಸ್ಕರಣ’ (ಟೆಕ್ಸ್ಚುಯಲ್ ಎಮೆಂಡೇಶನ್), ‘ಊಹಾತ್ಮಕ ಸಂಸ್ಕರಣ’ (ಕಂಜೆಕ್ಚುರಲ್ ಎಮೆಂಡೇಶನ್) ಮೊದಲಾದ ಶಬ್ದಗಳನ್ನು ಬಳಕೆಗೆ ತರುವುದು ಯೋಗ್ಯವೆನಿಸುತ್ತದೆ. ‘ತಿದ್ದುಪಡಿ’ ಒಂದು ಉತ್ತಮ ಶಬ್ದ ಅದು ಸಂಸ್ಕೃತ ಮತ್ತಿತರ ಭಾಷೆಗಳಿಗೆ ಎರವಲು ಆಗುವಂತೆ ಮಾಡಬಹುದಾದರೆ ಬಹು ಯೋಗ್ಯ.

5. **ಎಗ್ಸೆಂಪ್ಲರ್ :** ಯಾವ ಪ್ರತಿ ಮತ್ತೊಂದು ಪ್ರತಿಗೆ ಮೂಲವಾಗಿರುತ್ತದೆಯೋ ಅದಕ್ಕೆ ‘ಮೂಲಪ್ರತಿ’ ‘ಮಾತೃಕೆ’ ‘ಆದರ್ಶ’ ಶಬ್ದಗಳನ್ನು ಬಳಸುವುದು ವಾಡಿಕೆ. ‘ಮೂಲಪ್ರತಿ’ ಶಬ್ದದ ಸಾಧುತ್ವ ಪ್ರಶ್ನಾರ್ಹ. ‘ಮಾತೃಕಾ’ ಅಕ್ಷರವೆಂಬ

---

8 ನೋಡಿ : ಡಾ॥ ಕಲಬುರ್ಗಿ, ಅಕ್ಷಿಯೋ ಪು. 25

9 ಉದಾ : ಡಾ॥ ಚಿದಾನಂದಮೂರ್ತಿ : ‘ಪಾಠಪರಿಷ್ಕರಣ ಮತ್ತು ಉನ್ನತ ವಿಮರ್ಶೆ’; ‘ಹಸ್ತಪ್ರತಿಶಾಸ್ತ್ರ’ ಪು. 170 ೧

ಅರ್ಥದಲ್ಲಿ ಬಳಕೆಯಲ್ಲಿದೆ; ಗ್ರಂಥಕ್ಕೆ ಅನ್ವಿತವಾಗಿಲ್ಲ. 'ಆದರ್ಶ' ಪುಸ್ತಕ ಎಂಬ ಅರ್ಥದಲ್ಲಿಯೂ ಪ್ರಯೋಗವಾಗಿದೆಯಾದ್ದರಿಂದ ಇದು ಯೋಗ್ಯವಾದುದು. 'ಪ್ರಧಾನ ಆದರ್ಶ' 'ಉಪಪ್ರಧಾನ ಆದರ್ಶ' ಇತ್ಯಾದಿ ಶಬ್ದಗಳನ್ನು ರೂಪಿಸಲೂ ಬಹುದಾಗಿದೆ.

6. **ಸ್ಕ್ರೈಬ್** : 'ಪ್ರತಿಕೃತಿ' 'ಪ್ರತಿಕರಣ' ಪದಗಳಿದ್ದರೂ 'ಪ್ರತಿಕಾರ' ಶಬ್ದ ಸಂಸ್ಕೃತದಲ್ಲಿ ಕಾಣಸಿಗದು: 'ಪ್ರತೀಕಾರ'ವಿದೆ. ಇವೆಲ್ಲಕ್ಕೂ 'ವಿರುದ್ಧವಾಗಿ ಮಾಡುವುದು' ಎಂಬ ಅರ್ಥವಿದೆ. ಬರೆಹಗಾರ ಎಂಬ ಅರ್ಥದಲ್ಲಿ 'ಲೇಖಕ' 'ಲಿಪಿಕಾರ' 'ಲಿಪಿಕರ' ಶಬ್ದಗಳಿವೆ. 'ಲಿಪಿಕರ' ಅಶೋಕನ ಶಾಸನಗಳಲ್ಲಿಯೂ ಕಂಡುಬರುತ್ತದೆ. ಗ್ರಂಥವೊಂದನ್ನು ರಚನೆ ಮಾಡುವವನಿಗೂ ಅದನ್ನು ಕೇವಲ 'ಪ್ರತಿ' ಮಾಡುವವನಿಗೂ ವ್ಯತ್ಯಾಸ ತೋರಿಸುವಾಗ ಅವರನ್ನು ಕ್ರಮವಾಗಿ 'ಲೇಖಕ' 'ಲಿಪಿಕಾರ' ಎನ್ನಬೇಕು. ಹೀಗಾಗಿ 'ಲಿಪಿಕಾರ' ಉತ್ತಮವಾದ ಶಬ್ದ. ಇದು ಕನ್ನಡದಲ್ಲಿ ಸಾಕಷ್ಟು ಸ್ಥಿರವಾಗಿದ್ದರೂ ಮತ್ತೆ ಮತ್ತೆ 'ಪ್ರತಿಕಾರ' ಶಬ್ದವೂ ಪ್ರಯೋಗವಾಗಿ[10] ಭ್ರಾಂತಿಗೆ ಕಾರಣವಾಗಬಹುದು. ಆದಕಾರಣ ಇಲ್ಲಿ ಪ್ರಸ್ತಾವಿಸಲಾಗಿದೆ.

7. **ರೈಟಿಂಗ್ ಮೆಟೀರಿಯಲ್ಸ್**: ಇಂಗ್ಲಿಷಿನ ಈ ಉಕ್ತಿ ಸಂಕುಚಿತ ಅರ್ಥದಲ್ಲಿ ಬರೆಹಕ್ಕೆ ಆಧಾರವಾದ ಕಾಗದ ಇತ್ಯಾದಿಗಳಿಗೆ ಮಾತ್ರ ಅನ್ವಯವಾದರೆ ವಿಸ್ತಾರಾರ್ಥದಲ್ಲಿ ಸಾಧನಗಳನ್ನೂ (ಇನ್‌ಸ್ಟ್ರುಮೆಂಟ್ಸ್) ಒಳಗೊಳ್ಳುತ್ತದೆ. 'ಲೇಖನಸಾಮಗ್ರಿ' ಈ ವಿಸ್ತಾರಾರ್ಥವನ್ನು ಹೊಂದಿದೆ. ಲೇಖನಿ ಇತ್ಯಾದಿಗಳಿಗೆ 'ಲೇಖನ ಸಾಧನ' ಯೋಗ್ಯವಾಗಿದೆ. ಇವೆರಡೂ ಸುಲಭವೂ ಸಾರ್ವತ್ರಿಕ ಒಪ್ಪಿಗೆ ಪಡೆಯುವಂತಹವೂ ಆಗಿವೆ.

ಬರೆಹಕ್ಕೆ ಆಧಾರವಾದ ಕಾಗದ ಇತ್ಯಾದಿಗಳಿಗೆ ಹಿಂದೆ ಪ್ರಯುಕ್ತವಾದ ಸರಿಯಾದ ಶಬ್ದ ಕಂಡುಬರುವುದಿಲ್ಲ: ಈ ಅರ್ಥದಲ್ಲಿ 'ಪತ್ರ' ಶಬ್ದ ಪ್ರಯೋಗವಿದೆಯಾದರೂ ಅದು ಇಂದು ಸಮರ್ಪಕವಾಗಲಾರದು. ಅದಕ್ಕಾಗಿ 'ಲೇಖ್ಯವಸ್ತು' ಅಥವಾ 'ಲೇಖಾಧಾರ' ಶಬ್ದಗಳನ್ನು ತಂದುಕೊಳ್ಳಬೇಕು.

ಡಾ॥ ಸತ್ಯೇಂದ್ರ ಎಂಬವರು ತಮ್ಮ 'ಪಾಂಡುಲಿಪಿ ವಿಜ್ಞಾನ' ಪುಸ್ತಕದಲ್ಲಿ 'ಲಿಪ್ಯಾಸನ' ಶಬ್ದವನ್ನು ಶಿಫಾರಸ್ ಮಾಡುತ್ತಾರೆ.[11] 'ಲಿಪ್ಯಾಸನ' ಶಬ್ದ ಜೈನ ಗ್ರಂಥವಾದ 'ರಾಯಪಸೇಣಿಯ ಸುತ್ತ'ದಲ್ಲಿ ಪ್ರಯುಕ್ತವಾಗಿದೆ. ಲಿಪಿಗೆ ಆಸನ, ಆಧೇಯವೆನಿಸುವ ಲಿಪಿಗೆ ಆಧಾರವಾದುದು ಎಂಬ ಅರ್ಥ ಇದರಲ್ಲಿ ಸ್ಪಷ್ಟವಾಗಿ

---

10 ಅಲ್ಲಿಯೇ ಪು. 79, 176, 177

11 ಡಾ॥ ಸತ್ಯೇಂದ್ರ; ಪೂರ್ವೋಕ್ತ. ಪು. 20

ಗೋಚರವಾಗಿದ್ದು 'ಲೇಖ್ಯವಸ್ತು'ವಿಗೆ ಪ್ರಾಚೀನ ಶಬ್ದ ಎಂದು ಸಂತೋಷಿಸ ಬಹುದು. ಆದರೆ ಆ 'ಸುತ್ತದಲ್ಲಿ' ಆ ಅರ್ಥವಿದೆಯೋ ಎಂಬುದು ವಿಚಾರಾರ್ಹ. ಸಂಬಂಧ ಗ್ರಂಥಭಾಗವು ಹೀಗಿದೆ :

> 'ಆ ಪುಸ್ತಕರತ್ನವು ರತ್ನಮಯವಾದ ಪತ್ರಗಳು, ರಿಷ್ಟಮಯ ವಾದ 'ಕಂಬಿಗಳು' ತಪನೀಯಮಯವಾದ ದಾರ, ನಾನಾ ಮಣಿಮಯ ವಾದ ಗಂಟು, ವೈಡೂರ್ಯಮಯವಾದ ಲಿಪ್ಯಾಸನ, ರಿಷ್ಟಮಯವಾದ ಛದನ, ತಪನೀಯಮಯವಾದ ಶೃಂಖಲೆ, ರಿಷ್ಟಮಯವಾದ ಮಸಿ, ವಜ್ರಮಯವಾದ ಲೇಖನಿ..."[12]

ಈ ಭಾಗದಲ್ಲಿ 'ಪತ್ರಕಾನಿ' ಎಂದು ಮೊದಲು ಹೇಳಿದೆ. ಮತ್ತೆ 'ಲಿಪ್ಯಾಸನ' ಎಂದು ಇದ್ದು ಇದಕ್ಕೆ 'ಪತ್ರ' ಎಂಬ ಅರ್ಥವೇ ಇದೆ ಎಂದು ಹೇಳುವುದು ಸೂಕ್ತ ವಾಗದು. 'ಪತ್ರಕಾನಿ' ಬಹುವಚನದಲ್ಲಿದೆ, ಲಿಪ್ಯಾಸನ ಹಾಗಿಲ್ಲ. ಆದ್ದರಿಂದಲೂ ಡಾ॥ ಸತ್ಯೇಂದ್ರರ ನಿಲವು ಸರಿಯಲ್ಲವೆಂದು ತಿಳಿಯುತ್ತದೆ. ಈ 'ಸುತ್ತ'ದ ಸಂಸ್ಕೃತ ವ್ಯಾಖ್ಯಾನದಲ್ಲಿ 'ಮಸಿಕುಡಿಕೆ' ಎಂದು ಬರೆಯುತ್ತಾರೆ. ಈ ವ್ಯಾಖ್ಯಾನವೂ ಈಚಿನದಾದ್ದರಿಂದ ಅದರ ಅಭಿಪ್ರಾಯವೂ ಪ್ರಶ್ನಾರ್ಹವೇ. 'ಲಿಪ್ಯಾಸನ' ಪುಸ್ತಕ ಗಳನ್ನಿಡುವ ಪೀಠ, 'ವ್ಯಾಸಪೀಠ' ಇರಬಹುದೇ ?

ಲೇಖನಸಾಮಗ್ರಿ, ಲೇಖ್ಯವಸ್ತು, ಲೇಖನಸಾಧನ—ಈ ಶಬ್ದಗಳು ಕನ್ನಡದಲ್ಲಿ ಸ್ಥಿರವಾಗಿವೆಯಾದರೂ 'ಲಿಪ್ಯಾಸನ'ವನ್ನು ಡಾ॥ ಸತ್ಯೇಂದ್ರ ಎಂಬವರು ಮುಂದಿ ಟ್ಟಿರುವುದರಿಂದ ಇಲ್ಲಿ ಚರ್ಚಿಸಲಾಯಿತು. ಇನ್ನೊಂದು ಅಂಶವನ್ನು ಇಲ್ಲಿ ಗಮನಿಸ ಬಹುದು. ಡಾ॥ ಕಲಬುರ್ಗಿಯವರು ಲೇಖನಸಾಮಗ್ರಿಯಲ್ಲಿ 'ಆಧಾರ, ಆಧೇಯ, ಬಣ್ಣ' ಎಂದು ಮೂರು ವಿಧವನ್ನು ಹೇಳುತ್ತಾರೆ.[13] ಆಧಾರ, ಬಣ್ಣಗಳು ಸಾಧು ವಾಗಿವೆ, ಆಧೇಯವು ಬಣ್ಣವಾಗಬಹುದೇ ಹೊರತು ಅವರು ಹೇಳುವಂತೆ ಲೆಕ್ಕಣಿಕೆ ಮೊದಲಾದವು ಆಗುವುದಿಲ್ಲ. ಪುಸ್ತಕ ಓದುವಾಗ ಸಾಲಿನ ಮೇಲೆ ಬೆರಳಿಟ್ಟರೆ ಅದನ್ನೂ ಆಧೇಯ ಎನ್ನಬೇಕಾದೀತು : ಗೆರೆ ಹಾಕಲು ಉಪಯೋಗಿಸುವ ಪಟ್ಟಿಯೂ ಆಧೇಯವಾದೀತು.

---

12 'ರಯಣಾಮಯಾಯಿ ಪತ್ತಗಾಯಿಂ (ಪತ್ರಕಾನಿ) ರಿಟ್ಠಾಮಯಾಯಿ ಕಂಬಿ-ಯಾಓ, ತವಣಿಜ್ಜಮಯೀ ದೋರೀ, ನಾನಾಮಣಿಮಯೀ ಗಂಠೀ (ಗ್ರಂಥಿ), ವೇರುಲಿಯಾ-ಮಯೀ ಲಿಪ್ಪಾಸಣೇ (ಲಿಪ್ಯಾಸನ) ರಿಟ್ಠಾಮಯೀ ಛದಣೇ, ತವಣಿಜ್ಜಮಯೀ ಸಂಕಲಾ, ರಿಟ್ಠಾಮಯೀ ಮಸೀ, ವಇರಾಮಯೀ ಲೇಹಣೀ, ರಿಟ್ಠಾಮಯಾಯಿಂ, ಅಕ್ಖರಾಯಿಂ....' ರಾಯಪಸೇಣಿಯ ಸುತ್ತ; ರಾಜಕೋಟ್ 1965, ಪು. 550 ಇ.

13 ಡಾ॥ ಕಲಬುರ್ಗಿ, ಪೂರ್ವೋಕ್ತ ಪು. 26

8. **ಮಾರ್ಜಿನೇಲಿಯ** : ಪುಸ್ತಕಗಳ ಅಂಚುಗಳಲ್ಲಿ ನಾವಿಂದು ಟಿಪ್ಪಣಿ ಇತ್ಯಾದಿ ಬರೆದುಕೊಳ್ಳುವಂತೆ ಹಿಂದೆಯೂ ಬರೆದುಕೊಳ್ಳುತ್ತಿದ್ದರು. ಗ್ರಂಥ ಅಥವಾ ಗ್ರಂಥಭಾಗದ ಶೀರ್ಷಿಕೆ, ಅರ್ಥವಿವರಣೆ, ಉದ್ಧರಣ, ಪಾಠಾಂತರ ಇತ್ಯಾದಿ ಗಳು ಕಂಡುಬರುತ್ತವೆ. ಇವುಗಳಿಗೆ ಮಾರ್ಜಿನೇಲಿಯ ಎನ್ನಲಾಗುತ್ತದಷ್ಟೆ. ಕನ್ನಡದ 'ಅಂಚಿನ ಬರೆಹ/ಬರೆವಣಿಗೆ' ಚೆನ್ನಾಗಿದೆ. ಆದರೆ ಸಾರ್ವತ್ರಿಕತೆ ದೃಷ್ಟಿ ಯಿಂದ 'ಪ್ರಾಂತಲೇಖನ' ಎನ್ನುವುದು ಸೂಕ್ತವಾಗಿರುತ್ತದೆ.

ತುಳುವಿನ ಕೆಲವು ವಿಶಿಷ್ಟ ಧ್ವನಿಗಳು

—ಡಾ॥ ಶ್ರೀಕೃಷ್ಣಭಟ್ ಅರ್ತಿಕಜೆ

ತುಳು ಭಾಷೆಯಲ್ಲಿ ಕೃತಿರಚನೆ ಮಾಡುವಾಗ ಹಿಂದಿನ ಕಾಲದಲ್ಲಿ (ಆಧುನಿಕ ಮಲಯಾಳ ಲಿಪಿಯನ್ನು ಹೋಲುವ) ತುಳು ಲಿಪಿಯನ್ನು ಉಪಯೋಗಿಸುತ್ತಿದ್ದ ರೆಂಬುದು ಉಪಲಬ್ಧವಾದ ಅನಂತಪುರ ಶಾಸನ, ತುಳು 'ಶ್ರೀ ಭಾಗವತೊ' ಕಾವ್ಯ ಮೊದಲಾದವುಗಳಿಂದ ಖಚಿತವಾಗಿ ತಿಳಿದುಬರುತ್ತದೆ. ಆದರೆ, ಕಳೆದ ಶತಮಾನ ದಿಂದೀಚೆಗೆ ತುಳು ಮತ್ತು ತುಳು ಸಂಬಂಧಿ ಬರೆವಣಿಗೆಗಳಿಗೆ ಕನ್ನಡ ಲಿಪಿಯನ್ನು ಉಪಯೋಗಿಸಲಾಗುತ್ತಿದೆ. ಈ ಲಿಪಿಯಲ್ಲಿ ವ್ಯಕ್ತಪಡಿಸಲಾಗದ ಕೆಲವು ಧ್ವನಿಗಳು ತುಳುವಿನಲ್ಲಿರುವುದರಿಂದ ಅವುಗಳನ್ನು ಸೂಚಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಿ ಕೊಳ್ಳಬೇಕಾಗುತ್ತದೆ. ಈ ಹಿಂದೆ ತುಳುವಿನಲ್ಲಿ ಕೆಲಸ ಮಾಡಿದವರು ತಮ್ಮದೇ ಆದ ಕೆಲವು ಸಂಜ್ಞೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಈ ಧ್ವನಿ ಮತ್ತು ಧ್ವನಿ ಸಂಜ್ಞೆಗಳ ಬಗೆಗೆ ವಿದ್ವಾಂಸರು ಈ ಹಿಂದೆಯೇ ಸಾಕಷ್ಟು ವಿಮರ್ಶೆ ನಡೆಸಿರುವ ರಾದರೂ[1] ಪ್ರಕೃತ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ದಲ್ಲಿ ಸಿದ್ಧಗೊಳ್ಳುತ್ತಿರುವ ತುಳುವಿನ ಬೃಹತ್ ನಿಘಂಟು ರಚನೆಯ ಹಿನ್ನೆಲೆಯಲ್ಲಿ ಈ ಧ್ವನಿ ಮತ್ತು ಧ್ವನಿ ಸಂಜ್ಞೆಗಳನ್ನು ಇನ್ನೊಮ್ಮೆ ಪರಿಶೀಲನೆ ಮಾಡುವುದು ಉಚಿತವಾಗಿದೆ.

ತುಳುಭಾಷೆಯಲ್ಲಿ ಎರಡು ವಿಧದ ಉಕಾರ, ಎಕಾರ ಹಾಗೂ ಒಕಾರಗಳಿವೆ. ಇವುಗಳಲ್ಲಿ ಎರಡು ರೀತಿಯ ಒಕಾರಗಳು ಸಂದರ್ಭಾನುಸಾರವಾಗಿ ಉಪಯೋಗಿಸ ಲ್ಪಡುವುವಾದರೂ ಅವು ಅರ್ಥಭೇದವನ್ನುಂಟುಮಾಡುವುದಿಲ್ಲವಾದ್ದರಿಂದ ಅವುಗಳಿಗೆ ಪ್ರತ್ಯೇಕ ಲಿಪಿಸಂಜ್ಞೆಯ ಅಗತ್ಯವಿಲ್ಲ.[2] ಆದರೆ, ಎರಡು ವಿಧದ ಉಕಾರ ಮತ್ತು

---

1 ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ತುಳುವಿನ ಸ್ವರಮಾಲೆ — 'ಮಧುಪರ್ಕ', ಸಂ: ಕೆ. ವೆಂಕಟಕೃಷ್ಣಯ್ಯ, ಕಾಸರಗೋಡು, 1962; ಪು. 115-121.

2 ಈ ಎರಡು ವಿಧದ ಧ್ವನಿಗಳನ್ನು ಉದಾತ್ತ ಮತ್ತು ಅನುದಾತ್ತ ಎಂದು ಪ್ರಸ್ತುತ ಲೇಖನದಲ್ಲಿ ಗುರುತಿಸಲಾಗಿದೆ. (ಎಕಾರಧ್ವನಿಗಳ ವಿವರಣೆಯ ಸಂದರ್ಭದಲ್ಲಿ ಉದಾತ್ತ ಮತ್ತು ಅನುದಾತ್ತ ಧ್ವನಿಗಳನ್ನು ವಿವರಿಸಲಾಗುವುದು). ಅನುದಾತ್ತ ಒಕಾರವು ಪದಾಂತದಲ್ಲಿ ಮಾತ್ರವೇ ಬರುವುದಿದ್ದು ಪದಾದಿ ಮತ್ತು ಪದಮಧ್ಯಗಳಲ್ಲಿ ಬರುವ ಒಕಾರವು ಉದಾತ್ತ ಒಕಾರವೇ ಆಗಿರುವುದು ಸಾಮಾನ್ಯವಾಗಿದೆ. ಉದಾ: ಕಂಡೊ (ಗದ್ದೆ). ಬಂಡೊ (ಬಂಡಿ). ಪರ್ಬೊ (ಹಬ್ಬ) ಇತ್ಯಾದಿ. ಇವುಗಳ ಅಂತ್ಯ ಒಕಾರವನ್ನು ಉದಾತ್ತವಾಗಿ ಉಚ್ಚರಿಸಿದರೂ ಅರ್ಥದಲ್ಲಿ ವ್ಯತ್ಯಾಸವುಂಟಾಗುವುದಿಲ್ಲ. ತುಳುವಿನಲ್ಲಿ ಸಾಮಾನ್ಯವಾಗಿರುವ, ಒಕಾರಾಂತ ಪದ ಗಳನ್ನು ತುಳುನಾಡಿನ ಉತ್ತರಭಾಗದಲ್ಲಿ ಅಕಾರಾಂತವಾಗಿಯೇ ಉಚ್ಚರಿಸುವುದು ಕಂಡುಬರು

ಏಕಾರಗಳು ಅರ್ಥಭೇದವನ್ನುಂಟುಮಾಡುವುದರಿಂದ ಇವುಗಳನ್ನು ಪ್ರತ್ಯೇಕ ಧ್ವನಿಗಳಾಗಿ ಪರಿಗಣಿಸಬೇಕಾಗುತ್ತದೆ. ಮಾತ್ರವಲ್ಲದೆ ಇವುಗಳನ್ನು ಸೂಚಿಸಲು ಪ್ರತ್ಯೇಕ ಲಿಪಿಸಂಜ್ಞೆಗಳನ್ನು ಬಳಸಿಕೊಳ್ಳಬೇಕಾಗುತ್ತದೆ.

ಎರಡು ವಿಧದ ಉಕಾರಗಳು

ತುಳುವಿನಲ್ಲಿ ಸಂವೃತ ಮತ್ತು ವಿವೃತ ಎಂದು ಎರಡು ಬಗೆಯ ಉಕಾರಗಳಿವೆ. ನೆಡು, ಬಿಡು, ಬರು, ಕಾಲು ಮೊದಲಾದ ಕನ್ನಡ ಪದಗಳಲ್ಲಿ ಬರುವ ಉಕಾರವು ಸಂವೃತ ಉಕಾರ. ಇದು ತುಳುಭಾಷೆಯಲ್ಲಿಯೂ ಇದ್ದು ಪದಾದಿ, ಪದಮಧ್ಯ, ಪದಾಂತಗಳಲ್ಲಿ ಕಂಡುಬರುತ್ತದೆ. ಉದಾ : ಉಳಾಯಿ (ಒಳಗೆ). ಳುದಳ್ (ಗೆದ್ದಲು), ಕುರಿ (ಕೋಳಿಯು), ಕುಪ್ಪಿ (ಬಾಟಲಿ), ಕುಡು (ಹುರುಳಿ), ಪರು (ಹಲ್ಲು), ಉಸುಲು (ಉಸಿರು)—ಇತ್ಯಾದಿ. ಕನ್ನಡದ ಉಕಾರ ಲಿಪಿ ಸಂಜ್ಞೆಯನ್ನು ತುಳುವಿನ ಈ ಸಂವೃತ ಉಕಾರವನ್ನು ಸೂಚಿಸಲು ಬಳಸುತ್ತಿರುವುದು ಸಾಧುವಾಗಿದೆ. ತುಟಿಗಳನ್ನು ವಿವೃತಗೊಳಿಸಿ ಉಕಾರವನ್ನು ಉಚ್ಚರಿಸಿದಾಗ ಉಂಟಾಗುವ ಧ್ವನಿಯೇ ವಿವೃತ ಉಕಾರ [3] ಪದಮಧ್ಯ, ಪದಾಂತಗಳಲ್ಲಿ ಈ

ತ್ತದೆ. ಉತ್ತರ ಭಾಗದ ತುಳುವನ್ನು ಆಧರಿಸಿಯೇ ನಿಘಂಟು ರಚಿಸಿದ ರೆ. ವೆ. ಮ್ಯಾನರ್ ತಮ್ಮ ನಿಘಂಟಿನಲ್ಲಿ ಇಂತಹ ಪದಗಳನ್ನೆಲ್ಲ ಅಕಾರಾಂತವಾಗಿಯೇ ನಮೂದಿಸಿದ್ದಾರೆ. ಒಕ್ಕೆಲ್ (ಒಕ್ಕಲು), ಒಣಸ್ (ಊಟ), ಒಲಿ (ಗರಿ) ಇತ್ಯಾದಿ ಪದಗಳ ಆದಿಯ ಒಕಾರ; ಕೊರೊಳಿ (ಕೊಡಬಹುದು), ಕಂಚೊಳು (ಹಾಗಲಕಾಯಿ), ಪಾಡೊಣ್ (ಹಾಕಿಕೊಳ್ಳು) ಇತ್ಯಾದಿ ಪದಗಳ ಮಧ್ಯದ ಒಕಾರಗಳು ಉದಾತ್ತವಾಗಿಯೇ ಉಚ್ಚಾರಣೆಗೊಳಪಡುತ್ತವೆ.

3 ತಮಿಳು ಮಲಯಾಳಗಳಲ್ಲಿ ಈ ವಿವೃತ ಉಕಾರದ ಬಳಕೆಯಿದೆ. ಉದಾ : ತಮಿಳಿನಲ್ಲಿ ಎಟ್ಟು (ಎಂಟು), ಕಾತು (ಕಿವಿ), ಕೊಟು (ಕೊಡು) ಇತ್ಯಾದಿಗಳನ್ನು ಉಕಾರಾಂತವಾಗಿ ಬರೆದರೂ ಓದುವಾಗ ವಿವೃತ ಉಕಾರಾಂತವಾಗಿ ಉಚ್ಚರಿಸಲಾಗುತ್ತದೆ.* ಕನ್ನಡದ ಕ್, ಚ್, ಟ್ ಮೊದಲಾದ ವ್ಯಂಜನಗಳು ಅಕ್, ಅಚ್, ಅಟ್ ಮುಂತಾಗಿ ಹಿಂದೆ ಸ್ವರವನ್ನು ಕೂಡಿಕೊಂಡು ಬಂದಾಗ ಶುದ್ಧವ್ಯಂಜನರೂಪದಲ್ಲೇ ಉಚ್ಚಾರಣೆಗೊಳಪಡುತ್ತವೆ. ಆದರೆ ಕ್. ಚ್ ಎಂದು ಸ್ವತಂತ್ರವಾಗಿ ಉಚ್ಚರಿಸಲ್ಪಡುವಾಗ ಅವು ಭಾಷಾವೈಜ್ಞಾನಿಕವಾಗಿ ಅಂತ್ಯದಲ್ಲಿ ಒಂದು ಸ್ವರವನ್ನು ಕೂಡಿಕೊಂಡೇ ಇರುತ್ತವೆ. ಮತ್ತು ಅವುಗಳ ಉಚ್ಚಾರದ ಕಾಲಮಾನ ಒಂದು ಮಾತ್ರೆಯಷ್ಟಿರುತ್ತದೆ. ಇವುಗಳಲ್ಲಿ ಕಂಡುಬರುವ ಈ ಅಂತ್ಯಸ್ವರವೇ ವಿವೃತ ಉಕಾರ. ಈ ಉಕಾರದ ಬಗೆಗೆ ವಿವೇಚಿಸುತ್ತಾ ಪ್ರೊ॥ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು "'ಕ್' ಎಂಬುದನ್ನು ಉಚ್ಚರಿಸುವಾಗ ಯಾವ ಉಕಾರ ಛಾಯೆ ಇದ್ದಂತೆ ಕೇಳಬಹುದೋ ಅದೇ" ತುಳುವಿನ ವಿಶಿಷ್ಟ ಉಕಾರವೆಂಬುದಾಗಿ ವಿವರಿಸಿರುತ್ತಾರೆ. ಇದನ್ನು ಅನೌಷ್ಠ್ಯ ಉಕಾರವೆಂದು ಕರೆಯಬಹುದೆಂದೂ ಅವರು ಅಭಿಪ್ರಾಯಪಡುತ್ತಾರೆ. (ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ, ತುಳುವಿನ ಸ್ವರಮಾಲೆ, — ಮಧುಪ್ರರ, ಪು. 119).

---

* ತಮಿಳಿನಲ್ಲಿ ಇದನ್ನು ಕುಟ್ರಿಯಲ್ (ಕುಱ್ರಿಯಲ್ = ಕಿರಿಯ) ಉಕಾರವೆಂದು ವ್ಯವಹರಿಸಲಾಗುತ್ತದೆ.

ವಿವೃತ ಉಕಾರ ಸಹಿತವಾದ ಅಕ್ಷರಗಳು ಬಂದಾಗ ತುಳು 'ಭಾಗವತೊ'ವಲ್ಲಿ ಅವುಗಳನ್ನು ಕೇವಲ ವ್ಯಂಜನಗಳ ರೂಪದಲ್ಲೇ ಸೂಚಿಸಲಾಗಿದೆ. ಪದಾದಿಯಲ್ಲಿ ಈ ವಿವೃತ ಉಕಾರ ಬಂದಾಗ ಅದನ್ನು ಸೂಚಿಸಲು ಪ್ರತ್ಯೇಕವಾದೊಂದು ಸಂಜ್ಞೆಯನ್ನು 'ಭಾಗವತೊ'ದಲ್ಲಿ ಬಳಸಲಾಗಿದೆ. ಇದು ಬೇರೆಯೇ ಆದೊಂದು ಲಿಪಿಸಂಜ್ಞೆಯಾಗಿರದೆ ಅಕಾರದ ಮೇಲೆ (ಪಕ್ಕದಲ್ಲಿ) ವ್ಯಂಜನ ಚಿಹ್ನೆಯನ್ನು ಸೇರಿಸಿಕೊಂಡುದಾಗಿದೆ. ಮೂಲ ತುಳುಲಿಪಿಯಲ್ಲಿರುವ ಈ ರೂಪಗಳ ಮಾದರಿಯನ್ನೇ ತುಳು 'ಭಾಗವತೊ'ದ ಕನ್ನಡ ಲಿಪ್ಯಂತರದ ಸಂದರ್ಭದಲ್ಲಿ ಅದರ ಸಂಪಾದಕರು ಅನುಸರಿಸಿರುತ್ತಾರೆ. ಉದಾ : ಅ್ಂದೆನ್ 'ಇದನ್ನು' (ಶ್ರೀ ಭಾಗವತೊ, ತಾಡವಾಲೆ ಪಡಿಯಚ್ಚು-II—ಸಾಕಷ್ಟು ಪ್ರಯೋಗಗಳು ಈ ಗ್ರಂಥದಲ್ಲಿ ದೊರಕುತ್ತವೆ). ಸಾಮಾನ್ಯವಾಗಿ ವಿವೃತ ಉಕಾರಕ್ಕೆ ದೀರ್ಘರೂಪವಿಲ್ಲವಾದರೂ 'ಭಾಗವತೊ'ದಲ್ಲಿ ಇದರ ದೀರ್ಘರೂಪಗಳು ವಿಪುಲವಾಗಿ ದೊರಕುತ್ತವೆ. ಉದಾ : ಕಂತ್‌ಸ್ಟ್ೀ (ಮುಳುಗಿ) ; ಧರಿತ್ೀ (ಧರಿಸಿ) ; ನಿರ್ಗಮಿತ್ೀ (ನಿರ್ಗಮಿಸಿ) ಇತ್ಯಾದಿ. ಆದರೆ ವಿವೃತ ದೀರ್ಘ ಉಕಾರಗಳಿಂದ ಆದಿಯಾಗುವ ಪದಗಳು ಕಂಡುಬರುವುದಿಲ್ಲ.

ತುಳುವಿನ ಮೊದಲ ವ್ಯಾಕರಣವನ್ನು ಬರೆದ ಲೆ. ಜೆ. ಬ್ರಿಗೆಲ್ ಅವರು ಈ ವಿವೃತ ಉಕಾರವನ್ನು ಅನಿರ್ದಿಷ್ಟ (Indefinite) ಎಂದು ಗುರುತಿಸಿ. ವ್ಯಂಜನಚಿಹ್ನೆಯನ್ನೇ (⁻⁶) ಇದರ ಲಿಪಿಸಂಜ್ಞೆಯನ್ನಾಗಿ ಕೊಟ್ಟಿರುತ್ತಾರೆ (Brigel : Tulu Grammar ಪು. 1). ಆದ್ದರಿಂದ ಅವರ ಪ್ರಕಾರ ಕನ್ನಡ ಲಿಪಿಯಲ್ಲಿ ವ್ಯಂಜನರೂಪವಾಗಿ ಬರೆಯಲ್ಪಡುವವುಗಳೆಲ್ಲವೂ ತುಳುವಿನಲ್ಲಿ ವಿವೃತ ಉಕಾರಸಹಿತವಾದ ವ್ಯಂಜನಾಕ್ಷರಗಳು (ಅಂದರೆ, ತುಳುವಿನಲ್ಲಿ ವ್ಯಂಜನಾಂತ ಪದಗಳಿಲ್ಲವೆಂಬುದು ಅವರ ಖಚಿತ ಅಭಿಪ್ರಾಯವಾಗಿತ್ತು). ಈ ಅನಿರ್ದಿಷ್ಟ ಸ್ವರವನ್ನು ಲಿಪ್ಯಂತರದಲ್ಲಿ ರೋಮನ್ ಲಿಪಿಯ 'u' ಲಿಪಿಚಿಹ್ನೆಗೆ ಕೆಳಭಾಗದಲ್ಲೊಂದು ಚುಕ್ಕಿಯನ್ನಿಟ್ಟು ಗುರುತಿಸಿದ್ದಾರೆ. ಉದಾ : ಕಾಡ್ ka-du̇. ರೋಮನ್ ಲಿಪ್ಯಂತರದ ಈ ಚಿಹ್ನೆಯೂ ಕನ್ನಡ ಲಿಪಿಯ ವ್ಯಂಜನಚಿಹ್ನೆಯೂ ಅವರ ಅನಂತರ ತುಳುವಿನ ಬಗ್ಗೆ ಕೆಲಸ ಮಾಡಿದವರೆಲ್ಲರಿಂದಲೂ ವಿವೃತ ಉಕಾರದ ಲಿಪಿಸಂಜ್ಞೆಯಾಗಿ ಸ್ವೀಕೃತವಾಗಿದೆ. ಆದರೆ, ತುಳುವಿನ ಸ್ವರಮಾಲೆಯನ್ನು ಕನ್ನಡ ಲಿಪಿಯಲ್ಲಿ ಕೊಡುವಾಗ ಬ್ರಿಗೆಲ್ ಕೊಟ್ಟಂತೆ ವ್ಯಂಜನಚಿಹ್ನೆಯನ್ನು ಮಾತ್ರ ಸೂಚಿಸಿಬಿಡದೆ. ಬೇರೆ ವಿಧಾನಗಳನ್ನು ಅನುಸರಿಸಿರುತ್ತಾರೆ. ಎಸ್. ಯು. ಪಣಿಯಾಡಿಯವರು ತಮ್ಮ ತುಳುವ್ಯಾಕರಣ ಗ್ರಂಥದಲ್ಲಿ ಉಕಾರಕ್ಕೆ ವ್ಯಂಜನ ಚಿಹ್ನೆಯನ್ನು ಕೊಟ್ಟು ಹೊಸ ಸಂಜ್ಞೆಯನ್ನು (ಉ್) ಮಾಡಿಕೊಂಡಿದ್ದಾರೆ (ಹೀಗಿದ್ದರೂ ಪದಮಧ್ಯ ಪದಾಂತಗಳಲ್ಲಿ ಬರುವ ವಿವೃತ ಉಕಾರಸಹಿತವಾದ ಅಕ್ಷರಗಳನ್ನು ಬ್ರಿಗೆಲ್‌ನಂತೆ ಬರಿಯ ವ್ಯಂಜನರೂಪಗಳಿಂದಲೇ ಸೂಚಿಸಿದ್ದಾರೆ). ಪ್ರೊ॥ ಎಂ. ಮರಿಯಪ್ಪ ಭಟ್ಟ ಮತ್ತು

ಡಾ॥ ಎ. ಶಂಕರ ಕೆದಿಲಾಯ ಅವರು ತಮ್ಮ ತುಳು-ಇಂಗ್ಲೀಷ್ ನಿಘಂಟಿನಲ್ಲಿ ಈ ಸ್ವರವನ್ನು ವರ್ಣಮಾಲೆಯಲ್ಲಿ ಅಕಾರಕ್ಕೆ ವ್ಯಂಜನಚಿಹ್ನೆಯನ್ನು ಕೊಟ್ಟು ಇನ್ನೊಂದು ಸಂಜ್ಞೆಯನ್ನು (ಜ್) ಮಾಡಿಕೊಂಡರೂ[4] ಪದಮಧ್ಯ ಪದಾಂತಗಳಲ್ಲಿ ಬರುವ ಈ ಸ್ವರಸಹಿತವಾದ ಅಕ್ಷರಗಳನ್ನು ಬರೆಯುವಾಗ ಹಿಂದಿನವರನ್ನೇ ಅನುಸರಿಸಿರುತ್ತಾರೆ.

ಪ್ರೊ॥ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ವಿವೃತ ಉಕಾರವನ್ನು ಸೂಚಿಸಲು ಉಕಾರದ ಮೇಲೊಂದು ಚುಕ್ಕಿಯನ್ನಿಟ್ಟು ಇನ್ನೊಂದು ಕ್ರಮವನ್ನು ಅನುಸರಿಸಿದ್ದಾರೆ (ತುಳುವಿನ ಸ್ವರಮಾಲೆ, 'ಮಧುಪುರ', ಪು. 118). ಅವರು ವರ್ಣಮಾಲೆಯಲ್ಲಿ ಮಾತ್ರ ಈ ವಿವೃತ ಉಕಾರವನ್ನು ಗುರುತಿಸಿ ಬಿಡದೆ ಪದಮಧ್ಯ ಪದಾಂತಗಳಲ್ಲಿ ಬರುವ ಈ ಉಕಾರಸಹಿತವಾದ ಅಕ್ಷರಗಳನ್ನೂ ಇದೇ ಸಂಜ್ಞೆಯಿಂದ ಗುರುತಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ (ಉದಾ: ತಿಂದುಂಡು, ಬಚ್ಚೆದು ಪೋಂಡು).

ಪ್ರಕೃತ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ಸಿದ್ಧವಾಗುತ್ತಿರುವ ತುಳುವಿನ ಬೃಹತ್ ನಿಘಂಟಿನಲ್ಲಿ ವಿವೃತ ಉಕಾರವನ್ನು ಪ್ರೊ॥ ಮರಿಯಪ್ಪ ಭಟ್ಟ ಮತ್ತು ಡಾ॥ ಶಂಕರ ಕೆದಿಲಾಯರ ನಿಘಂಟಿನ ಮಾದರಿಯಲ್ಲೇ ಸೂಚಿಸಲಾಗಿದೆ (ನೋಡಿ: 'ಕರಾವಳಿ' ತುಳು ನಿಘಂಟು. ಮಾದರಿ ಸಂಪುಟ 2). ಪದಮಧ್ಯ ಪದಾಂತಗಳಲ್ಲಿ ಕೇವಲ ವ್ಯಂಜನಲಿಪಿರೂಪದಿಂದಲೇ ವಿವೃತ ಉಕಾರವನ್ನು ಸೂಚಿಸುವುದರಿಂದ ಉಚ್ಚರಿಸುವಾಗ ಕನ್ನಡಿಗರಲ್ಲಿ ಗೊಂದಲ ಉಂಟಾಗಬಹುದಾದ ಸಾಧ್ಯತೆ ಇರುವುದರಿಂದ ತುಳು ನಿಘಂಟಿನ ಸಂಪಾದಕ ಸಮಿತಿಯವರು ಈ ವಿಚಾರವನ್ನು ಇನ್ನೊಮ್ಮೆ ವಿಮರ್ಶಿಸುವ ಅಗತ್ಯವಿದೆ.

ಎರಡು ವಿಧದ ಎಕಾರಗಳು

ಪ್ರತ್ಯೇಕವಾಗಿ ಗುರುತಿಸುವ ರೂಢಿಯಿಲ್ಲದಿದ್ದರೂ ಕನ್ನಡದಲ್ಲಿ ಎರಡು ರೀತಿಯ ಎಕಾರಗಳಿವೆ. ಪ್ರೊ॥ ತೆಕ್ಕುಂಜೆಯವರು ಕವಿರಾಜಮಾರ್ಗದ ಪದ್ಯವೊಂದನ್ನು ಉದ್ಧರಿಸಿ ಈ ವಿಷಯವನ್ನು ಬಹಳ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ.[5]

---

4 1967ರಲ್ಲಿ ಪ್ರೊ॥ ಮರಿಯಪ್ಪ ಭಟ್ಟ ಮತ್ತು ಡಾ॥ ಶಂಕರ ಕೆದಿಲಾಯರು ಈ ಸಂಜ್ಞೆಯನ್ನು ಹೊಸತಾಗಿ ಸೃಷ್ಟಿಸಿಕೊಂಡಿರಬಹುದಾದರೂ, ಅನಂತರ ಉಪಲಬ್ಧವಾಗಿ 1984ರಲ್ಲಿ ಪ್ರಕಟವಾದ ತುಳು 'ಭಾಗವತೊ'ದಲ್ಲಿ ಈ ಸಂಜ್ಞೆಯನ್ನೇ ಬಳಸಿರುವುದು ಕಂಡುಬರುತ್ತದೆ. (ನೋಡಿ : ಶ್ರೀ ಭಾಗವತೊ ತಾಡವಾಲಿ, ಪಡಿಯಚ್ಚು-II).

5 ಅದಱೊಳಗಂ ಕಿಸುವೊೞಲಾ
ವಿದಿತ ಮಹಾ ಕೊಪಣ ನಗರದಾ ಪುಲಿಗೆರೆಯಾ।
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ —ಈ ಪದ್ಯದ ಕೊನೆಯ ಚರಣದಲ್ಲಿ ಬರುವ 'ನಾಡೆ' ಎಂಬ ಎರಡು ಪದಗಳು ಒಂದೇ ರೀತಿಯಲ್ಲಿ ಲಿಖಿತವಾಗಿದ್ದರೂ ಅವುಗಳ

ಇವುಗಳಲ್ಲಿ ಒಂದು ಎಕಾರವನ್ನು ಉದಾತ್ತವೆಂದೂ ಇನ್ನೊಂದನ್ನು ಅನುದಾತ್ತವೆಂದೂ ಅವರೇ ಹೆಸರಿಸಿರುತ್ತಾರೆ. ಕನ್ನಡದ ಮನೆ, ತಲೆ, ಕೊನೆ, ಹಂಡೆ, ಊರೆ, ಕೊಳೆ ಮೊದಲಾದ ಪದಗಳ ಅಂತ್ಯದ ಎಕಾರವು ಅನುದಾತ್ತ ಎಕಾರ. ಅವಧಾರಣಾರ್ಥಕವಾದ ಎಕಾರವು ಸೇರಿದ ಅವನೆ, ಇವನೆ, ಅದೆ, ಅದುವೆ ಮೊದಲಾದ ಪದಗಳ ಅಂತ್ಯದಲ್ಲಿ ಬರುವ ಎಕಾರವು ಉದಾತ್ತ ಎಕಾರ. ಇನ್ನೂ ಕೆಲವು ಉದಾಹರಣೆಗಳನ್ನು ಹೋಲಿಕೆಗಾಗಿ ಕೊಡಬಹುದು: (1) ಬದುಕೆನು ಎನ್ನುವ ಅರ್ಥದ 'ಬದುಕೆ' ಮತ್ತು ಅವಧಾರಣಾರ್ಥಕ ಪ್ರತ್ಯಯಾಂತವಾದ 'ಬದುಕೆ' (ಬದುಕು + ಎ); (2) ಮಂಡೂಕ ಎಂಬರ್ಥದ 'ಕಪ್ಪೆ' ಮತ್ತು ಅವಧಾರಣಾರ್ಥಕ ಎಕಾರ ಸೇರಿದ 'ಕಪ್ಪೆ' (ಕಪ್ಪು + ಎ); (3) ಕಂಡೆನು ಎಂಬರ್ಥವನ್ನು ಕೊಡುವ 'ಕಂಡೆ' ಮತ್ತು 'ಕಂಡು' ಎಂಬ ಕೃದಂತಕ್ಕೆ ಅವಧಾರಣಾರ್ಥಕ ಎಕಾರ ಸೇರಿ ಆದ 'ಕಂಡೆ' (ಕಂಡು + ಎ); (4) ಬಾರೆನು ಎಂಬರ್ಥದ 'ಬಾರೆ' ಮತ್ತು ಹುಡುಗಿಯರನ್ನು ಸಲುಗೆಯಿಂದ ಕರೆಯುವ 'ಬಾರೆ' ಎಂಬ ರೂಪ (ಉದಾ: ಗಂಗೆ ಬಾರೆ, ಗೌರಿ ಬಾರೆ ತುಂಗಭದ್ರೆಯೆ ತಾಯಿ ಬಾರೆ....); ಈ ಎಲ್ಲ ಉದಾಹರಣೆಗಳಲ್ಲಿಯೂ ಮೊದಲ ರೂಪಗಳು ಅನುದಾತ್ತ ಎಕಾರಗಳು; ಎರಡನೆಯವು ಉದಾತ್ತ ಎಕಾರಗಳು.

ಈ ಎರಡು ರೀತಿಯ ಎಕಾರಗಳು ಗಮನಾರ್ಹವಾದ ಅರ್ಥವ್ಯತ್ಯಾಸವನ್ನುಂಟುಮಾಡುವ ಸಂದರ್ಭಗಳು ಕನ್ನಡಕ್ಕಿಂತ ತುಳುವಿನಲ್ಲಿ ವಿಪುಲವಾಗಿವೆ. ಉದಾ:

1. (ಅ) ಪೋಯೆ (ಉದಾತ್ತ ಎಕಾರ) = ಹೋದನು.
   (ಆ) ಪೋಯೆ (ಅನುದಾತ್ತ ಎಕಾರ) = ಹೋದೆನು.

2. (ಅ) ಆಯೆ (ಉದಾತ್ತ ಎಕಾರ) = ಅವನು.
   (ಆ) ಆಯೆ (ಅನುದಾತ್ತ ಎಕಾರ) = ಆದೆನು.

3. (ಅ) ಬಲೆ (ಉದಾತ್ತ ಎಕಾರ) = ಬನ್ನಿರಿ.
   (ಆ) ಬಲೆ (ಅನುದಾತ್ತ ಎಕಾರ) = ಬಲೆ.

4. (ಅ) ಅಂಗಾರೆ (ಉದಾತ್ತ ಎಕಾರ) = ಪುರುಷರ ಒಂದು ಅಂಕಿತನಾಮ.
   (ಆ) ಅಂಗಾರೆ (ಅನುದಾತ್ತ ಎಕಾರ) = ಸ್ತ್ರೀಯರ ಒಂದು ಅಂಕಿತನಾಮ.

ಉಚ್ಚಾರಣೆಯಲ್ಲಿ ವ್ಯತ್ಯಾಸವಿದೆ. ಮೊದಲನೆಯ 'ನಾಡೆ' ಎಂಬುದು 'ನಾಡು' ಎಂಬ ಉಕಾರಾಂತ ಪದಕ್ಕೆ 'ಎ' ಎಂಬ ಅವಧಾರಣ ಪ್ರತ್ಯಯ ಸೇರಿ ಆದುದು. ಎರಡನೆಯದು ಆಧಿಕ್ಯಾರ್ಥವನ್ನು ಕೊಡುವ ಸ್ವಭಾವತಃ ಎಕಾರಾಂತವಾದ ಪ್ರತ್ಯಯ (ನೋಡಿ: ತುಳುವಿನ ಸ್ವರಮಾಲೆ, 'ಮಧುಪುರ' ಪು. 120).

5. (ಅ) ಕುಂಟೆ (ಉದಾತ್ತ ಎಕಾರ) = ಕುಳ್ಳ.
(ಆ) ಕುಂಟೆ (ಅನುದಾತ್ತ ಎಕಾರ) = ಮರದ ದಿಮ್ಮಿ. ಮುಂತಾದುವು.

—ಹೀಗೆ ಎಕಾರಭೇದಗಳಿಂದಾಗಿ ಖಚಿತವಾದ ಅರ್ಥಭೇದಗಳುಂಟಾಗುವ ಸಂದರ್ಭಗಳು ಅನೇಕ.

ಸ್ವಭಾವತಃ ಎಕಾರಾಂತವಾದ ಪದಗಳು ಕನ್ನಡದಂತೆಯೇ ತುಳುವಿನಲ್ಲಿಯೂ ಅನುದಾತ್ತ ಎಕಾರಾಂತಗಳೇ ಆಗಿವೆ. ಕನ್ನಡ-ತುಳು ಎರಡೂ ಭಾಷೆಗಳಿಗೆ ಸಮಾನವಾದ ಪದಗಳನ್ನಾಯ್ದುಕೊಂಡು ಅವುಗಳ ಉಚ್ಚಾರಣೆಯನ್ನು ಪರಿಶೀಲಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಉದಾ: ಕೋಣೆ, ಮಲೆ, ಮಂಡೆ, ಕೊಡೆ, ಕಲೆ, ಕಡೆ, ಓರೆ, ಮಾಲೆ, ಕತೆ ಇತ್ಯಾದಿ.

ತುಳುವಿನಲ್ಲಿ ಪದಾಂತದ ಉದಾತ್ತ ಎಕಾರ ಬರುವ ಸಂದರ್ಭಗಳು ಮುಖ್ಯವಾಗಿ ಆರು—

1 ಪ್ರಥಮ ಪುರುಷ ಪುಲ್ಲಿಂಗ ಏಕವಚನದ ಕ್ರಿಯಾಪದಗಳಲ್ಲಿ—
ಉದಾ: ಪೋಯೆ (ಹೋದನು) ; ಬತ್ತೆ (ಬಂದನು) ; ತಿಂದೆ (ತಿಂದನು) —ಇತ್ಯಾದಿ.

2 ಪ್ರಥಮ ಪುರುಷ ಪುಲ್ಲಿಂಗ ಏಕವಚನ ಸರ್ವನಾಮ—ಉದಾ: ಆಯೆ (ಅವನು).

3 ಅಕಾರಾಂತ ಪುಲ್ಲಿಂಗ ಪ್ರಕೃತಿಗಳಿಗೆ ಪ್ರಥಮಾ ವಿಭಕ್ತಿ ಬಂದಾಗ—
ಉದಾ: ರಾಮೆ (ರಾಮನು) : ಚೋಮೆ (ಚೋಮನು) ; ಕೃಷ್ಣೆ (ಕೃಷ್ಣನು) —ಇತ್ಯಾದಿ.

4 ಪ್ರಥಮ ಪುರುಷ ನಪುಂಸಕಲಿಂಗ ಅಕಾರಾಂತ ನಾಮಪ್ರಕೃತಿಗಳಿಗೆ ಪುಲ್ಲಿಂಗ ಸ್ವರೂಪವನ್ನು ಅಧ್ಯಾರೋಪಿಸಿದಾಗ—
ಉದಾ: ಕುದ್ಕೆ (ನರಿ) ; ಗೋಣೆ (ಕೋಣ) ; ಕುಟ್ಟೆ (ಗಂಡು ಆಡು) —ಇತ್ಯಾದಿ.

5 ಮಧ್ಯಮಪುರುಷ ಬಹುವಚನ ಪ್ರಶ್ನಾರ್ಥಕದಲ್ಲಿ ಮತ್ತು ವಿಧಿಕ್ರಿಯೆಯಲ್ಲಿ—
ಉದಾ: ಬರ್ಪರಯೆ (ಬರುತ್ತೀರಾ) ; ತಿನ್ಪರಯೆ (ತಿನ್ನುತ್ತೀರಾ) —ಇತ್ಯಾದಿ.
ಮತ್ತು ಪೋಲೆ (ಹೋಗಿರಿ) ; ತೂಲೆ (ನೋಡಿರಿ) : ಕೊಂಡೆ (ತನ್ನಿರಿ) —ಇತ್ಯಾದಿ.

6 ಅವಧಾರಣಾರ್ಥಕವಾಗಿ ಬರುವಲ್ಲಿ—
ಉದಾ: ಆಳೆ (ಅವಳೇ) ; ಎಂಕೆ (ನನಗೇ) ; ನಾಲೆ (ನಾಲ್ಕೇ) —ಇತ್ಯಾದಿ.

ಕನ್ನಡ–ತುಳು ಎರಡೂ ಭಾಷೆಗಳಲ್ಲಿ ಸ್ವಭಾವತಃ ಪದಾಂತದಲ್ಲಿ ಬರುವ ಎಕಾರಗಳು ಉದಾತ್ತವಾಗಿ ಇಲ್ಲದೇ ಇರುವುದು ಸಾರ್ವತ್ರಿಕ ನಿಯಮವೆಂಬಂತೆ ಕಂಡುಬರುತ್ತದೆ. ಎರಡೂ ಭಾಷೆಗಳಲ್ಲಿ ಪದಾದಿ ಪದಮಧ್ಯಗಳಲ್ಲಿ ಬರುವ ಎಕಾರಗಳು (ಪದಾಂತದ ಎಕಾರದಂತೆ) ಅನುದಾತ್ತವಾಗಿರದೆ ಉದಾತ್ತವಾಗಿಯೇ ಇರುವುದನ್ನೂ ಗಮನಿಸಬಹುದಾಗಿದೆ. ಉದಾ: ಕನ್ನಡದ ಎಲೆ, ಕೆರೆ, ಬೆಲೆ, ಬೆಣ್ಣೆ, ಕೆಡೆ, ಹೆಡೆ, ಎಡೆ, ಸೆಡೆತ, ಕೆರೆತ, ಸೆಳೆತ ಇತ್ಯಾದಿಗಳಲ್ಲಿ ಮತ್ತು ತುಳುವಿನ ಎಕ್ಕೆ (ಎಕ್ಕೆಯ ಗಿಡ), ಎರ್ಮೆ (ಎಮ್ಮೆ), ಎವೆ (ಎವೆ), ಎತೆ (ವ್ಯಥೆ), ಚೆಕ್ಕೆ (ಚಕ್ಕೆ), ಕೆತ್ತೆ (ಕೆತ್ತೆ), ಮೆತ್ತೆ (ಮೆಂತ್ಯ) ಇತ್ಯಾದಿಗಳಲ್ಲಿ ಪದಾದಿ ಪದಮಧ್ಯಗಳಲ್ಲಿ ಬರುವ ಎಕಾರ ಉದಾತ್ತವಾಗಿಯೂ, ಪದಾಂತದ ಎಕಾರ ಅನುದಾತ್ತವಾಗಿಯೂ ಇರುವುದನ್ನು ಖಚಿತವಾಗಿ ಕಾಣಬಹುದು.[6] **ಕನ್ನಡ–ತುಳು ಎರಡೂ ಭಾಷೆಗಳಲ್ಲಿ ಉದಾತ್ತ ಎಕಾರದಿಂದ ಕೊನೆಯಾಗುವ ಪದಗಳೆಲ್ಲವೂ ಪ್ರತ್ಯಯಾಂತಗಳೆಂಬುದು ಸ್ಪಷ್ಟ. ಆದುದರಿಂದ ಪದಾಂತದ ಎಕಾರದ ಉದಾತ್ತತೆಯು ಪ್ರತ್ಯಯದಿಂದಲಾಗಿಯೇ ಉಂಟಾಗುವುದಲ್ಲದೆ ಎಕಾರಾಂತ ಪದಗಳ ಸಹಜಗುಣದಿಂದಲ್ಲ.**

ಮೇಲೆ ತೋರಿಸಿದಂತೆ, ಪದಾಂತದ ಈ ಎರಡು ವಿಧದ ಎಕಾರಗಳು ಖಚಿತವಾದ ಅರ್ಥಭೇದವನ್ನುಂಟುಮಾಡುವ ಕಾರಣ ಇವನ್ನು ಬೇರೆ ಬೇರೆ ಲಿಪಿಸಂಜ್ಞೆಗಳಿಂದ ಗುರುತಿಸುವುದು ಅವಶ್ಯವಷ್ಟೆ. ಈ ದೃಷ್ಟಿಯಿಂದ ಈವರೆಗೆ ವಿದ್ವಾಂಸರು ನಡೆಸಿದ ಪ್ರಯತ್ನಗಳನ್ನು ಗಮನಿಸಬಹುದು :

1. ತುಳುವಿನ ಮೊದಲ ವ್ಯಾಕರಣ ಗ್ರಂಥವನ್ನು ಬರೆದ ರೆ. ಜೆ. ಬ್ರಿಗೆಲ್ ಅವರು ಈ ಎಕಾರಗಳನ್ನು ಲಿಪಿಸಂಜ್ಞೆಗಳಿಂದ ಗುರುತಿಸಿಲ್ಲ.[7]

2. ತುಳುವಿನ ಮೊದಲ ನಿಘಂಟುಕಾರ ರೆ. ಎ. ಮ್ಯಾನರ್ ತನ್ನ ನಿಘಂಟಿನಲ್ಲಿ ಮೊದಲ ಬಾರಿಗೆ ಈ ಭೇದವನ್ನು ಲಿಪಿಸಂಜ್ಞೆಯಿಂದ ಗುರುತಿಸಿದ್ದಾರೆ. ವಿಶೇಷವೆಂದರೆ, ನಮೂದು (entry) ಗಳನ್ನು ಮೊದಲು ಕನ್ನಡ ಲಿಪಿಯಲ್ಲೂ ಆಮೇಲೆ

---

6 ಎರಡೂ ಭಾಷೆಗಳಲ್ಲಿ ಪದಾಂತದ ಅನುದಾತ್ತ ಎಕಾರವು ಪದಮಧ್ಯಕ್ಕೆ ಸ್ಥಾನಾಂತರಗೊಂಡಾಗ ಉದಾತ್ತ ಎಕಾರವಾಗುತ್ತದೆ. ಎಕಾರಾಂತ ಪ್ರಕೃತಿಗಳಿಗೆ ವಿಭಕ್ತಿಪ್ರತ್ಯಯಗಳನ್ನು ಹಚ್ಚಿ ಪರಿಶೀಲಿಸಿದಾಗ ಇದು ಸ್ಪಷ್ಟವಾಗುತ್ತದೆ. ಕನ್ನಡದ ಗದೆ–ಗದೆಯನ್ನು; ಜಡೆ–ಜಡೆಯನ್ನು; ಕೆರೆ–ಕೆರೆಯಿಂದ ಇತ್ಯಾದಿ; ಹಾಗೂ ತುಳುವಿನ ಕಿದೆ–ಕಿದೆಟ್ (ಹಟ್ಟಿ—ಹಟ್ಟಿಯಲ್ಲಿ); ತರೆ–ತರೆಕ್ (ತಲೆ–ತಲೆಗೆ); ತಿಗಲೆ–ತಿಗಲೆನ್ (ಎದೆ–ಎದೆಯನ್ನು) ಇತ್ಯಾದಿ.

7 ನೋಡಿ: ಬ್ರಿಗೆಲ್, ತುಳು ಗ್ರಾಮರ್. ತಮ್ಮ ಗ್ರಂಥದಲ್ಲಿ ಈ ಭೇದವನ್ನು ಗುರುತಿಸಿಲ್ಲವಾದರೂ ಅವತಾರಿಕೆಯಲ್ಲಿ ಬ್ರಿಗೆಲ್ ಇದನ್ನು ಗುರುತಿಸಲೇಬೇಕೆಂದು ಊಹಿಸಬಹುದು. ಏಕೆಂದರೆ ಈ ಸ್ಪಷ್ಟ ಭೇದವನ್ನರಿಯದೆ ಅವರು ತುಳುಭಾಷೆಯ ಕ್ರಿಯಾರೂಪಗಳನ್ನು ಅರಿಯುವುದಾಗಲೀ ಇಂತಹ ವ್ಯಾಕರಣ ಕೃತಿಯೊಂದನ್ನು ಬರೆಯುವುದಾಗಲೀ ಅಸಾಧ್ಯ.

ರೋಮನ್ ಲಿಪಿಯಲ್ಲೂ ಕೊಡುವ ಇವರು ರೋಮನ್ ಲಿಪಿಯಲ್ಲಿ ಮಾತ್ರವೇ ಈ ಭೇದವನ್ನು 'e' ಈ ಚಿಹ್ನೆಯಿಂದ ಗುರುತಿಸಿದ್ದು, ಕನ್ನಡ ಲಿಪಿಯಲ್ಲಿ ಇದನ್ನು ಗುರುತಿಸುವ ಪ್ರಯತ್ನಕ್ಕೆ ಕೈಹಾಕಿಲ್ಲ. ರೋಮನ್ ಲಿಪಿಯಲ್ಲಿ ಚಿಹ್ನೆಯನ್ನು ಬಳಸಿ ಅವರು ಸೂಚಿಸಿದ ಎಕಾರವು ಅನುದಾತ್ತ ಎಕಾರವೇ ಆಗಿದೆ.

3. ತುಳು ವ್ಯಾಕರಣವನ್ನು ತುಳು ಭಾಷೆಯಲ್ಲಿ ಕನ್ನಡ ಲಿಪಿಯನ್ನಳವಡಿಸಿ ಕೊಂಡು ಬರೆದ ಎಸ್. ಯು. ಪಣಿಯಾಡಿಯವರು ಈ ಎರಡು ವಿಧದ ಎಕಾರಗಳ ನಿರೂಪಣೆಯಲ್ಲಿ ಮ್ಯಾನರ್ ನಿಘಂಟನ್ನು ಅನುಸರಿಸಿದ್ದಾರೆ. ಕನ್ನಡದಲ್ಲಿ ಪ್ರಚಲಿತ ವಾಗಿರುವ ವ್ಯಂಜನಸೂಚಕ ಚಿಹ್ನೆ(—್) ಯನ್ನು ಸ್ವರಮಾಲೆಯಲ್ಲಿ ಮತ್ತು ಪದಾಂತ ಗಳಲ್ಲಿ ಅನುದಾತ್ತ ಎಕಾರಸೂಚಕವಾಗಿ (ಉದಾ: ಎ್ ಮತ್ತು ಕೆ್, ಟೆ್, ಇತ್ಯಾದಿ) ಇವರು ಬಳಸಿಕೊಂಡಿದ್ದಾರೆ.

4. ಪಣಿಯಾಡಿಯವರ ಈ ವಿಧಾನವನ್ನು ವಿಮರ್ಶಿಸಿದ ಪ್ರೊ॥ ತೆಕ್ಕುಂಜೆ ಯವರು (ಈ ಲೇಖನದಲ್ಲಿ ಹಿಂದೆ ಹೇಳಲಾದ ರೀತಿಯ ಪ್ರತ್ಯಯಾಂತವಾದ) ಉದಾತ್ತ ಎಕಾರವನ್ನೇ ಚಿಹ್ನೆಯ ಮೂಲಕ ಪ್ರತ್ಯೇಕವೆಂದು ಗುರುತಿಸುವುದು ಸಾಧು ವೆಂಬುದನ್ನು ತೋರಿಸಿಕೊಟ್ಟಿರುತ್ತಾರೆ.[8] ಉದಾತ್ತ ಎಕಾರವನ್ನು ಎಕಾರ ಮತ್ತು ಎಕಾರಾಂತ ಅಕ್ಷರಗಳ ಮೇಲ್ಭಾಗದಲ್ಲೊಂದು ಬಿಂದುವನ್ನಿಡುವ ಮೂಲಕ ಗುರುತಿಸ ಬಹುದೆಂದು ಅವರು ಸೂಚಿಸಿದ್ದಾರೆ[9].

5. ಪ್ರೊ॥ ಮರಿಯಪ್ಪ ಭಟ್ಟ ಮತ್ತು ಡಾ॥ ಕೆದಿಲಾಯರು ತಮ್ಮ ನಿಘಂಟಿ ನಲ್ಲಿ ಪದಾಂತದಲ್ಲಿ ಬರುವ ಪ್ರತ್ಯಯ ರೂಪದ ಉದಾತ್ತ ಎಕಾರವೇ ತುಳುವಿನ

---

8 "……ಉತ್ತಮ ಪುರುಷೈಕವಚನದ ಕ್ರಿಯಾಪದದಲ್ಲಿ ಬರುವ ಎಕಾರವು ಕನ್ನಡದ ಮನೆ, ಸೆರೆ ಇತ್ಯಾದಿಗಳಲ್ಲಿ ಬರುವ ಎಕಾರದಂತೆಯೇ ಉಚ್ಚಾರವಾಗುವುದರಿಂದ ಇದನ್ನು ಇದ್ದ ಸ್ವರೂಪದಲ್ಲಿಯೇ ಇಟ್ಟು, ಪುಲ್ಲಿಂಗ ಪ್ರಥಮ ಪುರುಷೈಕವಚನ ಸ್ವರೂಪದ ಎಕಾರವನ್ನು ಭಿನ್ನ ಸ್ವರೂಪದಿಂದ ತೋರಿಸಿದರೆ ಮಾತ್ರ ಅನುಕೂಲವಾದೀತು. ಇಲ್ಲವಾದರೆ ತುಳುವಿನ ಎಕಾರ ಯುಕ್ತ ಪದಗಳನ್ನೆಲ್ಲ ರೂಢಿಯ ಉಚ್ಚಾರಕ್ಕಿಂತ ಭಿನ್ನವಾಗಿ ಉಚ್ಚರಿಸಬೇಕಾದ ಅನುಚಿತ ಕ್ರಮವು ರೂಢವಾಗಬಹುದು." ತುಳುವಿನ ಸ್ವರಮಾಲೆ, ಮಧುಪ್ರ ಪು. 121.

9 ಪ್ರೊ॥ ತೆಕ್ಕುಂಜೆಯವರು ನಿರೂಪಿಸಿದ ತುಳುವಿನ ಸ್ವರಮಾಲೆ ಅಂಗೀಕಾರಾರ್ಹವೆನ್ನುವ ಬಿ. ಎ. ವಿವೇಕ ರೈ ಅವರು ಉದಾತ್ತ ಅನುದಾತ್ತ ಎಕಾರಗಳ ವಿಷಯದಲ್ಲಿ ಗೊಂದಲಕ್ಕೊಳಗಾಗಿ ದ್ದಾರೆ. ಪಣಿಯಾಡಿಯವರೂ ತೆಕ್ಕುಂಜೆಯವರೂ ಒಂದೇ ಎಕಾರವನ್ನು ಬೇರೆ ಬೇರೆ ಸಂಜ್ಞೆ ಗಳಿಂದ ಸೂಚಿಸಿದ್ದಾರೆಂದು ಅವರು ತಪ್ಪಾಗಿ ತಿಳಿದುಕೊಂಡಿದ್ದಾರೆ ಎಂಬುದು ಅವರ ಈ ಮಾತಿ ನಿಂದ ಸ್ಪಷ್ಟ:—"ಪಣಿಯಾಡಿಯವರು ಇದನ್ನು 'ಎ' ಎಂದು ಸೂಚಿಸುತ್ತಿದ್ದರೆ, ತೆಕ್ಕುಂಜೆಯವರು 'ಎ' ಎಂದು ತಿಳಿಸಿದ್ದಾರೆ." (ನೋಡಿ: ತುಳುವ ಸಂಸ್ಕೃತಿ.) ವಾಸ್ತವವಾಗಿ, ಪಣಿಯಾಡಿಯವರು ಚಿಹ್ನೆಕೊಟ್ಟು ಸೂಚಿಸಿದುದು ಅನುದಾತ್ತ ಎಕಾರವನ್ನು; ತೆಕ್ಕುಂಜೆಯವರು ಸೂಚಿಸಿದುದು ಉದಾತ್ತ ಎಕಾರವನ್ನು.

ವಿಶಿಷ್ಟ ಎಕಾರವೆಂದು ನಿರ್ಣಯಿಸಿ ಅದನ್ನೇ ಚಿಹ್ನೆಯ ಮೂಲಕ ಗುರುತಿಸಿದ್ದಾರೆ. ಈ ಕ್ರಮವು ಪ್ರೊ|| ತೆಕ್ಕುಂಜೆಯವರ ನಿರ್ಣಯವನ್ನು ಪೂರ್ತಿಯಾಗಿ ಮಾನ್ಯಮಾಡುತ್ತದೆ (ಮ್ಯಾನರ್‌ನ ಕ್ರಮದಂತೆ ಈ ನಿಘಂಟಿನಲ್ಲೂ ರೋಮನ್ ಲಿಪ್ಯಂತರದಲ್ಲಿ ಮಾತ್ರ ಚಿಹ್ನೆಯನ್ನು ಬಳಸಲಾಗಿದೆ. ಆತ ಅನುದಾತ್ತ ಎಕಾರಕ್ಕೆ ಬಳಸಿದ ಚಿಹ್ನೆಯನ್ನೇ ಸ್ವಲ್ಪ ಮಾರ್ಪಡಿಸಿ ಇದರಲ್ಲಿ ಉದಾತ್ತ ಎಕಾರಕ್ಕೆ ಬಳಸಿಕೊಳ್ಳಲಾಗಿದೆ).

6. ಈಗ ಸಿದ್ಧವಾಗುತ್ತಿರುವ ತುಳು ನಿಘಂಟಿನಲ್ಲಿ ಪಣಿಯಾಡಿಯವರ ಮಾದರಿಯನ್ನೇ ಅನುಸರಿಸುತ್ತಿರುವುದು ಅದರ ಮಾದರಿ ಸಂಚಿಕೆ (ಕರಾಜಿಸ) ಯಿಂದ ತಿಳಿದುಬರುತ್ತದೆ.

ಈ ಮೇಲಿನ ಅಂಶಗಳಿಂದ ತುಳುವಿನ ಎರಡು ವಿಧದ ಎಕಾರಗಳ ವ್ಯತ್ಯಾಸವನ್ನು ಸೂಚಿಸಲು ಉಪಯೋಗಿಸಬೇಕಾದ ಲಿಪಿಸಂಜ್ಞೆಗಳ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿರುವುದು ವ್ಯಕ್ತವಾಗುತ್ತದೆ. ಅನುದಾತ್ತ ಎಕಾರಕ್ಕೇ ಮೊತ್ತಮೊದಲು ಚಿಹ್ನೆಯನ್ನು ಬಳಸಿದ ಮ್ಯಾನರ್ ಅವರಿಗೆ ತುಳುವಿನಂತೆಯೇ ಕನ್ನಡದಲ್ಲಿಯೂ ಪದಾಂತದಲ್ಲಿರುವ ಸಹಜಹ್ರಸ್ವ ಎಕಾರವು ಅನುದಾತ್ತವಾಗಿಯೇ ಇದೆಯೆಂಬುದರ ಪರಿಜ್ಞಾನವಿದ್ದಿಲ್ಲದಿರಬಹುದು. ಬಹುಶಃ ಅವರು ರೋಮನ್‌ಲಿಪಿಯಲ್ಲಿ ಮಾತ್ರ ಚಿಹ್ನೆಯನ್ನು ಗುರುತಿಸಿರುವುದರಿಂದ ಇಂಗ್ಲಿಷಿನಲ್ಲಿ ಇಲ್ಲದ ಪದಾಂತ ಎಕಾರದ ಧ್ವನಿಪ್ರಭೇದವೊಂದನ್ನು ಗುರುತಿಸುವುದೇ ಅವರ ಉದ್ದೇಶವಾಗಿತ್ತೆಂದು ತಿಳಿಯಬಹುದು. ಅಲ್ಲದೆ ಅವರು ನಿಘಂಟು ರಚನೆ ಮಾಡಿದುದು ಐರೋಪ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಕನ್ನಡ ತುಳುಗಳ ಪದಾಂತದ ಸಹಜ ಹ್ರಸ್ವ ಎಕಾರಗಳು ಅನುದಾತ್ತವಾಗಿಯೇ ಇರುತ್ತವೆಂಬುದು ಎಲ್ಲಿಯೂ ಪಣಿಯಾಡಿಯವರ ಗಮನಕ್ಕೆ ಬಂದಿಲ್ಲ. ಏಕೆಂದರೆ, ಮೊದಲನೆಯದಾಗಿ ಪಣಿಯಾಡಿಯವರಿಗೆ ತುಳು ವ್ಯಾಕರಣ ಕೃತಿರಚನೆಯಲ್ಲಿ ಮ್ಯಾನರ್ ನಿಘಂಟು ಒಂದು ಆಕರಗ್ರಂಥವಾಗಿತ್ತು. ಆದ್ದರಿಂದ ಮ್ಯಾನರ್ ಅವರ ನಿರೂಪಣ ವಿಧಾನ ಅವರ ಮೇಲೆ ಪ್ರಭಾವ ಬೀರಿರುವುದು ಸಹಜ. ಎರಡನೆಯದಾಗಿ, ಪಣಿಯಾಡಿಯವರು ಸಂಸ್ಕೃತದಲ್ಲಿ ದೊಡ್ಡ ವಿದ್ವಾಂಸರು. ಸಂಸ್ಕೃತದಲ್ಲಿ ಹ್ರಸ್ವ ಎಕಾರವಿಲ್ಲ, ಮತ್ತು ಪದಾಂತದಲ್ಲಿ ಬರುವ ಎಕಾರವು ದೀರ್ಘವಾಗಿರುವುದರಿಂದ ಸಹಜವಾಗಿ ಉದಾತ್ತವಾಗಿರುತ್ತದೆ. ಈ ಅಂಶವೂ ಅವರ ಮೇಲೆ ಪ್ರಭಾವ ಬೀರಿರಬಹುದು. ಆದ್ದರಿಂದ ಅವರು ಅನುದಾತ್ತ ಎಕಾರವನ್ನೇ ಚಿಹ್ನೆಯ ಮೂಲಕ ಸೂಚಿಸಿರಬೇಕೆಂದು ಊಹಿಸಬಹುದು.

ಪಣಿಯಾಡಿಯವರ ಈ ವಿಧಾನವು ದೋಷಪೂರ್ಣವಾದುದೆಂದು ಸಾಧಾರವಾಗಿ ಪ್ರತಿಪಾದಿಸಿದ ಪ್ರೊ|| ತೆಕ್ಕುಂಜೆಯವರ ಅಭಿಪ್ರಾಯವನ್ನೂ, ಉದಾತ್ತ

ಎಕಾರಕ್ಕೆ ಚಿಹ್ನೆಯನ್ನು ಬಳಸಿ ನಿಘಂಟು ರಚನೆಮಾಡಿದ ಪ್ರೊ॥ ಮರಿಯಪ್ಪ ಭಟ್ಟ ಮತ್ತು ಡಾ॥ ಕಮಿಲ್ಲಾಯರ ವಿಧಾನವನ್ನೂ ಉಡುಪಿಯ ತುಳು ನಿಘಂಟಿನಲ್ಲಿ ಕೈಬಿಡಲಾದುದರ ಕಾರಣ ತಿಳಿಯುವುದಿಲ್ಲ. ಅನುದಾತ್ತ ಎಕಾರಕ್ಕೆ ಪಣೆಯಾಡಿಯವರು ರೂಪಿಸಿದ ಚಿಹ್ನೆಯನ್ನೇ ಬಳಸುತ್ತಿರುವುದು ನಿಘಂಟನ್ನು ಉಪಯೋಗಿಸುವ ಕನ್ನಡಿಗರಲ್ಲಿ ಗೊಂದಲವನ್ನುಂಟುಮಾಡದಿರದು. ಉದಾಹರಣಾರ್ಥವಾಗಿ ತುಳು ನಿಘಂಟಿನ 2ನೇ ಮಾದರಿ ಸಂಚಿಕೆಯಾದ 'ಕರಾಜಿನ'ದಲ್ಲಿ ಮುಖ್ಯ ನಮೂದುಗಳಾಗಿ ಬಂದ ಎದೆ, ಮಂಡೆ, ಮೀಸೆ, ರೆಪ್ಪೆ ಈ ಹ್ರಸ್ವ ಎಕಾರಾಂತ ಪದಗಳು ಕನ್ನಡದಲ್ಲಿಯೂ ಇವೆಯಷ್ಟೆ (ಇವುಗಳು ಮತ್ತು ಕನ್ನಡ–ತುಳುಗಳಲ್ಲಿ ಸಮಾನವಾಗಿರುವ ಇನ್ನೂ ಎಷ್ಟೆಷ್ಟೋ ಹ್ರಸ್ವ ಎಕಾರಾಂತ ಪದಗಳು ಅನುದಾತ್ತ ಎಕಾರಾಂತಗಳಾಗಿಯೇ ಇರುತ್ತವೆಂಬುದನ್ನು ಈ ಹಿಂದೆಯೇ ಸ್ಪಷ್ಟಪಡಿಸಲಾಗಿದೆ). ಇವುಗಳನ್ನು 'ಕರಾಜಿನ'ದಲ್ಲಿ ಲಿಪಿಸಂಜ್ಞೆಯನ್ನುಪಯೋಗಿಸಿ ತುಳುಭಾಷೆಯ ನಮೂದುಗಳಾಗಿ ಎದ್, ಮಂಡ್. ಮೀಸ್, ರೆಪ್ಪ್–ಎಂಬುದಾಗಿ ಬರೆಯಲಾಗಿದೆ. ಇವುಗಳಿಗೆ ಕನ್ನಡದಲ್ಲಿ ಅರ್ಥಗಳನ್ನು ಕೊಡುವಾಗ ಇವೇ ಪದಗಳನ್ನು ಕನ್ನಡದ ರೂಢಿಯಂತೆ ಎದೆ. ಮಂಡೆ. ಮೀಸೆ. ರೆಪ್ಪೆ ಎಂದೇ ಕೊಡಲಾಗಿದೆ. ಈ ವಿಧಾನವು ಉಚ್ಚಾರಣೆಯಲ್ಲಿ ಯಾವುದೇ ಭೇದವಿಲ್ಲದಿದ್ದರೂ ಭೇದವುಂಟೆಂಬ ಭ್ರಮೆಯನ್ನು ಕನ್ನಡಿಗರಲ್ಲಿ ಹುಟ್ಟಿಸುವುದು ಖಚಿತವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ (ರೋಮನ್ ಲಿಪ್ಯಂತರೀಕರಣ ಸಂದರ್ಭದಲ್ಲೂ ಇದೇ ರೀತಿಯ ಗೊಂದಲವುಂಟಾಗುವುದು 'ಕರಾಜಿನ'ವನ್ನು ಪರಿಶೀಲಿಸಿದಾಗ ತಿಳಿಯುತ್ತದೆ. ಈ ರೀತಿಯಲ್ಲಿ, ಅನುದಾತ್ತ ಎಕಾರಕ್ಕೆ ಚಿಹ್ನೆಯನ್ನು ಕೊಟ್ಟುದರಿಂದ ಚಿಹ್ನೆಯನ್ನು ಕೊಡದ ಎಕಾರವು ಉದಾತ್ತ ಎಕಾರವೆಂಬುದು ಸ್ಪಷ್ಟ. ಇದರಿಂದಾಗಿ ಪ್ರತ್ಯೇಕವಾಗಿ ಗುರುತಿಸಬೇಕಾದ ಪದಾಂತದ ಪ್ರತ್ಯಯರೂಪವಾದ ಉದಾತ್ತ ಎಕಾರವನ್ನೂ ಪದಾದಿ ಪದಮಧ್ಯಗಳಲ್ಲಿರುವ ಸ್ವಾಭಾವಿಕವಾದ ಉದಾತ್ತ ಎಕಾರವನ್ನೂ ಸಮೀಕರಿಸಿದಂತಾಗಿ ಇನ್ನೊಂದು ಗೊಂದಲವುಂಟಾಗುತ್ತದೆ.

ಆದ್ದರಿಂದ, ತುಳುವಿನ ಬೃಹತ್ ನಿಘಂಟು ಸಂಪಾದಕರು ಈ ಕೆಳಗಿನ ಕೆಲವು ಮುಖ್ಯ ವಿಷಯಗಳನ್ನು ಗಮನಿಸುವುದರಿಂದ ಈ ಗೊಂದಲಗಳನ್ನು ನಿವಾರಿಸಿಕೊಳ್ಳಬಹುದು.

1. ತುಳುವಿನಲ್ಲೂ ಕನ್ನಡದಲ್ಲೂ ಪದಾಂತದ ಸಹಜ ಹ್ರಸ್ವ ಎಕಾರಗಳು ಅನುದಾತ್ತವಾಗಿಯೇ ಇರುತ್ತವೆ.

2. ಪದಾದಿ ಪದಮಧ್ಯಗಳಲ್ಲಿ ಬರುವ ಎಕಾರಗಳು ಉದಾತ್ತವಾಗಿಯೇ ಇರುತ್ತವೆ.

3. ಪದಾಂತ್ಯದಲ್ಲಿ ಬರುವ ಉದಾತ್ತ ಎಕಾರವು (ಕನ್ನಡ–ತುಳು, ಎರಡೂ ಭಾಷೆಗಳಲ್ಲಿ) ಪ್ರತ್ಯಯವೇ ಆಗಿರುತ್ತದೆ.

4. ಪ್ರತ್ಯಯರೂಪವಾದ ಉದಾತ್ತ ಎಕಾರವನ್ನು ಪ್ರತ್ಯೇಕವಾಗಿ ಗುರುತಿಸುವುದು ಅಪೇಕ್ಷಣೀಯ; ಮತ್ತು ಅದಕ್ಕೇ ಚಿಹ್ನೆಯನ್ನು ಉಪಯೋಗಿಸುವುದು ಸರಿಯಾದ ವಿಧಾನ.

5. ಪದಾಂತದ ಪ್ರತ್ಯಯರೂಪಿಯಾದ ಉದಾತ್ತ ಎಕಾರವನ್ನೂ ಪದಾದಿ ಪದಮಧ್ಯಗಳ ಸಹಜ ಉದಾತ್ತ ಎಕಾರವನ್ನೂ ಸಮೀಕರಿಸುವುದು ಉಚಿತವಲ್ಲ.

ಕನ್ನಡದಲ್ಲಿ ರೂಢವಾಗಿರುವ ವ್ಯಂಜನ ಚಿಹ್ನೆಯನ್ನು (ಪಣಿಯಾಡಿಯವರಂತೆ) ಕನ್ನಡ ಲಿಪಿಯಲ್ಲಿಯೇ ಬೇರೊಂದೆಡೆಗೆ ಅಳವಡಿಸಿಕೊಳ್ಳುವುದೂ ಗೊಂದಲಕ್ಕೆಡೆ ಮಾಡುವುದರಿಂದ, ಪ್ರೊ॥ ಮರಿಯಪ್ಪ ಭಟ್ಟ ಮತ್ತು ಡಾ॥ ಶಂಕರ ಕೆದಿಲಾಯರು ತಮ್ಮ ನಿಘಂಟಿನಲ್ಲಿ ರೋಮನ್ ಲಿಪ್ಯಂತರದಲ್ಲಿ ಉದಾತ್ತ ಎಕಾರಕ್ಕೆ ಬಳಸಿಕೊಂಡ ಚಿಹ್ನೆಯನ್ನೇ ಕನ್ನಡ ಲಿಪಿಯಲ್ಲಿಯೂ ಅಳವಡಿಸಿಕೊಳ್ಳಬಹುದಾಗಿದೆ.[10]

---

10 ಕನ್ನಡ–ತುಳು, ಎರಡೂ ಭಾಷೆಗಳಲ್ಲಿ ಉತ್ತಮ ಪುರುಷ ಏಕವಚನದ ಆಖ್ಯಾತ ಪ್ರತ್ಯಯವು ಅನುದಾತ್ತ ಎಕಾರ ಸ್ವರರೂಪದಲ್ಲಿರುವುದನ್ನು ಗಮನಿಸಬಹುದು. ಉದಾ: ಕನ್ನಡದ ಹೋದೆ, ಬಂದೆ ಇತ್ಯಾದಿ ಮತ್ತು ತುಳುವಿನ ಪೋಯೆ (ಹೋದೆ), ಬತ್ತೆ (ಬಂದೆ) ಇತ್ಯಾದಿ. ಇಂತಹ ಸಂದರ್ಭಗಳಲ್ಲಿ ಕನ್ನಡದಲ್ಲಾಗಲೀ ತುಳುವಿನಲ್ಲಾಗಲೀ ಯಾವುದೇ ಲಿಪಿಸಂಜ್ಞೆಯನ್ನು ಉಪಯೋಗಿಸಬೇಕಾದ ಅವಶ್ಯಕತೆಯಿಲ್ಲ. ಆದರೆ, ತುಳು 'ಭಾಗವತೊ'ದಲ್ಲಿ ಉತ್ತಮ ಪುರುಷ ಏಕವಚನದ ಕ್ರಿಯಾಪದ ಬರುವಲ್ಲೆಲ್ಲಾ (ಪಣಿಯಾಡಿಯವರು ಬಳಸಿದಂತಹ) ವ್ಯಂಜನ ಚಿಹ್ನೆಯನ್ನು ಅದರ ಸಂಪಾದಕರು ಬಳಸಿಕೊಂಡಿರುತ್ತಾರೆ. ಪದಾಂತದ ಸಹಜ ಅನುದಾತ್ತ ಎಕಾರ ಬರುವಲ್ಲೆಲ್ಲೂ ಚಿಹ್ನೆಯನ್ನು ಬಳಸಿಲ್ಲವೆಂಬುದು ಇಲ್ಲಿ ಗಮನಾರ್ಹ. 'ಭಾಗವತೊ'ದ ಮೂಲಪ್ರತಿಯಲ್ಲಿ ಯಾವುದೇ ಚಿಹ್ನೆಯನ್ನು ಇಂತಹ ಸಂದರ್ಭಗಳಲ್ಲಿ ಬಳಸಿಲ್ಲ. ಲಿಪ್ಯಂತರದಲ್ಲಿ (ಆಖ್ಯಾತ ಪ್ರತ್ಯಯ ಬರುವಂತಹ ಸಂದರ್ಭಗಳಲ್ಲಿ) ತಾನು ಇದನ್ನು ಬಳಸಿಕೊಂಡುದಾಗಿ ಸಂಪಾದಕರು ಪೀಠಿಕೆಯಲ್ಲಿ ಹೇಳಿರುತ್ತಾರೆ. (ತುಳು 'ಭಾಗವತೊ', ಪೀಠಿಕೆ, ಪುಟ 40). ಪ್ರೊ॥ ಮರಿಯಪ್ಪ ಭಟ್ಟ ಮತ್ತು ಡಾ॥ ಕೆದಿಲಾಯರ ನಿಘಂಟನ್ನನುಸರಿಸಿ ಪ್ರತ್ಯಯ ರೂಪಿಯಾದ ಉದಾತ್ತ ಎಕಾರಕ್ಕೇ ಸೂಕ್ತವಾದ ಚಿಹ್ನೆಯನ್ನು ಬಳಸಿದ್ದರೆ, ಅನುದಾತ್ತ ಎಕಾರಗಳಲ್ಲೇ ಕೆಲವನ್ನು ಗುರುತಿಸುವುದು ಕೆಲವನ್ನು ಗುರುತಿಸದಿರುವುದೆಂಬ ಈ ಗೊಂದಲ ತಪ್ಪುತ್ತಿತ್ತು.

ಆಧಾರ ಗ್ರಂಥಗಳು :

1. Rev. J. Brigel—'A Grammar of the Tulu Language', Mangalore, 1872.

2. Rev. A. Manner — 'Tulu English Dictionary' Mangalore, 1886.

3. ಎಸ್. ಯು. ಪಣಿಯಾಡಿ—'ತುಳು ವ್ಯಾಕರಣ', ಉಡುಪಿ, 1932.

4. ಪ್ರೊ॥ ತೆಕ್ಕುಂಜ ಗೋಪಾಲಕೃಷ್ಣ ಭಟ್ಟ— 'ತುಳುವಿನ ಸ್ವರಮಾಲೆ' - 'ಮಧುಪುರ', ಸಂ: ಕೆ. ವೆಂಕಟಕೃಷ್ಣಯ್ಯ, ಕಾಸರಗೋಡು, 1962, ಪುಟ 115–121.

5. Prof. M. Mariappa Bhat & A. Shankar Kedilaya—'Tulu English Dictionary', Madras, 1967.

6. ಬಿ. ಎ. ವಿವೇಕ ರೈ— 'ತುಳು ಭಾಷೆ ಒಂದು ಅಧ್ಯಯನ' – 'ತೌಳವ ಸಂಸ್ಕೃತಿ', ಮೈಸೂರು, 1977, ಪುಟ 65–106.

7. ವೆಂಕಟರಾಜ ಪುಣಿಂಚತ್ತಾಯ (ಸಂ) — ವಿಷ್ಣುತುಂಗ ವಿರಚಿತ 'ಶ್ರೀ ಭಾಗವತೊ', ಮಂಗಳೂರು, 1984.

8. ಡಾ॥ ಯು. ಪಿ. ಉಪಾಧ್ಯಾಯ (ಪ್ರ. ಸಂ.) — 'ಕರಾಜಿನ', ತುಳು ನಿಘಂಟು ಮಾದರಿ, ಸಂಪುಟ 2, ಉಡುಪಿ, 1985.

ಬಸವಣ್ಣನವರ ಒಂದು ವಚನದ ವಿಶ್ಲೇಷಣೆ

—ಎನ್. ಬಿ. ಪರಿಮಳಾಬಾಯಿ

ಎಲ್ಲರ ಗಂಡರೂ ಬೇಂಟೆಗೆ ಹೋದರು
ನೀನೇಕೆ ಹೋಗೆ, ಎಲೆ ಗಂಡನೆ ?
ಸತ್ತುದನು ತಾರದಿರು, ಕೈ ಮುಟ್ಟಿ ಕೊಲ್ಲದಿರು,
ಅಡಗಿಲ್ಲದೆ ಮನೆಗೆ ಬಾರದಿರು !
ದೇವರ ಧರ್ಮದೊಳೊಂದು ಬೇಂಟೆ ದೊರೆಕೊಂಡೊಡೆ
ಕೂಡಲಸಂಗಮ ದೇವಗರ್ಪಿತವ ಮಾಡುವೆ ಎಲೆ ಗಂಡನೇ !

ಈ ವಚನವನ್ನು ಓದಿದರೆ ಬೆಡಗಿನ ವಚನಗಳ ನೆನಪಾಗುತ್ತದೆ. ಇದಕ್ಕೆ 'ಬಸವಣ್ಣನವರ ಟೀಕಿನ ವಚನ'ದಲ್ಲಿ ವ್ಯಾಖ್ಯಾನ ನೀಡಿಲ್ಲ. ಈ ವಚನಕ್ಕೆ ಬೆಂ.ವಿ.ವಿ. ಪ್ರಕಟಿಸಿದ 'ವಚನ ಕಮ್ಮಟ'ದಲ್ಲಿ ಕೊಟ್ಟ ವಿವರಣೆ ಈ ರೀತಿ ಇದೆ.

"ಇದು ಬಸವಣ್ಣನವರ ವಚನ. ಸತಿ-ಪತಿ ಭಾವದ ವಚನಗಳಲ್ಲಿ ಒಂದು* ಬೇಟೆಯ ಚಿತ್ರದ ಮೂಲಕ ಈ ವಚನ ಬೆಳೆಯುತ್ತದೆ. ನಾಟಕೀಯ ಸಂಭಾಷಣೆಯ ಧಾಟಿ ಈ ವಚನಕ್ಕೆ ಕ್ರಿಯಾತ್ಮಕತೆಯನ್ನು ತಂದುಕೊಟ್ಟಿದೆ.

ಗಂಡ ಎಂಬ ಪದ—ಗಂಡ, ಪರಾಕ್ರಮಿ ಎಂಬ ಎರಡು ಅರ್ಥಗಳನ್ನು ಹೊಂದಿದೆ. ಎಲ್ಲರ ಗಂಡಂದಿರು (ಎಲ್ಲ ಪರಾಕ್ರಮಿಗಳೂ) ಬೇಟೆಗೆ ಹೋದರೂ 'ನೀನೇಕೆ ಹೋಗೆ?' ಎಂದು ಪ್ರಶ್ನಿಸುತ್ತಿರುವ 'ಹೆಂಡತಿ'ಯ ಮಾತು ಹಿನ್ನೆಲೆಗೆ ಇದೆ. 'ಸತ್ತುದನು ತಾರದಿರು' ಎಂಬ ಎಚ್ಚರ – ಪರಾಕ್ರಮದಿಂದ ಬೇಟೆಯಾಡಿ ತರಬೇಕಿರುವ ಅಗತ್ಯವನ್ನು ಹೇಳಲಾಗಿದೆ. 'ಕೈಮುಟ್ಟಿ ಕೊಲ್ಲದಿರು' ಎಂಬ ಮಾತು ಹಿಂಸೆಯ ಮೂಲಕವಲ್ಲದೆ ಬೇಟೆಯಾಡುವುದರ ಮೂಲಕವೇ ತರಬೇಕಾದ ಅಗತ್ಯವನ್ನು ಹೇಳಲಾಗಿದೆ. ಕೂಡಲಸಂಗಮನಿಗೆ ಅರ್ಪಿಸಬೇಕಾದ ಅರ್ಪಣೆ ತನ್ನದೇ ಆದ ಹೋರಾಟದಿಂದ ಸಿದ್ಧಿಸಿಕೊಳ್ಳಬೇಕಾಗಿರುವ ಅಗತ್ಯತೆಯನ್ನಿಲ್ಲಿ ಹೇಳಲಾಗಿದೆ.

---

* ಇಲ್ಲಿ 'ಪತಿ' ಎಂಬುದು ಮನಸ್ಸಿಗೆ ಸಂಕೇತ. 'ಸತಿ' ಬುದ್ಧಿಗೆ ಸಂಕೇತ. ಸಾಮಾನ್ಯ ಲೌಕಿಕ ದಾಂಪತ್ಯಭಾವ ಈ ವಚನದಲ್ಲಿದೆ. ಲೌಕಿಕವಾಗಿ ನೋಡಿದರೂ ಗಂಡ ಯಜಮಾನ ನಿಜ. ಅವನಿಗೆ ಸರಿಯಾದ ಮಾರ್ಗನಿರ್ದೇಶನ ಮಾಡಿ ಸಂಸಾರ ನಡೆಸುವವಳು ಹೆಣ್ಣು. ಆದ್ದರಿಂದ ಸತಿಗೆ ಹೆಚ್ಚು ಪ್ರಾಧಾನ್ಯ. ತತ್ತ್ವಶಾಸ್ತ್ರೀಯವಾಗಿ ಮನಸ್ಸನ್ನು ನಿಯಂತ್ರಿಸುವುದು ಬುದ್ಧಿ. ಅದು ಕಾರ್ಯಪ್ರವೃತ್ತವಾಗುವಂತೆ ಬುದ್ಧಿ ಪ್ರಚೋದಿಸುತ್ತದೆ. ವಚನದಲ್ಲಿ ವ್ಯಕ್ತವಾಗಿರುವ ಬುದ್ಧಿ ಮತ್ತು ಮನಸ್ಸುಗಳೇ 'ಸತಿ–ಪತಿ' ಎಂಬ ನಿರ್ಧಾರಕ್ಕೆ ಬಂದಾಗ ಹೆಣ್ಣಿನ ಸ್ಥಾನಮಾನ ನಿರ್ದೇಶನದ ದೃಷ್ಟಿಯಿಂದ ಈ ವಚನ ವಿಶಿಷ್ಟತೆಯನ್ನು ಪಡೆಯುತ್ತದೆ.

'ದೇವರ ಧರ್ಮದೊಳೊಂದು ಬೇಂಟೆ ದೊರೆಕೊಂಡೊಡೆ ಕೂಡಲ ಸಂಗಮ-ಗಲಿ‍ಂತವ ಮಾಡುವೆ.' ಈ ಮಾತುಗಳು ದೇವರ ಧರ್ಮವಾದ 'ಸತ್ತುದನ್ನು ತಾರದ, ಕೈಮುಟ್ಟಿ ಕೊಲ್ಲದ' ಅಂಶವನ್ನು ಸ್ಪಷ್ಟಪಡಿಸುತ್ತದೆ.

ಧರ್ಮಪ್ರಚಾರದ ವಿಧಾನವನ್ನು ತಿಳಿಸುವ ವಚನವೆಂದೂ ಇದಕ್ಕೆ ವಿವರಣೆ ಕೊಡುವ ಸಾಧ್ಯತೆಯಿದೆ. (ಬೇಂಟೆ=ವೀರಶೈವ ದೀಕ್ಷೆಗಾಗಿ ಜನಗಳನ್ನು ಕಲೆ ಹಾಕುವುದು.)

ಈ ವಚನದ ಆಶಯ ಏನಿರಬಹುದೆಂಬುದನ್ನು ಕೆಲವು ವಚನಗಳನ್ನು ಗಮನ ದಲ್ಲಿಟ್ಟುಕೊಂಡು ವಿಶ್ಲೇಷಣೆ ಮಾಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಬಸವಣ್ಣನವರ ಹೆಚ್ಚು ವಚನಗಳಂತೆ ಇದೂ ಕೂಡ ಆತ್ಮಪರಿವೀಕ್ಷಣೆಗೆ ಸಂಬಂಧಿಸಿದ ವಚನ. ಬಸವಣ್ಣನವರು ತಮ್ಮನ್ನು ತಾವು (ಬುದ್ಧಿಮನಸ್ಸನ್ನು) ಪ್ರಶ್ನಿಸಿಕೊಳ್ಳುವುದರ ಮೂಲಕ ಪ್ರಾರಂಭವಾಗುವ ವಚನ ವೈಯಕ್ತಿಕತೆಯಿಂದ ಸಾರ್ವತ್ರಿಕತೆಯತ್ತ ಚಲಿಸುತ್ತದೆ.

ಧಾರ್ಮಿಕ ಪರಿಭಾಷೆಯ ಪ್ರಕಾರ 'ಬೇಟೆ' ಎಂಬುದು ಇಂದ್ರಿಯ ನಿಗ್ರಹ ವನ್ನು ಸೂಚಿಸುವಂತಹದು. ಬೇಟೆಯ ಉದ್ದೇಶ ವಶಪಡಿಸಿಕೊಳ್ಳುವಿಕೆ. ಬೇಟೆಗೆ ಹೋಗಬೇಕಾದದ್ದು ಮನಸ್ಸು. ಬೇಟೆಯಾಡಬೇಕಾದದ್ದು ಇಂದ್ರಿಯಗಳನ್ನು. ಸುಖಾಭಿಮುಖವಾಗಿರುವ ಇಂದ್ರಿಯಗಳನ್ನು ಈಶ್ವರಾಭಿಮುಖವಾಗಿಸುವುದೇ ಈ ಬೇಟೆಯ ಉದ್ದೇಶ.

ಹಿಂದೆ ಬೇಟೆಯ ಉದ್ದೇಶವೂ ಕೂಡ ದುಷ್ಟಪ್ರಾಣಿಗಳಿಂದ ರಕ್ಷಣೆ ಪಡೆದು ಕೊಳ್ಳುವುದೇ ಆಗಿತ್ತು. ನಮ್ಮ ಇಂದ್ರಿಯಗಳೂ ದುಷ್ಟಪ್ರಾಣಿಗಳಿಗೆ ಸಮಾನ. ಆದ್ದರಿಂದಲೇ ಸರ್ವಜ್ಞನು–

"ಕಣ್ಣು ನಾಲಗೆ ಮನವು ತನ್ನದೆಂದೆನಬೇಡ
ಅನ್ಯರು ಕೊಂದರೆನಬೇಡ—ಇವು ಮೂರು
ತನ್ನ ಕೊಲ್ಲುವವು-ಸರ್ವಜ್ಞ"

ಎನ್ನುತ್ತಾನೆ. ಅರಿಷಡ್ವರ್ಗವನ್ನು ಪ್ರೋಷಿಸಿ ಆತ್ಮನಾಶಕ್ಕೆ ಕಾರಣವಾಗುವುದನ್ನು ತಪ್ಪಿಸಲು ಇಂದ್ರಿಯ ನಿಗ್ರಹ ಅಗತ್ಯ. ಇದರ ಪರಿಣಾಮವೇ ವೈರಾಗ್ಯ.

ಸಾಮರ್ಥ್ಯವಿದ್ದೂ ನೀನು ಏಕೆ ಇಂದ್ರಿಯಗಳನ್ನು ನಿಯಂತ್ರಿಸಲಾರೆ? ಸಾಮರ್ಥ್ಯವಿದ್ದವರನೇಕರು ಹಾಗೆ ಮಾಡಿದ್ದಾರೆ ಎಂದು, ಬಸವಣ್ಣನವರು ತಮ್ಮ ಮನಸ್ಸನ್ನು ಪ್ರಶ್ನಿಸಿಕೊಳ್ಳುತ್ತಾರೆ.

ಸತ್ತದ್ದು ಚೈತನ್ಯ ರಹಿತವಾದದ್ದು. ಚೈತನ್ಯ ಜೀವಂತಿಕೆಯ ಲಕ್ಷಣ ಬಸವಣ್ಣನವರೇ ಹೇಳಿರುವ ಹಾಗೆ–

''ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುಹೋಗದ ಮುನ್ನ
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ
ಕಾಲ ಮೇಲೆ ಕೈಯನೂರಿ ಕೋಲ ಹಿಡಿಯುದ ಮುನ್ನ
ಮುಪ್ಪಿನಿಂದೊಪ್ಪವಳಿಯುದ ಮುನ್ನ, ಮೃತ್ಯು ಮುಟ್ಟದ ಮುನ್ನ''

'ಕೂಡಲ ಸಂಗಮ'ನನ್ನು ಪೂಜಿಸಬೇಕು. ಇಂದ್ರಿಯಗಳು ಚೈತನ್ಯವನು ಕಳೆದುಕೊಳ್ಳುವ ಮೊದಲೇ ಅವುಗಳನ್ನು ವಶಪಡಿಸಿಕೊಂಡು ದೇವರ ಸೇವೆಯ ತೊಡಗಿಸಬೇಕು. ಶಕ್ತಿಹೀನ ಇಂದ್ರಿಯಗಳಿಂದ ಯಾವುದೇ ಕೆಲಸ ಅಸಾಧ್ಯ.

ಕೈಮುಟ್ಟಿ ಕೊಲ್ಲದಿರುವುದು ಬಲವಂತವಾಗಿ ಇಂದ್ರಿಯಗಳನ್ನು ನಿಃಸತ್ವ ಗೊಳಿಸದಿರುವುದನ್ನು, ಇಂದ್ರಿಯ ದಮನ ಮಾಡದಿರುವುದನ್ನು ಸೂಚಿಸುತ್ತದೆ ಶರಣರಲ್ಲಿ ಯಾರೂ ಬಲವಂತದ ಮಾಘಸ್ನಾನ ಮಾಡಿದವರಿಲ್ಲ.

''ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೊಡುವುದು
ಭಕ್ತನ ಮನ ಮಣ್ಣಿನೊಳಗಾದರೆ ಕೊಂಡು ಆಲಯವ ಮಾಡುವುದು
ಭಕ್ತನ ಮನ ಹೊನ್ನಿನೊಳಗಾದರೆ ಬಳಲಿ ದೊರಕಿಸುವುದು ನೋಡಾ
ಕಪಿಲಸಿದ್ಧ ಮಲ್ಲಿಕಾರ್ಜುನ''

ಎಂದು ಸಿದ್ಧರಾಮ ಹೇಳಿದರೆ,

''ಸತಿಪತಿಗಳೊಂದಾಗಿಪ್ಪ ಭಕ್ತಿ ಹಿತವಾಗಿಪ್ಪುದು ಶಿವನಿಗೆ''

ಎಂದು ಬಸವಣ್ಣ ಹೇಳುತ್ತಾರೆ.

ಒಂದು ಬಾರಿ ಜೇಡರದಾಸಿಮಯ್ಯನನ್ನು ಯಾರೋ ಸಂನ್ಯಾಸ ಹೆಚ್ಚೋ ಸಂಸಾರ ಹೆಚ್ಚೋ ಎಂದು ಕೇಳಿದರಂತೆ. ಆಗ ಅವನು ತನ್ನ ಹೆಂಡತಿಯನ್ನು ತೋರಿಸಿ, 'ಇಂತಹ ಹೆಣ್ಣು ಸಿಕ್ಕರೆ ಸಂಸಾರ ಮಾಡಿಕೊಂಡಿರುವುದೇ ಮೇಲು' ಎಂದನಂತೆ.

ಅನುಕೂಲೆಯಾದ ಸತಿ ತನ್ನ ಪತಿಯ ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾಗದೆ ಸಹಕಾರಿಯಾಗುತ್ತಾಳೆ. ಸಹಚರಿಯಾಗುತ್ತಾಳೆ. ಇದನ್ನು ಅರಿತವರು ಶರಣರು.

'ಮಾಂಸ'ವೆಂದರೆ ಭಕ್ತಿ. ಭಕ್ತಿ ವೀರಶೈವ ಸಾಧನೆಯ ಆರು ಹಂತಗಳ ಪ್ರಥಮ ಸೋಪಾನ. ಭಕ್ತಿ ಇಲ್ಲದವರಿಗೆ ಅನುಭವಮಂಟಪದಲ್ಲಿ ಪ್ರವೇಶವಿಲ್ಲ ಈ ಭಕ್ತಿಸೂತ್ರವೇ ಶರಣಮಣಿಗಳನ್ನು ಒಂದೆಡೆ ಸೇರಿಸಿದ್ದು.

"ಕಲ್ಯಾಣವೆಂಬುದಿನ್ನಾರಿಗೂ ಹೊಗಬಾರದು ಅಸಾಧ್ಯವಯ್ಯ!
ಆಸೆ-ಆಮಿಷವನಳಿದವಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು
ಒಳಗು-ಹೊರಗು ಶುದ್ಧವಾದವಂಗಲ್ಲದೆ ಕಲ್ಯಾಣವ ಹೊಗಬಾರದು
ನಾನೆಂಬುದ ಹರಿದವಂಗಲ್ಲದೆ ಕಲ್ಯಾಣವ ಹೊಗಬಾರದು
ಒಳಗು ತಿಳಿದು ಚೆನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯಳಿದೆನಾಗಿ ಕಲ್ಯಾಣವ ಕಂಡು ನಮೋ ನಮೋ ಎನುತಿದ್ದೆನು"

ಅಕ್ಕನ ಈ ವಚನ ಈ ಭಾವನೆಯನ್ನೇ ಘೋಷಿಸುತ್ತದೆ. ಚೆನ್ನಮಲ್ಲಿಕಾರ್ಜುನಂಗೊಲಿಯುವುದು ಭಕ್ತಿಯಲ್ಲದೆ ಬೇರಲ್ಲ.

ಆದರೆ ಮನುಷ್ಯ ಎಷ್ಟೇ ಪ್ರಯತ್ನಪಟ್ಟರೂ ಭಗವಂತನ ಒಲುಮೆಯಿಲ್ಲದೆ ಈ ಕಾರ್ಯ ಸಾಧ್ಯವಾಗದು. ಅವನು 'ಒಮ್ಮನವಾದರೆ ಒಡನೆ ನುಡಿಯುವ, ಇಮ್ಮನವಾದರೆ ನುಡಿಯದ ಶೆಟ್ಟಿ'— ಅವನ ಕರುಣೆಯಿಂದ ಇಂದ್ರಿಯಗಳನ್ನು ನಿಯಂತ್ರಿಸಿಕೊಳ್ಳಬೇಕು.

'ವಚನದಲ್ಲಿ ನಾಮಾಮೃತ ತುಂಬಿ
ನಯನದಲ್ಲಿ ಮೂರುತಿ ತುಂಬಿ
ಮನದಲ್ಲಿ ನಿಮ್ಮ ನೆನಹು ತುಂಬಿ
ಕಿವಿಯಲ್ಲಿ ಕೀರುತಿ ತುಂಬಿ
ಕೂಡಲ ಸಂಗಮದೇವಾ
ನಿಮ್ಮ ಚರಣಕಮಲದಲಾನು ತುಂಬಿ'

ಎಂಬಂತೆ ಅವನ್ನು ಕೂಡಲ ಸಂಗಮನಾಥನಿಗೆ ಅರ್ಪಿಸಿ ಅವನಲ್ಲಿ ಒಂದಾಗುವ ಬಯಕೆಯನ್ನು ಈ ವಚನ ವ್ಯಕ್ತಪಡಿಸುತ್ತದೆ. ಚೇಟಿಯ ಪ್ರತಿಮೆಯ ಮೂಲಕ ವೀರಶೈವ ಸಿದ್ಧಾಂತವನ್ನು ನಮ್ಮ ಮುಂದಿಡುವ ಈ ವಚನ ವಿಶಿಷ್ಟವಾದುದಾಗಿದೆ.

‘ಅರ್ಥನೇಮಿ ಪುರಾಣ’ದ ತ್ರಿಪದಿಯು (೩–೩೮/೩೯) ಪಾಠ ಮತ್ತು ಅರ್ಥ

—ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ

ನೇಮಿಚಂದ್ರನ ಅರ್ಥನೇಮಿ ಪುರಾಣದಲ್ಲಿರುವ ಒಂದೇ ಒಂದು ತ್ರಿಪದಿಯು (೩–೩೮/೩೯) ಪಾಠ ಅದರ ಮುದ್ರಿತ ಪ್ರತಿಗಳಲ್ಲಿ ಕ್ರಮವಾಗಿ ಹೀಗಿದೆ :

(೧) ೧೯೧೪ ಮತ್ತು ೧೯೬೧ರ ಮುದ್ರಿತ ಪ್ರತಿಗಳಲ್ಲಿ :

ವಾವಾಳಿಕ ಪುನ್ನಾಗಗಂತವೆಮೊಂ
ದೀ ನಡೆದವುವೆ ತಿಮಿರದೊಳೆನಿಪುವು
ನಾನಾಹಿಮುಸ್ತಮಣಿದೀಪಾ (?)

ಎರಡು ಪ್ರತಿಗಳ ನಡುವಣ ಪದವಿಭಾಗದ ಅಲ್ಪವ್ಯತ್ಯಾಸವನ್ನು ಇಲ್ಲಿ ಗಮನಿಸಿಲ್ಲ. ೧೯೧೪ರ ಪ್ರತಿಯುಲ್ಲಿ “ಈ ಪದ್ಯದಲ್ಲಿ ವೃತ್ತವೂ ಪ್ರಾಸವೂ ತಪ್ಪಾಗಿವೆ” ಎಂಬುದಾಗಿ ಅಡಿಟಿಪ್ಪಣಿಯುಲ್ಲಿದೆ. ೧೯೬೧ರಲ್ಲಿಯು ಪದ್ಯಪಾಠ ೧೯೧೪ರಲ್ಲಿಯುದೇ ಎನ್ನುವುದು ವಿದಿತ.

(೨) ೧೯೬೮ರ ಮುದ್ರಿತ ಪ್ರತಿಯುಲ್ಲಿ :

ಕಾನೊಳಗೆ ಕೆನಪುಂಸಾ ನ ಗಂತಬ್ಯಮೊಂ
ದೀ ನಡೆದವುವೆ ತಿಮಿರದೊಳೆನಿಪುವು
ನಾನಾಹಿ ಹಸ್ತಿಮಣಿದೀಪಂ

ಅಡಿಟಿಪ್ಪಣಿಯುಲ್ಲಿ ಸ್ವಲ್ಪಮಟ್ಟಿಗೆ ಪಾಠದ ಒಂದಂಶದ ವಿಮರ್ಶೆಯಿದೆ. ಇದು ‘ಕಾನೊಳಗೆ’ ಎಂಬ ಭಾಗಕ್ಕೆ ಸಂಬಂಧಿಸಿದೆ.

‘ಕನ್ನಡ ಛಂದಃಸ್ವರೂಪ’ವೆಂಬ ನನ್ನ ಕೃತಿಯುಲ್ಲಿ (೧೯೭೮) ಈ ಪದ್ಯದ ಸಂಬಂಧದಲ್ಲಿ ನಾನು ಹೀಗೆ ಟಿಪ್ಪಣಿ ಬರೆದಿದ್ದೇನೆ : “...ಇದರ ಪಾಠದಲ್ಲಿ ಕ್ಲಿಷ್ಟತೆಯಿದೆ. ಛಂದಸ್ಸಿನ ದೃಷ್ಟಿಯಿಂದ ಮೈಸೂರಿನದಕ್ಕಿಂತ ಧಾರವಾಡ ಪರಿಷ್ಕರಣದ ಪಾಠ ಸ್ವಲ್ಪ ಮೇಲು. ಆದರೆ ಅರ್ಥದ ದೃಷ್ಟಿಯಿಂದ ಎರಡೂ ಅಸಮರ್ಪಕ. ಮೊದಲ ಪಾದದ ಪಾಠಸ್ಥಾನ ಒಂದು ಪಾಠಗ್ರಂಥಿ” (ಪು. ೪೦೫).

ಲೋಚನದ ಡಿಸೆಂಬರ್ ೧೯೮೫ರ ಸಂಚಿಕೆಯಲ್ಲಿ (೩–೨) ವಿದ್ವಾನ್ ಎನ್. ರಂಗನಾಥ ಶರ್ಮಾ ಅವರು ‘ನೇಮಿನಾಥ ಪುರಾಣದಲ್ಲಿ ಪರಿಷ್ಕರಣ’ ಎಂಬ ತಮ್ಮ ಒಂದು ಲೇಖನದಲ್ಲಿ, ಈ ಪದ್ಯದ ಪಾಠವನ್ನೂ ವಿಮರ್ಶೆಗೆ ಎತ್ತಿಕೊಂಡಿದ್ದಾರೆ.

ಅಲ್ಲಿ ಅವರು ಧಾರವಾಡದ ಪ್ರತಿಯಲ್ಲಿ ಒಪ್ಪಿರುವ ಪಾಠ, ಕೊಟ್ಟಿರುವ ಪಾಠಾಂತರಗಳನ್ನು ಮೊದಲು ಸೂಚಿಸಿ, ತಮ್ಮ ಪರಿಷ್ಕರಣವನ್ನು ಹೀಗೆ ನಿರೂಪಿಸಿದ್ದಾರೆ :

> ಕಾನೊಳಗೆ "ಕೇನಾಪಿ ಪುಂಸಾ ನಾಗಂತವ್ಯ" ಎಂ-
> ದೇನ್ನಡೆದಪುವೊ ತಿಮಿರದೊಳಿನಿಪುದು
> ನಾನಾಹಿಮಸ್ತಮಣಿದೀಪಂ ॥

ಅಲ್ಲದೆ, "ಕಾಡಿನೊಳಗೆ 'ಯಾವ ಪುರುಷನಿಂದಲೂ ಬರುವಿಕೆಯಾಗಬಾರದು' (ಯಾವ ಮನುಷ್ಯನೂ ಬರಬಾರದು) ಎಂದು ತಿಳಿಸುವುದಕ್ಕಾಗಿ ಸರ್ಪಗಳು ಕತ್ತಲಲ್ಲಿ ತಿರುಗಾಡುತ್ತಿವೆಯೋ–ಎಂಬುದನ್ನು ನಾನಾ ಸರ್ಪಗಳ ಶಿರಸ್ಸಿನಲ್ಲಿರುವ ಮಣಿದೀಪವು ತಿಳಿಸುವಂತೆ ಕಾಣುತ್ತದೆ. ಮಸ್ತ=ಮಸ್ತಕ" ಎಂಬುದಾಗಿ ಅರ್ಥವಿವರಣೆ ಕೊಟ್ಟಿದ್ದಾರೆ. ತಮ್ಮ ವಿಮರ್ಶೆಯನ್ನು ಮುಗಿಸುತ್ತ, ಅವರು ಮುಂದಿನ ಈ ಮಾತುಗಳನ್ನು ತಿಳಿಸಿದ್ದಾರೆ: "ಯಾರೂ ಕಾಡೊಳಗೆ ಬರಕೂಡದೆಂದು ತಿಳಿಸುತ್ತ ಸರ್ಪಗಳು ಕಾವಲಾಗಿ ಗಸ್ತು ಹೊಡೆಯುತ್ತಿದ್ದವು–ಎಂದು ತಾತ್ಪರ್ಯ. ಉತ್ಪ್ರೇಕ್ಷಾಲಂಕಾರ...ತ್ರಿಪದಿಯ ಲಕ್ಷಣವು ಈ ಪರಿಷ್ಕರಣದಲ್ಲಿ ಸರಿಯಾಗಿ ಸಮನ್ವಯಿಸುತ್ತದೆಯೆ–ಎಂಬುದನ್ನು ವಿದ್ವಜ್ಜನರು ಪರಿಶೀಲಿಸಬೇಕು. ತ್ರಿಪದಿಯ ಲಕ್ಷಣದಲ್ಲಿ ಮತಭೇದಗಳಿರುವುದರಿಂದ ಈ ಮಾತನ್ನು ಬರೆಯಬೇಕಾಯಿತು" ಎಂದಿದ್ದಾರೆ.

ಈ ಪದ್ಯದಲ್ಲಿ ಸಂಸ್ಕೃತ ವಾಕ್ಯವೇಷ್ಪನವಿರುವ ಮೊದಲ ಪಾದದ ಪಾಠ ಪ್ರತಿಕಾರರ ಕೈಗೆ ಸಿಕ್ಕು ಕೆಟ್ಟು, ಪ್ರತ್ಯಂತರದ ಅಪಪಾಠಗಳಿಗೆ ದಾರಿಮಾಡಿದೆಯೆಂದು ವಿಶ್ವಾಸಾರ್ಹವಾದ ಜ. ಪ್ರತಿಯ ಆಧಾರದ ಮೇಲೆ ನಾವು ತಿಳಿಯಬಹುದಾಗಿದೆ. ಆ ವಾಕ್ಯವೇಷ್ಪನದ ಸ್ವರೂಪ ಸ್ಪಷ್ಟವಾದರೆ, ಪದ್ಯಪಾಠ ಬಲುಮಟ್ಟಿಗೆ ನೇರ್ಪಡಬಹುದು. ಅಂತಹ ಪ್ರಯತ್ನವನ್ನು ಶ್ರೀಮಾನ್ ಶರ್ಮರು ನಡೆಸಿ, ೩ನೆಯ ಪಾದದಲ್ಲಿ ಪ್ರತ್ಯಂತರದ 'ಮಸ್ತ' ಪಾಠದ ಸ್ವೀಕಾರದೊಂದಿಗೆ, ಪೂರ್ಣ ಪದ್ಯದ ಪುನಾರಚನೆಯನ್ನು ಮಾಡಿ, ಅದಕ್ಕೆ ಅನುಗುಣವಾಗಿ ಅರ್ಥವಿವರಣೆ ನೀಡಿದ್ದಾರೆ. ಆದರೆ ಅವರ ಪ್ರಯತ್ನ ಸಫಲವಾಗಿಲ್ಲ ಎಂದು ಹೇಳಬೇಕಾಗಿದೆ. ವಾಕ್ಯವೇಷ್ಪನವಿರುವ ಪಾದದಲ್ಲಿ ಆದ್ಯಂತವಾಗಿ ಎರಡು ರುದ್ರಗಣಗಳು ಬಂದಿರುವಂತೆ ಪುನಾರಚನೆಯಾಗಿರುವುದು ಸೂಕ್ತವಲ್ಲ. ಪಾದದಲ್ಲಿ ರುದ್ರ ಒಮ್ಮೆ ಕಾಣಿಸಿಕೊಂಡರೆ, ಸಮೀಪದಲ್ಲಿ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬರುವುದು ಸಾಮಾನ್ಯ. ಮಾರ್ಗಕವಿಗಳ ತ್ರಿಪದಿಗಳಲ್ಲಿ ಇದು ಸಹಜ. ಈ ಕಾರಣ ಪ್ರಸ್ತುತ ತ್ರಿಪದಿಯ ಮೊದಲ ಪಾದದ ಪಾಠ ಪುನರ್ವಿಮರ್ಶೆಗೆ ವಿಷಯವಾಗುತ್ತದೆ.

ಈಗ ಬಾಹ್ಯಸಾಕ್ಷ್ಯವೊಂದರ ಅವಲಂಬನದಿಂದ ಈ ಪಾಠಸಮಸ್ಯೆ ಹೇಗೆ ಪರಿಹಾರವಾಗಬಹುದೆಂಬುದನ್ನು ಮುಂದೆ ನೋಡೋಣ :

ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರ' (೧೦೩೧)ದ ಮಿತ್ರಕಾರ್ಯ ಪ್ರಕರಣ ದಲ್ಲಿ 'ವನದಲ್ಲಿ ಕಟ್ಟುಬಿದ್ದಿರ್ದ ಆನೆಯುಂ ಇಲಿ ಬಿಡಿಸಿದ ಕಥೆ'ಯ ಭಾಗವಾಗಿ ಬಂದಿರುವ ಈ ಶ್ಲೋಕ ಮತ್ತು ಅದರ ಟೀಕೆಯನ್ನು ನೋಡಬಹುದು :

ಏಕಪುಂಸಾ ನ ಗಂತವ್ಯಂ ಅಹಿನಾ ಕಾಕಕಾರಣಾತ್
ದಷ್ಟಸ್ಸಂಜೀವಿತೋ ವಿಪ್ರಃ ಕರ್ಕಟಸ್ಯ ಪ್ರಸಾದತಃ ॥ ೨೧೭ ॥

ಟೀ॥ ಒರ್ಬನೆ ಪುರುಷನೆಲ್ಲಿಗುಂ ಪೋಗಲಾಗದು ; ಅದೆಹಗೆಂದೊಡೆ-ಕಾಗೆಯ ಬಯಕೆಯ ನಿಮಿತ್ತವಾಗಿ ಹಾವು ಕಚ್ಚಿದ ಬ್ರಾಹ್ಮಣನು ಮುರಳಿಯೇಡಿಯಿಂದ ಜೀವಿಸಿದನು.

ಈ ಶ್ಲೋಕದ ಮೊದಲ ಪಾದದ ಸಹಾಯದಿಂದ, ನಾವು ವಿಮರ್ಶಿಸುತ್ತಿರುವ ಪದ್ಯ ಪಾದವನ್ನು ಈಗ ಹೀಗೆ ಪುನಾರಚಿಸಬಹುದು :

ಕಾನೊಳಗೇಕಪುಂಸಾ ನ ಗಂತ[ವ್ಯ]ಮೆಂ-
ದೀ ನಡೆದಪುವೆ ತಿಮಿರದೊಳೆನಿಪುವು
ನಾನಾಹಿ ಮಸ್ತಮಣಿದೀಪಂ ॥

ಈ ಪುನಾರಚನೆಯನ್ನು ಹೀಗೆ ಸಮರ್ಥಿಸಬಹುದು : (೧) ಹಸ್ತಪ್ರತಿಗಳಲ್ಲಿ ದೀರ್ಘಚಿಹ್ನೆ ತೋರಿಸಿರದ ಕಾರಣ, 'ಗ'ಯನ್ನು 'ಗೇ' ಎಂದು ತಿಳಿಯಲು ಅವಕಾಶ ಇದೆ. (೨) 'ಕನಪುಂಸಾ' ಎಂಬ ಅಪಪಾಠವು 'ನ ಗಂತವ್ಯ' ಎಂಬಲ್ಲಿಯ ನಕಾರದ ದೆಸೆಯಿಂದ ಉಂಟಾಗಿರುವ ಪುನರ್ಲೇಖನ (dittography)ದ ಫಲ. (೩) 'ಗಂತವ್ಯ'ವನ್ನು 'ಗಂತಬ್ಯ'ವೆಂದೇ ಅಂಗೀಕರಿಸಿದರೆ ತಪ್ಪಲ್ಲ. ಅದು ಕವಿಪಾಠ ವಾಗಿರುವುದೂ ಅಸಂಭವವಲ್ಲ. ದಿಬ್ಯಗತಿ, ದಿಬ್ಯದೇಹ, ದಿಬ್ಯಸಭೆ, ದಿಬ್ಯಾಹಾರ ಎನ್ನುವಂತಹ ಮಾತುಗಳು ಕನ್ನಡ ಶಾಸನ. ಗ್ರಂಥಗಳಲ್ಲಿ ಸಾಮಾನ್ಯ. (೪) ಛಂದಸ್ಸಿನ ದೃಷ್ಟಿಯಿಂದ ತ್ರಿಪದಿಯ ಮೊದಲ ಪಾದದ ಸಾಮಾನ್ಯ ಲಕ್ಷಣಕ್ಕೆ ಅನುಗುಣವಾಗಿ ನಾಲ್ಕು ವಿಷ್ಣುಗಣಗಳೇ ಬಂದಿವೆ.

ಇನ್ನು ಅರ್ಥದ ಬಗೆಗೆ: ಇಲ್ಲಿ ಎರಡು ರೀತಿಯ ಅರ್ಥವಿವರಣೆ ಸಾಧ್ಯ— (೧) "'ಬೆಟ್ಟಗಾಡಿನ ಒಳಗೆ ಒಬ್ಬನೇ ಮನುಷ್ಯ ಹೋಗಲಾಗದು' – ಎಂದು ಹೆಡೆಮಣಿಯ ದೀಪದ ನಾನಾ ಸರ್ಪಗಳು ಇಕೋ, ನಡೆಯುತ್ತವೆಯಲ್ಲ ಕತ್ತಲೆಯೊಳಗೆ, ಎನಿಸುತ್ತವೆ." (೨) "'ಬೆಟ್ಟಗಾಡಿನ ಒಳಗೆ ಒಬ್ಬನೇ ಮನುಷ್ಯ ಹೋಗಲಾಗದು' ಎಂದು ನಾನಾ ಸರ್ಪಗಳ ಹೆಡೆಮಣಿಯ ದೀಪಗಳು ಇಕೋ, ನಡೆಯುತ್ತವೆಯಲ್ಲ ಕತ್ತಲೆಯೊಳಗೆ, ಎನಿಸುತ್ತವೆ." ಇವುಗಳಲ್ಲಿ ಮೊದಲನೆಯದು ಬಹುಶಃ ಸರಿ. ಏಕೆಂದರೆ, ಕಾರಕವಾದ 'ನಾನಾಹಿ'ಗೆ 'ಎನಿಪುವು' ಬಹುವಚನದ

ಕ್ರಿಯಾಪದವಾಗಿ ಬಂದು, ಈ ಜಾತ್ಯೇಕ ವಚನದ ಪ್ರಯೋಗವೈಚಿತ್ರ್ಯ ರೂಢವಾದ್ದು. 'ನಾನಾಹಿ' ಕರ್ತೃವಾಗುವುದು ಅರ್ಥಪುಷ್ಟಿಯ ದೃಷ್ಟಿಯಿಂದಲೂ ಯುಕ್ತವಾದ್ದು. ಅಲ್ಲದೆ, ಮೂರನೆಯ ಪಾದದಲ್ಲಿ ಮೊದಲ ವಿಷ್ಣುವಿನ ಬಳಿಕ ಯತಿ ಬರುವುದು ಅಪೇಕ್ಷಣೀಯವೇ. 'ನಾನಾಹಿ ಮಸ್ತಮಣಿದೀಪಂ' ಎಂಬ ಸಮಸ್ತಪದವನ್ನು ಅಂಗೀಕರಿಸಿದರೆ, ಇದಾವುದೂ ಸಾಧ್ಯವಾಗದು.

ಕಾಡಿನಲ್ಲಿ ಒಂಟಿಯಾಗಿ ಹೋಗುವವರಿಗೆ ಕತ್ತಲೆಯಲ್ಲಿ ದಾರಿ ನಡೆಯಲು ಸುಗಮವಾಗುವಂತೆ ಸರ್ಪಗಳು ತಮ್ಮ ಹೆಡೆಮಣಿಯ ದೀಪಗಳನ್ನು ಹೊತ್ತಿಸಿಕೊಂಡು ಸಾಗುತ್ತವೆಯೆನ್ನುವುದು ಇಲ್ಲಿಯ ತಾತ್ಪರ್ಯ. 'ಕರ್ಣಾಟಕ ಪಂಚತಂತ್ರ'ದಲ್ಲಿ ಪೂರ್ವೋಕ್ತ ಉದ್ಧೃತ ಶ್ಲೋಕವನ್ನು ಸಮರ್ಥಿಸುವ 'ಬ್ರಾಹ್ಮಣನುಂ ಏಡಿಯುಂ' ಎಂಬ ಮುಂದಿನ ಕಥಾಭಾಗವನ್ನು ಓದಿದಾಗ ಸರ್ಪಗಳ ಸರಿದಾಟ ಉಪಕಾರಾರ್ಥವಾಗಿಯೇ ಎಂಬ ಆಶಯ ಸುಲಭವಾಗಿ ಗ್ರಾಹ್ಯವಾಗುತ್ತದೆ. ಅಲ್ಲದೆ, ಅರ್ಥನೇಮಿ ಪುರಾಣದಲ್ಲಿಯೇ, ಕೃಷ್ಣನನ್ನು ರಹಸ್ಯವಾಗಿ ನಂದಗೋಕುಲಕ್ಕೆ ಕರೆದೊಯ್ಯುವಾಗ "ಹೆಡೆವಣಿಯ ಫಣಿಗಳಿಂತಿರೆ ಸೊಡರಂ ಪೊತ್ತು" ಮಾರ್ಗದರ್ಶನ ಮಾಡಿದ ವೃಷಭದ ವಿಚಾರ ಬಂದಿದ್ದು (೭-೯೫), ಬಾಹ್ಯಸಾಕ್ಷ್ಯದ (External testimonia) ಜೊತೆಗೆ ಅಂತಸ್ಸಂಭಾವ್ಯತೆಯ (Intrinsic probability) ಸಮರ್ಥನೆಯೂ ದೊರೆತಂತಾಗುವುದು. ○

ಬೀಳ್ಕೊಡುಗೆ

(ಒಂದು ಆಧುನಿಕ ಕವಿತೆಯ ಸಮೀಕ್ಷೆ)

—ಎಲ್. ಗಿರಿಜಾ ರಾಜ್

ಪರಿಭಾವಿಸಿದಷ್ಟೂ ಒಳ-ಅರ್ಥಗಳನ್ನು ಸುರುಳಿ ಸುರುಳಿಯಾಗಿ ತೆರೆತೆರೆದು ಕೊಂಡು ಹೋಗುವ ಶ್ರೀ ರಾಮಚಂದ್ರ ಶರ್ಮರ ಕವನ 'ಬೀಳ್ಕೊಡುಗೆ' ಸಂಕೇತಗಳ ಮಾಲೆಯನ್ನು ಕಟ್ಟುತ್ತದೆ. ಇದೊಂದು ಪ್ರಾಸರಹಿತ ಸುನೀತ. ಸಾನೆಟ್ ಲೋಕದಲ್ಲಿ ಈ ನವ್ಯಕವನ ಒಂದು ಹೊಸ ಪ್ರಯೋಗ. ತನ್ನದೇ ಆದ ವೈಶಿಷ್ಟ್ಯದಿಂದ ಇದು ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ.

ಯಾವುದೇ ಒಂದು ಪ್ರದೇಶದಲ್ಲಿ (ಸ್ವದೇಶವಾಗಿರಲಿ, ವಿದೇಶವಾಗಿರಲಿ) ಹಲವು ಕಾಲ ನೆಲಸಿದ ಮನುಷ್ಯ ತನ್ನ ಸುತ್ತಮುತ್ತಲಿನವರ ಸ್ನೇಹ, ಆತ್ಮೀಯತೆಗಳನ್ನು ಗಳಿಸಿಕೊಳ್ಳುತ್ತಾನೆ. ಆ ಸ್ಥಳವನ್ನು ಬಿಟ್ಟು ಬೇರೆಡೆಗೆ ಅನಿವಾರ್ಯವಾಗಿ ತೆರಳಲೇಬೇಕಾಗಿ ಬಂದಾಗ ಆ ಬೀಳ್ಕೊಡುಗೆಯ ದೃಶ್ಯ ಎಷ್ಟೊಂದು ವೇದನೆಯಿಂದ ಕೂಡಿರುತ್ತದೆ! ಎಂಬುದಿಲ್ಲಿ ಪ್ರತಿಪಾದಿತವಾಗಿದೆ.

ಗಳಿಯುರಿಂದ ಬೀಳ್ಕೊಂಡು ಹೊರದೇಶಕ್ಕೆ ಹೊರಡುತ್ತಿರುವ ಕವಿಯ ಎದೆಯಲ್ಲಿ ಅವುದೋ ಅರಿಯದ ಅಗಾಧ ವ್ಯಥೆ. ಕಸಿವಿಸಿ, ಶೂನ್ಯತೆಯನ್ನು ಕವಿಸಿದೆ. ಬೀಳ್ಕೊಡುಗೆಯ ತೋರಿಕೆಯ ಸಂಭ್ರಮ ನೀರಿನ ಗುಳ್ಳೆಯಂತೆ ಒಡೆದು ವಿಷಾದ ಚಿಮ್ಮುತ್ತದೆ. ಯಾವುದೋ ತಳಮಳ, ಕೋಲಾಹಲ, ನಿರಾಶೆಗಳು ಕವಿಯ ಎದೆಯಲ್ಲಿ ಗೊಂದಲ ಎಬ್ಬಿಸಿವೆ. "ಹುಟ್ಟಿದಲ್ಲೇ ಅಲ್ಲೇ ಸಾಯುವುದೇ ಸ್ವರ್ಗ" ಎಂಬ ನಿಷ್ಠುರ ಸತ್ಯವನ್ನು ಎದೆಯೊಳಗೆ ಹೊತ್ತೇ ಇವರು ಸ್ವದೇಶವನ್ನು ಬಿಡುತ್ತಾರೆ.

ತಮ್ಮ ಮನಸ್ಸಿನ ಭಾವನೆಗಳನ್ನು ಇಲ್ಲಿ ಎಲ್ಲಿಯೂ ಕವಿ ತೀರ ವಾಚ್ಯವಾಗಿ ಮೂಡಿಸುವುದಿಲ್ಲ. ಎಷ್ಟೋ ಬಾರಿ ಇಂಥ ಕವನಗಳ ಪದಪದಕ್ಕೂ ಅರ್ಥ ಹುಡುಕುತ್ತಾ ವಾಚ್ಯವಾಗಿ ವಿಮರ್ಶಿಸಲು ತೊಡಗುವುದಕ್ಕಿಂತ ಆ ಕವನದ ಅಮೂರ್ತ ಸ್ಥಿತಿಯ ಭಾವಗಳು ಓದು ಓದುತ್ತಾ ಹೃದಯವನ್ನು ತಟ್ಟುವುದರಲ್ಲಿ ಎಂಥ ಅಲೌಕಿಕ ಆನಂದವಿದೆ ಎನಿಸುತ್ತದೆ. ಹೀಗೆ ಶಬ್ದಗಳ ಅಂತರಾಳದಲ್ಲಿ ಹುದುಗಿಟ್ಟ ರತ್ನಸದೃಶ ಸಂಕೇತಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿಯೇ ಅವರ ಮಹತ್ತ್ವ ನೆಲಸಿರುತ್ತದೆ. ನವ್ಯಕಾವ್ಯಗಳೆಲ್ಲ ಸಂಕೇತಮಯ ಎಂದು ಪದಪದಕ್ಕೂ ತಿಣುಕುತ್ತಾ, ಅರ್ಥ ಹುಡುಕುತ್ತಾ ಸಲ್ಲದ ಅರ್ಥಗಳನ್ನು ಆರೋಪಿಸುವುದು ಕವನದ ಮಹತ್ತಿಗೇ ಕುಂದು ತರುತ್ತದೆ ಎಂಬುದನ್ನೂ ಗಮನಿಸಬೇಕು. ಈ ಕವನದ ಆರಂಭದಿಂದ ಕೊನೆಯ ವರೆಗೂ 'ವಿಷಾದ' ದಟ್ಟವಾಗುತ್ತಾ ಅಂತ್ಯದ ಎರಡು ಸಾಲುಗಳಲ್ಲಿ ಮಡುಗಟ್ಟಿ ನಿಲ್ಲುತ್ತದೆ.

'ಕಾಣದ ಕೈ (ದೇವರು) ಕತ್ತಲು ಮುಸುಕಿದ ಈ ದೇಹವೆಂಬ ಡಬ್ಬಿಯ ಮುಚ್ಚಳವನ್ನು ಹಠಾತ್ತಾಗಿ ತೆರೆದಾಗ ಒಳಗಿನ ಆತ್ಮ ದೇಹವನ್ನು ತೊರೆದು ಬೆಳಕೆಂಬ ಮುಕ್ತಿಯನ್ನರಸಿ ಹೊರಡುತ್ತದೆ. ಇಲ್ಲಿ ಸಾವಿನ ಸಂಕೇತವನ್ನು ಪರಿಭಾವಿಸಿದರೆ, ಅದರ ಹಿಂದೆಯೇ ಇನ್ನೊಂದು ಅರ್ಥವೂ ಹೊರಡುತ್ತದೆ.

ಇಡೀ ಪ್ರಪಂಚವನ್ನು ರಾತ್ರಿ ಮುಸುಕಿ ಕತ್ತಲೆ ಕವಿದಿದೆ. ಅಂಧಕಾರ ಕವಿದಿರುವ ಈ ಪ್ರಪಂಚವೆಂಬ ಡಬ್ಬಿಯನ್ನು ಕಾಣದ ಕೈಯೊಂದು ಹಠಾತ್ ತೆರೆದಾಗ ಥಕ್ಕನೆ ಬೆಳಕಾಗುತ್ತದೆ. ಭಾರತದಲ್ಲೇ ಆತ್ಮವನ್ನು ಬಿಟ್ಟು ನಿರ್ಜೀವ ದೇಹದೊಂದಿಗೆ ಮಾತ್ರ ಹೊರದೇಶಕ್ಕೆ ಹೊರಡುತ್ತಿದ್ದೇನೆ ಎಂಬ ಭಾವನೆಯ ಸೂಕ್ಷ್ಮ ಎಳೆಯೂ ಗೋಚರಿಸುತ್ತದೆ. ಕಾಣದ ಕೈಯ ಹಠಾತ್ ಆಕ್ರಮಣ ಯಾವ ಕ್ಷಣದಲ್ಲಾದರೂ ನಮ್ಮ ಜೀವದ ಮೇಲಿರಬಹುದು ಎಂಬ ಭಾವವೂ ಇದೆ.

ಸೀಗಲ್ ಪಕ್ಷಿ ಬೆಚ್ಚಿ ತಲೆಕೆಳಗು ಮಾಡಿ ರೆಕ್ಕೆ ಬಡಿಯುವ ಪ್ರಕೃತಿಯ ಸಹಜ ಕ್ರಿಯೆಯಲ್ಲೂ ಅರ್ಥವನ್ನು ಕಾಣುತ್ತಾನೆ ಕವಿ. ದೋಣಿ ಜಗಿತದ ಶಬ್ದಕ್ಕೆ ಬೆಚ್ಚುವ ಸೀಗಲ್‌ನ ಹಾಗೆ ಕವಿಯೂ ಬೆಚ್ಚಿ ತನ್ನ ದೇಹವನ್ನು ಆತ್ಮ ತೊರೆದು ಹೋದಂತೆ ಚಡಪಡಿಸುತ್ತಾನೆ. ಶಬ್ದಕ್ಕೆ ಬೆದರಿದ ಸೀಗಲ್, ಮೀನುಗಳ ಪ್ರತಿಕ್ರಿಯೆ

ಬನ್ನು ನಡೆದಷ್ಟೇ ಸಹಜವಾಗಿ ಕಣ್ಮುಂದೆ ಚಿತ್ರಿಸುವಂತೆ ಈ ಕೆಳಗಿನ ಸಾಲುಗಳಲ್ಲಿ ಹಿಡಿದಿಟ್ಟಿದ್ದಾನೆ—

'ಕಾವಳದ ಕಹಳೆಯನ್ನೂದಿ ಕಡೆಗೊಂದು ಸಲ,
ದೋಣಿ ಜಿಗಿದಾಗ ಸೀಗಲ್ ಬೆಚ್ಚಿ ತಲೆಕೆಳಗು
ಮಾಡಿ ರೆಕ್ಕೆ ಬಡಿಯದೆ ನೀರ ಮುಳುಗಿತು ಕಡಲ
ನೀರಿಂದ ಬಿಸಿಲಿಗೆ ಜಿಗಿದ ಮೀನ ತಳ ಮಿಂಚ
ಕುಣಿಸಿತ್ತು'

ವ್ಯಕ್ತಿ ಬದುಕಿದ್ದಾಗ ಅವನ ಯೋಗ್ಯತೆಯನ್ನು ಅರಿಯಲು ಪ್ರಯತ್ನಿಸದ ಜನ ಆ ಜೀವ ಮರಣವಾದ ಅನಂತರ ಅವನ ನೆನಪನ್ನು ಕೆದಕಿ, ಅವನ ಗುಣಶೀಲ ನಡತೆಗಳನ್ನು ಸಾಕಾಗುವ ವರೆಗೂ ವಿಮರ್ಶಿಸಿ ಆ ನೆನಪಿನಾಳಕ್ಕೆ ಇಳಿಯುತ್ತಾ, ಅಗೆಯುತ್ತಾ ಹೋದಂತೆ, ಅವನು ಚಿನ್ನದ ಗಣಿಯೇ ಆಗಿ ತೋರುತ್ತಾನೆ.

ಸತ್ತ ಬೆಕ್ಕನ್ನು ಹೂತಿದ್ದ ಹಿತ್ತಿಲ ಗಿಡದ ಪಾತಿ ಕೆದರುವುದು, ಸತ್ತ ವ್ಯಕ್ತಿಯ ನೆನಪನ್ನು ಕೆದಕುವುದಕ್ಕೆ ಸಂಕೇತವಾಗುತ್ತದೆ. ವ್ಯಕ್ತಿ ಸತ್ತನಂತರ ಒಂದು ದಿನ ಅವನ ಸ್ಮಾರಕದ ಬಳಿಯೋ ಮತ್ತೆಲ್ಲೋ ಅವನಿಗೆ ಸಂಬಂಧಿಸಿದ ಸ್ಥಳದಲ್ಲಿ ಅವನ ನೆನಪು ಕೆರಳಿ 'ಅವನು ಎಷ್ಟು ಒಳ್ಳೆಯವನಾಗಿದ್ದನು' ಎನಿಸುತ್ತದೆ. ಅವನ ಪ್ರತಿ ವರ್ತನೆಯನ್ನು ನೆನಪಿನ ಭೈರಿಗೆಯಿಂದ ಅಗೆಯುತ್ತಾ ಹೋದಂತೆ ಅವನು ಚಿನ್ನದ ಗಣಿಯಷ್ಟೇ ಅಮೂಲ್ಯನಾಗಿದ್ದ ಎನಿಸುತ್ತದೆ.

ಕವಿಯ ಭಾವನೆಗಳನ್ನು ಹೀಗೂ ಅರ್ಥೈಸಬಹುದು : ವ್ಯಕ್ತಿಯ ಯೋಗ್ಯತೆ, ಅವನು ಸಮೀಪ ಇರುವುದಕ್ಕಿಂತ ದೂರ ಹೋದಾಗ ಅರಿವಾಗುತ್ತದೆ. ತನ್ನವರಿಂದ ದೂರ, ಬಹುದೂರ ಹೋಗುತ್ತಿರುವ ಕವಿಯ ಆಗಿನ ಮನಃಸ್ಥಿತಿಯಲ್ಲಿ ಈ ಭಾವನೆ ಸಹಜವಾಗಿಯೇ ಉದ್ಭವವಾಗಿದೆ.

ಮಾತೃಭೂಮಿ ಹೇಗೇ ಇರಲಿ, ಎಂಥದೇ ಆಗಿರಲಿ ಎಲ್ಲಿ ಹುಟ್ಟುವೆವೋ ಅಲ್ಲೇ ಸಾಯುವುದು ಸ್ವರ್ಗದಷ್ಟು ಸುಖ, ನೆಮ್ಮದಿ ತರುತ್ತದೆ. ಕಾಣದ ದೇಶದಲ್ಲಿ ಅನಾಥವಾಗಿ ಸಾಯುವ ನರಕ ಬೇಡ, ಹುಟ್ಟಿದ ನೆಲದಲ್ಲೇ ಅಳಿಯುವುದು ಕ್ಷೇಮ ಎಂದು ಬೀಳ್ಕೊಡಲು ಬಂದ ಸ್ನೇಹಿತ ನಿಷ್ಠುರ ಸತ್ಯವನ್ನೇ ಆಡುತ್ತಾನೆ.

ಶ್ರೀ ರಾಮಚಂದ್ರ ಶರ್ಮರೇ ಉದ್ಗರಿಸಿರುವಂತೆ 'ನನ್ನ ಪರಿಸರದ ಸಂಬಂಧವೇ ನನ್ನ ಕಾವ್ಯದ ವಸ್ತು. ಅದರ ವಿಶ್ಲೇಷಣೆ ಉದ್ದೇಶ' ಎಂಬ ಮಾತುಗಳಿಗೆ ಈ ಕವನ ಸಾಕ್ಷಿಯಾಗಿದೆ.

ವಿಮಲಾನಂದನ ಕೃತಿಗಳು

—ವಿದ್ವಾನ್ ಕೆ. ವಿ. ಆಚಾರ್ಯ

ಹರಿದಾಸ ಸಾಹಿತ್ಯವು ತಮಿಳಿನಲ್ಲಿ ಆಳ್ವಾರ್, ಕನ್ನಡದ ಹರಿದಾಸರಿಂದ ತೊಡಗಿದೆ. ಈ ವಿಧಾನವು ವ್ಯಾಸಭಾಗವತ, ವಿಷ್ಣುಪುರಾಣ, ನಾರದ–ಶಾಂಡಿಲ್ಯ ಭಕ್ತಿಸೂತ್ರಗಳಲ್ಲಿ ಹೇಳಿದೆ. ವೈಷ್ಣವ ಪಂಥದ ಆಚಾರಗಳೇನೆಂದು (2 ಬಗೆ) ಸಂಸ್ಕೃತ ಜೈಮಿನಿ ಭಾರತದಲ್ಲಿದೆ: "ಯಾವ ದಿನ 56 ಗಳಿಗೆ ವರೆಗೆ ದಶಮೀ ತಿಥಿ ಇದೆಯೊ ಅದು ರಿಕ್ತ ತಿಥಿಯೆಂದು. ಮಾರನೆ ದಿನವೆ ದಶಮಿಯೆಂದೂದು. ವೈಷ್ಣವರು ಏಕಾದಶಿಯನ್ನು ದಶಮಿಯಿಂದ ಅವಿದ್ಧವಾಗುವಂತೆ ನೋಡಿಕೊಳ್ಳಬೇಕು." ಈ ಬಗೆ ಇಂದಿಗೂ ಪಂಚಾಂಗಗಳಲ್ಲಿ, ಜನರಲ್ಲಿ ಬಳಕೆಯಿದೆ (ಸ್ಮಾರ್ತ ಏಕಾದಶಿ. ವೈಷ್ಣವ ಏಕಾದಶಿಗಳು). ಇನ್ನೊಂದಾಗಿ, ಚಂದ್ರಹಾಸ ಮತ್ತು ಮಯೂರಧ್ವಜರು ಊರ್ಧ್ವಪುಂಡ್ರವನ್ನು, ಶಂಖ ಚಕ್ರ ಚಿಹ್ನೆಗಳನ್ನು ಧರಿಸಿದ್ದರೆಂದುದು. ಇವೆರಡು ಆಚಾರಗಳು ಇಂದೂ ಸುಪ್ರಚಾರದಲ್ಲಿವೆ !

ಕನ್ನಡದ ಹರಿದಾಸರಲ್ಲಿ ನರಹರಿಯತಿಯು – ಗಂಜಾಂ ಜಿಲ್ಲೆಯಲ್ಲಿ ರಾಜಪ್ರತಿನಿಧಿಯಾಗಿ ಹಲವು ಶಾಸನ–ದೇವಾಲಯಗಳನ್ನು ನಿರ್ಮಿಸಿದ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯ–ಮೊದಲಿಗನು. ಆದ್ಯರು–ಆರಾಧ್ಯರು ಆ ಮೇರೆಗೆ ತುಸ ಕೀರ್ತನೆಗಳನ್ನು ರಚಿಸಿದರು. ಮುಳುಬಾಗಿಲ ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು ಹಲಬಗೆಯ ಕವಿಗಳ ರಚನೆಯಿಂದ ಸಾರ್ವತ್ರಿಕವಾಗಿ ದಾಸಕೂಟ ಪ್ರಸಾರವನ್ನು ನಡೆಯಿಸಿದರು. ಅನಂತರಕಾಲದ ಅನೇಕರು ಹರಿಕೀರ್ತನೆಗಳನ್ನು ರಚಿಸಿದರು. ದಕ್ಷಿಣ ಕನ್ನಡ–ಉತ್ತರ ಕನ್ನಡ ಜಿಲ್ಲೆಗಳು ಅಕ್ಕಪಕ್ಕದವು. ವಿಮಲಾನಂದನು (ಉ. ಕ. ಜಿ.) ಅಂತಹ ಹರಿದಾಸ ರೀತಿಯಲ್ಲಿ ಸಾಗಿದವರಲ್ಲೊಬ್ಬನು.

ವಿಮಲಾನಂದ (ಕ್ರಿ. ಶ. 1685)

ಇವನು 'ಕೃಷ್ಣಾರ್ಜುನ ಕಾಳಗ'ವೆಂಬ ಷಟ್ಪದಿ ಕಾವ್ಯವನ್ನು ಬರೆದನು (ಇದೀಗ ಮೈಸೂರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿತ). ಇವನು ಚಿದಾನಂದನ ಶಿಷ್ಯ (ಚಿದಾನಂದನ ಕೃತಿ 'ದೇವೀ ಮಹಾತ್ಮ್ಯೆ' ಅಚ್ಚಾಗಿದೆ.). ವಿಮಲಾನಂದನ ಶಿಷ್ಯ ಅಪ್ಪಯ್ಯ (ಘಟಕಳದವ). ಇವನ ಒಂದು ಹಾಡು ಕವಿಚರಿತೆಯಲ್ಲಿ ಉದ್ಧರಿಸಿದೆ (3-1).

'ಹೂವ ಕೊಟ್ಟಳು ಮಹಾದೇವಿ ಮೂಕಾಂಬಾ ।
ಭೂವರ ಬಸವ ನೃಪನ ಭಾವಭಕ್ತಿಗೆ ಒಲಿದು ॥

ಈ ಪದ್ಯದ ಕೊನೆಗೆ 'ವಿಮಲ-ಆನಂದ' ಎಂಬ ಮುದ್ರಿಕೆಯಿದೆ. ಹಾಗಾಗಿ ಇದು ವಿಮಲಾನಂದನ ಕೃತಿಯಾಗಿರಬೇಕು.

'ಪದ್ಯಮಾಲಿಕಾ' ಎಂಬ ಸಂಕಲನದಲ್ಲಿ ಇತರರ ಕೃತಿಗಳೊಂದಿಗೆ (ವಿಮಲಾನಂದನ 37 ಕೃತಿಗಳು ಮುದ್ರಿತಗಳು. ಅವರಲ್ಲಿಯೂ ಈ ಮೇಲಿಂದ ಹಾಡು ಇದೆ. ಇದು 'ಗುರುವಿನ ಹೆಸರಲ್ಲಿ ಶಿಷ್ಯನು ಬರೆದ' ಕೃತಿಯೆನ್ನುವ ಓರ್ವ ಗೆಳೆಯರ ಆಶಯ ಸರಿಯಲ್ಲ. ಇದೀಗ ವಿಮಲಾನಂದನ ಕೃತಿಗಳ ಪರಿಚಯ ಬರೆದಿದೆ.

> 'ಶ್ರೀಗುರುವಿನ ಮನೆಯ ನಾಯಿನಾ ।
> ಬಾಗಿಲ ಕಾಯ್ದಿರುವೆ ॥ ಪ ॥
> ತ್ಯಾಗಿಸಿ ಸಂಸಾರ ಶ್ರೀಗುರುವಿನ
> ಯೋಗಾಸನವಹೆನು ॥ ಅ. ಪ. ॥

ಗುರುಸೇವೆಯ ವೈವಿಧ್ಯವಿಲ್ಲಿ ಕಾಣುತ್ತದೆ.

> 'ಶ್ರೀಗುರುವಿಟ್ಟಂತಿರೊ । ವ್ಯರ್ಥ (ತಃ) ।
> ಭ್ರಮೆಗೊಳ್ಳಬೇಡ(ರೊ) ॥ ಪ ॥
> ಕೊಟ್ಟರೂಟವ ಮಾಡಿ । ಕೊಡದಿದ್ದವರ ಪಾಡಿ ।
> ಸಿಟ್ಟಾಗಿ ಶಿವನ ಬೈಬೇಡಿ ॥ ೧ ॥

ಗುರುಕೃಪೆಯಿಂದ ಒದಗಿದುದರಲ್ಲಿ ತೃಪ್ತಿ ಇಲ್ಲದಿದ್ದರೆ ದೈವವನ್ನು ಹಳಿಯದಿರೆಂದೂ ಹೇಳಿದೆ.

> 'ಅಂಗವೇ ಶ್ರೀಮಾಂಗಿರೀಶಲಿಂಗವಾದುದು ।
> ಸಂಗಸುಖದ ದುರಿತವೆಲ್ಲ ಹಿಂಗಿಪೋದುದು ॥'

ಈತ ಸಾರಸ್ವತ ಬ್ರಾಹ್ಮಣನು. ತನ್ನ ದೈವವನ್ನೇ ಇಲ್ಲಿ ಸ್ತುತಿಸಿದ್ದಾನೆ. 'ಆನಂದಮಯನಾದೆ ನಾನು । ದಿವ್ಯ ಜ್ಞಾನಾಮೃತವನುಂಡು ಪೇಳಲಿನ್ನೇನು' ಎಂಬಲ್ಲಿ ಆತ್ಮಾನಂದದ ಬಗೆ ಹೇಳಿದೆ. 'ಆನಂದ । ಅದ್ವೈತ ಬಲ್ಲವರಿಗೆ,' ಎಂಬಲ್ಲಿ ಜೀವ–ದೇವರ ಏಕತೆ ಸಾರಿದೆ.' (ಸಾರಸ್ವತ ಬ್ರಾಹ್ಮಣರ ಕೈವಲ್ಯಮತವು ಶೈವ ಪ್ರಧಾನವಾಗಿರುವುದು ಇಲ್ಲಿ ಸೂಚ್ಯ.)

> "ಮಾಯಾಪ್ರಪಂಚದ ಬಲೆಯ ಪಾಶಕೆ ಸಿಕ್ಕಿ
> ಕಾಯದೊಳಿರುವ ಪರಮಾತ್ಮನನರಿಯದ"

ದೇವನು ಸರ್ವರಲ್ಲೂ ವ್ಯಾಪ್ತ (ದ್ವಾಸುಪರ್ಣಾ ಸಯುಜಾ ಸಖಾಯಾ–ಎಂಬ ಶ್ರುತಿವಾಕ್ಯ) ನೆಂದು ಹೇಳಿದೆ.

'ಎನ್ನ ಮೋಹದ ತುಪಾಕಿಯ ಪಿಡಿದು ಹಸ್ತದಲಿ । ಚೆನ್ನಾಗಿ ಶೃಂಗರಿಸುವೆ' ಎಂಬ ರೂಪಕದಲ್ಲಿ ಮೋಹದ ಪರಿತ್ಯಾಗರೂಪ ಹೇಳಿದೆ. ಅದಕ್ಕೆ ಮೊದಲಿಗೆ ಗುರುಕೃಪೆ–ಸಂಗ ಅವಶ್ಯವೆಂದುದು– 'ಎಂದಿಗೆ ದೊರಕುವನು । ಶ್ರೀಗುರುವೆನಗೆ'.

‘ಕಾಶಿಯಿಂದ ಬಂದ ಭಾಗೀರಥಿಯು ತನ್ನ । ವಾಸಕ್ಕೆ ತೆರಳಿದಳು’ ಎಂಬಲ್ಲಿ ತೀರ್ಥ ಸ್ನಾನವೂ ಈ ಬಗೆಗೆ ಪ್ರಾಮುಖ್ಯವೆಂದಿದೆ.

ಪರಿಧ್ಯಾನಕ್ಕೆ ಶರೀರವೆಂಬ ‘ಬುಡುಬುಡಿಕೆ’ಯನ್ನು ಶೋಧಿಸಬೇಕೆಂದೂ ನಿರೂಪಿಸಲಾಗಿದೆ. ಇದರಿಂದ ‘ಗುರು ಕೊಟ್ಟ ಭಾಗ್ಯ ವೈರಾಗ್ಯ । ಇದನರಿತು ಅರ್ಚಿಸಲು ಲಿಂಗೈಕ್ಯಗೆ ಯೋಗ್ಯ’ವೆಂಬುದು ಗಣ್ಯ! ಅದಾಗಿ, ಗುರುವೆ ಪ್ರಪಂಚದ ರೂಪಾಗಿದ್ದಾನೆಂದು ಹೇಳಿದೆ.

‘ಅಜನ ಲಿಖಿತದಿ ಬರುವುದೆಲ್ಲ ಬರಲಿ’ ಎಂಬುವರಲ್ಲಿ ತನ್ನ ಪ್ರಾಚೀನ ಕರ್ಮ ಅನುಭವಿಸಬೇಕೆಂಬುದು ಮಾರ್ಮಿಕವಾಗಿದೆ. ಪುಣ್ಯ-ಪಾಪಗಳು ಕೇವಲ ನಿಮಿತ್ತಗಳೇ, ಅವುಗಳಿಂದಾಗಿ ಹಿಗ್ಗು-ತಗ್ಗುಗಳು ಆಗಬಾರದು. ‘ಬತ್ತಿಗೆ ಹಚ್ಚಿದ ಜ್ಯೋತಿಯು । ನಡು । ನೆತ್ತಿಯೊಳಿಂಬಿಟ್ಟು ಜತನಮಾಡಣ್ಣ’ ಎಂದು ಸದಾ ದಿವ್ಯ ಜ್ಯೋತಿ ನಮ್ಮಲ್ಲಿ ಬೆಳಗಲೆಂದಿದೆ.

‘ಬಲ್ಲೆನೆಂದರೆ ನಾನೇನೇನರಿಯೆ । ಅರಿಯೆನೆಂದರೆ ಸ್ವಲ್ಪ ತಿಳಿದಷ್ಟು ಬಲ್ಲೆ ॥’ ಎಂದು ಜ್ಞಾನಿಯೆಂಬ ಅಹಂತೆ ಸಲ್ಲದೆಂದಿದೆ. ‘ಬಾರಕ್ಕ ನಾವಿಬ್ಬರಾಡುವ । ಯೋಗ । ಸಾಧನವೆಂಬುದ ಮಾಡುವ ॥ ತಾಮಸ ತಮಗುಣಗಳ ಬಿಟ್ಟು ಸುಜ್ಞಾನ । ಕ್ಷೀರಸಾಗರದೊಳಗಾಡುವ ॥’ ಎಂಬಲ್ಲಿ ಗೃಹಸ್ಥ ಹಾಗೂ ತತ್ಪತ್ನಿಯೂ (ಸ್ತ್ರೀಪುರುಷರಿಬ್ಬರೂ) ದೈವಿಕ ಭಕ್ತಿಯ ಸಾಧಕರಾಗಬೇಕೆಂದಿದೆ! ‘ಅರ್ಧಂ ಭಾರ್ಯಾ ಶರೀರಸ್ಯ’ ಎಂಬಂತೆ, ಈ ವಿಷಯ ಇಲ್ಲಿ ಹೇಳಲಾಗಿದೆ.

‘ಮುದುಕನಾಗಿ ಫಲವೇನು । ತನ್ನಯ ಪ್ರಾಣ । ಪದಕವ ಕಂಡರಿಯದವನು’ ಎಂಬಲ್ಲಿ ಪ್ರಾಯ ಮುಖ್ಯವಲ್ಲ, ತನ್ನ ಪ್ರಾಣಪದಕನಾದ ದೇವನನ್ನು ಕಂಡರಿಯಲು ಉಜ್ಜುಗಿಸಬೇಕಾಗಿದೆಯೆಂದಿದೆ. ‘ಕುಡುಮ ಪುರ (ಧರ್ಮಸ್ಥಳ) ದ ವರದಮ್ಮನ ಕಣ್ಣಿಗೆ ದೃಷ್ಟಿಯುಪ್ಪಂತೆ’ ಮಂಜುನಾಥನನ್ನು ಕವಿ ಬೇಡಿದ್ದಾನೆ. ಈತನು ತತ್ಕಾಲೀನನಿರುವುದು ಸಮನ್ವಯಿಸುತ್ತದೆ. ‘ಸಾರಿ ಹೇಳಿದೆ ಮೂರು ಬಾರಿ’ ಎಂದು ಐಹಿಕ ನಶ್ವರ, ಪಾರಲೌಕಿಕ ವಿಚಾರ ಸದಾ ಕರಣೀಯವೆಂದಿದೆ. ‘ಸಾವಾತ ನಾನಲ್ಲ. ಸಾವು ಪೊಡಲಿನಗಿಲ್ಲವೆಂದು ಆತ್ಮನ ಹಿರಿಮೆ ಹೇಳಿದೆ. ‘ಹುಡುಕಿ ನೋಡೆಲೊ ನಿನ್ನನಾರೆಂದು’ದು ಮೌಲಿಕವಾಗಿದೆ. ‘ವಿಠಲವಾಚೆ ಬೋಲ’ಯೆಂಬ ಮರಾಠಿ ಪದ್ಯವೊಂದು ಕವಿಯ ಉಭಯ ಭಾಷಾಭಿಜ್ಞತೆಯನ್ನು ಸಾರಿದೆ. ಉತ್ತರಕನ್ನಡ ಜಿಲ್ಲೆಯ ಈ ಕೀರ್ತನಕಾರನು (ವಿಮಲಾನಂದನು) ಕೃಷ್ಣಾರ್ಜುನ ಕಾಳಗ (ಕಾವ್ಯ) ವನ್ನೂ ಬರೆದವನೇ ಎನ್ನಲಡ್ಡಿಯಿಲ್ಲ. ಮೈಸೂರು ವಿಶ್ವವಿದ್ಯಾಲಯದ ಕಾವ್ಯದ ಪ್ರಕಟನೆಯಲ್ಲಿ ಇವನ ಕೀರ್ತನೆಗಳ ವಿಚಾರವೇ ಹೇಳಿಲ್ಲ! ಸಾಹಿತ್ಯದ ಬಹುಮುಖದ ಕವಿಯಿವನು.

ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಷೇಕ್ಸ್‌ಪಿಯರ್‌ನ 'ಹ್ಯಾಮ್ಲೆಟ್'

—ಎಸ್. ರಾಮಸ್ವಾಮಿ

In the hands of Shakespeare, the greatest triumphs of the drama were achieved in tragedy. comedy and history ; in dramatic dialogue and expression and versification ; in the variety of action, passion and characterisation.[1]

—ಬಿ.ಎಂ.ಶ್ರೀ.–A HAND BOOK OF RHETORIC

I

ಬಿ.ಎಂ.ಶ್ರೀ. ಅವರಿಗೆ ಶಿಷ್ಯನಾಗಿ, ಅವರ ತರಗತಿಗಳಲ್ಲಿ ಕುಳಿತು ಅವರ ಉಪನ್ಯಾಸಗಳನ್ನು ಕೇಳುವ ಸೌಭಾಗ್ಯ ನನ್ನ ಪಾಲಿಗೆ ಒದಗಿ ಬರಲಿಲ್ಲ. ಆದರೆ ಅವರು ಷೇಕ್ಸ್‌ಪಿಯರ್‌ನ ನಾಟಕಗಳ ಬಗ್ಗೆ—ಅದರಲ್ಲೂ ದುರಂತ ನಾಟಕಗಳನ್ನು ಕುರಿತ—ಪ್ರತಿಭಾನ್ವಿತವಾದ, ಭಾವಭರಿತ ಮತ್ತು ಪಾಂಡಿತ್ಯಪೂರ್ಣವಾದ ವಸ್ತು ವಿನ್ಯಾಸದಿಂದ ಸ್ವತಃ ರೋಮಾಂಚಗೊಂಡ ಹಲವು ಉಪಾಧ್ಯಾಯರ ಕೈಕೆಳಗೆ ಪಾಠ ಕಲಿತದ್ದುಂಟು. ಈ ಉಪನ್ಯಾಸಮಾಲಿಕೆಯಲ್ಲಿಯೇ ಬಿ,ಎಂ.ಶ್ರೀ. ಅವರ ಶಿಷ್ಯರಾದ ಪ್ರೊ॥ ಎಸ್. ವಿ. ರಂಗಣ್ಣನವರು, ಪ್ರೊ॥ ಎಲ್. ಎಸ್. ಶೇಷಗಿರಿರಾಯರು ಮತ್ತು ಪ್ರೊ॥ ಎ. ಎನ್. ಮೂರ್ತಿರಾಯರು ಉಪನ್ಯಾಸಮಾಡಿದ್ದಾರೆ. ಅವರು ಮೂವರೂ ನನ್ನ ಗುರುಗಳು. ಪ್ರೊ॥ ಮೂರ್ತಿರಾಯರಂತೂ ನನಗೆ ಷೇಕ್ಸ್‌ಪಿಯರ್ ಕಲಿಸಿದ ಗುರುಗಳು. ಆದ್ದರಿಂದಲೇ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಉಪನ್ಯಾಸವನ್ನು ಕೊಡಬೇಕೆಂದು ನನ್ನನ್ನು ಕೇಳಿದಾಗ ನನ್ನಲ್ಲುಂಟಾದ ಮೊದಲನೆಯ ಪ್ರತಿಕ್ರಿಯೆ-ಭಯ. ಆದರೂ ಬಿ.ಎಂ.ಶ್ರೀ. ಅವರಂತಹ ಪ್ರಾಧ್ಯಾಪಕರ ಹೆಸರನ್ನು ಕೆಲವು ಸಲವಾದರೂ ಜ್ಞಾಪಿಸಿಕೊಂಡು ಅವರು ನಡೆದು ಬಂದ ದಾರಿಯಲ್ಲಿ, ಅವರ ಮಾರ್ಗದರ್ಶನದಲ್ಲಿ, ಅವರ ಹಜ್ಜೆಗಳ ಹಾದಿಯಲ್ಲಿ ಮುಗ್ಗರಿಸುತ್ತ, ನಾಲ್ಕು ಅಂಬೆಗಾಲಿಡಲು ದೊರೆತ ಸದವಕಾಶವನ್ನು ಕಳೆದುಕೊಳ್ಳಬಾರದೆಂಬ ಲಜ್ಜೆಯಿಲ್ಲದ ದುರಭಿಮಾನ ಒಂದೇ ನಾನು ಈ ದಿವಸದ ವಿದ್ವತ್ಸಭೆಯಲ್ಲಿ ನಾಲ್ಕು ಮಾತನ್ನಾಡಲು

---

1 ಶ್ರೀ ಸಾಹಿತ್ಯ : ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ ಸಮಗ್ರ ಕೃತಿ ಸಂಪುಟ. ವಿ.ಸೀ. ಅವರ 'ಪರಿಚಯ–ಕಾಣಿಕೆ'ಯೊಡನೆ. ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ. ೧೯೮೩. ಪು. 714

ಧೈರ್ಯವನ್ನು ಕೊಟ್ಟಿರುವುದು. "ಕಾಮಾತುರಾಣಾಂ ನ ಭಯಂ ನ ಲಜ್ಜಾ" ಎನ್ನುವ ಮಾತು ನನ್ನ ಈ ಕಾಮನೆಯಿಂದ ಅರ್ಥಪೂರ್ಣವಾಗಿದೆ.

ಮೂವತ್ತಮೂರು ವರ್ಷಗಳ ಕೆಳಗೆ ನಾನು ಇಂಗ್ಲಿಷ್ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದಾಗ ನಾನು ಮಾಡಿದ ಮೊತ್ತಮೊದಲನೆಯ ಉಪನ್ಯಾಸ ಷೇಕ್ಸ್‌ಪಿಯರ್‌ನ 'ಜೂಲಿಯಸ್ ಸೀಸರ್' ಕುರಿತು. ಆ ಹರಯದ ಹುಮ್ಮಸ್ಸಿನಲ್ಲಿ—

> Men at some time are masters of their fates. The fault, dear Brutus, is not in our stars, but in ourselves, that we are underlings. (I, 2.)

ಮುಂತಾದ ಸಾಲುಗಳಿಗೆ ಶಕ್ತಿಮೀರಿ—ಪ್ರಾಯಶಃ ಅರ್ಥವನ್ನೂ ಸಹ ಮೀರಿ—ವ್ಯಾಖ್ಯಾನ ಮಾಡಿದ್ದುಂಟು. ಆ ಮೇಲೆ ಮೂರು ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ ಹಲವಾರು ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕ್ಲಾಸಿನಲ್ಲಿ ವರ್ಷಪರ್ಯಂತ instalment plan (!) ಪ್ರಕಾರ ಪಾಠಮಾಡಿದ್ದರೂ 'ಹ್ಯಾಮ್ಲೆಟ್' ನಾಟಕದ ಬಗ್ಗೆ ಬೇರೆ ನಾಟಕಗಳೆಲ್ಲಕ್ಕಿಂತಲೂ ಹೆಚ್ಚಿನ ಪ್ರೀತಿ, ಆಸಕ್ತಿ ತೋರಿಬಂತು.

> There's a divinity that shapes our ends.
> Rough hewthem how we will· (V, 2)

ಅನ್ನುವ ವಾಕ್ಕಿನ ಬಗ್ಗೆ—ಸ್ವಂತ ಅನುಭವದ ದೆಸೆಯಿಂದ—ನಂಬಿಕೆ ಬಲವಾಯಿತು. ಮಾತ್ರವಲ್ಲ—

> The readiness is all.. (V, 2)

ಅನ್ನುವ readiness ಇನ್ನೂ ಜೀವನದ ಬಗ್ಗೆ ಬಂದಿಲ್ಲವಾದರೂ ಈ ಉಪನ್ಯಾಸದ ಬಗ್ಗೆ ಮಾತ್ರ ಒದಗಿಬಂತು. 'ಹ್ಯಾಮ್ಲೆಟ್' ಬಗ್ಗೆ ಮಾತನಾಡಿಬಿಡಲೇ ಬೇಕು ಎನ್ನುವ ಮೊಂಡು ಧೈರ್ಯ, ಭಯ ಮತ್ತು ಲಜ್ಜೆ ಎರಡನ್ನೂ ಮೆಟ್ಟಿನಿಂತು ತಾನೇ ತಾನಾಗಿ ವಿಜೃಂಭಿಸಿತು. ಹ್ಯಾಮ್ಲೆಟ್‌ನ 'To be or not to be' ಪ್ರಶ್ನೆ ನನ್ನ ಪಾಲಿಗೆ 'To speak or not to speak' ಆಗಿ ಪರಿವರ್ತನೆಗೊಂಡು 'to speak' ಅನ್ನುವ ನಿರ್ಧಾರದಲ್ಲಿ ಪರ್ಯವಸಾನಗೊಂಡಿತು. ನಿರ್ಧಾರರಾಹಿತ್ಯ ಹ್ಯಾಮ್ಲೆಟ್‌ನ tragic flaw ತಾನೇ. ನನ್ನದಲ್ಲವಲ್ಲ !

ಬಿ.ಎಂ.ಶ್ರೀ. ಅವರು 1923ನೇ ಇಸವಿಯಲ್ಲಿ-ಅಂದರೆ ಈಗ ಸುಮಾರು 65 ವರ್ಷಗಳ ಹಿಂದೆಯೇ ಷೇಕ್ಸ್‌ಪಿಯರ್ ಬಗ್ಗೆ ಪ್ರಕಟವಾದ ಹೊಸತೊಂದು ಪುಸ್ತಕವನ್ನು ವಿಮರ್ಶೆಮಾಡುತ್ತಾ ಹೀಗೆ ಹೇಳುತ್ತಾರೆ—

> Books on Shakespeare are legion and still they come ...within 128 pages of lucid phrasing are compressed

the very pith of Shakespearean scholarship with regard to the life, the personality, the environment and a theatrical achievement of the world's great dramatist.[2]

ಆದರೂ ಇನ್ನೊಂದು ವಿಷಯ ಹಠಾತ್ತನೆ ಗೋಚರವಾಯಿತು. 'ಹ್ಯಾಮ್ಲೆಟ್' ನಾಟಕದ ಬಗ್ಗೆ ಮಾತ್ರವೇ ಆರು ಸಾವಿರಕ್ಕೂ ಹೆಚ್ಚಿನ ವಿದ್ವತ್ತ್ವಪೂರ್ಣ ಪುಸ್ತಕಗಳೂ ಮತ್ತು ಸಂಶೋಧನಾ ಪ್ರಬಂಧಗಳೂ ಪ್ರಕಟವಾಗಿವೆ — ಈಚಿನ ಲೆಕ್ಕಾಚಾರದ ಪ್ರಕಾರ. ಇನ್ನು ನಾನು ಹೇಳುವುದಾದರೂ ಏನು? ಎಂಬ ಪ್ರಶ್ನೆ ಬಂದಾಗ ನನ್ನ ಮನಸ್ಸು ಸುಲಭವಾಗಿ ಉತ್ತರ ಒದಗಿಸಿತು. ಈ ಪ್ರಬಂಧ ವಿದ್ವತ್ಪೂರ್ಣವಾಗಿಯಾಗಲಿ ಅಥವಾ ಸಂಶೋಧನಾತ್ಮಕವಾಗಿಯಾಗಲಿ ಇರದಿದ್ದರೆ ಆಯಿತು, ಅಷ್ಟೆ. ನಾವು ಹುಡುಗರಾಗಿದ್ದಾಗ ಒಂದು ಗುಬ್ಬಚ್ಚಿ ಬಂದು ಒಂದು ಕಾಳನ್ನು ತೆಗೆದುಕೊಂಡು ಹೋಯಿತು. ಮತ್ತೊಂದು ಗುಬ್ಬಚ್ಚಿ ಬಂದು ಇನ್ನೊಂದು ಕಾಳನ್ನು ಕೊಂಡುಹೋಯಿತು ಎಂದು ಎಷ್ಟು ಹೊತ್ತಾದರೂ ಮುಗಿಯದ ಕಥೆಯ ಬಗ್ಗೆ ಕೇಳಿದ್ದೆವು. ಹ್ಯಾಮ್ಲೆಟ್ ಒಂದು ಕಡೆ ಹೇಳುತ್ತಾನೆ—

The cat will mew and the dog will have his day.
(V, 1)

ಎಂದು. ನನಗೆ ಅನ್ನಿಸಿದ್ದು— Let this sparrow also have his day!'

ಹ್ಯಾಮ್ಲೆಟ್ ತನ್ನ ತಂದೆಯ ಪ್ರೇತವನ್ನು ನೋಡಿದಾಗ ಹೇಳುವ ಮೊದಲ ಸಾಲು–

Angels and ministers of grace defend us! (I, 3)

ಹ್ಯಾಮ್ಲೆಟ್ ಸತ್ತಾಗ ಅವನ ಸ್ನೇಹಿತ ಹೊರೇಷಿಯೋ ಹೇಳುತ್ತಾನೆ—

Good night, sweet prince: And flights of angels sing thee to thy rest! (V, 2)

ಆದರೆ 'ಹ್ಯಾಮ್ಲೆಟ್' ಬಗ್ಗೆ ಉಪನ್ಯಾಸ ಮಾಡಲು ಉದ್ಯುಕ್ತನಾದಾಗ ನನಗೆ ನೆನಪಿಗೆ ಬಂದ ಸಾಲು Alexander Pope ನ—

Fools rush in where angels fear to tread.

---

2. Review of Lamborn and Harrison on Shekespeare in The World's Manuals published by Oxford University Press. Reviewed in *The Mysore University Magazine*. Volume VII. September 1923. Quoted in 'ಶ್ರೀ ಸಾಹಿತ್ಯ'. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು; ಪು. 849.

ಆದರೊಂದು ವಿಷಯ. ಯಾರಾದರೂ ನನ್ನನ್ನು 'ಹ್ಯಾಮ್ಲೆಟ್'ನ ಕಂಡರೆ ನಿನಗೆ ಯಾಕೆ ಇಷ್ಟು ಅಭಿಮಾನ ಎಂದು ಕೇಳಿದರೆ ಅವರಿಗೆ ಏನು ಹೇಳಬೇಕು ಎಂಬ ಪ್ರಶ್ನೆ ಉಳಿದೇ ಉಳಿಯಿತು. ಡಜನ್‌ಗಟ್ಟಲೆ Bradley, Dores Wilson ಮುಂತಾದ ಪಾಶ್ಚಾತ್ಯ ವಿಮರ್ಶಕರ ಹೆಸರುಗಳನ್ನು ಹೇಳಿ—ಅಂದರೆ ಇಂಗ್ಲಿಷ್‌ನಲ್ಲಿ ಹೇಳುವಂತೆ name dropping ಮಾಡಿ — ಅವರ ಅಭಿಪ್ರಾಯಗಳ ಬಗ್ಗೆ ಆಮೂಲಾಗ್ರವಾಗಿ ವ್ಯಾಖ್ಯಾನಮಾಡಿ, ಷೇಕ್ಸ್‌ಪಿಯರ್ ಕಾಲದಿಂದ ಈ ವರೆಗೂ ತಾಳಲ್ಪಟ್ಟಿರುವ ಧೋರಣೆಗಳನ್ನು ಸಮಂಜಸವಾಗಿ ಸಂಗ್ರಹಿಸಿ ಹೇಳುವುದು ನಾನಾಗಲೇ ಹೇಳಿದ instalment plan ಗೆ ಸೇರಿದ್ದು. ನನ್ನ ಸ್ವಂತ ಮಾನಸಿಕ ಸ್ವಾಸ್ಥ್ಯಕ್ಕೆ—ನನ್ನ vacant or pensive mood ನಲ್ಲಿ ಹ್ಯಾಮ್ಲೆಟ್ ಬಗ್ಗೆ soliloquise ಮಾಡಿಕೊಂಡಾಗ, 'ಹ್ಯಾಮ್ಲೆಟ್' ನನ್ನ ಜೀವನದ ದೃಷ್ಟಿಯಿಂದ ಹೇಗೆ ಅರ್ಥಪೂರ್ಣವಾದ ಮಹಾನ್‌ಕೃತಿಯಾಗಿದೆ ಎನ್ನುವುದನ್ನು ಹುಡುಕಲು ಈ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಉಪಕಾರಮಾಡಿದೆ. ಅವರಿಗೆ ನಾನು ಋಣಿ.

ಹ್ಯಾಮ್ಲೆಟ್ ಬಗ್ಗೆ ಮಾತನಾಡುತ್ತಾ ಪೊಲೋನಿಯಸ್ ಹೇಳುತ್ತಾನೆ—

Though this be madness, yet there is method in't.

(II, 2)

ನನ್ನ ಈ ಉಪನ್ಯಾಸದಲ್ಲಿ ಏನಾದರೂ ಒಂದಿಷ್ಟು 'method' ಕಂಡುಬಂದರೆ ನಾನು ಧನ್ಯ.

II

ಈಗ ಈ ಉಪನ್ಯಾಸದ ಶೀರ್ಷಿಕೆಯ ಬಗ್ಗೆ ಎರಡು ಮಾತು. ಭಾರತೀಯ ತತ್ತ್ವಶಾಸ್ತ್ರಕ್ಕೂ ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್‌ಗೂ ಏನು ಸಂಬಂಧ? ಎಂಬ ಪ್ರಶ್ನೆ. ಷೇಕ್ಸ್‌ಪಿಯರ್‌ನ ಸಾರ್ವತ್ರಿಕತೆ ಮತ್ತು ಸರ್ವತೋಮುಖ ಪ್ರತಿಭೆಯ ಬಗ್ಗೆ ಭಿನ್ನಾಭಿಪ್ರಾಯವಿಲ್ಲದಿರುವ ದೆಸೆಯಿಂದಲೇ ಈತನ ಕೃತಿಗಳನ್ನು ಯಾವ ದೃಷ್ಟಿಯಿಂದಲಾದರೂ ವಿಶ್ಲೇಷಿಸಬಹುದು. ಮಾತ್ರವಲ್ಲದೆ ಈ ವಿಶ್ಲೇಷಣೆಯಿಂದ ಈತನ ಬಹುಮುಖಪ್ರಜ್ಞೆಯ ಅರಿವುಂಟಾಗುತ್ತದೆ.

ಇಲ್ಲಿ ಬಿ.ಎಂ.ಶ್ರೀ. ಅವರು A HAND BOOK OF RHETORIC ನಲ್ಲಿ 'Romantic Drama' ದ ಬಗ್ಗೆ ಹೇಳಿರುವ ಕೆಲವು ವಾಕ್ಯಗಳನ್ನು ಗಮನಕ್ಕೆ ತಂದುಕೊಳ್ಳುವುದು ಲೇಸು—

Character is now first and plot second. The rigid mould is broken up, and the free space opened up is employed for full portraiture of character. Whereas the

Greek play showed man mainly struggling with outward forces of destiny, the romantic play shows him struggling with his own inward weaknesses and temptations, his own character becoming his destiny. The romantic drama thus goes deeper into man's inner nature, and represents character in all its variety and change.[3]

ಇಲ್ಲಿ 'character becoming his destiny' ಎನ್ನುವುದನ್ನು ಹ್ಯಾಮ್ಲೆಟ್‌ನ 'character' ಗೆ ಸಂಬಂಧಿಸಿ ಅವನ 'destiny' ಯನ್ನು ಅವಲೋಕಿಸುವ ಪ್ರಯತ್ನ ಮಾಡಿದೆ.

ಭಾರತೀಯ 'ಗುಣಪ್ರಕ್ರಿಯೆ'ಯನ್ನು ಹ್ಯಾಮ್ಲೆಟ್‌ನ ಪಾತ್ರಕ್ಕೆ (character) ಸಂಬಂಧಿಸಿ ಅದನ್ನು ವಿಶ್ಲೇಷಿಸುವುದರಿಂದ ಪ್ರಯೋಜನವೇನು? 'ಹ್ಯಾಮ್ಲೆಟ್' ನಾಟಕದಲ್ಲಿ ಹ್ಯಾಮ್ಲೆಟ್‌ನು ತಾಳುವ ಮನೋಭಾವ ಮತ್ತು ನಿಷ್ಕ್ರಿಯೆಗೆ, ನಮ್ಮ ಆಧ್ಯಾತ್ಮಿಕ ಸಂಪ್ರದಾಯದ ಪ್ರಕಾರ—ನಮ್ಮ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ—'ಹ್ಯಾಮ್ಲೆಟ್ problem' ಎಂದು ಪ್ರಸಿದ್ಧವಾಗಿರುವ— the delay question—ಗೆ ಉತ್ತರ ಕೊಡುವುದೇ ಪ್ರಯೋಜನ. ನೈಷ್ಕರ್ಮ್ಯ ಸಿದ್ಧಿಯ ಪಾರಮ್ಯವನ್ನು ಹ್ಯಾಮ್ಲೆಟ್‌ನು ಅಂಗೀಕರಿಸಿದ್ದಾನೆಂದು ಸೂಚಿಸುವುದು ಇಲ್ಲಿನ ವಾದಸರಣಿ. ಈ ವಾದವನ್ನು ಎಲ್ಲರೂ ಒಪ್ಪುತ್ತಾರೆಯೆ? ಎನ್ನುವ ಪ್ರಶ್ನೆ ಇಲ್ಲಿ ಅಸಂಬದ್ಧ. ಯಾವ ವಾದವನ್ನೂ ಎಲ್ಲರೂ ಯಾವಾಗಲೂ ಒಪ್ಪುವುದಿಲ್ಲ. ಅರ್ನೆಸ್ಟ್ ಜೋನ್ಸ್‌ನ Psycho-analytical theory ಯ ಪ್ರಕಾರ ಹ್ಯಾಮ್ಲೆಟ್ Oedipus Complex ಹೊಂದಿದ್ದನೆಂದೂ—ಅಂದರೆ ಇವನು ಇವನ ತಾಯಿಯನ್ನು ಪ್ರೀತಿಸುತ್ತಿದ್ದುದರಿಂದ ಇವನ delay question ಗೆ ಪರಿಹಾರವನ್ನು ಒಡ್ಡುವುದು —ಆದ್ದರಿಂದ ಹ್ಯಾಮ್ಲೆಟ್ ಕಾರ್ಯವಿಮುಖನಾಗುತ್ತಾನೆ ಎನ್ನುವ ವಾದವನ್ನೂ ಎಲ್ಲರೂ ಒಪ್ಪುವುದಿಲ್ಲವಷ್ಟೆ. ಹ್ಯಾಮ್ಲೆಟ್‌ನಂತಹ ತಾತ್ತ್ವಿಕ ಮನೋಭಾವದ ಪರಾಕಾಷ್ಠತೆಯನ್ನು ಪ್ರತಿಬಿಂಬಿಸುವ ಪಾತ್ರನಿರೂಪಣೆಯನ್ನು ವಿಶ್ಲೇಷಿಸುವಾಗ ಯಾವುದೇ ತತ್ತ್ವಶಾಸ್ತ್ರದ ಹಿನ್ನೆಲೆ ಅಪ್ರಸ್ತುತವಾಗಲಾರದು.

ಹ್ಯಾಮ್ಲೆಟ್‌ನ ಸ್ಥಾಯಿಭಾವವೆಂದರೆ ಈತನ ತಾತ್ತ್ವಿಕ ಮನೋಭಾವವೆಂದು ಹೇಳಬಹುದು. ಈ ನಾಟಕದ ಉದ್ದಗಲಕ್ಕೂ ಹ್ಯಾಮ್ಲೆಟ್ ಹೇಳುವ ಮಾತುಗಳನ್ನು ಗಮನಿಸಿದರೆ ಈತನ ತಾತ್ತ್ವಿಕತೆಯು ಅರಿವಾಗದಿರಲಾರದು—

There are more things in heaven and earth, Horatio, than are dreamt of in your philosophy. (I, 5)

3. ಬಿ.ಎಂ.ಶ್ರೀ.–A HAND BOOK OF RHETORIC. in 'ಶ್ರೀಸಾಹಿತ್ಯ'. ಮೈಸೂರು ವಿಶ್ವವಿದ್ಯಾನಿಲಯ; op. cit.

ಎಂದು ಹ್ಯಾಮ್ಲೆಟ್ ಹೊರೇಷಿಯೋಗೆ ಹೇಳುವಾಗ 'philosophy' ಎನ್ನುವ ಪದಕ್ಕೆ ಲೋಕಾಭಿರಾಮವಾಗಿ ಮಾತ್ರ ಅರ್ಥಮಾಡದೆ ಅದನ್ನು scepticism (ಸಂದೇಹವಾದ)—ಪ್ರಸ್ತುತದಲ್ಲಿ ಪ್ರೇತಗಳ ಅಸ್ತಿತ್ವದ ಬಗ್ಗೆ ಇರುವ ಅಪನಂಬಿಕೆ— ಎನ್ನುವ ಅರ್ಥದಲ್ಲೂ ತೆಗೆದುಕೊಂಡು, ಹ್ಯಾಮ್ಲೆಟ್ ಹೊರೇಷಿಯೋವಿನ 'ಸ್ಥಿತಪ್ರಜ್ಞತ್ವ'ದ ಬಗ್ಗೆ ತಾಳುವ ಗೌರವವನ್ನು ವಿಶ್ಲೇಷಿಸಿ. ಈ ನಾಟಕದ ಆದಿ ಮಧ್ಯಾಂತಗಳೆಲ್ಲಕಡೆಯಲ್ಲಿಯೂ ತಾತ್ತ್ವಿಕತೆಯು ಹಾಸುಹೊಕ್ಕಾಗಿ ಪ್ರಸರಿಸಿವೆ ಎಂಬುದನ್ನು ಮೊತ್ತಮೊದಲಿಗೆ ಮನಗಾಣಬೇಕು.

'ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆ' ಎನ್ನುವುದು ವಿಸ್ತಾರವಾದ ಶೀರ್ಷಿಕೆ. ಪ್ರಸ್ತುತದಲ್ಲಿ ಅದನ್ನು ವೇದಾಂತಪ್ರಕ್ರಿಯೆಗೆ ಸೀಮಿತಗೊಳಿಸಿಕೊಂಡರೆ ಹೆಚ್ಚು ಫಲಕಾರಿಯಾಗಬಹುದು ಎನ್ನುವ ಆಕಾಂಕ್ಷೆಯಿಂದ – ಸತ್ತ್ವ, ರಜೋ, ತಮ– ಈ ತ್ರಿಗುಣಾತ್ಮಿಕವಾದ ಚೌಕಟ್ಟನ್ನು ಉಪಯೋಗಿಸಿಕೊಂಡು ಮುಂದಿನ ಕೆಲವು ಮಾತುಗಳನ್ನಾಡಲು ಉದ್ಯುಕ್ತನಾಗುತ್ತೇನೆ.

ಮೊದಲಿಗೆ ವೇದಾಂತಪ್ರಕ್ರಿಯೆಯನ್ನು ಯಾವ ರೀತಿ ಇಲ್ಲಿ ಅಳವಡಿಸಿಕೊಂಡಿವೆ ಯೆಂಬುದರ ಬಗ್ಗೆ ಒಂದೆರಡು ಮಾತು.

ಹ್ಯಾಮ್ಲೆಟ್‌ನನ್ನು ವೇದಾಂತದರ್ಶನದ ಮೂಲಕ ನೋಡಲು ನಮಗೆ ನೆರವಾಗುವ ಮುಖ್ಯ ವಿಷಯವೆಂದರೆ ಇವನು ಜೀವನದ ಬಗ್ಗೆ ತಾಳುವ ಮನೋಭಾವ. ಪ್ರಾಪಂಚಿಕ ವಿದ್ಯಮಾನಗಳ ಬಗ್ಗೆ ಇವನಿಗೆ ಇರುವ ಅಸಡ್ಡೆ ಮತ್ತು ಅಸಹ್ಯ—ತತ್ತ್ವಶಾಸ್ತ್ರದ ಪಾರಿಭಾಷಿಕ ಶಬ್ದವನ್ನು ಉಪಯೋಗಿಸಬಹು ದಾದರೆ, ಇವನ 'ಜಿಹಾಸಾ'. ಈ 'ಜಿಹಾಸಾ'ಗೆ ಕಾರಣಗಳನ್ನು ವಿಸ್ತಾರವಾಗಿ ವಿವರಿಸಲು ಇಲ್ಲಿ ಅವಕಾಶವೂ ಇಲ್ಲ, ಅಗತ್ಯವೂ ಇಲ್ಲ. ತನ್ನ ತಾಯಿಯು ತನ್ನ ತಂದೆಯ ಮರಣದ ತರುಣದಲ್ಲೇ ತನ್ನ ಚಿಕ್ಕಪ್ಪನನ್ನು ಮದುವೆಯಾದದ್ದು ಈ 'ಜಿಹಾಸಾ'ಗೆ catalitic agent ಆಗಿ–ನಮ್ಮ ಪರಿಭಾಷೆಯಲ್ಲಿ ಕರಣವಾಗಿ ('ಅಸಾಧಾರಣಂ ಕಾರಣಂ ಕರಣಂ' ಎನ್ನುವುದು 'ಕರಣ'ದ ಅರ್ಥ) ಪರಿಣಮಿಸಿದ್ದನ್ನು ನೆನಪಿಗೆ ತೆಗೆದುಕೊಂಡರೆ ಸಾಕು. ಈ 'ಜಿಹಾಸಾ'ದ ಮೂಲ ಹ್ಯಾಮ್ಲೆಟ್‌ನ ಸ್ವಭಾವದಲ್ಲೇ ಅಂತರ್ಗತವಾಗಿದೆಯೆಂಬುದು ಮುಖ್ಯವಾದ ವಿಷಯ. ಅನೇಕ ಕಡೆಗಳಲ್ಲಿ ಇವನು ಮಾನವ ಜೀವನದ 'ಗುರಿ'ಯ ಬಗ್ಗೆ ತನ್ನ ಆಳವಾದ ಅರಿವನ್ನು ತೋರಿಸುತ್ತಾನೆ. ಉದಾಹರಣೆಗೆ—

> What is a man,
> If his chief good and market of his time
> Be but to sleep ond feed ? a beast, no more :
> Sure he that made us with such large discourse,

Looking before and after, gave us not
That capacity and god-like reason
To fust in us unused. (IV, 4)

ಈ ಸಾಲುಗಳು ಮಾನವನು ಪುರುಷಾರ್ಥಗಳಲ್ಲಿ ಪರಮಪುರುಷಾರ್ಥವಾದ ಮೋಕ್ಷಕ್ಕೆ ಧರ್ಮದ ಮೂಲಕ ಪ್ರಯತ್ನಿಸದಿದ್ದರೆ ಪಶುವೇ ಸರಿ ಎಂಬುದನ್ನು ಮನಸ್ಸಿಗೆ ತರುತ್ತದೆ — "ಆಹಾರ ನಿದ್ರಾ ಭಯ ಮೈಥುನಂ ಚ ಸಾಮಾನ್ಯಮೇತತ್ ಪಶುಭಿರ್ನರಾಣಾಂ". ಮನುಷ್ಯನ ದೈನಂದಿನ ಅರ್ಥವಿಹೀನ ಜೀವನದ ಬಗ್ಗೆ ಮಾತ್ರವಲ್ಲದೆ ಮಾನವನ ಮಾನವತೆಯ ಬಗ್ಗೆಯೂ, ಭೂತಭೌತಿಕ ಪ್ರಪಂಚದ ಬಗ್ಗೆಯೂ ನಿರಾಶಾಜನಕವಾದ ಪ್ರತಿಕ್ರಿಯೆ ಹ್ಯಾಮ್ಲೆಟ್‌ನಲ್ಲಿ ಉಂಟಾಗಿದೆಯೆಂಬುದಕ್ಕೆ ಒಂದು ನಿದರ್ಶನ ಸಾಕು-ಹ್ಯಾಮ್ಲೆಟ್ ಹೇಳುತ್ತಾನೆ—

I have of late—but wherefore I know not—lost all my mirth, foregone all custom of exercises; and indeed it goes so heavily with my disposition that this goodly frame, the earth, seems to me a sterile promontory, this most excellent canopy the air, look you, this brave o'erhanging firmament, this majestical roof fretted with golden fire, why, it appeareth nothing to me but a foul and pestilent congregation of vapours···what a piece of work is man, how noble in reason, how infinite in faculties, in form and moving, how express and admirable in action, how like an angel in apprehension, how like a god: The beauty of the world; the paragon of animals; and yet to me, what is this quintessence of dust? man delights not me, no, nor woman neither, though by your smiling you seem to say so. (II, 2)

ಈ ಸಾಲುಗಳ ಕನ್ನಡ ಭಾಷಾಂತರವನ್ನು ಇಲ್ಲಿ ಗಮನಿಸುವುದೊಳಿತು. ಮಾಸ್ತಿಯವರು ತಮ್ಮ 'ಹ್ಯಾಮ್ಲೆಟ್' ಭಾಷಾಂತರದಲ್ಲಿ ಹೀಗೆ ಅನುವಾದಮಾಡಿದ್ದಾರೆ—

ನಾನು ಈಚೆಗೆ—ಆದರೆ ಯಾಕೋ ಕಾಣೆ—ನನ್ನ ಹರ್ಷವನ್ನೆಲ್ಲ ಕಳೆದುಕೊಂಡಿದ್ದೇನೆ. ವಾಡಿಕೆಯ ವ್ಯಾಯಾಮವನ್ನೆಲ್ಲಾ ಬಿಟ್ಟಿದ್ದೇನೆ. ನಿಜವಾಗಿ ನನ್ನ ಸ್ವಭಾವ ಇಷ್ಟು ಖಿನ್ನವಾಗಿದೆ; ಈ ಸುಂದರ ರಚನೆಯಿಂದೆಯೇ ಭೂಮಿ. ಇದು ನನಗೆ ಒಂದು ಬಂಜೆ ಕೊನೆ ನೆಲವಾಗಿ ಕಾಣುತ್ತಿದೆ. ನೋಡಿ, ಈ ಅತಿಶ್ರೇಷ್ಠ ಆಚ್ಛಾದ, ಈ ಗಾಳಿ, ಈ ಮೇಲೆ ಬಾಗಿರುವ ಧವ್ರ ಆಕಾಶ,

ಸ್ವರ್ಣ ಜ್ಯೋತಿಗಳಿಂದ ತಾರಕಿತವಾಗಿ ವೈಭವಸಂಪನ್ನವಾದ ಈ ಛಾವಣಿ, ಕೇಳಿರಿ. ಇದು ನನಗೆ ಹೊಲಸಾದ ಅನಿಷ್ಟಕರವಾದ ವಾತಗಳ ಸಂಘಾತ ಹೊರತು ಬೇರೆ ಏನೂ ಅಲ್ಲವಾಗಿದೆ. ಮಾನವ ಎನ್ನುವನು ಅದೆಂತಹ ಚತುರ ರಚನೆ! ವಿಚಾರದಲ್ಲಿ ಅದೆಷ್ಟು ಉದಾತ್ತ! ಕರಣದಲ್ಲಿ ಎಷ್ಟು ನಿಸ್ಸೀಮ! ಆಕೃತಿಯಲ್ಲಿ ಚಲನದಲ್ಲಿ ಎಂಥ ಸಂಘಟನೆ, ಏನು ಆಶ್ಚರ್ಯ! ಕ್ರಿಯೆಯಲ್ಲಿ ಹೇಗೆ ದಿವ್ಯಸೂರಿಸಮ, ಜ್ಞಾನದಲ್ಲಿ ಹೇಗೆ ದೇವಸನ್ನಿಭ! ಸೃಷ್ಟಿಯ ಸೌಂದರ್ಯ, ಜೀವರಾಶಿಯ ಮೌಳಿಮಣಿ. ಇಷ್ಟಾದರೂ ಮಣ್ಣಿನ ಹುಡಿಯ ಈ ಸಾರತತ್ವ ಇದರಿಂದ ನನಗೆ ಏನು? ಮಾನವನಿಂದ ನನಗೆ ಸುಖ ವಿಲ್ಲ. ಇಲ್ಲ. ನಿಮ್ಮ ಮುಗುಳುನಗೆಯಿಂದ ನೀವಿದನ್ನು ಹೇಳುವಂತಿದೆಯಾದರೂ ಮಾನವಿಯಿಂದಲೂ ನನಗೆ ಸುಖವಿಲ್ಲ.[4]

ಇಷ್ಟೊಂದು ಸಾಲುಗಳನ್ನು ಒಮ್ಮೆಲೆ ಉದಾಹರಿಸಲು ನಿಮಿತ್ತವೇನೆಂದರೆ ಹ್ಯಾಮ್ಲೆಟ್‌ಗೆ ವೈರಾಗ್ಯಪ್ರಾಪ್ತಿಯಾಗಿದೆಯೆಂದು ನಿರ್ಧಾರವಾಗಿ ಹೇಳಲು ಮಾತ್ರ. ಈ ವೈರಾಗ್ಯದ ಮಾತೇ ಯಾಕೆಂದರೆ ನಿತ್ಯಾನಿತ್ಯವಸ್ತುವಿವೇಕ. ವಿವೇಕ, ವೈರಾಗ್ಯ, ಈ ಸಾಧನಗಳಿಲ್ಲದೆ ಮುಮುಕ್ಷುತ್ವಕ್ಕೆ—ಮುಮುಕ್ಷುತ್ವದ ಮೂಲಕ ಮುಕ್ತಿಗೆ—ಅಧಿಕಾರಿಯಾಗಲು ಸಾಧ್ಯವಿಲ್ಲ. ಇಲ್ಲಿನ ಪ್ರಸ್ತುತ ವಾದಸರಣಿ ಹ್ಯಾಮ್ಲೆಟ್‌ಗೆ ಮುಮುಕ್ಷುತ್ವವಿದೆಯೆಂಬುದನ್ನು ಸಿದ್ಧಪಡಿಸದೆ ಇವನು ಗುಣಾತೀತನಾಗಲು ಪ್ರಯತ್ನಿಸುತ್ತಿದ್ದಾನೆಂಬ ನಿರ್ಧಾರ ಸಲ್ಲದು. ಮತ್ತೇನೆಂದರೆ ಹ್ಯಾಮ್ಲೆಟ್‌ನ ವೈರಾಗ್ಯ ಮಂದವೈರಾಗ್ಯವಲ್ಲ. ತೀವ್ರವೈರಾಗ್ಯ. ಸಾಮಾನ್ಯವಾಗಿ ಲೋಕರೂಢಿಯಲ್ಲಿ ಹೆಸರಿಸುವ ಅಭಾವ ವೈರಾಗ್ಯ, ಪ್ರಸೂತಿ ವೈರಾಗ್ಯ, ಸ್ಮಶಾನ ವೈರಾಗ್ಯ—ಈ ವೈರಾಗ್ಯಾಭಾಸಗಳ ಜಾತಿಗೆ ಸೇರಿದ್ದಲ್ಲ ಹ್ಯಾಮ್ಲೆಟ್‌ನ ತೀವ್ರತಮ ವೈರಾಗ್ಯ. ಈತನು ಒಫೀಲಿಯಳ ವಿಷಯದಲ್ಲಾಗಲಿ, ತನ್ನ ತಾಯಿ ಗಟ್ರೂರ್ಡ್ ವಿಷಯದಲ್ಲಾಗಲಿ, ಅಥವಾ ಸ್ಮಶಾನದಲ್ಲಿ ಒಫೀಲಿಯಾಳನ್ನು ಹೂಳುವ ಸಂದರ್ಭದಲ್ಲಿ ಇವನ ಮಾತುಗಳು ಮತ್ತು ಗೋರಿ ಸಿದ್ಧಪಡಿಸುವ ಕೆಲಸಗಾರರೊಂದಿಗೆ ಮಾಡುವ ಸಂಭಾಷಣೆಯಿಂದಾಗಲಿ ಮಾತ್ರ ಹ್ಯಾಮ್ಲೆಟ್‌ನ ವೈರಾಗ್ಯವನ್ನು ಮನಸ್ಸಿಗೆ ತಂದುಕೊಂಡರೆ ಮಂದವೈರಾಗ್ಯದ ಮಾತ್ರವಲ್ಲದೆ ವೈರಾಗ್ಯಾಭಾಸದ ನೆಲೆಯಲ್ಲಿ ನಾವು ದಾರಿತಪ್ಪಬಹುದು. ಈ ಬರೆಹಗಾರನ ಪ್ರಕಾರ ಹ್ಯಾಮ್ಲೆಟ್‌ಗೆ ಸಿದ್ಧವಾಗಿರುವುದು ತೀವ್ರತಮವಾದ, ಮುಮುಕ್ಷುತ್ವಕ್ಕೆ ಹಾದಿಮಾಡಿಕೊಡುವ, ವೇದಾಂತ ಪ್ರಕ್ರಿಯೆಯಲ್ಲಿ ಅನುಮೋದಿಸಿರುವ ಸಾಚಾ ವೈರಾಗ್ಯ. ಈ ಸಂದರ್ಭದಲ್ಲಿ ತಾತ್ತ್ವಿಕ ನಿಲುವಿಗೆ ಸಂಬಂಧಪಟ್ಟ ಈತನ ಕೆಲವು ವಾಕ್ಯಗಳನ್ನು ಉದಾಹರಿಸಿದರೆ ತಪ್ಪಾಗಲಾರದು. ಹ್ಯಾಮ್ಲೆಟ್‌ನ ತಂದೆಯ ಪ್ರೇತವು ಹ್ಯಾಮ್ಲೆಟ್‌ಗೆ ಆದೇಶಕೊಡುವ

4. ಶ್ರೀನಿವಾಸ. 'ಹ್ಯಾಮ್ಲೆಟ್ ನಾಟಕದ ಭಾಷಾಂತರ'. ರಾಜಸೇವಾಪ್ರಸಕ್ತ ನವರತ್ನ ರಾಮರಾಯರ ಪ್ರಸ್ತಾವನೆ ಸಮೇತ. ಜೀವನ ಕಾರ್ಯಾಲಯ. ಬೆಂಗಳೂರು. ಪು. ೬೫-೬೬.

ಸಲುವಾಗಿ ಅವನನ್ನು ತನ್ನೊಂದಿಗೆ ಬರಬೇಕೆಂದು ಸಂಜ್ಞೆ ಮಾಡಿದಾಗ ಮಾರ್ಸೆಲಸ್ ಮತ್ತು ಹೊರೇಷಿಯೋ ಅವನನ್ನು ತಡೆಯಲು ಪ್ರಯತ್ನಿಸುತ್ತಾರೆ. ಆಗ ಹ್ಯಾಮ್ಲೆಟ್ ಹೇಳುತ್ತಾನೆ—

> Why, what should be the fear ? I do not set my life at a pin's fee ; And for my soul, what can it do to that, Being a thing immortal as itself ? (I, 4)

ಹ್ಯಾಮ್ಲೆಟ್‌ಗೆ ಜೀವಾತ್ಮಭೇದ ಮೈಗೂಡಿಬಂದಿದೆಯೆಂಬುದಕ್ಕೆ ಇದೊಂದು ನಿದರ್ಶನ. ತನ್ನ ಭೌತಿಕ, ಐಹಿಕ ಜೀವನದ ಬಗ್ಗೆ ಈತನಿಗಿರುವ ಔದಾಸೀನ್ಯ ಎಷ್ಟರ ಮಟ್ಟಿಗೆ ಇದೆಯೆಂದರೆ ಇದರ ಬಗ್ಗೆ ಚೆಲ್ಲಾಟದಿಂದ ಹಾಸ್ಯಪ್ರವೃತ್ತಿಯಲ್ಲಿ ತೊಡಗುವುದೂ ಉಂಟು. ಪೊಲೋನಿಯಸ್‌ನು—

> "My honourable lord, I will most humbly take my leave of you"

ಎಂದಾಗ ಹ್ಯಾಮ್ಲೆಟ್ ಹೇಳುತ್ತಾನೆ—

> "You cannot, sir, take from me anything that I will more willingly part withal,—except my life, except my life. except my life. (II, 2).

ಹುಟ್ಟಿನಿಂದಲೇ ಹ್ಯಾಮ್ಲೆಟ್‌ನ ಸ್ವಭಾವ ಆಲೋಚನಾಪರತೆಯಿಂದ ಕೂಡಿದ್ದು. ಸಿದ್ಧಾರ್ಥನು ಮುದಿತನ ಸಾವುಗಳನ್ನು ನೇರವಾಗಿ ಸಂದರ್ಶಿಸಿದುದರ ಫಲವಾಗಿ ಇಹಾಮುತ್ರ ಫಲಭೋಗಗಳನ್ನು ವರ್ಜಿಸಿ, ನಿಜವಾದ ವೈರಾಗ್ಯದ ಸಲುವಾಗಿ ಬುದ್ಧನಾಗಿ ಪರಿವರ್ತನೆಗೊಂಡಿದ್ದನ್ನು ಇಲ್ಲಿ ಗಮನಿಸಬಹುದು. ಹೀಗೆಯೇ ಹ್ಯಾಮ್ಲೆಟ್‌ನ ಸ್ವಾಭಾವಿಕ ಅಂತರ್ಮುಖಪ್ರಜ್ಞೆಯು ತನ್ನ ತಾಯಿಯು ಗಂಡಸತ್ತಕೂಡಲೇ ಅವನ ಸಹೋದರನನ್ನು ಅವಸರದಲ್ಲಿ ವರಿಸಿದುದು ಹ್ಯಾಮ್ಲೆಟ್‌ನನ್ನು ಕಾಮ–ಪ್ರೇಮಗಳ ಬಗ್ಗೆ ಆಲೋಚನಾಪರನನ್ನಾಗಿ ಮಾಡಿ ತನ್ನ ತಂದೆಯ ಪ್ರೇತವು ತಾನು ಹೇಗೆ ಕೊಲ್ಲಲ್ಪಟ್ಟನೆಂದು ತಿಳಿಸಿದಾಗ ಹ್ಯಾಮ್ಲೆಟ್‌ನ ಜೀವನಪ್ರಜ್ಞೆ ಅಲ್ಲಿಯ ವರೆಗೂ ಸುಪ್ತವಾಗಿದ್ದ ಗಂಡು–ಹೆಣ್ಣುಗಳ ಸಂಬಂಧದ ಬಗ್ಗೆಯಿಂದ ಹಿಡಿದು ಪ್ರಾಪಂಚಿಕ ವ್ಯವಹಾರಗಳೆಲ್ಲ ವಿಷಯದಲ್ಲೂ ಬೇಜಾರುಮಾತ್ರವಲ್ಲದೆ ಅಸಹ್ಯ–ಜಿಹಾಸಾ–ಬೇರೂರುವಂತೆ ಮಾಡುತ್ತದೆ. ಇದಿಷ್ಟು ಇವನ ವೈರಾಗ್ಯಮನೋಭಾವಕ್ಕೆ ನಾಂದಿ.

ಈತನ ಮನೋಭಾವದ ಅಡಿಗಲ್ಲೆಂದರೆ ಇವನ ಸಾತ್ವಿಕತೆ. ಹ್ಯಾಮ್ಲೆಟ್, ನಮ್ಮ ಪರಿಭಾಷೆಯಲ್ಲಿ ಹೇಳುವುದಾದರೆ ಒಬ್ಬ ಸಾತ್ವಿಕ. ಈ ಸಾತ್ವಿಕನಿಗೆ ಇವನ ತಂದೆಯ ಪ್ರೇತವು ರಾಜಸಪ್ರವೃತ್ತಿಯ ಕಾರ್ಯವನ್ನು ಕೈಗೊಳ್ಳಬೇಕೆಂದು—ತನ್ನ

ಚಿಕ್ಕಪ್ಪನ ಮೇಲೆ ಸೇಡುತೀರಿಸಿಕೊಳ್ಳಬೇಕೆಂದು—ಆದೇಶವಿತ್ತಾಗ, ಈ ಆದೇಶವನ್ನು ಇವನು ತನ್ನ ಸ್ವಭಾವಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳಬೇಕಾದ ಸಲುವಾಗಿ ತತ್‌ಕ್ಷಣ ನೆರವೇರಿಸಲು ಅಸಮರ್ಥನಾಗುತ್ತಾನೆ. ಆದರೆ ತಂದೆಯ ಪ್ರೇತದ ಆಜ್ಞೆಯನ್ನು ಪರಿಪಾಲಿಸಬೇಕೆಂಬ ಕಟ್ಟಳೆ ಇವನ ಮನಸ್ಸನ್ನು ಕಾಡತೊಡಗುತ್ತದೆ. ಇವನ ಮನಸ್ಸಿನ ತುಮುಲವೇ ಇವನು ತಂದೆಯ ಪ್ರೇತದ ಆಜ್ಞೆಯನ್ನು ನಿರ್ವಹಿಸಲು ಇರುವ ಅಡಚಣೆ. ಹೀಗಾಗಿ ಇವನು ತತ್‌ಕ್ಷಣ ಕಾರ್ಯೋನ್ಮುಖನಾಗದೆ ಇರುವುದು. ಇದನ್ನೇ 'ಹ್ಯಾಮ್ಲೆಟ್' ನಾಟಕದ ಬಗ್ಗೆ-ಮತ್ತು ಇವನ ಪಾತ್ರದ ಬಗ್ಗೆ,—ಒಂದು ವಿಧದಲ್ಲಿ ಇವೆರಡನ್ನೂ ಪ್ರತ್ಯೇಕಿಸುವುದು ಅಸಾಧ್ಯ—ವಿಮರ್ಶೆಮಾಡಿರುವವರೆಲ್ಲರೂ ವಿಶ್ಲೇಷಿಸಿ ಅನೇಕ ಕಾರಣಗಳನ್ನು ಹೇಳಿದ್ದಾರೆ. ಪ್ರಸ್ತುತದಲ್ಲಿ, ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಈತನ ಪಾತ್ರವನ್ನು ವಿಶ್ಲೇಷಿಸಿದರೆ 'ಹ್ಯಾಮ್ಲೆಟ್' ನಾಟಕದಲ್ಲಿನ delay question ಗೆ ನಮ್ಮದೇ ಆದ ಒಂದು ಪ್ರಕ್ರಿಯೆಯ ಮೂಲಕ ಸಮಾಧಾನವನ್ನು ಒದಗಿಸಿದಂತಾಗುತ್ತದೆ. ಇದೇ ಇಲ್ಲಿಯ ಮುಖ್ಯ ಉದ್ದೇಶ. ಈ ಲೇಖಕನ ಪ್ರಯತ್ನ.

ಹ್ಯಾಮ್ಲೆಟ್ ತನ್ನ ತಂದೆಯ ಪ್ರೇತದ ಆಜ್ಞೆಯನ್ನು ಪರಿಪಾಲಿಸಬೇಕಾದರೆ ತನ್ನ ಸಾತ್ವಿಕ ಮನೋವೃತ್ತಿಯನ್ನೇ ಬದಲಾಯಿಸಬೇಕು. ಅಂದರೆ, ಅರ್ಥಾತ್ ತಾನು ಬೇರೆಯವನಾಗಬೇಕು. ಹ್ಯಾಮ್ಲೆಟ್ ಷೇಕ್ಸ್‌ಪಿಯರ್‌ನ ಬೇರೆ ದುರಂತ ನಾಟಕಗಳ ನಾಯಕರಾದ ಮ್ಯಾಕ್‌ಬೆತ್ ಮತ್ತು ಒಥೆಲೋಗಳಂತೆ ರಾಜಸಿಕ ಮನೋಭಾವ ಉಳ್ಳವನಾಗಬೇಕು. ಅವರ ರೀತಿಯ 'ಕಾರ್ಯತತ್ಪರತೆ' ಇವನಿಗಿಲ್ಲ—ಸ್ವಭಾವಸಿದ್ಧವಾಗಿ. ಅಥವಾ ಲಿಯರ್ ದೊರೆಯಂತೆ ಇವನು ತಾಮಸಿಕ ಗುಣಾನ್ವಿತನೂ ಅಲ್ಲ. ಪ್ರಸಿದ್ಧ ಆಂಗ್ಲನಟನಾದ ಸರ್ ಲಾರೆನ್ಸ್ ಒಲೀವಿಯೇ 'ಹ್ಯಾಮ್ಲೆಟ್' ಚಲನಚಿತ್ರವನ್ನು—ತಾನೇ ಸ್ವತಃ ಹ್ಯಾಮ್ಲೆಟ್ ಆಗಿ ನಟಿಸಿದ್ದಾನೆ—ತೆಗೆದಾಗ, ಚಿತ್ರ ಮೊದಲಾಗುವ ಮುನ್ನ ನಮಗೆ ತೆರೆಯ ಮೇಲೆ ಕಾಣುವುದು ಒಂದು ಸೂಕ್ತಿ—

"This is the tragedy of a man who could not act"

—ಅಂದರೆ ಇದು ಒಬ್ಬ ನಿಷ್ಕರ್ಮಿಯ ದುರಂತ ನಾಟಕ ಎಂದು. ಇದು ನಮ್ಮ ಪ್ರಕಾರ—ನೈಷ್ಕರ್ಮ್ಯದ ಬಗ್ಗೆಯೇ—ಅಂದರೆ, ಭಾರತೀಯ ತಾತ್ತ್ವಿಕ ಚೌಕಟ್ಟಿನಲ್ಲಿ ನೈಷ್ಕರ್ಮ್ಯಸಿದ್ಧಿಯ ಪರಿಸರದಲ್ಲಿಯೇ—ನೋಡಲು ಅನುಕೂಲ ಮಾಡಿಕೊಡುತ್ತದೆ. ಹ್ಯಾಮ್ಲೆಟ್ ಯಾವ ಕರ್ಮದ ಬಗ್ಗೆಯೂ ಆಸಕ್ತಿ ಇಲ್ಲದವನಾಗಿರುವುದರಿಂದ—ಕಾಮ್ಯಕರ್ಮದ ಬಗ್ಗೆ ಈತನಿಗಿರುವ ಧೋರಣೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಹ್ಯಾಮ್ಲೆಟ್‌ನು ತಾತ್ತ್ವಿಕಮನೋಭಾವದ ಮೂರ್ತಿ. ಇದರಿಂದಲೇ ಈತನ ಸ್ವಗತ—soliloquies—ಗಳನ್ನು ನಾವು ವಿಶೇಷವಾಗಿ ಗಮನಿಸಬೇಕು.

ಹ್ಯಾಮ್ಲೆಟ್ ಸ್ವಾತ್ಮವಿಚಾರಪರನಾದ್ದರಿಂದಲೇ ತನ್ನ ಮನೋವೃತ್ತಿಗಳನ್ನು ಸಾಕ್ಷಿ ಸ್ವರೂಪದಲ್ಲಿ ನಿಂತು ಬೇರೆಯವರನ್ನು ನೋಡುವಂತೆ ತನ್ನನ್ನೇ ತಾನು ವಿಶ್ಲೇಷಣೆಗೆ ಒಳಪಡಿಸಿಕೊಳ್ಳುತ್ತಾನೆ. ಈ introvert nature—ಅಂತರ್ಮುಖತೆ—ಹ್ಯಾಮ್ಲೆಟ್‌ನ ನೈಜ ಸಾತ್ವಿಕಸ್ವಭಾವವನ್ನರಿಯಲು ಸಾಧನ. ಒಂದು ಕಡೆ ತಂದೆಯ ಪ್ರೇತದ ಕಟ್ಟಾಜ್ಞೆ—ತನ್ನ ಸ್ವಧರ್ಮ—ರಜಪೂತಧರ್ಮ—ತಾನು ರಾಜಪುತ್ರನೆಂಬ ಅರಿವು. ಇದನ್ನು ಬಿಡುವಹಾಗಿಲ್ಲ. ಇನ್ನೊಂದು ಕಡೆ ತನ್ನ ನೈಜ, ಸ್ವಭಾವಸಿದ್ಧವಾದ ಸಾಮಾನ್ಯವಾದ ಮಾನವಧರ್ಮ—ತಾನು ಸಾತ್ವಿಕಗುಣಸಂಪನ್ನನೆಂಬ ಅರಿವು. ಇದನ್ನೂ ಬಿಡುವಹಾಗಿಲ್ಲ. ಹೀಗಾಗಿ ಇವನು ಅರ್ಜುನನಂತೆ 'ಧರ್ಮಸಂಮೂಢಚೇತ'ನಾಗುತ್ತಾನೆ. ಇಲ್ಲಿ ಹ್ಯಾಮ್ಲೆಟ್‌ನನ್ನು ಭಗವದ್ಗೀತೆಯ ಅರ್ಜುನನಿಗೆ ಹೋಲಿಸಬೇಕೆಂಬ ಅಭಿಪ್ರಾಯವಲ್ಲ. ಆದರೆ ನಮ್ಮ ತಾತ್ತ್ವಿಕ ಹಿನ್ನೆಲೆಯಲ್ಲಿ ಹ್ಯಾಮ್ಲೆಟ್‌ನ 'problem' ನನ್ನು ನೋಡಬೇಕಾದರೆ ಈ ಸಂದರ್ಭ ಅಷ್ಟೇನೂ ಹೊಸದೂ ಅಲ್ಲ—ನಮ್ಮ ಧಾರ್ಮಿಕ ಪ್ರಜ್ಞೆಗೆ ಹೊರತೂ ಅಲ್ಲ ಅನ್ನಿಸುತ್ತದೆ.

ಇನ್ನೊಂದು ವಿಷಯ. ಭಗವದ್ಗೀತೆಯನ್ನು ಇಲ್ಲಿ ಸ್ಮರಿಸಿಕೊಂಡಿರುವುದಕ್ಕೆ ಮುಖ್ಯಕಾರಣವೆಂದರೆ, ಭಗವದ್ಗೀತೆಯಲ್ಲಿ ಹೇಳಿರುವ ಸತ್ವರಜಸ್ತಮೋಗುಣಗಳ ಉಲ್ಲೇಖವನ್ನು ಈ ಲೇಖನದಲ್ಲಿ ತಾತ್ತ್ವಿಕಮನೋಭಾವದ ತಿಳುವಳಿಕೆಗೆ ಅಳವಡಿಸಿಕೊಂಡಿರುವುದು. ಹ್ಯಾಮ್ಲೆಟ್‌ನ ಚರ್ಯೆಯನ್ನು–ಅಂದರೆ ಅವನು ಕರ್ಮಾಚರಣೆಯಲ್ಲಿ ತೊಡಗದಿರುವುದನ್ನು ಅರ್ಥಮಾಡಿಕೊಳ್ಳಬೇಕಾದರೆ ಇವನು 'ದೈವೀಸಂಪತ್' ಹೊಂದಿದವನಾಗಿದ್ದು 'ಆಸುರೀ ಸಂಪತ್' ಮನೋವೃತ್ತಿಯ ಕಾರ್ಯವನ್ನು ನಿರಾಕರಿಸಲು ಕಾರಣವಾಯಿತೆಂದು ತಾತ್ತ್ವಿಕಪರಿಭಾಷೆಯಲ್ಲಿ ತಿಳಿಯಬೇಕು.

ಹ್ಯಾಮ್ಲೆಟ್‌ನ ಹೆಸರು ಹೇಳಿದ ತತ್‌ಕ್ಷಣವೇ ಎಲ್ಲರಿಗೂ ನೆನಪು ಬರುವುದು ಈತನ "To be or not to be" soliloquy—"ಉಳಿಯುವುದೇ, ಅಳಿಯುವುದೇ : ಇದುವೆ ಸಮಸ್ಯೆ" ಸ್ವಗತ. ಒಮ್ಮೆ ಈತನು "to be" and not "not to be" ಎಂದು ನಿರ್ಧಾರಕ್ಕೆ ಬಂದರೂ ಉದ್ಭವಿಸುವ ಪ್ರಶ್ನೆಯೆಂದರೆ "To act or not to act." —ಕರ್ಮ ಮಾಡಬೇಕೆ? ಬಿಡಬೇಕೆ? ವಿಹಿತ ಕರ್ಮ ಮಾಡಬೇಕೆಂದು ನಿರ್ಧರಿಸಿದರೆ ಈ ಕರ್ಮವನ್ನು ಹೇಗೆ ಮಾಡಬೇಕು? ಈ 'ಕರ್ಮ'ವು ಯಾರಿಂದ ಹೇಗೆ 'ವಿಹಿತ'? ಇದು ನಿಷಿದ್ಧವೆಂದು ತನ್ನ ಸ್ವಭಾವ ಒಳಗಿಂದ ಘೋಷಿಸುತ್ತಿರುವಾಗ ಇದನ್ನು ಮಾಡಿ ಪಾಪಕ್ಕೊಳಗಾಗುವುದು ಸೂಕ್ತವೆ? ಈ ಶಂಕೆಗಳು ಹ್ಯಾಮ್ಲೆಟ್‌ನನ್ನು ಕಾಡುತ್ತವೆ—

The spirit that I have seen
May be the devil ; and the devil hath power
To assume a pleasing shape ; yea and perhaps
Out of my weakness and my melancholy,

As he is very potent with such spirits.
Abuses me to damn me : I'll have grounds
More relative than this : the play's the thing
Wherein I'll catch the conscience of the king.

(II, 2)

ಹ್ಯಾಮ್ಲೆಟ್‌ನ ಪಾಪಭೀತಿಯನ್ನು ಈ ಸಾಲುಗಳು ಪ್ರತಿನಿಧಿಸಿದರೂ, ಈ ಕಾರಣಗಳೆಲ್ಲವೂ ಈತನ ಶಂಕಾಪ್ರವೃತ್ತಿಯನ್ನು ಹೊರಗೆಡಹುತ್ತವೆಯಾದರೂ ಇವನು ಕಾರ್ಯತತ್ಪರನಾಗುವುದಕ್ಕೆ–ಅಂದರೆ ತನ್ನ ಚಿಕ್ಕಪ್ಪನನ್ನು ಕೊಲ್ಲಲು ಉದ್ಯುಕ್ತನಾಗುವುದಕ್ಕೆ ಅಡ್ಡಿ ಆತಂಕಗಳೆಂದು ಪಾಶ್ಚಾತ್ಯವಿಮರ್ಶಕರು ವಾದಿಸಿದ್ದರೂ ಭಾರತೀಯರಾದ ನಮಗೆ ಅನ್ನಿಸುವುದೇನೆಂದರೆ, ಇದು ಇವನ ಸ್ವಭಾವಜನ್ಯವಾದ, ಪ್ರಕೃತಿಸಂಭವವಾದ ಸಾತ್ವಿಕಗುಣದಿಂದ ಪ್ರೇರಿತವಾದುವೇ ವಿನಾ, ಹೊರಗಿನ ಸಂದರ್ಭಗಳನ್ನನುಸರಿಸಿ ಅಥವಾ ತನಗೆ ತಾನೇ ಕೊಟ್ಟುಕೊಳ್ಳುವ ಬುದ್ಧಿಗಮ್ಯವಾದ ನೆಪಗಳಿಂದ ಪ್ರಭಾವಿತವಾದ ಮನೋವೃತ್ತಿಯಲ್ಲ. ಇದರಿಂದಲೇ ಹ್ಯಾಮ್ಲೆಟ್‌ನ ನೈಷ್ಕರ್ಮ್ಯಕ್ಕೆ ನೈಜಕಾರಣವೆಂದರೆ ಇವನ ಸಾತ್ವಿಕಸ್ವಭಾವವೇ ಎಂದು ತೀರ್ಮಾನಿಸಬಹುದು.

ಈಗಾಗಲೇ ನಾವು ಹ್ಯಾಮ್ಲೆಟ್ ಸಾತ್ವಿಕನೆಂದೂ ಆದ್ದರಿಂದಲೇ ರಾಜಸಿಕವಾದ ಕರ್ಮದಲ್ಲಿ ಇವನು ಅನುರಕ್ತನಾಗಲು ಅಶಕ್ತನೆಂದೂ ಹೇಳಿರುವುದರಿಂದ ಇದನ್ನು ಭಾರತೀಯ ತತ್ತ್ವಶಾಸ್ತ್ರದ ಪ್ರಕಾರ ಸ್ಪಷ್ಟಪಡಿಸುವುದು ಅಗತ್ಯ. ಇದಕ್ಕೆ ಆವಶ್ಯಕವಾದ ತಾತ್ತ್ವಿಕ ಚೌಕಟ್ಟನ್ನು ಭಗವದ್ಗೀತೆಯಿಂದಲೇ ತೆಗೆದುಕೊಳ್ಳಬಹುದು. ಭಗವದ್ಗೀತೆಯ ಹದಿನಾಲ್ಕನೇ ಅಧ್ಯಾಯದ ಐದರಿಂದ ಎಂಟನೆಯ ಶ್ಲೋಕಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ—

ಸತ್ತ್ವ ರಜ ಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥

ತತ್ರ ಸತ್ತ್ವಂ ನಿರ್ಮಲತ್ವಾತ್ಪ್ರಕಾಶಕಮನಾಮಯಮ್ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥

ಈ ಶ್ಲೋಕಗಳ ತಾತ್ಪರ್ಯವನ್ನು ಈ ರೀತಿ ವ್ಯಕ್ತಪಡಿಸಲಾಗಿದೆ—

ಅರ್ಜುನ, ಸತ್ತ್ವ ರಜ ತಮ ಎಂದು ಗುಣಗಳು ಮೂರು. ಇವು

ಮಾಯಾಶಕ್ತಿಯಿಂದ ಹುಟ್ಟಿದವುಗಳು. ಇವು ನಾಶವಿಲ್ಲದ ಆತ್ಮನನ್ನು ದೇಹದಲ್ಲಿ ಕಟ್ಟಿಹಾಕುತ್ತವೆ.

ಅರ್ಜುನ, ಆ ಮೂರು ಗುಣಗಳಲ್ಲಿ ಸತ್ತ್ವವು ಕೊಳೆ ಇಲ್ಲದ್ದಾದ್ದರಿಂದ ಬೆಳಗುವಂಥದ್ದಾಗಿರುವುದು ಮತ್ತು ದುಃಖವನ್ನು ಬರಗೊಡದಂಥಾದ್ದಾಗಿರುವುದು. ಇದು ತಿಳಿಯಿತೆಂಬ ಅಭಿಮಾನದಿಂದಲೂ ಸುಖಿಯೆಂಬ ಅಭಿಮಾನದಿಂದಲೂ ಕಟ್ಟಿಹಾಕುವುದು.

ಅರ್ಜುನ, ರಜೋಗುಣವು ಬಯಕೆಯಿಂದಲೂ ಅತಿಪ್ರೀತಿಯಿಂದಲೂ ಹುಟ್ಟಿದ ಅನುರಾಗದ ರೂಪವಾಗಿರುವುದೆಂದು ತಿಳಿ. ಅದು ಆತ್ಮನನ್ನು ತಾನು ಮಾಡುವವನೆಂಬ ಅಭಿಮಾನದಿಂದ ಕಟ್ಟಿಹಾಕುವುದು.

ಅರ್ಜುನ, ಎಲ್ಲಾ ಪ್ರಾಣಿಗಳಿಗೂ ಅವಿವೇಕವನ್ನುಂಟುಮಾಡುವ ತಮೋಗುಣವು ಅಜ್ಞಾನದಿಂದುಂಟಾದದ್ದೆಂದು ತಿಳಿ. ಅದು ತಪ್ಪು ತಿಳಿವಿನಿಂದಲೂ ಸೋಮಾರಿತನದಿಂದಲೂ ನಿದ್ರೆಯಿಂದಲೂ ಕಟ್ಟಿಹಾಕುವುದು.[5]

ಭಾರತೀಯ ಗುಣಪ್ರಕ್ರಿಯೆಯನ್ನು ಒಂದು ಮೂಲಭೂತವಾದ ವಿಶ್ಲೇಷಣ ಸಾಧನವಾಗಿ ಉಪಯೋಗಿಸಿಕೊಳ್ಳಲು ಉದ್ಯುಕ್ತನಾಗಿರುವ ಈ ಸಂದರ್ಭದಲ್ಲಿ ಅದು ಮಾನವನ ಮನಸ್ಸನ್ನರಿಯಲು ಎಂತಹ ಉಪಯುಕ್ತವಾದ ಸಾಧನವೆಂಬುದನ್ನು ಭಾರತೀಯ ಮನೋವಿಜ್ಞಾನದ ತಜ್ಞರೆಲ್ಲರೂ ಒಪ್ಪಿರುವಂತಹ ನಿಲುವು. ಇಲ್ಲಿ ಭಾರತೀಯ ಮನಶ್ಶಾಸ್ತ್ರ, ತತ್ತ್ವಶಾಸ್ತ್ರ, ಕಾವ್ಯಮೀಮಾಂಸೆ, ಸೌಂದರ್ಯ ಮೀಮಾಂಸೆ ಇವುಗಳ ಏಕೈಕ ಪ್ರಯತ್ನವೆಂದರೆ ಒಂದೇ ಗುರಿಯನ್ನು ಸಾಧಿಸುವುದು —ಆತ್ಮಸಾಕ್ಷಾತ್ಕಾರ. ಈ ಸಂದರ್ಭದಲ್ಲಿ ಯಾವುದು ಸತ್ಯವೋ — ಅಂದರೆ ಪಾರಮಾರ್ಥಿಕ ಸತ್ಯವೋ — ಅದೇ ಸುಂದರ. ಯಾವುದು ಬ್ರಹ್ಮಾನಂದವನ್ನು ಗುರಿಯಾಗಿ ಉಳ್ಳದ್ದೋ ಅದೇ ಸಾಹಿತ್ಯ ಎನ್ನುವ ಭಾರತೀಯ ಸಮಗ್ರಚಿಂತನವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಲೇಸು. 'ಹ್ಯಾಮ್ಲೆಟ್'ನಂತಹ ಒಂದು ಶ್ರೇಷ್ಠ ಸಾಹಿತ್ಯಕೃತಿಯನ್ನು ವಿಮರ್ಶಿಸಬೇಕಾದರೆ, ಅದರ ಸಮಗ್ರತೆಯನ್ನು ಕಂಡುಕೊಳ್ಳಬೇಕಾದರೆ ತಾತ್ತ್ವಿಕದೃಷ್ಟಿ ಸಮರ್ಪಕವಾದ ಸಾಧನ ಮಾತ್ರವಲ್ಲದೆ ಅತ್ಯಗತ್ಯ.

ಸತ್ತ್ವ-ರಜಸ್ತಮೋಗುಣಗಳ ಗುರುತ್ವದ ಬಗ್ಗೆ ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ತಮ್ಮ ಭಗವದ್ಗೀತೆಯ ಭಾಷಾಂತರದ ಪ್ರಸ್ತಾವನೆಯಲ್ಲಿ ಹೇಳುವಂತೆ

5 'ಗೀತೆಯ ಕೈಗನ್ನಡಿ'—ಬರಹಗಾರ: ಕೈಲಾಸವಾಸಿ ಶ್ರೀ ಹೊಸಕೆರೆ ಚಿದಂಬರಯ್ಯ, ಬೆಂಗಳೂರು ಸಿಟಿ. ಮೊದಲು ಹೊರಪಡಿಸಿದವರು—ಸನಾತನ ಧರ್ಮ ವ್ಯವಸ್ಥಾಪಕ ಮಂಡಲ, ಉಡುಪಿ.

ಈ ಮೂರು ಗುಣಗಳು ಎಲ್ಲಾ ಮಾನವರಲ್ಲೂ ಬೇರೆ ಬೇರೆ ಪ್ರಮಾಣದಲ್ಲಿ ಇದ್ದೇ ಇರುತ್ತವೆ. ಇದಕ್ಕೆ ಯಾರೂ ಹೊರತಲ್ಲ. ಆದರೆ ಪ್ರತಿಯೊಂದು ಜೀವನಲ್ಲೂ ಯಾವುದಾದರೂ ಒಂದು ಗುಣ ಪ್ರಧಾನವಾಗಿರುತ್ತದೆ. ಮನುಷ್ಯರನ್ನು ಯಾವ ಗುಣ ಪ್ರಧಾನವಾಗಿದೆ ಎನ್ನುವುದರ ದೆಸೆಯಿಂದ ಸಾತ್ತ್ವಿಕ, ರಾಜಸಿಕ, ತಾಮಸಿಕ ರೆಂದು ವಿಭಾಗಮಾಡಬಹುದು. ಪಾಶ್ಚಾತ್ಯ ಪ್ರಕ್ರಿಯೆಯಾದ Theory of Humours ಪ್ರಕಾರ ಮನುಷ್ಯರನ್ನು ದೈಹಿಕವಾದ ಮತ್ತು ವೈದ್ಯಕೀಯ ದೃಷ್ಟಿ ಯಿಂದ ವಿಭಾಗಿಸಿದ್ದಾರೆ. ಭಾರತೀಯರಾದರೋ ದೇಹವನ್ನು ದಾಟಿ, ಮಾನಸಿಕ ವಾಗಿ — psycho physical parallelism ಅನ್ನು ಗಣನೆಗೆ ತೆಗೆದುಕೊಂಡು ಗುಣಪ್ರಕ್ರಿಯೆಯನ್ನು ಕಟ್ಟಿದ್ದಾರೆ. ಇದರ ಪ್ರಕಾರ ಸತ್ತ್ವಗುಣವು ಬೆಳಕಿಗೆ ಸಂಬಂಧಿಸುತ್ತದೆ. ರಾಜಸಿಕಮನೋಭಾವವು ಕಾಮ್ಯಕರ್ಮಗಳಲ್ಲಿ ಅನುರಾಗಹುಟ್ಟಿಸಿ ಬಂಧಿಸುತ್ತದೆ. ತಾಮಸಿಕವೃತ್ತಿಯಾದರೋ ಕತ್ತಲಿಗೆ ಸಂಬಂಧಿಸಿ ನಿದ್ರಾಲಸ್ಯಗಳಲ್ಲಿ ತೊಡಗುವಂತೆ ಮಾಡುತ್ತವೆ. ಈ ವಿಭಾಗವನ್ನು ಮನಸ್ಸಿಗೆ ತಂದುಕೊಂಡ ತತ್‌ಕ್ಷಣ ನಮಗೆ ಹ್ಯಾಮ್ಲೆಟ್‌ನ ಸಾತ್ತ್ವಿಕ ಸ್ವಭಾವವು ದೃಷ್ಟಿಗೋಚರವಾಗುತ್ತದೆ. ಈಗ ಹ್ಯಾಮ್ಲೆಟ್‌ನ ಪಾತ್ರನಿರೂಪಣೆಯನ್ನು ಗಮನಿಸೋಣ—ಇವನು ಹೇಗೆ ಸಾತ್ತ್ವಿಕ ಗುಣವನ್ನು ದಾಟಿ ಗುಣಾತೀತನಾಗಲು ಸಾಮರ್ಥ್ಯವುಳ್ಳವನೆಂಬ ದೃಷ್ಟಿಯಿಂದ.

III

ಹ್ಯಾಮ್ಲೆಟ್‌ನ ಉದಾತ್ತತೆ ಇವನಿಗೆ ಸ್ವಾಭಾವಿಕವಾಗಿ ಪ್ರಾಪ್ತವಾಗಿದೆ. ಹ್ಯಾಮ್ಲೆಟ್ ತನ್ನ ತಂದೆಯ ಸಾವು ಮತ್ತು ತನ್ನ ತಾಯಿಯ ಅವಸರದ ಮರು ಮದುವೆಯ ಅನಂತರ ಪೂರ್ಣವಾಗಿ ಬದಲಾಯಿಸಿಹೋಗಿರುವುದನ್ನು ನಾಟಕದಲ್ಲಿ ಪ್ರಸ್ತಾಪಿಸಿದ್ದರೂ ಅವನು ಯಾವಾಗಲೂ ಹುಟ್ಟಿನಿಂದಲೇ ವಿಚಾರಪರನೂ ಸಾತ್ತ್ವಿಕ ಮನೋಭಾವದವನೂ ಆಗಿದ್ದನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಒಫಿಲಿಯಾ ಹ್ಯಾಮ್ಲೆಟ್‌ಗೆ ಹುಚ್ಚು ಹಿಡಿದಿದೆಯೆಂಬ ಭಾವನೆಯಿಂದ "ಎಂಥಾ ಸ್ವಚ್ಛ ಮನಸ್ಸುಳ್ಳ ವನಿಗೆ" (noble mind) ಈ ರೀತಿಯಾಯಿತು ಎಂದು ದುಃಖಿಸುತ್ತಾಳೆ. ಶತ್ರು ವಾದ ಕ್ಲಾಡಿಯಸ್ ಕೂಡ ಹ್ಯಾಮ್ಲೆಟ್‌ನ ಉದಾತ್ತತೆಯನ್ನು ಗುರುತಿಸುತ್ತಾನೆ—

> Madness in great ones must not unwatched go.
> (III, 2)

ಕ್ಲಾಡಿಯಸ್ ಹ್ಯಾಮ್ಲೆಟ್‌ನನ್ನು ಕೊಲ್ಲಲು ಲಯಾರ್ಟೀಸ್‌ನನ್ನು ಪ್ರೇರೇಪಿಸುವ ಸಂದರ್ಭದಲ್ಲೂ ಸಹ ಹೀಗೆ ಹೇಳುತ್ತಾನೆ—

> he, being remiss
> Most generous, and free from all contriving
> Will not peruse the foils.

ಲಯಾರ್ಟೀಸ್‌ನು ಕತ್ತಿಕಾಳಗದಲ್ಲಿ ತಾನು ಮೊನಚಾದ ಕತ್ತಿಯನ್ನು ತೆಗೆದುಕೊಂಡು ಮೇಲಾಗಿ ಅದಕ್ಕೆ ಅತಿ ತೀಕ್ಷ್ಣವಾದ ವಿಷವನ್ನು ಸವರಿ ಹ್ಯಾಮ್ಲೆಟ್‌ನನ್ನು ಕೊಲ್ಲಲು ಸಂಚುಮಾಡುತ್ತಾನೆ. ಹ್ಯಾಮ್ಲೆಟ್ ಮತ್ತು ಲಯಾರ್ಟೀಸ್ ಈ ಪಂದ್ಯದಲ್ಲಿ ಇಬ್ಬರೂ ಮೊಂಡಾದ ಕತ್ತಿಗಳನ್ನು ಉಪಯೋಗಿಸಬೇಕಿತ್ತು. ಇದನ್ನು ಪ್ರಸ್ತಾಪಿಸುತ್ತಲೇ ಕ್ಲಾಡಿಯಸ್‌ನು ಹ್ಯಾಮ್ಲೆಟ್ ಅಕೃತ್ರಿಮಸ್ವಭಾವದವನೆಂದೂ, ಇನ್ನೊಬ್ಬರು ಮೋಸಮಾಡಬಹುದೆಂಬ ಶಂಕಾಪ್ರವೃತ್ತಿಯುಳ್ಳವನಲ್ಲವೆಂದೂ ಹೇಳುವುದು. ಅವನು ಹೇಳಿದಂತೆಯೇ ಲಯಾರ್ಟೀಸ್‌ನ ಕೃತ್ರಿಮಕ್ಕೆ ಬಲಿಯಾಗುತ್ತಾನೆ.

ಹ್ಯಾಮ್ಲೆಟ್‌ನ ಸಾತ್ತ್ವಿಕಗುಣ ಇವನ ದೈವೀಸಂಪತ್ತಿನ ಒಂದು ಅಂಶ. ಹ್ಯಾಮ್ಲೆಟ್ ಒಫೀಲಿಯಾಳಿಗೆ ಬರೆದ ಪ್ರೇಮಪತ್ರದ ಕೊನೆಯಲ್ಲಿ ಸಹಿ ಮಾಡುವುದು ಈ ರೀತಿ—

> Thine evermore, most dear lady, whilst this machine is to him HAMLET.

ತನ್ನ ದೇಹವು ಒಂದು ಯಂತ್ರ. ಅದೇ ಸಂಪೂರ್ಣವಾಗಿ ತಾನಲ್ಲ ಎಂಬ ಮನೋಭಾವ ವೇದಾಂತಪ್ರಕ್ರಿಯೆಯ ಒಂದು ಮುಖ್ಯ ಅಂಶ. ಹ್ಯಾಮ್ಲೆಟ್‌ನ ಹೊರಗಿನ ತೋರಿಕೆ—ಅಂದರೆ ಇವನ ದೇಹ—ಇವನಿಗೆ ಒಂದು ಉಪಕರಣವೇ ಹೊರತು ಇದೇ ತಾನಲ್ಲ ಎಂಬ ಅರಿವು ಹ್ಯಾಮ್ಲೆಟ್‌ಗೆ ಇದ್ದೇ ಇದೆ. ಅಂದರೆ ಇವನಿಗೆ ದೇಹಾಧ್ಯಾಸವಿಲ್ಲ ಎಂದರ್ಥ. ಇವನು ತನ್ನ ದೇಹದ ಬಗ್ಗೆ ಮಾತ್ರವಲ್ಲದೆ, ದೇಹಗಳ ಬಗ್ಗೆಯೇ ಆಡುವ ಅನೇಕ ಮಾತುಗಳನ್ನು ಗಮನಿಸಿದಾಗ ಇವನು ತಾತ್ತ್ವಿಕ ಹಿನ್ನೆಲೆಯಿಂದ ಈ ಮಾತುಗಳನ್ನಾಡುತ್ತಿದ್ದಾನೆಂಬುದು ಸ್ಪಷ್ಟ. ತನ್ನ ಮೊದಲನೆಯ ಸ್ವಗತ (soliloquy) ಯಲ್ಲಿಯೇ—

> O that this too, too solid flesh

ಎಂದು ತನ್ನ ದೇಹವನ್ನು ಕುರಿತು ಹೇಳುತ್ತಾನೆ. ಇದಕ್ಕೆ ಒಂದು ಪಾಠಾಂತರವೂ ಉಂಟು. 'Solid' ಅನ್ನುವ ಪದದ ಬದಲು 'sullied' ಅನ್ನುವುದೂ ಒಂದು ಪಾಠ. ಹೀಗೆ 'sullied flesh' ಅಂದರೂ ತನ್ನ ದೇಹದ ಬಗ್ಗೆ ಇವನಿಗೆ ಅಭಿಮಾನವಿಲ್ಲದಿರುವ ಮನೋಭಾವ ಬದಲಾಗುವುದಿಲ್ಲ. ಹ್ಯಾಮ್ಲೆಟ್‌ನನ್ನು ಬಣ್ಣಗಳಲ್ಲಿ ಚಿತ್ರಿಸಿರುವವರಾಗಲಿ ಅಥವಾ ಕಲ್ಲಿನಲ್ಲೋ, ಲೋಹದಲ್ಲೋ ಬಿಡಿಸಿರುವವರಾಗಲಿ ಇವನು ತನ್ನ ಕೈಯಲ್ಲಿ ಯಾರಿಕ್ ಅಸ್ಥಿಪಂಜರದ ತಲೆಬುರುಡೆಯನ್ನು ಕೈಯಲ್ಲಿಟ್ಟುಕೊಂಡು ಅದರ ಬಗ್ಗೆ ಮಾನವಜೀವನದ ಅಸ್ಥಿರತೆಯನ್ನು ಪ್ರತೀಕಿಸುವುದನ್ನು ಗಮನಿಸಿದ್ದಾರೆ. ಷೇಕ್ಸ್‌ಪಿಯರ್‌ನ ತವರೂರಾದ Stratford-upon-Avon ನ Shakespeare Memorial Theatre ಹೊರಗಡೆ ಮಧ್ಯದಲ್ಲಿ

ಷೇಕ್ಸ್‌ಪಿಯರ್ ಮತ್ತು ಸುತ್ತಲೂ ಇವನು ಸೃಷ್ಟಿಸಿರುವ ನಾಲ್ಕು ಪಾತ್ರಗಳ ಶಿಲ್ಪಗಳಿವೆ. ಇಲ್ಲಿಯೂ ಸಹ ಹ್ಯಾಮ್ಲೆಟ್‌ನ ಒಂದು ಕೈಯಲ್ಲಿ yorick's skull ಇದೆ. ಇದನ್ನು ಪ್ರಸ್ತಾಪಿಸುವ ಅಗತ್ಯವೇನೆಂದರೆ ಹ್ಯಾಮ್ಲೆಟ್, ದೇಹದ ಬಗ್ಗೆ, ಜೀವಸಾವುಗಳ ಬಗ್ಗೆ, ನಶ್ವರವಾದ ವಸ್ತುಗಳ ಬಗ್ಗೆ ತಾಳುವ ತಾತ್ತ್ವಿಕ ಮನೋಭಾವದ ಅಚ್ಚಳಿಯದ ಪ್ರತೀಕ ಈ ಚಿತ್ರ. ಹ್ಯಾಮ್ಲೆಟ್ ಷೇಕ್ಸ್‌ಪಿಯರ್‌ನ ಪಾತ್ರಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದ ತತ್ತ್ವದರ್ಶಿಯೆಂದರೆ ತಪ್ಪಾಗಲಾರದು. ಹ್ಯಾಮ್ಲೆಟ್ ಹಾರಿಸುವ ಅನೇಕ ಹಾಸ್ಯಚಟಾಕಿಗಳನ್ನು 'sick jokes' ಎಂದು ಕರೆದಿರುವುದೂ ಉಂಟು. ಒಂದೆರಡನ್ನು ಮಾತ್ರ ಇಲ್ಲಿ ಸ್ಮರಿಸಬಹುದು, ಪೊಲೋನಿಯಸ್ ಮರಣದನಂತರ ಹ್ಯಾಮ್ಲೆಟ್‌ನನ್ನು "ಪೊಲೋನಿಯಸ್ ಎಲ್ಲಿ ?" ಎಂದು ಕೇಳಿದಾಗ ಹ್ಯಾಮ್ಲೆಟ್‌ನ ಉತ್ತರ—"ಭೋಜನ ಸಮಾರಂಭದಲ್ಲಿ" ಎಂದು ಹೇಳಿ "ಎಲ್ಲಿ ಅವನು ಊಟಮಾಡುವನೋ ಅಲ್ಲಲ್ಲ ; ಎಲ್ಲಿ ಅವನು ಹುಳುಹುಪ್ಪಟೆಗಳಿಗೆ ಊಟವಾಗಿರುವನೋ ಅಲ್ಲಿ" ಎನ್ನುತ್ತಾನೆ. ಈ ದೇಹಕ್ಕೆ ಎಷ್ಟು ಆರೈಕೆ ಮಾಡಿಕೊಂಡರೂ, ಮುಖಕ್ಕೆ ಎಷ್ಟು ಅಂಗುಲ 'ಮೇಕಪ್' ಮಾಡಿಕೊಂಡರೂ ಯರಾರಿಕ್‌ನ ತಲೆಬುರುಡೆಯು ಮೋಜಿನದೇ ಅದು ಅನ್ನುವ ಅರಿವು ಹ್ಯಾಮ್ಲೆಟ್‌ನನ್ನು ಯಾವಾಗಲೂ ಬಿಡುವುದಿಲ್ಲ. ಅಲೆಗ್ಸಾಂಡರನ ತಲೆಬುರುಡೆಗೂ ಈ ಬುರುಡೆಗೂ ಎಂಥಾ ವ್ಯತ್ಯಾಸವೂ ಇಲ್ಲ. ಸೀಸರ್‌ನ ದೇಹ ಮಣ್ಣಾದ ಮೇಲೆ ಅದೇ ಮಣ್ಣು ಒಂದು ಗೋಡೆಯ ತೂತನ್ನು ಮುಚ್ಚಲು ಉಪಯೋಗವಾಗಬಹುದು ಎಂಬ ವಾದಸರಣಿ ಹ್ಯಾಮ್ಲೆಟ್‌ನ ತಾತ್ತ್ವಿಕಪ್ರಜ್ಞೆಗೆ ಒಂದು ಉದಾಹರಣೆ. ಇದರಿಂದಲೇ ಅಲೆಗ್ಸಾಂಡರನಾಗಲಿ, ಸೀಸರನಾಗಲಿ ಅಥವಾ ತನ್ನ ಚಿಕ್ಕಪ್ಪನಾದ ಕ್ಲಾಡಿಯಸ್‌ನೇ ಆಗಲಿ. ಈ ರಾಜ, ಮಹಾರಾಜ ಚಕ್ರವರ್ತಿಗಳೆಲ್ಲರೂ ಮಣ್ಣಿನ ಗೊಂಬೆಗಳು ಮಾತ್ರ ಎನ್ನುವುದು ಖಚಿತ.

Rosencrantz : My Lord, you must tell us where the body is and go with us to the king.

Hamlet : The body is with the king, but the king is not with the body. The king is a thing—

Rosencrantz : A thing, my lord!

Hamlet : Of nothing.

(IV, 2)

ಈ ದೇಹ ಘಟಪ್ರಾಯವಾದದ್ದು–ಒಂದು ಜಡವಸ್ತು ಅನ್ನುವ ನಿಲುವಿನಿಂದ ಭಾರತೀಯ ತತ್ತ್ವಶಾಸ್ತ್ರದಲ್ಲಿ ಹೇಳುವಂತೆ 'ನಾನು' ಅನ್ನುವುದು ದೇಹಮಾತ್ರವಲ್ಲ–ಮನಸ್ಸೂ ಅಲ್ಲ ಎನ್ನುವುದು ಮುಖ್ಯ. ನನ್ನ ಮನಸ್ಸೂ 'ನನಗೆ' ಹೊರತೇ. 'ನನ್ನ ಮನಸ್ಸು' ಅನ್ನುವುದು 'ನನ್ನ ಮನೆ' ಅನ್ನುವಷ್ಟೇ ಹೊರಗಿನದು–ನನ್ನ ತನದ

ಅನ್ವೇಷಣೆಯಲ್ಲಿ. ಈ ದೇಹ, ಮನಸ್ಸು ಎರಡನ್ನೂ ನೋಡುವ 'ಸಾಕ್ಷಿ' ನಾನು ಎನ್ನುವುದು ಮುಂದಿನ ಹಜ್ಜೆ. ಕರ್ತೃತ್ವ–ಭೋಕ್ತೃತ್ವದ ಪರಿಧಿಯಲ್ಲಿ ಸಿಲುಕದೆ ಮೀರಿ ನಿಲ್ಲುವುದೇ ವಿದ್ವಾಂಸನ ಲಕ್ಷಣ—ಈ ಲೇಖಕನ ಪ್ರಕಾರ ಹ್ಯಾಮ್ಲೆಟ್ ಇಂತಹ ಪಂಡಿತ–ಇಂತಹ ವಿದ್ವಾಂಸ. "ಮಾಡುವವನು ನಾನಲ್ಲ" ಎಂಬ ಪ್ರಜ್ಞೆ ಇರುವವನಿಗೆ—ಅಂದರೆ, ಕರ್ತೃತ್ವ ನನ್ನದಲ್ಲ–ಎನ್ನುವ ತೀರ್ಮಾನಕ್ಕೆ ಬಂದಿರುವವನಿಗೆ—'ಮಾಡುವಿಕೆ'ಯಲ್ಲಿ ಅನಾದರವಿರುವುದರಲ್ಲಿ ಆಶ್ಚರ್ಯವೇನಿದೆ? ಇದರಿಂದಲೇ ಹ್ಯಾಮ್ಲೆಟ್‌ನ 'lack of action' ಅನ್ನು ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಹೀಗೆ ಗಮನಿಸಬಹುದು.

ದೇಹಾಧ್ಯಾಸ ಹ್ಯಾಮ್ಲೆಟ್‌ಗೆ ಇಲ್ಲದಿರುವಂತೆಯೇ ಮನಸ್ಸಿನ ಚೇಷ್ಟೆಗಳನ್ನು ತಾನು ಎಂದು ತಿಳಿಯದೆ ಅದನ್ನೂ ಸಾಕ್ಷಿಯಾಗಿ ನೋಡುವ ಸಾಮರ್ಥ್ಯ ಇವನಿಗಿದೆ. ತನ್ನ ಮನಸ್ಸಿನ ವ್ಯಾಪಾರಗಳನ್ನು ಇವನು ಅವಕ್ಕೆ ಅಂಟದೆ ತನ್ನತನದ ಅನ್ವೇಷಣೆಯಲ್ಲಿ ನಿರತನಾಗಿರುವುದು— as a seeker— ಇವನ ಸ್ವಗತ (soliloquies) ಗಳಲ್ಲಿ ಸ್ಪಷ್ಟ. "ಅಕರ್ತೃತ್ವೇ ಸತಿ ಬೋಧೃತ್ವಂ ಸಾಕ್ಷಿತ್ವಂ"—ಮಾಡುವಿಕೆಯಿಲ್ಲದೆ ನೋಡುವುದು ಮಾತ್ರ ಸಾಕ್ಷಿಯ ಲಕ್ಷಣ. ಹೀಗಿರುವವನಿಗೆ ಪ್ರಾಪಂಚಿಕ ವಿಷಯಗಳಲ್ಲಿ—ಅದರಲ್ಲೂ ಇವನ ಚಿಕ್ಕಪ್ಪನನ್ನು ಕೊಂದು ರಾಜನಾಗುವುದರಲ್ಲಿ ಏನೇನೂ ಆದರವಿಲ್ಲ. ಈ ಸಂದರ್ಭದಲ್ಲಿ ಕೆಳಗಿನ ಸಾಲುಗಳನ್ನು ಗಮನಿಸಬಹುದು—

Hamlet : Denmark is a prison.

Rosencrantz : Then the world is one.

Hamlet : A goodly one ; in which there are many confines. wards and dungeons, Denmark being one the worst.

Rosencrantz : We think not so, my lord.

Hamlet : Why, then, 'tis none to you : for there is nothing either good or bad, but thinking makes it so : to me it is a prison.

Rosencrantz : Why then, your ambition makes it one ; 'tis too narrow for your mind.

Hamlet : O God, I could be bounded in a nut-shell and count myself a king of infinite space, were it not that I have bad dreams.

Guildenstern : Which dreams, indeed, are ambition; for the very substance of the ambitions is merely the shadow of a dream.

Hamlet : A dream itself is but a shadow.

Rosencrantz : Truly, and I hold ambition of so airy and light a quality, that it is but a shadow's shadow.

(II, 2)

ರೋಸೆನ್‌ಕ್ರಾಂಟ್ಸ್, ಗಿಲ್ಡಿನ್‌ಸ್ಟರ್ನ್, ಆಸ್ರಿಕ್, ಪೊಲೋನಿಯಸ್ ಮುಂತಾದವರ ಜೊತೆಯಲ್ಲಿ ಹ್ಯಾಮ್ಲೆಟ್ ಮಾತನಾಡುವಾಗ ಇವನ ವಿಡಂಬನಾಪೂರ್ವಕವಾದ ಹಾಸ್ಯಭರಿತ ಲಘುಪ್ರವೃತ್ತಿ ಕಂಡುಬಂದರೂ ಅದರ ಅಂತರಾಳದಲ್ಲಿ ತಾತ್ತ್ವಿಕ ಮನೋಭಾವದ ಛಾಯೆಯು ಹುದುಗಿರುತ್ತದೆ. ಮೊದಲಿಗೇ ಹೇಳಿರುವಂತೆ ಹ್ಯಾಮ್ಲೆಟ್‌ಗೆ ವ್ಯಾವಹಾರಿಕ ಪ್ರಪಂಚವೆಲ್ಲಾ ಸುಳ್ಳಿನ ಕಂತೆ ಎಂಬುದರ ಅರಿವಾಗಿದೆಯಾದ್ದರಿಂದ ಇವನು ನಿಷ್ಕರ್ಮಿಯಾಗಲು ಇಚ್ಛಿಸುತ್ತಾನೆ — ಸಾಧ್ಯವಾದಷ್ಟು ಮಟ್ಟಿಗೂ. ಇವನಿಗೆ ತಾನು ರಾಜನಾಗಬೇಕೆಂಬ ಆಸೆ, ಅಭಿಲಾಷೆಗಳು ಇದ್ದಲ್ಲಿ ಇವನು ಜನರನ್ನು ಕ್ಲಾಡಿಯಸ್ ವಿರುದ್ಧ ದಂಗೆ ಏಳುವಂತೆ ಮಾಡಲು ಏನೂ ಕಷ್ಟವಿರಲಿಲ್ಲ. ಏಕೆಂದರೆ ಹ್ಯಾಮ್ಲೆಟ್ ಜನಸಾಮಾನ್ಯರಿಂದ ಪ್ರೀತಿವಿಶ್ವಾಸಗಳನ್ನು ಗಳಿಸಿದ್ದನೆಂಬುದು ಈ ನಾಟಕದಿಂದ ತಿಳಿದುಬರುತ್ತದೆ. ಲಯಾರ್ಟಿಸ್‌ನು ಒಂದು ಪುಟ್ಟ ಸೈನ್ಯವನ್ನೇ ಕ್ಲಾಡಿಯಸ್ ಬಾಗಿಲಿಗೆ ತಂದು ಅವನನ್ನು ತನ್ನ ತಂದೆಯ ಸಾವಿನ ಬಗ್ಗೆ ತರಾಟೆಗೆ ತೆಗೆದುಕೊಳ್ಳುತ್ತಾನೆ. ಹ್ಯಾಮ್ಲೆಟ್‌ನಾದರೋ ತನ್ನ ತಂದೆಯು ಪ್ರೇತವೇ ಬಂದು ಕ್ಲಾಡಿಯಸ್ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಆಜ್ಞೆಯಿತ್ತಿದ್ದರೂ ಇದರ ಬಗ್ಗೆ ಕಾರ್ಯೋನ್ಮುಖನಾಗದಿರುವುದಕ್ಕೆ ಇವನ ಸ್ವಾಭಾವಿಕವಾದ ಸಾತ್ತ್ವಿಕತೆಯೇ ಕಾರಣ. ಹೀಗೆ ಹ್ಯಾಮ್ಲೆಟ್‌ನ 'tragedy'ಗೆ ಇವನ ಸಾತ್ತ್ವಿಕಸ್ವಭಾವವೇ ಕಾರಣ. ರಾಜಸಿಕ ಪ್ರವೃತ್ತಿಯನ್ನು ಇವನು ನಿವೃತ್ತಿಗೊಳಿಸಿರುವುದು ಎಷ್ಟರಮಟ್ಟಿಗೆಂದರೆ ಇವನು ರಾಜಪುತ್ರನೆಂಬ ಗರ್ವವೊಂದಿಷ್ಟೂ ಇಲ್ಲದೆ ತನ್ನ ಸ್ನೇಹಿತರೊಂದಿಗೆ, ನಾಟಕವಾಡಲು ಬಂದ ನಟರೊಂದಿಗೆ ಆತ್ಮೀಯತೆಯಿಂದ ನಡೆದುಕೊಳ್ಳುವುದು ಮಾತ್ರವಲ್ಲದೆ ತನ್ನ ತಂದೆಯ ಬಗ್ಗೆ ಹೊರೇಷಿಯೋ—

"He was a goodly king"

ಅಂದಾಗ ಹ್ಯಾಮ್ಲೆಟ್,

"He was a man, take him for all in all, I shall not look upon his like again"

ಎನ್ನುತ್ತಾನೆ. ಮುಂದುವರಿದು—

Where every god did seem to set his seal,
To give the world assurance of a man.

ಇಷ್ಟು ಹೇಳಿದ ಮೇಲೆ ಒಂದು ವಿಷಯವನ್ನು ಗಮನಿಸಬೇಕು. ಸಾತ್ತ್ವಿಕರಲ್ಲೂ ರಾಜಸಿಕ ಮತ್ತು ತಾಮಸವೃತ್ತಿಗಳ ಸಂಪೂರ್ಣ ಅಭಾವವಿರುತ್ತದೆಂದು ಹೇಳಲಾಗುವುದಿಲ್ಲ. ಯಾವ ಗುಣದ ಗುರುತ್ವವಿರುತ್ತದೋ ಅದೇ ಅವನ ಗುಣವೆಂದು ತಿಳಿಯಬೇಕು. ಹ್ಯಾಮ್ಲೆಟ್ ರಾಜಸಿಕಗುಣವನ್ನು ಹಿಮ್ಮೆಟ್ಟುವುದು ಮಾತ್ರವಲ್ಲದೆ ಗುಣಾತೀತನಾಗಲು ಸಾಧನೆಯಲ್ಲಿ ತೊಡಗುತ್ತಾನೆಂಬುದು ಇಲ್ಲಿಯ ವಾದ. ತನ್ನ ರಾಜಸಿಕಗುಣವು ಆಗಿಂದಾಗ್ಗೆ ತಲೆ ಎತ್ತುವುದನ್ನು ಇವನು ತತ್‌ಕ್ಷಣ ಗಮನಿಸುತ್ತಾನೆ. ಈ ಹಂತದಲ್ಲಿ ನಾವು ಹ್ಯಾಮ್ಲೆಟ್‌ನ 'ಸ್ವಗತ'ಗಳನ್ನು ವಿಶೇಷವಾಗಿ ಗಮನಿಸಬೇಕು. ಹ್ಯಾಮ್ಲೆಟ್ ತನ್ನನ್ನು ನಾಲ್ಕು ಜನರ ಜೊತೆಗೆ ಹೋಲಿಸಿ ನೋಡಿಕೊಂಡು, ನಿಷ್ಪಕ್ಷಪಾತವಾಗಿ ಸಾಕ್ಷಿಸ್ವರೂಪದಲ್ಲಿ ನಿಂತು ತನ್ನನ್ನೇ ತಾನು ನಿರ್ದಾಕ್ಷಿಣ್ಯವಾಗಿ ವಿಶ್ಲೇಷಿಸಿಕೊಳ್ಳುತ್ತಾನೆ. ಈ ನಾಲ್ಕು ಪಾತ್ರಗಳು—ಮೊದಲ ಆಟಗಾರ (First Player), ಫೋರ್ಟಿನ್‌ಬ್ರಾಸ್, ಲಯಾರ್ಟಿಸ್ ಮತ್ತು ಹೊರೇಷಿಯೋ. ಪ್ರಸ್ತುತದಲ್ಲಿ ಹೊರೇಷಿಯೋ ಮಾತ್ರ ನಮಗೆ ಗುಣಾತೀತನ ಲಕ್ಷಣಗಳನ್ನು ಹೊಂದಿರುವುದರಿಂದ ಮುಖ್ಯ. ಹ್ಯಾಮ್ಲೆಟ್ ಅನೇಕ ಸಲ ("proud, revengeful, ambitious") ನಾನು ತುಂಬ "ದುರಭಿಮಾನಿ, ಸೇಡುಬಾಕ, ಆಸೆಗಾರ" ಮುಂತಾಗಿ ತನ್ನನ್ನು ತಾನೇ ಹಳಿದುಕೊಳ್ಳುವುದನ್ನು ತನ್ನ ಬಗ್ಗೆ–ತನ್ನ ಸಾಧನೆಯ ಬಗ್ಗೆ–ತನಗಿರುವ ಅಸಮಾಧಾನತೆಯನ್ನು ತೋರಿಸುತ್ತದೆಯೇ ಹೊರತು ಅವನ್ನು ನಾವು ಅವನಿಗೆ ಅನ್ವಯಿಸಬಾರದು. ಅವನು ಈ ರೀತಿ ಒಫೀಲಿಯಾಗೆ ಹೇಳಿದಾಗ ಅವನಿಗೆ ಗೊತ್ತು–ಕ್ಲಾಡಿಯಸ್ ಮತ್ತು ಪೊಲೋನಿಯಸ್ ಪರದೆಯ ಹಿಂದೆ ನಿಂತು ಅವನ ಮಾತುಗಳನ್ನು ಕೇಳುತ್ತಿದ್ದಾರೆಂದು. ಈ ಮಾತುಗಳು ಅವರ ಕಿವಿಗೆಂದೇ ಹೇಳಿದುವಾದರೂ ಈತನು ತನ್ನ ಉದ್ರೇಕಪ್ರವೃತ್ತಿಯನ್ನು ಪೂರ್ಣವಾಗಿ ದಮನ ಮಾಡಿದ್ದಾನೆಂದು ಹೇಳಲಾಗುವುದಿಲ್ಲ. ಈ ಕಾರಣದಿಂದಲೇ ಇವನು ಹೊರೇಷಿಯೋನನ್ನು ಗುಣಾತೀತ ಅಥವಾ ಸ್ಥಿತಪ್ರಜ್ಞ ಲಕ್ಷಣೋಪೇತನಾದವನೆಂದೂ ಅವನಲ್ಲಿ ತನಗೆ ಪೂಜ್ಯಭಾವವಿದೆಯೆಂದೂ ಹೇಳುತ್ತಾನೆ. ಇದು ಭಾರತೀಯ ತಾತ್ತ್ವಿಕ ದೃಷ್ಟಿಯಿಂದ ಅತಿ ಮುಖ್ಯವಾದ ಸಂಗತಿ. ಹ್ಯಾಮ್ಲೆಟ್ ಹೇಳುತ್ತಾನೆ—

Since my dear soul was mistress of her choice
And could of men distinguish, her election
Hath seal'd thee for herself : for thou hast been
As one, in suffering all, that suffers nothing,
A man that fortune's buffets and rewards
Hast ta'en with equal thanks ; and blessed are those

Whose blood and judgment are so well commingled,
That they are not a pipe for fortune's finger
To sound what stop she please. Give me that man
That is not passion's slave, and I will wear him
In my heart's core, ay, in my heart of heart
As I do thee.

(III, 2)

ಇಲ್ಲಿ ಈ ಸಾಲುಗಳ ಮಾಸ್ತಿಯವರ ಭಾಷಾಂತರವನ್ನು ಗಮನಿಸಬಹುದು—

ನನ್ನದಾದೀ ಆತ್ಮ ತಾ ತನ್ನ
ಆಯ್ಕೆಯನು ಮಾಡಲೊಡೆತನ ಪಡೆದು, ಮನುಜರಲಿ
ಗುಣವರಿಯೆ ಕಲಿತ ದಿನದಿಂದ ಆದರದು ವರಣ
ನಿನ್ನ ತನಗಿರಲೆಂದು ಮುದ್ರೆ ಹಾಕಿರಿಸಿತು.
ಏತಕೆನೆ ನೀನು, ಎಲ್ಲಾ ಕಷ್ಟಗಳ ಪಡುತ
ಒಂದನೂ ಪಡದವನ ರೀತಿ, ನಿನ್ನ ಅದೃಷ್ಟ
ಕೊಡುವ ಪೆಟ್ಟುಗಳು ಮೆಚ್ಚಿಕೆಗಳನು ಒಂದೆಸಮ
ಉಪಕಾರವೆಂದೆಣಿಸಿ ಗ್ರಹಿಸಿರುವೆ. ಈ ರೀತಿ,
ಯಾರ ಶಕ್ತಿ ವಿವೇಕಗಳು, ಅದೃಷ್ಟದ ಬೆರಲು
ತನ್ನ ಇಷ್ಟಕೆ ಬಂದ ಸ್ವರವ ನುಡಿಸಲು ಬರುವ
ಕೊಳಲಾಗದೊಂದುಂದ ಸಮರಸಕೆ ಬೆರೆತಿಹವು,
ಅವರು ಧನ್ಯರು. ಭಾವನಾವೇಶದಡಿಯಾಳು
ಅಲ್ಲದವನನು ನನ್ನ ಬಳಿ ತಾರ,
ನಾನವನ ನಿನ್ನ ತಳೆದಿರುವಂತೆ ನನ್ನ ಹೃದಯದ ಮಧ್ಯೆ,
ಅಹುದು ಹೃದಯದ ಹೃದಯದಲಿ, ತಳೆಯುವೆನು.[6]

ಹ್ಯಾಮ್ಲೆಟ್‌ನ ಈ ಮಾತುಗಳು ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಅತಿ ಮುಖ್ಯವಾದವು. ಏಕೆಂದರೆ ಈ ಮಾತುಗಳು ಭಗವದ್ಗೀತೆಯಲ್ಲಿ ಗುಣಾತೀತನ ಲಕ್ಷಣಗಳನ್ನು ಹೇಳುವ ೧೪ನೇ ಅಧ್ಯಾಯದ ಶ್ಲೋಕಗಳನ್ನು ನೆನಪಿಗೆ ತರುತ್ತವೆ—

ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥ ೨೨ ॥
ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥ ೨೩ ॥

---

6. ಶ್ರೀನಿವಾಸ: 'ಹ್ಯಾಮ್ಲೆಟ್ ನಾಟಕದ ಭಾಷಾಂತರ'; op. cit. ಪು. ೯೨-೯೩.

ಸಮದುಃಖ ಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಃ ತುಲ್ಯನಿಂದಾತ್ಮಸಂಸ್ತುತಿಃ ॥ ೨೪ ॥
ಮಾನಾಪಮಾನಯೋ ಸ್ತುಲ್ಯಃ ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಸ್ಸ ಉಚ್ಯತೇ ॥ ೨೫ ॥

ಈ ಶ್ಲೋಕಗಳ ತಾತ್ಪರ್ಯವನ್ನು ಈ ರೀತಿ ವ್ಯಕ್ತಪಡಿಸಲಾಗಿದೆ—

ಅರ್ಜುನ, ತಿಳುವಳಿಕೆಯೂ ಕರ್ಮದಲ್ಲಿ ತೊಡಗುವಿಕೆಯೂ ನಿದ್ರೆ ಮೊದಲಾದವುಗಳೂ ಬಂದರೆ ಅವುಗಳ ಮೇಲೆ ಹಗೆತನವಿಲ್ಲ. ಹೋದರೆ ಅವುಗಳನ್ನು ಬಯಸುವದಿಲ್ಲ.

ಯಾವನು ಯಾವ ಪಕ್ಷಕ್ಕೂ ಸೇರದವನಂತೆ ಇದ್ದು ಗುಣಗಳಿಂದ ಬದಲಾವಣೆಯನ್ನು ಹೊಂದುವುದಿಲ್ಲವೋ ದೇಹೇಂದ್ರಿಯಗಳು ವಿಷಯ ಗಳೊಡನೆ ವ್ಯವಹರಿಸುತ್ತವೆಂದು ತಿಳಿದು ಯಾವನು ಆ ಸ್ಥಿತಿಯಿಂದ ಕದಲು ವುದಿಲ್ಲವೋ, ಅವನು ಸುಖವನ್ನೂ ದುಃಖವನ್ನೂ ಒಂದೇ ರೀತಿ ಕಾಣುತ್ತ ತನ್ನಲ್ಲಿ ತಾನಿರುವನು. ಅವನಿಗೆ ಬಂಗಾರವೂ ಮಣ್ಣುಹೆಂಟೆಯೂ ಒಂದೇ. ಬೇಕೆನಿಸಿದ್ದು ಬಂದರೂ ಬೇಡವಾದದ್ದು ಬಂದರೂ ಅವನು ಒಂದೇ ರೀತಿ ಇರುವನು. ಅವನು ಬುದ್ಧಿಶಾಲಿ. ಯಾರು ಜರೆದರೂ ಯಾರು ಹೊಗಳಿ ದರೂ ಅವನಿಗೆ ಒಂದೇ.

ಮಾನವು ದೊರೆತಾಗಲೂ ಅಪಮಾನವಾದಾಗಲೂ ಅವನು ಒಂದೇ ರೀತಿ ಇರುವನು. ಅವನು ಗೆಳೆಯರನ್ನು ಹಗೆಗಳನ್ನು ಒಂದೇ ರೀತಿ ಕಾಣು ವನು. ಅವನು (ದೇಹೇಂದ್ರಿಯ ಸುಖಕ್ಕೆಂದು) ಯಾವ ಉದ್ಯೋಗವನ್ನೂ ಹಿಡಿಯದಿರುವನು. ಅವನು ಗುಣಗಳನ್ನು ಮೀರಿದವನೆನಿಸುವನು.[7]

ಇದೇ ಹ್ಯಾಮ್ಲೆಟ್‌ನ ಆದರ್ಶ – ಗುರಿ. ಈ ಗುರಿಯನ್ನು ಮುಟ್ಟಲು ಹ್ಯಾಮ್ಲೆಟ್ ಮನಸಾರೆ ಹಾತೊರೆಯುತ್ತಿರುವುದನ್ನು ಈ ನಾಟಕದಲ್ಲಿ ಕಾಣಬಹುದು. ಹ್ಯಾಮ್ಲೆಟ್‌ನೂ 'ಬುದ್ಧಿಶಾಲಿ'. ಯಾರು ಜರೆದರೂ ಯಾರು ಹೊಗಳಿದರೂ ಅವನಿಗೆ ಒಂದೇ. ಇಷ್ಟೇ ಮಾತ್ರವಲ್ಲ. ಆಸ್ಥಾನದಲ್ಲಿನ ಹೊಗಳುಭಟ್ಟರನ್ನು ಕಂಡರೆ ಇವನಿಗೆ ಅಸಹ್ಯ. ಇದು ಮೊದಲಿಗೇ ಹೇಳಿದಂತೆ ಇವನಿಗೆ ಜಿಹಾಸೆಯನ್ನು ತಂದೊಡ್ಡಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಇವನು ಭಗವದ್ಗೀತೆಯ ಮಾತಿನಲ್ಲಿ 'ಸರ್ವಾರಂಭ ಪರಿತ್ಯಾಗೀ.' ಯಾವ ಉದ್ಯೋಗದಲ್ಲೂ ಆಸಕ್ತಿಯಿಲ್ಲದವನು. ಆದ್ದರಿಂದಲೇ ಇವನ 'inaction'. ಹ್ಯಾಮ್ಲೆಟ್ ಸಾತ್ತ್ವಿಕನಾದರೂ ಸಾತ್ವಿಕತೆಯೂ ಬಂಧಿಸುತ್ತದೆ. ಇದು ಅಹಂಭಾವದಿಂದ ಮುಕ್ತನಾಗಿಸುವುದಿಲ್ಲ. ಸತ್‌ಸಂಗದಲ್ಲಿಯೇ

---

7. ಗೀತೆಯ ಕೈಗನ್ನಡಿ: ಹೊಸಕೆರೆ ಚಿದಂಬರಯ್ಯ. op.cit.

ಆಸಕ್ತಿಯನ್ನು ಕೆರಳಿಸಿದರೂ ಇದೂ ಬಂಧವೇ. ಇಲ್ಲಿಂದ ನಿಸ್ಸಂಗತ್ವ, ನಿರ್ಮೋಹತ್ವ, ನಿಶ್ಚಲತತ್ತ್ವಗಳ ಮೂಲಕ ಜೀವನ್ಮುಕ್ತಿಯನ್ನು ಹೊಂದಲು ಸಾಧನವೇ ಹೊರತು ಸಾತ್ತ್ವಿಕಗುಣವೇ ಸಾಲದು. ಗುಣಾತೀತನಾಗಲು ಅಥವಾ ಜೀವನ್ಮುಕ್ತನಾಗಲು ಮುಮುಕ್ಷುತ್ವ ಅಗತ್ಯ. ಹ್ಯಾಮ್ಲೆಟ್ ಹೊರೇಷಿಯೋಗೆ ಹೇಳುವ ಮಾತುಗಳೇ ಇವನ ಗುರಿಯನ್ನು ತೋರಿಸುತ್ತವೆ. ಇಂತಹ ಮನೋಭಾವದವನು ರಾಜಸಿಕ ಪ್ರವೃತ್ತಿಯಲ್ಲಿ ತೊಡಗಲು ಹಿಂದೆಗೆಯುವುದು ಸ್ವಾಭಾವಿಕವೇ. ಸತ್ತ್ವಗುಣವು ಬೆಳಕಿನ ಸಂಬಂಧವುಳ್ಳದ್ದಾಗಿ ವಿಜ್ಞಾನಮಯದ ಸಂಬಂಧ ಉಳ್ಳದ್ದಾದ್ದರಿಂದ ಬುದ್ಧಿವಂತ ಹ್ಯಾಮ್ಲೆಟ್ ಕರ್ತೃತ್ವದ ಬಗ್ಗೆ ಚಿಂತನೆ ಮಾಡುವುದು ಸಹಜ. "ಅಯಂ ಕರ್ತೃತ್ವ ಭೋಕ್ತೃತ್ವ ಸುಖಿತ್ವ ದುಃಖಿತ್ವಾದ್ಯಭಿಮಾನೀ"–"ನಾನು ಕರ್ಮಮಾಡುವ, ಕರ್ಮದ ಫಲವನ್ನುಣ್ಣುವ, ಸುಖದುಃಖಿಗಳೇ ಮೊದಲಾದ ದ್ವಂದ್ವಗಳಲ್ಲಿ ಅಭಿಮಾನವುಳ್ಳವನು" ಎಂಬ ಭಾವನೆಯಿಂದ ಇನ್ನೂ ಬಿಡುಗಡೆ–ಅಂದರೆ ಮುಕ್ತಿಯನ್ನು–ಹೊಂದದೆ ಈ ದಿಕ್ಕಿನಲ್ಲಿ ನಡೆಯುತ್ತಿರುವ ಮುಮುಕ್ಷು — 'ಮೋಕ್ತುಮಿಚ್ಛಾ ಮುಮುಕ್ಷಾ' ಎನ್ನುವುದು ಅರ್ಥ—ಎಂದು ಈ ಲೇಖಕನ ಅಭಿಪ್ರಾಯ. ತಾಮಸಿಕ ಗುಣವನ್ನು ರಾಜಸಿಕದಲ್ಲಿ, ರಾಜಸಿಕಗುಣವನ್ನು ಸಾತ್ವಿಕಗುಣದಲ್ಲಿ ಲೀನಮಾಡಿ ಸಾತ್ತ್ವಿಕತೆಯಿಂದ ಗುಣಾತೀತನಾಗಲು ಹ್ಯಾಮ್ಲೆಟ್‌ನ ಸಾಧನೆ ನಿರಂತರವಾಗಿ ಈ ನಾಟಕದಲ್ಲಿ ಷೇಕ್ಸ್‌ಪಿಯರ್ ಚಿತ್ರಿಸಿದ್ದಾನೆಂಬುದು ಇಲ್ಲಿಯ ವಾದಸರಣಿ. ಗುಣಾತೀತನಾಗಲು ದ್ವಂದ್ವಾತೀತನಾಗಬೇಕು–'ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ' ಅನ್ನುವ ರೀತಿಯಲ್ಲಿ. ಸಮತ್ವವೇ ಯೋಗ – 'ಸಮತ್ವಂ ಯೋಗ ಉಚ್ಯತೇ'. ಈ ಸಮತ್ವವನ್ನೇ ಹ್ಯಾಮ್ಲೆಟ್ ಹೊರೇಷಿಯೋನಲ್ಲಿ ನೋಡುವುದು. ಈ ಸಮರಸವನ್ನೇ ಅವನು ಶ್ಲಾಘಿಸುವುದು—"ಎಲ್ಲ ಕಷ್ಟಗಳ ಪಡುತ ಒಂದನೂ ಪಡದವನ ರೀತಿ"ಯೇ ಕರ್ತೃತ್ವ–ಭೋಕ್ತೃತ್ವಗಳಿಂದ ಅತೀತನಾಗುವುದು. "ಅದೃಷ್ಟ ಕೊಡುವ ಪೆಟ್ಟುಗಳು ಮೆಚ್ಚಿಕೆಗಳನ್ನು" ಒಂದೇ ಸಮ ನೋಡುವುದೇ ದ್ವಂದ್ವಾತೀತ–ಗುಣಾತೀತ–ಜೀವನ್ಮುಕ್ತ–ನ ಲಕ್ಷಣ—"ಸಮದುಃಖ ಸುಖಃ ಸ್ವಸ್ಥಃ" —ಈ ದುಃಖಗಳನ್ನು ಸಹಿಸುವ ಶಕ್ತಿಯೇ — 'ತಿತೀಕ್ಷಾ'. ತಿತೀಕ್ಷೆಯನ್ನು 'ಶೀತೋಷ್ಣಾದಿ ದ್ವಂದ್ವ ಸಹಿಷ್ಣುತಾ' ಎಂದು ಕರೆಯಲಾಗಿದೆ. ಹ್ಯಾಮ್ಲೆಟ್, 'ಸಮಾಧಾನ'—ಅಂದರೆ ಒಂದು ಬಗೆಯ ಮಾನಸಿಕ ಸ್ಥೈರ್ಯದ ಫಲವಾಗಿ, 'ಉಪರತಿ' — ಅಂದರೆ ಬಾಹ್ಯಕರ್ಮಗಳಿಂದ ಹಿಂದೆಗೆಯುವುದನ್ನು ಕಲಿತಿದ್ದಾನೆ. ಈ ರೀತಿಯ 'ವಿರಾಗ' – ಅಂದರೆ ಪ್ರಾಪಂಚಿಕವ್ಯವಹಾರದಿಂದ ವೈರಾಗ್ಯ ಹೊಂದುವುದರಿಂದ ತಾನು ಇದು ಮಾಡಬೇಕು–ಅದು ಮಾಡಬೇಕು–ತಾನು ಚಿಕ್ಕಪ್ಪನನ್ನು ಕೊಂದು ಸೇಡುತೀರಿಸಿಕೊಳ್ಳಬೇಕು–ತಾನೇ ದೊರೆಯಾಗಬೇಕು–ಮುಂತಾದ ಪ್ರವೃತ್ತಿಯಲ್ಲಿ ತೊಡಗದೆ ನಿವೃತ್ತಿಮಾರ್ಗದಲ್ಲಿ ಹಜ್ಜೆಯಿಟ್ಟಿದ್ದಾನೆ. ಈ ನಿವೃತ್ತಿಮಾರ್ಗವೇ ಇವನ ಪ್ರಸಿದ್ಧವಾದ introspection. ಇವನು ತನ್ನೊಳಗೇ ತಾನು ಹೊಕ್ಕು

ತನ್ನನ್ನೇ ತಾನು ವಿಶ್ಲೇಷಿಸಿ ಸ್ವಗತಗಳ ಮೂಲಕ ಸ್ವಾತ್ಮಚಿಂತನೆಯಲ್ಲಿ ಸ್ಥಿತನಾಗಿ ನಿಷ್ಠೆಯಿಂದ ಆತ್ಮಾರಾಮನಾಗಿ ಇರಲು ಪ್ರಯತ್ನ ಮಾಡುತ್ತಿರುವ ಸಾಧಕ.

IV

ಉಪಸಂಹಾರದಲ್ಲಿ ಈ ಲೇಖಕನು ಅರಿಕೆಮಾಡಬಯಸುವುದೇನೆಂದರೆ, ಪಾಶ್ಚಾತ್ಯ ವಿಮರ್ಶಕರು ಯಾವುದನ್ನು ಹ್ಯಾಮ್ಲೆಟ್‌ನ ದೋಷವೆಂದು ಹೇಳುತ್ತಾರೋ—ಅಂದರೆ, ಅವನ ಆಲೋಚನಾಪರತೆಯಿಂದ ಕಾರ್ಯವಿಮುಖನಾಗುವ ಮನೋಭಾವ—ಇದನ್ನೇ ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದಾಗ ಅದು ಅವನ ಗುಣವೆಂದು ನಮಗನ್ನಿಸುತ್ತದೆ. ಗುಣತ್ರಯವಿಭಾಗ ಯೋಗದ ದೃಷ್ಟಿಯಿಂದ ನೋಡಿದಾಗ ಹ್ಯಾಮ್ಲೆಟ್‌ನ ಪಾತ್ರ ಒಬ್ಬ ಸತ್ತ್ವಗುಣೋಪೇತನಾದ ಸಾಧಕನು ಗುಣಾತೀತನಾಗಲು ಉದ್ಯುಕ್ತನಾಗಿ ಸಾಧನೆಯಲ್ಲಿ ತೊಡಗಿರುವುದನ್ನು ಗಮನಿಸಬಹುದು. ಆದರಿಂದಲೇ ಈ ಸಾಧನೆಗೆ ಹೊರತಾದ ಮತ್ತಾವ ಕಾರ್ಯದಲ್ಲೂ ಅವನಿಗೆ ಉತ್ಸಾಹವಿಲ್ಲವೆಂಬುದು ನಮ್ಮ ಗಮನಕ್ಕೆ ಬರುತ್ತದೆ. ಈ ಹಾದಿಯಲ್ಲಿ ಹ್ಯಾಮ್ಲೆಟ್ ನಡೆಯುತ್ತಿದ್ದಾನೆಂಬುದು ಮಾತ್ರ ಇಲ್ಲಿನ ನಿಲುವು. ಇವನು ನಡೆಯಬೇಕಾದ ದಾರಿ ಇನ್ನೂ ಇದೆ. ಆದ್ದರಿಂದಲೇ ಇವನು ಹೊರೇಷಿಯೋವನ್ನು ಆದರ್ಶವನ್ನಾಗಿ ಇಟ್ಟುಕೊಂಡಿರುವುದು. ಹೀಗೆ 'ಹ್ಯಾಮ್ಲೆಟ್' ನಾಟಕದಲ್ಲಿ ಹೊರೇಷಿಯೋ ಪಾತ್ರ ಹ್ಯಾಮ್ಲೆಟ್‌ನ ಸ್ನೇಹಿತನಾಗಿ ಮಾತ್ರ ಉಳಿಯದೆ ಹ್ಯಾಮ್ಲೆಟ್‌ಗೆ ಗುರುಸ್ಥಾನದಲ್ಲಿದ್ದಾನೆಂಬುದು ಇಲ್ಲಿಯ ವಾದಸರಣಿಯ ಮತ್ತೊಂದು ಮುಖ. ಮಾನವನ ಮನಸ್ಸಿನ ವ್ಯಾಪಾರವಾದ ಆಲೋಚನಾಪರತೆಯ ಮಿತಿಯನ್ನು ಗಮನಿಸಿ, ಮನೋಲಯ–ಮನೋನಾಶಗಳ ಮೂಲಕ–ಅನ್ನ, ಪ್ರಾಣ, ಮನೋ, ವಿಜ್ಞಾನ, ಆನಂದಮಯ ಈ ಪಂಚಕೋಶಗಳನ್ನೂ ದಾಟಿ, ಜೀವನ್ಮುಕ್ತ್ಯನುಭವವನ್ನನುಭವಿಸಲು ಅರ್ಹತೆಯನ್ನು ಹ್ಯಾಮ್ಲೆಟ್ ಪಡೆದಿದ್ದಾನೆ. ಮನಸ್ಸಿನಿಂದಲೇ ಮನಸ್ಸನ್ನು ಗೆದ್ದು – ಮುಳ್ಳನ್ನು ಮುಳ್ಳಿನಿಂದಲೇ ತೆಗೆದು ಎರಡನ್ನೂ ಬಿಸಾಡುವ ಹಾಗೆ–ಮನೋನಾಶದಿಂದ ಮನಸ್ಸಿನ ವ್ಯಾಪಾರವಾದ ದ್ವಂದ್ವಗಳೆಲ್ಲವನ್ನೂ ದಾಟಿ, ಮೌನದಿಂದ ಅಂತಃಕರಣವನ್ನು ಮೀರಿ ಮನಸ್ಸನ್ನು ತ್ಯಜಿಸಿ ಮುಕ್ತನಾಗುವ ಪ್ರಯತ್ನದಲ್ಲಿ ಹ್ಯಾಮ್ಲೆಟ್‌ಗೆ ಬೇರೆ ಕಾಮ್ಯಕರ್ಮಗಳಲ್ಲಿ ಆಸಕ್ತಿ ಇಲ್ಲದಿರಲು ಪ್ರಧಾನವಾದ ಕಾರಣ—"ತಸ್ಯ ಕಾರ್ಯಂ ನ ವಿದ್ಯತೇ." ಅವನಿಗೆ ಒಂದು ರೀತಿಯ 'ಕೃತಕೃತ್ಯತೆ' ಪ್ರಾಪ್ತವಾಗಿರುವುದರಿಂದ 'ಮಾಡುವುದು' ಅನ್ನುವುದೇನೂ ಉಳಿದಿಲ್ಲ.

ಬಿ.ಎಂ.ಶ್ರೀ. ಅವರಿಗೆ ಷೇಕ್ಸ್‌ಪಿಯರ್ ಬಗ್ಗೆ ಎಂತಹ ಅಪಾರವಾದ ಆಸಕ್ತಿ, ಗೌರವಗಳಿದ್ದವೆನ್ನುವುದನ್ನು ಈ ಲೇಖನದ ಮೊದಲ ಸಾಲುಗಳಲ್ಲೇ ಗಮನಿಸಿದ್ದೇವೆ–

"In the hands of Shakespeare, the greatest triumphs of the drama were achieved."

ಎಂ. ರಾಮರಾಯರು–ಅವರೂ ನನ್ನ ಗುರುಗಳೇ–ತಮ್ಮ 'ಷೇಕ್ಸ್‌ಪಿಯರ್' ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ—

"ಬಿ. ಎಂ. ಶ್ರೀಕಂಠಯ್ಯನವರಿಗೆ ಆ ಆಶಯ (ಷೇಕ್ಸ್‌ಪಿಯರ್‌ನ ಎಲ್ಲ ನಾಟಕಗಳನ್ನೂ ಭಾಷಾಂತರಮಾಡುವ ಆಶಯ) ಇದ್ದಿತಂತೆ. ಅವರು ಮಾಡಿರುವ ಗ್ರೀಕ್ ನಾಟಕಗಳ ಸುಂದರ ಅನುವಾದಗಳನ್ನು ನೋಡಿದರೆ ಈ ಕೆಲಸ ಅವರಿಂದ ಎಷ್ಟು ಚೆನ್ನಾಗಿ ನಡೆಯುತ್ತಿದ್ದಿತೆಂದು ನಾವು ಊಹಿಸಿಕೊಳ್ಳಬಹುದು. ತಮ್ಮ ಕನಸು ನೆನಸಾಗುವ ಮೊದಲೇ ಅವರು ನಿಧನರಾದುದು ಕನ್ನಡಿಗರ ದೌರ್ಭಾಗ್ಯ."[8]

ವಿ. ಸೀ. ಅವರು ಷೇಕ್ಸ್‌ಪಿಯರ್ ಬಗ್ಗೆ ಬಿ.ಎಂ.ಶ್ರೀ. ಅವರಿಗಿದ್ದ ಅಭಿಲಾಷೆಯನ್ನು ಈ ರೀತಿ ವರ್ಣಿಸಿದ್ದಾರೆ—

"ಅವರು ಬರೆಯಲೇಬೇಕೆಂಬುದನ್ನು ಒಟ್ಟಿಗೆ ಮನಸ್ಸಿನಲ್ಲಿ ಹಾಗೆ ಮೊದಲು ರಚಿಸಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಅನೇಕ ವೇಳೆ 'ಆ್ಯಂಟೊನಿ ಮತ್ತು ಕ್ಲಿಯೋಪೇಟ್ರ', 'ಕೋರಿಯೊಲೇನಸ್', 'ಜೂಲಿಯಸ್ ಸೀಸರ್', 'ಮಿಡ್ ಸಮ್ಮರ್ ನೈಟ್ಸ್ ಡ್ರೀಮ್', 'ಹ್ಯಾಮ್ಲೆಟ್' ಮುಂತಾದವುಗಳಿಂದ ನಿಡಿಯಾದ ಭಾಗಗಳನ್ನು ಹೀಗೆ ಹೇಳಬಹುದಲ್ಲವೆ ಎಂದು ೫೦–೧೦೦ ಸಾಲುಗಳನ್ನು ನಮಗೆ ಎಷ್ಟೋ ಸಲ ಹೇಳಿದ್ದಾರೆ."[9]

ನವರತ್ನರಾಮರಾಯರು ಮಾಸ್ತಿಯವರ 'ಹ್ಯಾಮ್ಲೆಟ್' ನಾಟಕದ ಭಾಷಾಂತರಕ್ಕೆ ಪ್ರಸ್ತಾವನೆ ಬರೆಯುತ್ತಾ ಹೀಗೆ ಹೇಳುತ್ತಾರೆ—

"ಷೇಕ್ಸ್‌ಪಿಯರ್‌ನ ಉತ್ತಮ ನಾಟಕಗಳನ್ನು ಎಷ್ಟು ಸಲ ಓದಿದರೂ ಹಿಂದೆ ಓದಿದಾಗ ದೃಷ್ಟಿಗೆ ಬೀಳದಿದ್ದ ಸೌಂದರ್ಯವೋ ಹಿಂದೆ ಮನಸ್ಸಿಗೆ ಮುಟ್ಟದಿದ್ದ ಜಾಣ್ಮೆಯೋ ಹಿಂದೆ ಹೃದಯಕ್ಕೆ ತಟ್ಟದಿದ್ದ ತತ್ತ್ವವೋ ಗೋಚರಕ್ಕೆ ಬರುತ್ತದೆ. ಈ ಅಮರ ಕವಿ ನಮ್ಮ ಎಲ್ಲ ವಯಸ್ಸುಗಳ ಎಲ್ಲ ಅವಸ್ಥೆಗಳ ಮರ್ಮವನ್ನು ತಿಳಿದ ಹಿರಿಯ ಸ್ನೇಹಿತರು."[10]

---

8. ಎಂ. ರಾಮರಾವ್ : 'ಷೇಕ್ಸ್‌ಪಿಯರ್', ಉಷಾ ಸಾಹಿತ್ಯ ಮಾಲೆ, ಮೈಸೂರು, 1964, ಪು. 112.

9. ವಿ.ಸೀ.ಯವರ 'ಪರಿಚಯ–ಕಾಣಿಕೆ', in 'ಶ್ರೀಸಾಹಿತ್ಯ', op.cit., ಪು. 27.

10. ನವರತ್ನರಾಮರಾಯರು : 'ಪ್ರಸ್ತಾವನೆ', ಶ್ರೀನಿವಾಸ ಅವರ ಹ್ಯಾಮ್ಲೆಟ್ ನಾಟಕದ ಭಾಷಾಂತರ. ಪು. 16.

ಪ್ರೊ|| ಎ. ಎನ್. ಮೂರ್ತಿರಾಯರು ಹೇಳುವಂತೆ—

"ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ಇರುವುದು ಆ ಕವಿ ಬರೆದ 'ಹ್ಯಾಮ್ಲೆಟ್' ನಾಟಕದಲ್ಲಿ ಮಾತ್ರ. ಆದರೆ ಬೇರೊಂದು ದೃಷ್ಟಿಯಿಂದ ಅವನು ಆ ನಾಟಕವನ್ನು ನೋಡುವ ಮತ್ತು ಓದುವ ಎಲ್ಲರ ಮನಸ್ಸನ್ನೂ ಹೊಕ್ಕು ಒಬ್ಬೊಬ್ಬರ ಮನಸ್ಸಿನಲ್ಲೂ ಸ್ವಲ್ಪ ಬೇರೆಯಾದ ರೂಪವನ್ನು ತಾಳಿ ಬದುಕಿದ್ದಾನೆ ಎನ್ನುವುದೂ ನಿಜ."[11] ನಾನು ಇಲ್ಲಿ ಪ್ರಸ್ತಾವಿಸಿರುವ ಹ್ಯಾಮ್ಲೆಟ್ ನನ್ನ ಮನಸ್ಸಿನಲ್ಲಿ ರೂಪವನ್ನು ತಾಳಿ ಬದುಕಿರುವ ಹ್ಯಾಮ್ಲೆಟ್!

ಬಿ.ಎಂ.ಶ್ರೀ. ಅವರ ಷೇಕ್ಸ್‌ಪಿಯರ್ ವಿಮರ್ಶೆಯ ಬಗ್ಗೆ ವಿ.ಸೀ. ಅವರು ಹೀಗೆ ಹೇಳುತ್ತಾರೆ—

"ಷೇಕ್ಸ್‌ಪಿಯರ್ ಮಾತು ಬಂದಾಗ ಮತ್ತು ಇತರ ವಿಮರ್ಶಕರ ಒಂದು ವಿರುದ್ಧ ಅಭಿಪ್ರಾಯವೇಬಂತೆ ಯಾರಾದರೂ ಕೇಳಿದರೆ ಅವರ ಮನಸ್ಸು ಹೀಗಿರುತ್ತಿತ್ತು–'ವೇರಿಯೋರಂ ಎಡಿಷನ್ ಆಫ್ ಷೇಕ್ಸ್‌ಪಿಯರ್' ನಲ್ಲಿರುವ ವಿಮರ್ಶಕರ ಪಾಠ ವಿಮರ್ಶೆಯನ್ನೂ ಅಭಿಪ್ರಾಯಗಳನ್ನೂ ಇಂಗ್ಲಿಷಲ್ಲಿ ದೊರೆತ ಮಟ್ಟಿಗೂ ನೋಡಿದ್ದೇನೆ. ಈಚೆಗೆ ಬಂದಿರುವವರ ವಿಮರ್ಶೆಯನ್ನೂ ಓದುತ್ತಿದ್ದೇನೆ. ನನ್ನ ಗುರುಗಳಾದ ಟೇಟ್ ಸಾಹೇಬರು 'ಎಲ್ಲವನ್ನೂ ಓದಿ; ಆ ಮೇಲೆ ನಿಮ್ಮ ಅಭಿಪ್ರಾಯವೇನು ಎಂಬುದನ್ನು ಗಟ್ಟಿ ಮಾಡಿಕೊಳ್ಳಿ' — ಎನ್ನುತ್ತಿದ್ದಂತೆ ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ."[12]

ಪ್ರಸ್ತುತ ಈ ಲೇಖಕನು ಈ ಪುಟ್ಟ ಲೇಖನದಲ್ಲಿ 'ಇದೇ ಸಂಪ್ರದಾಯದಲ್ಲಿರುವವನು' ಎಂದು ಓದುಗರಿಗೆ ಒಂದು ವೇಳೆ ಅನ್ನಿಸಿದರೆ ಅದಕ್ಕಿಂತ ಹೆಚ್ಚಿನ ಸಂತೋಷ ಇನ್ನೊಂದಿಲ್ಲ.

ಟಿ. ಎಸ್. ಎಲಿಯಟ್ 'ಹ್ಯಾಮ್ಲೆಟ್' ನಾಟಕವನ್ನು 'Mona Lisa' of Literature ಎಂದು ಕರೆದಿದ್ದಾನೆ. ಮೊನಾ ಲೀಸಾಳ ಮಂದಹಾಸದ ಅಂತರಾರ್ಥವನ್ನು ಅಳೆದು ತಿಳಿಯಬಲ್ಲವರಾರು? ನನಗಂತೂ ಪ್ಯಾರಿಸ್‌ನ ಲೂರ್ವ್‌ನಲ್ಲಿ ಆಕೆಯನ್ನು ಸಂದರ್ಶಿಸಿದಾಗ ಅದು ಸಾಧ್ಯವಾಗಲಿಲ್ಲ. ಹ್ಯಾಮ್ಲೆಟ್‌ನ ಬಗ್ಗೆ ಕೊನೆಯ ಮಾತನ್ನು ಇದಮಿತ್ಥಂ ಎಂದು ಹೇಳುವುದೂ ಇಷ್ಟೇ ದುಸ್ಸಾಧ್ಯ. ಆದರೆ ಈ ಎರಡು ಉತ್ತಮ ಕೃತಿಗಳನ್ನೂ ತಲ್ಲೀನತೆಯಿಂದ ಪರಿಶೀಲಿಸುವುದರಿಂದ—

---

11. ಎ. ಎನ್. ಮೂರ್ತಿರಾಯರು : 'ಸಾಹಿತ್ಯ ಮತ್ತು ಸತ್ಯ' in 'ಮೂರು ದತ್ತಿ ಉಪನ್ಯಾಸಗಳು', ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ಪು. 18.

12. ವಿ. ಸೀ. : 'ಶ್ರೀಸಾಹಿತ್ಯ', op. cit., ಪು. 27–28.

an end in itself—ಅನ್ನುವ ರೀತಿಯಲ್ಲಿ ಸೌಂದರ್ಯಮೀಮಾಂಸೆಯಿಂದ ಉದ್ಭವವಾಗುವ ಬ್ರಹ್ಮಾನಂದಸಹೋದರವಾದ ಅಲೌಕಿಕವಾದ ಪರಮಾನಂದವನ್ನನುಭವಿಸುವುದೇ ಪ್ರಯೋಜನ-ಫಲ.

ಕೊನೆಯ ಮಾತು ಹ್ಯಾಮ್ಲೆಟ್‌ನದೇ ಇರಲಿ—

"The rest is silence." (V, 2)
"ಇನ್ನು ಉಳಿದದ್ದು ಮೌನ."

ಗ್ರಂಥಋಣ

1) 'ಶ್ರೀ ಸಾಹಿತ್ಯ' : ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ ಸಮಗ್ರ ಕೃತಿ ಸಂಪುಟ. ಎ.ಸೀ.ಯವರ 'ಪರಿಚಯ ಕಾಣಿಕೆ'ಯೊಂದಿಗೆ. ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ. 1983.

2) ಎ. ಎನ್. ಮೂರ್ತಿರಾವ್ : 'ಷೇಕ್ಸ್‌ಪಿಯರ್' (ಪೂರ್ವ ಭಾಗ) ; ಮೈಸೂರು ವಿಶ್ವವಿದ್ಯಾನಿಲಯ, 1962.

3) ಎಂ. ರಾಮರಾವ್ : 'ಷೇಕ್ಸ್‌ಪಿಯರ್'. ಉಷಾ ಸಾಹಿತ್ಯ ಮಾಲೆ. ಮೈಸೂರು ; 1964.

4) 'ಷೇಕ್ಸ್‌ಪಿಯರಿಗೆ ನಮಸ್ಕಾರ' : ಸಂ. ಬಾಲುರಾವ್ ; ಕನ್ನಡ ಭಾರತೀ, ಕರೋಲ್‌ಬಾಗ್, ಹೊಸ ದಿಲ್ಲಿ : 1966. (ನಾನೂರನೇ ವರ್ಧಂತಿಯ ನೆನಪಿಗಾಗಿ ಕವಿಚಕ್ರವರ್ತಿಗೆ ಸಲ್ಲಿಸಿದ ಕನ್ನಡ ಗ್ರಂಥಾಂಜಲಿ)

5) 'Hamlet' : Edited by A. W. Verity, Cambridge, at the University Press ; 1943.

6) ಶ್ರೀನಿವಾಸ : 'ಷೇಕ್ಸ್‌ಪಿಯರ್ ಮಹಾಕವಿಯ ಹ್ಯಾಮ್ಲೆಟ್ ನಾಟಕದ ಭಾಷಾಂತರ', ರಾಜಸೇವಾಪ್ರಸಕ್ತ ನವರತ್ನ ರಾಮರಾಯರ ಪ್ರಸ್ತಾವನೆ ಸಮೇತ – ಜೀವನ ಕಾರ್ಯಾಲಯ, ಬೆಂಗಳೂರು. ೧೯೫೮.

7) 'Vedantasara' or 'The Essence of Vedanta of Sadananda yogindra' : By Swami Nikhilananda, Advaita Ashrama, Calcutta.

8) 'ಮೂರು ದತ್ತಿ ಉಪನ್ಯಾಸಗಳು' : (i) 'ಸಾಹಿತ್ಯ ಮತ್ತು ಸತ್ಯ' (ಪ್ರೊ॥ ಎ. ಎನ್. ಮೂರ್ತಿರಾವ್). (ii) 'ಶಬ್ದ ಮತ್ತು ಅರ್ಥ' (ಪ್ರೊ॥ ಎಸ್. ವಿ. ರಂಗಣ್ಣ), (iii) 'ಗಮಕ ಸಮಾಸವು ಸಮಾಸವೆ ?' (ಡಾ॥ ಎಚ್. ಎಸ್. ಬಿಳಿಗಿರಿ) ; ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ಕ್ರಿಯೆ–ಪ್ರತಿಕ್ರಿಯೆ

ಕೌಸಲ್ಯಾ ಸುಪ್ರಜಾ ರಾಮ : ನಾಲ್ಕು ವಿಚಾರಗಳು

೧

'ಲೋಚನ' ಸಂಪುಟ 4ರಲ್ಲಿ ಪ್ರಕಟವಾಗಿರುವ 'ನಾಲ್ಕು ವಿಚಾರಗಳು' ಲಕ್ಷ್ಯಾರ್ಹ. ಅವುಗಳಲ್ಲಿ ಎರಡನೆಯದು ಮತ್ತು ಮೂರನೆಯದು ಮರುಮಾತಿಲ್ಲದೆ ಒಪ್ಪುವಂತಹುದು. ಮೊದಲನೆಯದಕ್ಕೆ ಒಂದಿಷ್ಟು ವಿವರ ಕೊಡಿಸಲು ಇಚ್ಛಿಸುತ್ತೇನೆ—'ಕೌಸಲ್ಯಾ ಸುಪ್ರಜಾ ರಾಮ' ಎಂಬುದಕ್ಕೆ ಲೇಖಕರು 'ಕೌಸಲ್ಯೆಯ ಸತ್ಪುತ್ರನಾದ ರಾಮನೇ' ಎಂಬ ಸರಿಯಾದ ಅರ್ಥವನ್ನೇ ಮಾನ್ಯಮಾಡಿದ್ದಾರೆ. ಹಿರಿಯರೊಬ್ಬರು ಹೇಳಿರುವ ಅರ್ಥವನ್ನೂ ಪ್ರಸ್ತಾವಿಸಿ ತೂಗಿದ್ದಾರೆ. ನನ್ನ ವಿವರ ವಿದು :—ಸಂಸ್ಕೃತದಲ್ಲಿ 'ಪ್ರಜಾ (ಸುಪ್ರಜಾ)' ಎಂಬುದು 'ಸಂತಾನ', 'ಜನ', 'ಮಗ' ಅಥವಾ 'ಮಗಳು' ಎಂಬ ಅರ್ಥವನ್ನು ಕೊಡುವ ಸ್ತ್ರೀಲಿಂಗ ಶಬ್ದ. 'ಕೌಸಲ್ಯಾ ಸುಪ್ರಜಾ' ಎಂಬಲ್ಲಿ 'ಕೌಸಲ್ಯೆಯೆಂಬ ಸುಪ್ರಜೆಯ (ಮಗನಾದ) ರಾಮ' ಎಂದು ಅಥವಾ ವಿಶೇಷಣೋತ್ತರಪದ ಕರ್ಮಧಾರಯವಾಗಿ 'ಸುಪ್ರಜೆಯಾಗಿರುವ ಕೌಸಲ್ಯೆಯ (ಮಗನಾದ) ರಾಮ' ಎಂದು ಅರ್ಥ ಹೇಳಬಹುದು. 'ಕೌಸಲ್ಯಾ ರಾಮ' ಎಂದೂ ರಾಮನಿಗೆ ಸಂಬೋಧನೆಯಿದೆ. ಅದರ ವಿಗ್ರಹವಾಕ್ಯದಲ್ಲಿ 'ಮಗನಾದ' ಎಂಬುದು ಅಧ್ಯಾಹಾರವಾಗುತ್ತದೆ. ಹೀಗಿದ್ದರೂ ಸಮಾಸವು ಅರ್ಥಾನುಗಮವಾಗಿ ಇರಬೇಕು ಎಂಬ ನಿಯಮದಂತೆ 'ಸುಪ್ರಜಾ' ವಿಶೇಷಣವನ್ನು 'ರಾಮ' ಎಂಬುದಕ್ಕೆ ಅನ್ವಯಿಸುವುದೇ ಲೇಸು–ಎಂದು ನನ್ನ ಅಭಿಪ್ರಾಯ.

ಉಕ್ತ ನಾಲ್ಕು ವಿಚಾರಗಳಲ್ಲಿ ನಾಲ್ಕನೆಯದು 'ರಾಘವಾಂಕ ಬರೆದದ್ದು ಹರಿಶ್ಚಂದ್ರ ಕಾವ್ಯವೇ?' ಎಂಬುದು. ಲೇಖಕರ ಆಕ್ಷೇಪ – ಸಮಾಧಾನಗಳಲ್ಲಿ ಈ ಮಾತುಗಳಿವೆ — "ಈ ಕೃತಿಯನ್ನು ಸಂಪಾದಿಸಿರುವವರೆಲ್ಲರೂ ಇದನ್ನು 'ಹರಿಶ್ಚಂದ್ರ ಕಾವ್ಯ' ಎಂದೇ ಹೆಸರಿಸಿದರು : ವಿಮರ್ಶಕರೂ ಹಾಗೆಂದೆ ಗ್ರಹಿಸಿದರು. ಸ್ವತಃ ಕವಿ ಇಟ್ಟ 'ಹರಿಶ್ಚಂದ್ರ ಚಾರಿತ್ರ' ಎಂಬ ಹೆಸರಿನ ಕಡೆಗೆ ಯಾರ ಲಕ್ಷ್ಯವೂ ಹೋಗಲಿಲ್ಲ. ತಪ್ಪು ಸಣ್ಣದೇ ಇರಬಹುದು— ಪುನರಾವರ್ತನೆಗೊಳ್ಳುತ್ತ ಬಂದಿದೆ." ಈ ಉಲ್ಲೇಖದಲ್ಲಿ ಸ್ಫುಟಾಕ್ಷರದಷ್ಟಕ್ಕೆ ಮಾತ್ರ ನನ್ನ ಆಕ್ಷೇಪವಿದೆ.

1975ರಲ್ಲಿ ಪ್ರಕಾಶಿತವಾದ 'ಮಣಿಹಾರ' ಎಂಬ ನನ್ನ ಪ್ರಬಂಧಸಂಕಲನದಲ್ಲಿ 'ಕೃತಕೃತ್ಯ ಕವಿ' ಎಂಬ ಲೇಖನ ರಾಘವಾಂಕನನ್ನು ಹಾಗೂ ಆತನ ಕೃತಿಗಳನ್ನು ಕುರಿತಿದೆ. ಅಲ್ಲಿಯ ಉಲ್ಲೇಖವಿದು — "ರಾಘವಾಂಕನು ತನ್ನ ಕಾವ್ಯಗಳಿಗೆಲ್ಲ 'ಚಾರಿತ್ರ' ಎಂಬ ಹೆಸರನ್ನೆ ಇಟ್ಟಿರುವುದು ಅವನ ಕವಿಭಾವದ ದ್ಯೋತಕವಾಗಿದೆ.

ಒಳ್ಳೆಯ ನಡತೆಯೋ ಚಾರಿತ್ರ (character). ರಾಘವಾಂಕನಿಗೆ ಮೆಚ್ಚು ಅದೇ. 'ಕೃತಿಗೆ ನಾಮಂ ಹರಿಶ್ಚಂದ್ರ ಚಾರಿತ್ರ' ಎಂದೂ 'ಕೃತಿಪೆಸರು ಶ್ರೀ ಸೋಮನಾಥ ಚಾರಿತ್ರ' ಎಂದೂ 'ಕೃತಿಪೆಸರು ಶ್ರೀ ಸಿದ್ಧರಾಮ ಚಾರಿತ್ರ' ಎಂದೂ ಆ ಆ ಕೃತಿಗಳಲ್ಲಿ ಕವಿ ತನ್ನ ಕಾವ್ಯಗಳ ಹೆಸರುಗಳನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಆದರೆ ಗ್ರಂಥ ಸಂಪಾದಕರು ಕವಿಯೇ ತನ್ನ ಕಾವ್ಯಕ್ಕೆ ಇಟ್ಟಿದ್ದ ಹೆಸರನ್ನು ಬಿಟ್ಟು 'ಹರಿಶ್ಚಂದ್ರ ಕಾವ್ಯ', ಸಿದ್ಧರಾಮ ಚರಿತೆ' ಎಂದು ಹೇಳಬೇಕಾಗಿರಲಿಲ್ಲ (ಪು. 90).

ಈ ಸಂಗತಿಯನ್ನು ಸುಮಾರು 20 ವರ್ಷಗಳ ಹಿಂದೆಯೇ ಸಂಲಕ್ಷಿಸಿರುವ ನಾನು, ದಿನಾಂಕ 30-6-1968ರಂದು ಬಸವನಗುಡಿ ಕನ್ನಡಿಗರ ಕೂಟದ ಆಶ್ರಯದಲ್ಲಿ, ಪ್ರೊ॥ ಎಂ. ವಿ. ಸೀ. ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ನರಸಿಂಹರಾಜ ಕಾಲೋನಿಯ ರಾಮಮಂದಿರದಲ್ಲಿ ಮಾಡಿರುವ ಭಾಷಣದ ಮುದ್ರಿತ ರೂಪವೇ ಆ 'ಕೃತಕೃತ್ಯ ಕವಿ' ಎಂಬ ಪ್ರಬಂಧವಾಗಿರುತ್ತದೆ. ಇದರಿಂದ ಡಾ॥ ಸಿ.ಪಿ.ಕೆ. ಅವರು ಈಗ ಪ್ರತಿಪಾದಿಸಿರುವ ಅಂಶವನ್ನು ನಾನು 1968ಕ್ಕೆ ಮೊದಲೇ ಲಕ್ಷಿಸಿ ಅಭಿವ್ಯಕ್ತಪಡಿಸಿರುವುದು ದೃಢಪಡುತ್ತದೆ.

—ಟಿ. ಕೇಶವ ಭಟ್ಟ

೨

ಜೂನ್-ಡಿಸೆಂಬರ್ ೧೯೮೭ರ 'ಲೋಚನ'ದಲ್ಲಿ ಬಂದ 'ನಾಲ್ಕು ವಿಚಾರಗಳು' ಎಂಬ ಲೇಖನದಲ್ಲಿ ಮೊದಲನೆಯ 'ಕೌಸಲ್ಯಾ ಸುಪ್ರಜಾ ಎಂದರೇನು ?' ಎಂಬ ವ್ಯಾಖ್ಯಾನವನ್ನು ಓದಿದಾಗಿನ ನನ್ನ ಪ್ರತಿಕ್ರಿಯೆ ಇದು.

> **ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ**
> **ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್**

ಇದು ಶ್ಲೋಕ.

ರಾಮಲಕ್ಷ್ಮಣರು ಇನ್ನೂ ಹದಿಹರೆಯದ ಮಕ್ಕಳು. ವಿಶ್ವಾಮಿತ್ರನನ್ನು ಹಿಂಬಾಲಿಸಿ ಹೋಗಿದ್ದಾರೆ. ಕಾಡಿನಲ್ಲಿ ಸರಯೂ ನದಿಯ ತೀರದಲ್ಲಿ ರಾತ್ರಿ ತಂಗಿದ್ದಾರೆ. ಅರಮನೆಯಲ್ಲಿ ಹಂಸತೂಲಿಕಾತಲ್ಪದಲ್ಲಿ ಮಲಗುತ್ತಿದ್ದ ಆ ಮಕ್ಕಳು ಒಣ ಎಲೆಯ ಹಾಸಿನ ಮೇಲೆ ನಿರಾತಂಕವಾಗಿ ಮಲಗಿ ನಿದ್ರಿಸುತ್ತಿದ್ದಾರೆ. ಬೆಳಕು ಹರಿಯ ತೊಡಗಿದಾಗ ರಾಮನನ್ನು ಎಬ್ಬಿಸುತ್ತಾ ವಿಶ್ವಾಮಿತ್ರ ಹೇಳುವ ಮಾತು ಇದು.

ಲೇಖಕರು ತಮ್ಮ ವ್ಯಾಖ್ಯಾನದಲ್ಲಿ "ಕೌಸಲ್ಯಾ ಸುಪ್ರಜಾ ರಾಮ ಎಂದಾಗ ಅಲ್ಲಿರತಕ್ಕದ್ದು ಕೌಸಲ್ಯಾದೇವಿಯ ಸತ್ಪುತ್ರನಾದ ರಾಮನೇ ಎಂಬ ಸಂಬೋಧನಾರ್ಥ: ಬಹುತೇಕ ಎಲ್ಲರೂ ಅದೇ ಅರ್ಥವನ್ನು ಗ್ರಹಿಸಿದ್ದಾರೆ. ತಮ್ಮ ಗ್ರಹಿಕೆಯೂ ಅದೇ" ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪ್ರತಿಯೊಂದು ಭಾಷೆಯೂ ತನ್ನದೇ ಆದ ಸಂಪ್ರದಾಯವನ್ನು ರೂಢಿಸಿ ಕೊಂಡು ಬಂದಿದೆ. ಅದಕ್ಕನುಗುಣವಾಗಿ ಅನಂತರ ವ್ಯಾಕರಣ ನಿಯಮಾವಳಿಗಳು ಹುಟ್ಟಿಕೊಂಡಿವೆ. ವ್ಯಾಕರಣದ ನಿಯಮವನ್ನು ಪಾಲಿಸುವುದೆಂದರೆ ಭಾಷೆಯ ಸಂಪ್ರದಾಯವನ್ನು ಮನ್ನಿಸಿದಂತೆ.

ಸಂಸ್ಕೃತ ಭಾಷೆಯ ಸಂಪ್ರದಾಯದಂತೆ ವಿಶೇಷಣವು ಯಾವಾಗಲೂ ವಿಶೇಷ್ಯದ ಲಿಂಗ ವಚನ ವಿಭಕ್ತಿಗಳಿಂದಲೇ ಕೂಡಿರುತ್ತದೆ. ಹಾಗಾಗಿ ಒಂದು ಶ್ಲೋಕದಲ್ಲಿ ವಿಶೇಷಣ ವಿಶೇಷ್ಯಗಳು ಸಾನ್ನಿಧ್ಯದಲ್ಲಿಯೇ ಇರಬೇಕೆಂದಿಲ್ಲ. ಶ್ಲೋಕದ ಯಾವುದೇ ಮೂಲೆಯಲ್ಲಿ ಹಂಚಿಹೋಗಿದ್ದರೂ ಓದುವಾಗ ಅಭ್ಯಾಸಗೊಂಡ ಮನಸ್ಸು ತಾನಾಗಿ ಅವನ್ನು ಸಮನ್ವಯಗೊಳಿಸಿಕೊಳ್ಳುತ್ತದೆ.

ಪ್ರಕೃತ ಶ್ಲೋಕದಲ್ಲಿ ರಾಮ, ನರಶಾರ್ದೂಲ ಎರಡೇ ಸಂಬೋಧನಾರ್ಥಕ ಶಬ್ದಗಳು. ರಾಮ ವಿಶೇಷ್ಯವಾದರೆ ನರಶಾರ್ದೂಲ ವಿಶೇಷಣ. ಎರಡೂ ಪರಸ್ಪರ ಪೂರಕಗಳು. ಎರಡೂ ಸಂಬೋಧನ ಪ್ರಥಮಾ ವಿಭಕ್ತಿಯಲ್ಲಿವೆ.

ಶ್ಲೋಕದ ಶಬ್ದಗಳನ್ನು ಪ್ರತ್ಯೇಕವಾಗಿ ಬಿಡಿಸಿ ಬರೆದರೆ 'ಕೌಸಲ್ಯಾ, ಸುಪ್ರಜಾಃ, ರಾಮ, ಪೂರ್ವಾ, ಸಂಧ್ಯಾ, ಪ್ರವರ್ತತೇ........' ಇತ್ಯಾದಿಯಾಗಿ ಆಗುತ್ತದೆ.

(ನಿತ್ಯಂ ಅಸಿಚ್ ಪ್ರಜಾಮೇಧಯೋಃ ಎಂಬ ಪಾಣಿನಿಯ ನಿಯಮದಂತೆ ಪ್ರಜಾ ಹಾಗೂ ಮೇಧಾ ಶಬ್ದಗಳು ಬಹುವ್ರೀಹಿ ಸಮಾಸದಲ್ಲಿ ಪ್ರಜಾಃ ಮೇಧಾಃ ಎಂದು ವಿಸರ್ಗದೊಡಗೂಡಿಯೇ ಇರುತ್ತವೆ. ಹಾಗಾಗಿ ಸುಪ್ರಜಾಃ ಎಂಬುದು ಶಬ್ದ. ಒಟ್ಟು ಸೇರಿಸಿ ಹೇಳುವ ಸಮಯದಲ್ಲಿ ಸಂಧಿನಿಯಮದಂತೆ ವಿಸರ್ಗ ಲೋಪ ವಾಗಿ ಸುಪ್ರಜಾ ಎಂದಷ್ಟೇ ಉಳಿಯುತ್ತದೆ.)

ಸುಪ್ರಜಾಃ ಎಂದರೆ 'ಶೋಭನಾ ಪ್ರಜಾ ಯಸ್ಯಾಃ ಸಾ' ಗುಣವಂತನಾದ ಪುತ್ರ ಯಾವಳಿಗೋ ಅವಳು ಎಂದರ್ಥ. ಇಲ್ಲಿ ರಾಮನಂತಹ ಸುಪುತ್ರನನ್ನು ಪಡೆದ ಕೌಸಲ್ಯೆ. ಹಾಗಾಗಿ ಸುಪ್ರಜಾಃ ಎಂಬುದು ಕೌಸಲ್ಯಾ ಎಂಬುದಕ್ಕೆ ವಿಶೇಷಣ. ಎರಡೂ ಪ್ರಥಮಾವಿಭಕ್ತಿಯಲ್ಲಿವೆ. ಸಂಬೋಧನೆಯಲ್ಲ.

'ಸುಪ್ರಜಾ' ಎಂಬುದಕ್ಕೆ ಸತ್ಪುತ್ರ ಎಂದು ಕರ್ಮಧಾರಯದ ಅರ್ಥವನ್ನು ಇಟ್ಟುಕೊಳ್ಳುವುದೂ ಸಾಧ್ಯ. ಆಗ 'ಸುಪ್ರಜಾ ರಾಮಃ' ಸತ್ಪುತ್ರನಾದ ರಾಮ ಎಂದು ಪ್ರಥಮಾ ವಿಭಕ್ತ್ಯರ್ಥದಲ್ಲಿ ಹೇಳಬಹುದು. ಆದರೆ ಅದನ್ನೇ ಸಂಬೋಧನೆ ಯಾಗಿಸಬೇಕಾದರೆ 'ಸುಪ್ರಜೇ ರಾಮ' ಎಂದಾಗಬೇಕಾಗುತ್ತದೆ. ಇಲ್ಲಿ ಹಾಗಿಲ್ಲ.

ಆದ್ದರಿಂದ 'ಕೌಸಲ್ಯಾ ಸುಪ್ರಜಾಃ' ಎಂಬುದನ್ನು ಪೂರ್ಣಾರ್ಥ ಕೊಡುವ ಒಂದು ಘಟಕವನ್ನಾಗಿ ಗ್ರಹಿಸಿ, ರಾಮ ಎಂಬುದಷ್ಟನ್ನೇ ಸಂಬೋಧನೆಯಾಗಿ ಗ್ರಹಿಸಬೇಕು.

ಅದರಂತೆ ಪ್ರಕೃತ ಶ್ಲೋಕವನ್ನು ಪರಿಭಾವಿಸಿದರೆ—

ವಿಶ್ವಾಮಿತ್ರನು "ನರಶಾರ್ದೂಲನಾದ ರಾಮನೇ" ಎಂದು ರಾಮನನ್ನು ಸಂಬೋಧಿಸಿ "(ನಿನ್ನ ತಾಯಿಯಾದ) ಕೌಸಲ್ಯಾ (ನಿನ್ನಂತಹ ಗುಣವಂತನಾದ ಮಗನನ್ನು ಪಡೆದು) ಸುಪ್ರಜಾಃ (ಆದಳಪ್ಪ)" ಎಂದು ಹೇಳಿದಂತಾಗುತ್ತದೆ.

ಲೇಖಕರು "ಎಲೈ, ಕೌಸಲ್ಯೆಯ ಸುಪುತ್ರನಾದ ರಾಮನೇ" ಎಂದು ದೇವಶಿಖಾಮಣಿ ಅಳಸಿಂಗರಾಚಾರ್ಯರು ಭಾಷಾಂತರಿಸಿರುವುದನ್ನು ಉದಾಹರಿಸುತ್ತಾರೆ. ಆದರೆ ಅಳಸಿಂಗರಾಚಾರ್ಯರ ಕೃತಿಯಲ್ಲಿ ಅದೇ ಸಂದರ್ಭದಲ್ಲಿ ಕೊಡಲಾಗಿರುವ ಅಡಿಟಿಪ್ಪಣಿಯನ್ನೂ ಅವರು ಪರಿಶೀಲಿಸದಿರುವುದು ಆಶ್ಚರ್ಯವೆನಿಸುತ್ತದೆ. ಅಲ್ಲಿ ಬರುವ ವ್ಯಾಖ್ಯಾನವನ್ನು ನೋಡಿ: "ಮಲಗಿದ್ದ ರಾಮಲಕ್ಷ್ಮಣರಿಬ್ಬರನ್ನೂ ಎಚ್ಚರಗೊಳಿಸುವುದಕ್ಕಾಗಿ ಬಂದ ವಿಶ್ವಾಮಿತ್ರನು ಸುಖಸುಪ್ತನಾಗಿದ್ದ ಆ ರಾಮನ ಸೌಂದರ್ಯಾತಿಶಯವನ್ನು ನೋಡಿ ಮರುಳಾಗಿ ತಾನು ಬಂದ ಕಾರ್ಯವನ್ನೇ ಮರೆತು, 'ಆಹಾ! ಇಂತಹ ಸತ್ಪುತ್ರನನ್ನು ಪಡೆದ ಆ ಕೌಸಲ್ಯಾ ದೇವಿಯು ಏನು ಪುಣ್ಯವನ್ನು ಮಾಡಿದ್ದಳೋ' ಎಂದು ಆಶ್ಚರ್ಯಪಡುತ್ತಿದ್ದನೆಂದು ಭಾವವು. (ರಾಮ) ಸೌಂದರ್ಯಾತಿಶಯದಿಂದ ಲೋಕವೆಲ್ಲವನ್ನೂ ಸಂತೋಷಪಡಿಸತಕ್ಕವನೇ! (ಕೌಸಲ್ಯಾ) ನಿನ್ನ ತಾಯಿಯಾದ ಕೌಸಲ್ಯೆಯು (ಸುಪ್ರಜಾಃ) ನಿನ್ನಂತಹ ಸುಪುತ್ರನನ್ನು ಪಡೆದ ಮಹಾಭಾಗ್ಯಶಾಲಿನಿಯಲ್ಲವೆ? ಎಂದು ತನ್ನಷ್ಟಕ್ಕೆ ತಾನೆ ಮನಸ್ಸಿನಲ್ಲಿ ಹಿಗ್ಗುತ್ತಿರುವನೆಂದು ಅಭಿಪ್ರಾಯ."

—ಇದು ರಾಮಾಯಣದ ಮೇಲಿನ ಸುಪ್ರಸಿದ್ಧ ಭಾಷ್ಯಕಾರನಾದ ಗೋವಿಂದರಾಜನ ವ್ಯಾಖ್ಯಾನ. 'ತಿಲಕ'ನ ವ್ಯಾಖ್ಯಾನವೂ ಅದಕ್ಕೆ ಸಮ್ಮತವಾಗಿಯೇ ಇದೆ.

ಹೀಗೆ 'ಕೌಸಲ್ಯಾ ಸುಪ್ರಜಾಃ' ಎಂಬುದನ್ನು ಪ್ರತ್ಯೇಕ ಘಟಕವಾಗಿ ತೆಗೆದುಕೊಳ್ಳುವುದರಿಂದ ರಾಮನ ವ್ಯಕ್ತಿತ್ವ ಪ್ರಕರ್ಷಗೊಂಡಿದೆ. ಅವನ ಮಿಗಿಲಾದ ಪ್ರಭೆಯಿಂದ ಕೌಸಲ್ಯೆ ಬೆಳಗಿದಂತಾಗಿದೆ. ಕೌಸಲ್ಯೆಯ ಪ್ರಭೆಯಿಂದ ರಾಮ ಬೆಳಗಿಲ್ಲ. ಕೌಸಲ್ಯೆಯ ಮಗನೆನಿಸಿದುದರಿಂದ ರಾಮನ ಶೋಭೆ ಹೆಚ್ಚುವುದಿಲ್ಲ. ಇಂತಹ ಸತ್ಪುತ್ರನಿಂದ ಅವಳ ತಾಯ್ತನ ಸಾರ್ಥಕವೆನಿಸಿತು! 'ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ' ಇತಿವತ್ (ಆ ಅಮಿತತೇಜಸ್ವಿಯಾದ ಪುತ್ರನಿಂದ ಕೌಸಲ್ಯೆ ಶೋಭಿಸಿದಳು ಎಂಬಂತೆ) ಎನ್ನುತ್ತಾನೆ ಗೋವಿಂದರಾಜ.

ಈ ವ್ಯಾಖ್ಯಾನ ಸಹಜವೂ ಹೌದು, ಧ್ವನಿಪೂರ್ಣವೂ ಹೌದು.

"ಇವರಲ್ಲಿ ವಿಶೇಷವೇನೂ ಕಾಣುವುದಿಲ್ಲ" ಎಂದು ಹೇಳುವ ಲೇಖಕರು ಬೇರೆ ಯಾವ ವಿಶೇಷವನ್ನು ಇಲ್ಲಿ ಕಾಣಬಯಸಿದ್ದಾರೆ?

"ಕೌಸಲ್ಯೆಯು ಸತ್ಪುತ್ರನಾದ ರಾಮನೇ ಎಂದು ಗ್ರಹಿಸಿದಾಗ ಮಾತ್ರ ಅದು ಹೆಚ್ಚು ಸಹಜವೂ ಧ್ವನಿಪೂರ್ಣವೂ ಆಗುವುದರಲ್ಲಿ ಸಂಶಯವಿಲ್ಲ" ಎನ್ನುತ್ತಾರೆ ಅವರು. ಹಾಗೆ ಅರ್ಥಯಿಸುವುದರಿಂದ ಸ್ವಯಂಪ್ರಭೆಯಿಂದ ಪ್ರಜ್ವಲಿಸುವ ರಾಮನನ್ನು ಕೌಸಲ್ಯೆಯು ಮಂದಕಾಂತಿಯಿಂದ ಬೆಳಗಿಸಿದಂತಾಗುತ್ತದೆಯಲ್ಲವೆ ?

ಸಂಸ್ಕೃತ ಭಾಷೆಯನ್ನು ಗಾಢವಾಗಿ ಅರಿತಿದ್ದು ರಾಮಾಯಣವನ್ನು ತಲಸ್ಪರ್ಶಿಯಾಗಿ ಅವಲೋಕಿಸಿ ವಿಮರ್ಶಿಸಿರುವ ಮಾಸ್ತಿಯವರು "ಕೌಸಲ್ಯಾ ಸುಪ್ರಜಾ— ಕೌಸಲ್ಯೆಯ ಕುಮಾರನೇ ಎಂದು ಸಂಬೋಧನೆ ಅಲ್ಲ. ಅದು ಸಮಾಸಪದ ಅಲ್ಲ. 'ಕೌಸಲ್ಯೆ ಸುಪ್ರಜೆ' ಎಂದು ವಾಕ್ಯ" ಎಂದು ಲೇಖಕರಿಗೆ ತಮ್ಮ ಅನಿಸಿಕೆಯನ್ನು ಬರೆದು ಸೂಚಿಸಿದ್ದಾರೆ. ಅದು ಆ ರೀತಿ ಸಂಬೋಧನೆಯೇ ಆಗಿದ್ದಿದ್ದರೆ ಮಾಸ್ತಿಯವರಿಗೆ ಅಷ್ಟೂ ಹೊಳೆಯಲಿಲ್ಲವೆಂದು ಅರ್ಥವೇ ?

ಅಲ್ಲದೆ ಮಾಸ್ತಿಯವರು ತಾವು ಹೇಳಿದ್ದೇ ಸರಿ ಎಂದು ವಾದಿಸಹೋಗದೆ "ಇದು ಹಿರಿಯರು ಹೇಳಿರುವ ಅರ್ಥ" ಎಂದೂ ವಿನಯದಿಂದ ಸೂಚಿಸಿದ್ದಾರೆ.

ಅಂದರೆ ಮಾಸ್ತಿಯವರೂ ಅವರಿಗಿಂತ ಹಿರಿಯರೂ ಮೊದಲಿನಿಂದಲೂ ಕಂಡುಕೊಂಡಿರುವ ಅರ್ಥ ಅದು. ಆದರೆ ಲೇಖಕರು "ಕೌಸಲ್ಯೆಯ ಕುಮಾರನೇ ಎಂದು ಸಂಬೋಧನೆ ಅಲ್ಲ ಎಂಬ ಮಾಸ್ತಿಯವರ ಮಾತು ಅಷ್ಟೇನೂ ಗಟ್ಟಿಯಾದುದಲ್ಲ ಎನ್ನಬೇಕು" ಎನ್ನುತ್ತಾರೆ !

ಪರರ ಮನಸ್ಸನ್ನು ನೋಯಿಸಬಯಸದ ಮೃದುಹೃದಯಿಗಳಾದ ಮಾಸ್ತಿಯವರು ಸೌಜನ್ಯದಿಂದ "ಇದು ಸರಿಯೋ ತಾವು ಯೋಚಿಸಬಹುದು" ಎಂದಿದ್ದಾರೆ. ಹೀಗೆಂದು ಲೇಖಕರಿಗೆ ನಿರ್ಣಯ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಅಂದರೆ, ತಾವು ನಿರ್ಣಯಿಸಲಾರದೆ ಸಂಶಯಗ್ರಸ್ತರಾಗಿ ಹಾಗೆ ಹೇಳಿದ್ದಾರೆಂದು ಅರ್ಥವೇ ?

"ಇದು ಸರಿ, ಇದು ತಪ್ಪು. ನಿಮಗೆ ಬೇಕಾದುದನ್ನು ಆರಿಸಿಕೊಳ್ಳಿ" ಎಂದು ಹೇಳಿದಂತೆ ಮಾಸ್ತಿಯವರು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಲೇಖಕರಿಗೇ ಬಿಟ್ಟಿದ್ದಾರೆ. ('ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು' ಎಂದು ಕೃಷ್ಣ ಅರ್ಜುನನಿಗೆ ಹೇಳಿದಂತೆ.)

ಮತ್ತೊಬ್ಬ ಸಂಸ್ಕೃತದ ಪ್ರಕಾಂಡಪಂಡಿತರಾದ ರಂಗನಾಥ ಶರ್ಮಾ ಅವರು "(ರಾಮನನ್ನು ಪಡೆದು) ಕೌಸಲ್ಯೆ ಸುಪ್ರಜೆಯಾದಳು (ಎಂದರೆ, ಒಳ್ಳೆಯ ಮಗನನ್ನು ಪಡೆದವಳಾದಳು)" ಎಂದು ಭಾಷಾಂತರಿಸಿರುವುದೂ ಸಹಜವೇ.

ಇವಿಷ್ಟೂ ಒಂದು ಪಕ್ಷ.

ಪ್ರಕೃತ ಲೇಖಕರಂತೆಯೇ "ಕೌಸಲ್ಯಾ ಸುಪ್ರಜಾ" ಎಂಬುದನ್ನು ಸಂಬೋಧನಾರ್ಥಕವೆಂದು ಭಾವಿಸುವ ಮತ್ತೊಂದು ಪಕ್ಷವೂ ಇದೆ.

ಶ್ಲೋಕ ಛಂದಸ್ಸಿನಲ್ಲಿ ಮೊದಲ ಎಂಟು ಅಕ್ಷರಗಳಾದೊಡನೆ ಯತಿ ಬರುವುದರಿಂದ ಆ ಎಂಟಕ್ಷರಗಳನ್ನು ಒಂದೇ ಘಟಕವಾಗಿಯೂ ಅನಂತರದ ಎಂಟಕ್ಷರಗಳನ್ನು ಮತ್ತೊಂದು ಘಟಕವನ್ನಾಗಿಯೂ ಭಾವಿಸುವಂತಾಗುತ್ತದೆ. 'ಕೌಸಲ್ಯಾ ಸುಪ್ರಜಾ ರಾಮ....' ಎಂದೊಡನೆಯೇ ನಿಲುಗಡೆ ಬಂದು ಅದಷ್ಟನ್ನೂ ಒಂದೇ ಉಸಿರಿಗೆ ಒಂದೇ ಪದವೆಂಬಂತೆ ಉಚ್ಚರಿಸುವ ಹಾಗಾಗುತ್ತದೆ. ಅದರಿಂದ ಅದಷ್ಟೂ ಸಂಬೋಧನಾರ್ಥಕವೆಂಬ ಭ್ರಮೆ ಬರುತ್ತದೆ.

ಕನ್ನಡದಲ್ಲಿ ವಿಶೇಷಣಗಳು ವಿಶೇಷ್ಯಕ್ಕೆ ಪೂರ್ವಭಾವಿಯಾಗಿ ಬರುವುದು ಸಂಪ್ರದಾಯವಷ್ಟೆ? ಹಾಗಾಗಿ 'ರಾಮ' ಎಂಬ ಸಂಬೋಧನೆಗೆ ಹಿನ್ನೆಲೆಯಾಗಿ ಬಂದಿರುವ ಕಾರಣ ಅದು ಸಂಬೋಧನೆಗೆ ವಿಶೇಷಣವಾಗಿದ್ದು ಸಂಬೋಧನಾರ್ಥಕವೆಂಬ ಭ್ರಮೆಗೆ ಕಾರಣವಾಗಬಹುದು. ಅಲ್ಲದೆ ಸಂಸ್ಕೃತದವರೂ ಅದನ್ನು ಸಂಬೋಧನಾರ್ಥಕವೆಂದು ಗ್ರಹಿಸಿದ್ದುಂಟು. ಅದನ್ನಿಲ್ಲಿ ಸ್ವಲ್ಪ ಪರಿಶೀಲಿಸೋಣ.

ಗೋವಿಂದರಾಜ ಭಾಷ್ಯದಲ್ಲಿ ಹಿಂದೆ ಸೂಚಿಸಿದ ವ್ಯಾಖ್ಯಾನ ಮುಗಿದೊಡನೆ "ಯದ್ವಾ ಸುಪ್ರಜ ಇತಿ ಸಂಬೋಧನಂ ಕರ್ಮಧಾರಯೋಪ್ಯಾರ್ಷೋಽಸಿಚ್" ಎಂದು ಬರುತ್ತದೆ. ಎಂದರೆ 'ಸುಪ್ರಜಃ' ಎಂದು ಸಂಬೋಧನೆಯನ್ನಾಗಿಯೂ ಅದನ್ನು ತಿಳಿಯಬಹುದು ಎಂದು.

'ಕೌಸಲ್ಯಾ ಸುಪ್ರಜಃ' ಎಂದರೆ ಕೌಸಲ್ಯೆಯ ಸುಪುತ್ರನೇ ಎಂದು ಸಂಬೋಧನೆ. ಆ ರೂಪ ಸಿದ್ಧಿಸುವುದು ಹೇಗೆ? ಅದು 'ಕೌಸಲ್ಯಾ ಸುಪ್ರಜಾ' ಎಂದು ಹೇಗಾಯಿತು? — ಇದಕ್ಕೆ ಭಾಷ್ಯಕಾರ ಕೊಂಕಣ ಸುತ್ತಿ ಮೈಲಾರಕ್ಕೆ ಹೋದಂತೆ ನಿಯಮಾವಳಿಯನ್ನು ರೂಪಿಸುತ್ತಾನೆ. ಅದರಂತೆ

೧. ಕೌಸಲ್ಯಾ ಸುಪ್ರಜಾ ಎಂಬುದನ್ನು ಕರ್ಮಧಾರಯ ಸಮಾಸ ಮಾಡಬೇಕು.

ಕೌಸಲ್ಯಾಯಾಃ ಶೋಭನಾ ಪ್ರಜಾ > ಕೌಸಲ್ಯಾ ಸುಪ್ರಜಾ

(ಕೌಸಲ್ಯೆಯ ಗುಣವಂತನಾದ ಮಗ. ಪ್ರಥಮಾ ವಿಭಕ್ತಿ. ಅದು ಸಂಬೋಧನೆಯಲ್ಲ. ಸಂಬೋಧನೆಯಲ್ಲಿ ಅದು 'ಕೌಸಲ್ಯಾಸುಪ್ರಜೇ' ಎಂದಾಗಬೇಕಾಗುತ್ತದೆ. ಅದರಿಂದ–)

೨. ಬಹುವ್ರೀಹಿಯಂತೆಯೇ ಕರ್ಮಧಾರಯದಲ್ಲಿಯೂ 'ಅಸಿಚ್' ಪ್ರತ್ಯಯ ಸೇರುತ್ತದೆ ಎನ್ನುತ್ತಾನೆ. ಅದಕ್ಕೆ ಆಧಾರವೆಲ್ಲಿ ಎಂದರೆ ಅದು 'ಆರ್ಷ ಪ್ರಯೋಗ' ಎನ್ನುತ್ತಾನೆ. ಅದರಂತೆ

ಕೌಸಲ್ಯಾಸುಪ್ರಜಾಃ ಎಂದಾಗುತ್ತದೆ. (ಪ್ರ.ವಿ.)

೩. ಆಗ ಅದು ಸಂಬೋಧನೆಯಲ್ಲಿ

ಕೌಸಲ್ಯಾಸುಪ್ರಜಃ ಎಂದಾಗುತ್ತದೆ. (ಸಂ.ಪ್ರ.ವಿ.)

೪. ವಿಸರ್ಗದ ಮುಂದೆ ರೇಫ ಪರವಾದರೆ ಒಂದು ಸಂಧಿನಿಯಮದಂತೆ ವಿಸರ್ಗ ಲೋಪವಾಗಿ ಹಿಂದಿನ ಸ್ವರ ದೀರ್ಘವಾಗುತ್ತದೆ. ಇಲ್ಲಿ

ಕೌಸಲ್ಯಾಸುಪ್ರಜಃ+ರಾಮ > ಕೌಸಲ್ಯಾಸುಪ್ರಜಾ ರಾಮ

ಗ್ರಂಥಪ್ರಾಮಾಣ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಾಚೀನರ ಕೃತಿಗಳ ಯಥಾಪ್ರತಿಯನ್ನು ಉಳಿಸಿಕೊಂಡು ಬರುವುದು ವಾಡಿಕೆ. "ಸ್ಥಿತಸ್ಯ ಗತಿಃ ಚಿಂತ-ನೀಯಾ" ಎಂಬುದೊಂದು ಸೂಕ್ತಿ. ಇಲ್ಲದ್ದನ್ನು ಕುರಿತು ಚಿಂತಿಸದೆ ಇರುವುದನ್ನು ಹಾಗೇ ಇಟ್ಟುಕೊಂಡು ಅದರ ಬಗ್ಗೆ ಚಿಂತಿಸಬೇಕು. ಅದರಂತೆ ವಾಲ್ಮೀಕಿ ವ್ಯಾಸಾದಿಗಳ ಕಾವ್ಯದಲ್ಲಿ ಇರಬಹುದಾದ ವ್ಯಾಕರಣವಿರುದ್ಧವಾದ ಪ್ರಯೋಗಗಳನ್ನೂ ಛಂದಸ್ಸಿನ ಕಾರಣದಿಂದಲೋ ಬೇರಾವ ಕಾರಣದಿಂದಲೋ ಇರಬಹುದಾದ ತಪ್ಪುಗಳನ್ನೂ ದೋಷಗಳೆಂದು ಪರಿಗಣಿಸದೆ, ಅವನ್ನು ತಿದ್ದಲು ಹೋಗದೆ ಆರ್ಷ ಪ್ರಯೋಗಗಳೆಂದು ತಿಳಿಯುವುದು ಸಂಪ್ರದಾಯ (ಸತ್ಯಮೇವ ಜಯತೇ ಇದ್ದಹಾಗೆ). ಪಾಶ್ಚಾತ್ಯರಲ್ಲಿಯೂ ಶೇಕ್ಸ್ಪಿಯರನಂತಹ ಕವಿಗಳಲ್ಲಿ ಇರಬಹುದಾದ ವ್ಯಾಕರಣ ವಿರುದ್ಧ ಪ್ರಯೋಗಗಳನ್ನು ಮಹಾಕವಿಪ್ರಯೋಗವೆಂದು ಮನ್ನಿಸುತ್ತಾರೆ (the most unkindest cut of all ಇದ್ದ ಹಾಗೆ).

ಪ್ರಕೃತಸಂದರ್ಭದಲ್ಲಿ ವ್ಯಾಕರಣದ ತೊಡಕಾವುದೂ ಇಲ್ಲದೆ ಅಂಗೈನೆಲ್ಲಿಯಂತೆ ನೇರವಾದ ಮತ್ತು ಸುಂದರವಾದ ಅರ್ಥಸ್ಫುರಣೆಯಿದ್ದಾಗ್ಯೂ ಇಲ್ಲದ ಅರ್ಥವನ್ನು ಕಲ್ಪಿಸಿಕೊಂಡು ಆರ್ಷಪ್ರಯೋಗವೆಂದು ಭಾವಿಸಬೇಕೇಕೆ? ಆ ಆರ್ಷಪ್ರಯೋಗದ ರೂಪ ಹೇಗಾಯಿತೆಂದು ಸಾಧಿಸಲು ಈ ದ್ರಾವಿಡಪ್ರಾಣಾಯಾಮವೇಕೆ? ಇಷ್ಟೆಲ್ಲ ಮಾಡಿದ ಮೇಲೂ ಸಾಧಿಸಿದುದೇನನ್ನು? ರಸಪ್ರಕರ್ಷತೆಯನ್ನಂತೂ ಸಾಧಿಸಲಾಗ ಲಿಲ್ಲ. ಛಂದಸ್ಸಿನ ಕಾರಣದಿಂದಾಗಲಿ ಬೇರಾವ ಕಾರಣದಿಂದಾಗಲಿ ಅನಿವಾರ್ಯವೂ ಅಲ್ಲ. ಇದನ್ನು ಆರ್ಷಪ್ರಯೋಗವೆಂದು ಪರಿಗಣಿಸಬೇಕೇಕೆ?

ಒಟ್ಟಿನಲ್ಲಿ ಫಲಿತವಿಷ್ಟು :

೧. ಸಂಬೋಧನಾರ್ಥವನ್ನು ಭಾವಿಸಿಕೊಳ್ಳಬೇಕಾದ ಅಗತ್ಯವೇ ಇಲ್ಲ. ಆರ್ಷಪ್ರಯೋಗವೆಂದು ವಿನಾಕಾರಣ ಆರೋಪಿಸಿದಂತಾಗುತ್ತದೆ.

೨. ಸಂಬೋಧನೆಯೆಂದು ಭಾವಿಸಿಕೊಂಡರೂ ಬಹುವ್ರೀಹಿಯಲ್ಲಿ ಬರುವ ಅರ್ಥಸ್ವಾರಸ್ಯ ಸಂಬೋಧನೆಯಲ್ಲಿ ಬರುವುದಿಲ್ಲ.

೩. ರಾಮನಿಗೆ ಪ್ರಾಧಾನ್ಯ ಕೊಡುವ ಬದಲು ಕೌಸಲ್ಯೆಗೆ ಪ್ರಾಧಾನ್ಯ ಕೊಟ್ಟಂತಾಗುತ್ತದೆ.

೪. ಕೌಸಲ್ಯೆಗೆ ಆಪ್ತರಾದವರು ಅಭಿಮಾನದಿಂದ ರಾಮನನ್ನು ಕೌಸಲ್ಯೆಯ ಮಗನೇ ಎಂದು ಕರೆಯುವುದರಲ್ಲಿ ಅರ್ಥವಿದೆ. ಆದರೆ ವಿಶ್ವಾಮಿತ್ರ ಆ ಕಾಡಿನಲ್ಲಿ ಕೌಸಲ್ಯೆಯ ಮಗನೇ ಎಂದು ಕರೆಯುವ ಔಚಿತ್ಯವೇನು? ದಾಶರಥಿ ಎಂದು ಕರೆದಿದ್ದರೂ (ವಿಶೇಷವೇನಿಲ್ಲದಿದ್ದರೂ) ಸಂಪ್ರದಾಯದ ಕರೆ ಎನಿಸುತ್ತಿತ್ತು. ಕೌಸಲ್ಯೆಯ ಗರ್ಭದಲ್ಲಿ ಜನಿಸಿದುದರಿಂದ ರಾಮ ದೊಡ್ಡವನಾಗಲಿಲ್ಲ. ಅಂತಹ ಮಗ ತನ್ನ ಗರ್ಭದಲ್ಲಿ ಜನಿಸಿದುದರಿಂದ ಕೌಸಲ್ಯೆ ದೊಡ್ಡವಳಾದಳು.

೫: ಭಾಷ್ಯಕಾರನಿಗೂ ಬಹುವ್ರೀಹಿಯ ಅರ್ಥದ ಕಡೆಗೇ ಒಲವು. ಆದುದರಿಂದಲೇ ಬಹುವ್ರೀಹಿಯ ಅರ್ಥವನ್ನು ಮೊದಲು ವಿವರಿಸಿ ಅನಂತರ ಸಂಬೋಧನಾರ್ಥದ ಬಗ್ಗೆ ಹೇಳಿದ್ದಾನೆ. ಹಾಗಲ್ಲದಿದ್ದರೆ ಸಂಬೋಧನಾರ್ಥವನ್ನೇ ಮೊದಲು ಬರೆಯುತ್ತಿದ್ದ.

೬. ಆದುದರಿಂದ ಲೇಖಕರ "ಕೌಸಲ್ಯೆಯ ಸತ್ಪುತ್ರನಾದ ರಾಮನೇ" ಎಂದು ಗ್ರಹಿಸಿದಾಗ ಮಾತ್ರ ಅದು ಹೆಚ್ಚು ಸಹಜವೂ ಧ್ವನಿಪೂರ್ಣವೂ ಆಗುವುದರಲ್ಲಿ ಸಂಶಯವಿಲ್ಲ" ಎಂಬ ಮಾತಾಗಲಿ, "ಕೌಸಲ್ಯಾದೇವಿಯ ಸತ್ಪುತ್ರನಾದ ರಾಮನೇ ಎಂಬ ಸಂಬೋಧನಾರ್ಥ ಇಲ್ಲಿರತಕ್ಕದ್ದು. ಬಹುತೇಕ ಎಲ್ಲರೂ ಇದೇ ಅರ್ಥವನ್ನು ಗ್ರಹಿಸಿರತಕ್ಕದ್ದು" ಎಂಬ ನಿರ್ಣಯವಾಗಲಿ ನಿಲ್ಲುವುದಿಲ್ಲ.

—ನ. ಸುಬ್ರಹ್ಮಣ್ಯಂ

ಗ್ರಂಥಾವಲೋಕನ

ಹವ್ಯಕರ ಶೋಭಾನೆಗಳು*

(ಸಂಕಲನ–ಸಂಪಾದನ–ಸಂಶೋಧನ ಗ್ರಂಥ)

ಕನ್ನಡದಲ್ಲಿ ಜನಪದ ಸಾಹಿತ್ಯದ ಅಭ್ಯಾಸ ಈ ಒಂದೆರಡು ದಶಕಗಳಲ್ಲಿ ಹೆಚ್ಚಾಗುತ್ತಿರುವುದು ಸಂತೋಷದ ಸಂಗತಿ. 1930ರ ದಶಕದಲ್ಲಿ ಜನಪದಸಾಹಿತ್ಯದ ಕಡೆಗೆ ವಿದ್ವಾಂಸರ ಗಮನವನ್ನು ಸೆಳೆದು ಅಲ್ಲಿ ಎಂಥ ಸೌಭಾಗ್ಯ ಅಡಗಿದೆಯೆಂಬುದರ ಪರಿಚಯವನ್ನು ಮಾಡಿಕೊಟ್ಟ ಬಿ. ಎಂ. ಶ್ರೀಕಂಠಯ್ಯನವರನ್ನು ನಾವಿಂದು ನೆನೆಯಬೇಕು. ಅವರ ಅವಿರತವಾದ ಉತ್ಸಾಹದ ಪರಿಣಾಮವಾಗಿಯೇ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರೂ ಗದ್ದಿಗೆಮಠ ಅವರೂ ಇಂಥ ಇನ್ನೂ ಕೆಲವರೂ ಜಾನಪದ ಗೀತಗಳು ಎಂಬ ಹೆಸರಿನಲ್ಲೋ ಹಳ್ಳಿಯ ಹಾಡುಗಳು ಎಂಬ ಹೆಸರಿನಲ್ಲೋ ಗ್ರಂಥಗಳನ್ನು ಹೊರತಂದರು. ದೇವುಡು ನರಸಿಂಹ ಶಾಸ್ತ್ರಿಗಳೂ ಮಾಸ್ತಿಯವರೂ ಈ ದಿಶೆಯಲ್ಲಿ ಲೇಖನಗಳನ್ನು ಬರೆದರು. ಇದಿಲ್ಲಿ ಈಗ ಚರಿತ್ರೆಯ ಮಾತಾಗಿದೆ.

ಇಂಥ ಸಂದರ್ಭದಲ್ಲಿ ಶ್ರೀ ಟಿ. ಕೇಶವ ಭಟ್ಟರು ಉಪಾಧ್ಯಾಯವೃತ್ತಿಯಿಂದ ನಿವೃತ್ತಿಹೊಂದಿದ ಮೇಲೆ ಯು.ಜಿ.ಸಿ. ನೆರವಿನಿಂದ, ವಿಸ್ತೃತವಾಗಿ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ್ದ ಸಾವಿರಾರು ಹವ್ಯಕ ಸಮಾಜದ ಹಾಡುಗಳಲ್ಲಿ, ಮಹಿಳೆಯರು ಹಾಡುತ್ತಿದ್ದ ಶೋಭಾನೆಗಳನ್ನು ಮಾತ್ರ ಒಂದು ಕಡೆ ಸೇರಿಸಿ, ಅವುಗಳನ್ನು ಶಾಸ್ತ್ರೀಯವಾಗಿ ಸಂಪಾದನೆ ಮಾಡಿ ಅವುಗಳ ಬಗ್ಗೆ ವಿಮರ್ಶೆಯ ವಿವರಗಳನ್ನು ನೀಡುವ ಪರಾಮರ್ಶೆಯನ್ನೂ ಸೇರಿಸಿ, ತುಂಬ ಸ್ತುತ್ಯಕಾರ್ಯವನ್ನು ಮಾಡಿದ್ದಾರೆ. ಇತ್ತೀಚಿನ ಕನ್ನಡ ಪ್ರಕಟಣೆಗಳಲ್ಲಿ ಬಹಳ ಪ್ರಮುಖ ಸ್ಥಾನವನ್ನು ಆಕ್ರಮಿಸುವ ಈ ಗ್ರಂಥದ ಆಳವಾದ ಅಭ್ಯಾಸ ಅಗತ್ಯವಾಗಿ ನಡೆಯಬೇಕು. ಹಾಗೆ ಆದರೆ, ಆಗ ಶ್ರೀ ಕೇಶವ ಭಟ್ಟರು ತೆರೆದಿರುವ ಈ ಹವ್ಯಕಪ್ರಪಂಚದ ಎಷ್ಟೋ ಹೊಸ ವಿಷಯಗಳು ಕನ್ನಡ ಸಾಹಿತ್ಯದ ಬೊಕ್ಕಸವನ್ನು ತುಂಬುವುದರಲ್ಲಿ ಅನುಮಾನವಿಲ್ಲ.

ಈ ಬೃಹತ್ ಗ್ರಂಥದಲ್ಲಿ 280 ಹಾಡುಗಳಿವೆ. ಅವುಗಳನ್ನು ಲೇಖಕರು ಐದು ವಿಭಾಗಗಳಾಗಿ ವಿಂಗಡಿಸಿದ್ದಾರೆ:—(1) ಮದುವೆಯ ಹಾಡುಗಳು. (2) ಜನ್ಮದಿನೋತ್ಸವದ ಹಾಡುಗಳು. (3) ಉಪನಯನದ ಹಾಡುಗಳು. (4) ಪೂಜೆ, ವ್ರತ, ಹಬ್ಬ, ಹೋಮ ಇತ್ಯಾದಿಗಳ ಹಾಡುಗಳು. (5) ಪುಣ್ಯಕಥಾತ್ಮಕವಾದ ದೀರ್ಘ ಹಾಡುಗಳು. ಇವುಗಳಲ್ಲಿ ಮೊದಲನೆಯ ಭಾಗದಲ್ಲಿ ಅನೇಕ ಉಪವಿಭಾಗಗಳು

---

* ಹವ್ಯಕರ ಶೋಭಾನೆಗಳು :—ಪ್ರೊ|| ಟಿ. ಕೇಶವ ಭಟ್ಟ; ಪ್ರ : ಚಿರಸಾಹಿತ್ಯ ಪ್ರಕಾಶನ, 754, 15ನೆಯ ಮುಖ್ಯರಸ್ತೆ, ಬನಶಂಕರಿ 2ನೆಯ ಹಂತ, ಬೆಂಗಳೂರು–560 070; ಪುಟಗಳು 740 ಡೆಮ್ಮಿ $\frac{1}{8}$; ಬೆಲೆ: ರೂ. 125. (1986).

ಸೇರಿವೆ :—ಚತುರ್ಥಿಯ ಹಾಡುಗಳು, ಗೃಹಪ್ರವೇಶದ ಹಾಡುಗಳು, ವಿನೋದದ ಹಾಡುಗಳು, ಗೃಹಿಣಿಯ ದಿನಚರಿ ಇತ್ಯಾದಿ. ಆದರೆ, ಇವೆಲ್ಲವೂ ಮದುವೆಯ ಉತ್ಸವಕ್ಕೆ ಸಂಬಂಧಪಟ್ಟುವೇ ಆಗಿವೆ.

ಒಂದು ವಿಶಿಷ್ಟ ಸಮಾಜದ ಅಂತರಂಗವನ್ನು ಸೆರೆಹಿಡಿದಿರುವ ಈ ಹಾಡುಗಳು ಸ್ವಾಭಾವಿಕವಾಗಿಯೇ ಆ ಸಮಾಜದ ವರ್ತನೆಯ ಮತ್ತು ಸಾಮಾಜಿಕ ಕ್ರಿಯೆಗಳೆಲ್ಲದರ ವಿವರಗಳನ್ನು ಕುರಿತು ಚಿತ್ರವನ್ನು ನೀಡುವುದು ಸಾಧ್ಯವಾಗಿದೆ. ಈ ಎಲ್ಲ ಹಾಡುಗಳನ್ನು ಶ್ರೀ ಭಟ್ಟರು 'ಶಿಷ್ಟಜಾನಪದ' ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಶಬ್ದ ಬಹಳ ವ್ಯಾಪಕವಾದ ಅರ್ಥವುಳ್ಳದ್ದಾದರೂ ಈ ಸಂದರ್ಭದಲ್ಲಿ ಅರ್ಥವತ್ತಾಗಿದೆ. ಬ್ರಾಹ್ಮಣರ ಮನೆಗಳಲ್ಲಿ ಉಪಯೋಗವಾಗುವ ಭಾಷೆಯಲ್ಲಿ ಶಿಷ್ಟಪ್ರಯೋಗ ಹೆಚ್ಚು. ಆದರೆ, ಜಾನಪದ ಸತ್ತ್ವಕ್ಕೆ ಅದು ಹೊರತಾಗಿಲ್ಲ. ಆದುದರಿಂದ ಈ ಶಬ್ದವನ್ನು ಈ ಬಗೆಯ ಹಾಡುಗಳಿಗೆ ಹೊಂದಿಸಿರುವುದು ಸಾರ್ಥಕವಾಗಿದೆ.

'ಹವ್ಯಕ' ಶಬ್ದದ ಬಗ್ಗೆ ಬಹಳ ಹಿಂದಿನಿಂದಲೂ ಚರ್ಚೆಗಳು ನಡೆದಿವೆ. ಈ ಗ್ರಂಥದಲ್ಲಿ ಆ ಎಲ್ಲಾ ಚರ್ಚೆಗಳ ಸಾರವನ್ನೂ ಭಟ್ಟರು ನೀಡಿದ್ದಾರೆ. ಹವ್ಯ< ಹವ್ಯಕ, ಪಾವಿಗ<ಹಪ್ಯಕ, ಅಹಿಕ<ಹೈಗ-ಹವ್ಯಕ ಇತ್ಯಾದಿಗಳ ವಿವರಣೆಗಳೂ ಇಲ್ಲಿವೆ.

ಕದಂಬ ಮಯೂರವರ್ಮನ ಚರಿತ್ರೆಯನ್ನು ವಿವರಿಸಿ, ಇಲ್ಲಿ ಬಂದು ನೆಲಸಿದ ಬ್ರಾಹ್ಮಣರಿಗೆ — ಸಭಾಹಿತ, ಮಧ್ಯಸ್ಥ, ಯಾಜಿ, ಅವಭೃತ, ಭಟ್ಟ, ತಾಂತ್ರಿಕ, ಪ್ರಭು (ಹೆಗಡೆ) – ಎಂಬ ಸಂಕೇತನಾಮಗಳು ಬಂದ ಕಥೆ ಅತೀವ ಸ್ವಾರಸ್ಯವಾಗಿದೆ. ಇವರೆಲ್ಲ ಸ್ಮಾರ್ತರು, ಶ್ರೀ ಶಂಕರಾಚಾರ್ಯ ಪರಂಪರೆಯ ಶ್ರೀರಾಮಚಂದ್ರಪುರ ಗುರುಪೀಠದ ಶಿಷ್ಯರು. ಇವರು ಹೆಚ್ಚಾಗಿ ಯಜುರ್ವೇದಿಗಳು. ಶ್ರೀ ವಿದ್ಯಾರಣ್ಯರಿಗೂ ಸಂಬಂಧಪಟ್ಟವರೆಂದು ಹೇಳುತ್ತಾರೆ. ಹವ್ಯಕರಲ್ಲಿ ಪ್ರಚಲಿತವಿರುವ 'ಮಂತ್ರ ಬಿನ್ನಹ'ದ ಕಥೆಯೂ ಕೂಡ ವಿಮರ್ಶೆಗೆ ಒಳಗಾಗಬೇಕಾದ ವಿಚಾರ. ಹವ್ಯಕರ ಕನ್ನಡ ಹಳಗನ್ನಡದ ಮತ್ತು ಪೂರ್ವದ ಹಳಗನ್ನಡದ ಸಮೀಪಸಂಬಂಧಿಯೂ ಹೌದು. ಈ ವಿಚಾರವಾಗಿ ಭಟ್ಟರ ವಿವರಣೆ ಸ್ಪಷ್ಟವಾದುದು, ಆಧಾರಪೂರ್ವಕವಾದುದೂ ಆಗಿದೆ.

'ಚತ್ರಾಣ' ಎಂಬ ದೇಸಿಗಬ್ಬದ ಬಗ್ಗೆ ಈ ಐವತ್ತು ವರ್ಷಗಳಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅದೆಲ್ಲವನ್ನೂ ಅಭ್ಯಾಸ ಮಾಡಿ ಶ್ರೀ ಭಟ್ಟರು 'ಚತ್ರಾಣ'ವು 'ಚಿತ್ರಾ-ಆಯತನ' ಎಂಬ ಶಬ್ದದಿಂದ ಉತ್ಪತ್ತಿಯಾಗಿರಬೇಕೆಂಬ ವಾದವನ್ನು ಒಪ್ಪಿದ್ದಾರೆ. 'ಚಿತ್ರಾ' ಎಂಬುದು ತ್ರಿಪದಿಯ ಭೇದ ತಾನೆ? ಹೆಂಗುಸರ ಶೋಭಾನೆ ಹಾಡುಗಳಿಗೆ ಈ ಬಗೆಯ ತ್ರಿಪದಿಗಳು ಸೀಮಿತವಾದುವು. ಆದುದರಿಂದ 'ಚತ್ರಾಣ'ವು ಹೆಂಗುಸರ ಹಾಡುಗಳಿಗೆ ಅನ್ವಯವಾಗುವ ಶಬ್ದ. 'ಬಿಡಂಡೆ' ಪುರುಷರ ಹಾಡುಗಳಿಗೆ ಅನ್ವಯವಾಗತಕ್ಕದ್ದು ಎಂಬ ಈ ಹೊಸ ವ್ಯಾಪ್ತಿಯಲ್ಲಿ ಕೇವಲ ಹೊಸತನ

ಒಂದೇ ಅಲ್ಲ, ಇನ್ನೂ ಆಳವಾಗಿ ವಿಮರ್ಶಿಸಿ ತೀರ್ಮಾನಿಸಬೇಕಾದ ಒಂದು ನೆಲೆಯನ್ನು ಭಟ್ಟರು ತಲಪಿದ್ದಾರೆ ಎಂಬ ಬಗ್ಗೆ ಅನುಮಾನವಿಲ್ಲ.

'ಧವಳಾರ' ಎಂಬುದು ಆರತಿಯನ್ನು ಬೆಳಗುವಾಗ ಹೇಳುವ ಹಾಡು ಎಂಬ ತೀರ್ಮಾನಕ್ಕೆ ಅವರು ಬಂದಿರುವುದರಲ್ಲಿಯೂ ಇದೇ ಸನ್ನಿವೇಶವಿದೆ. ಈ ಹಾಡು ಗಳಿಗೆ ಸಂಬಂಧಿಸಿದಂತೆ ರಚಿತವಾಗಿರುವ ಛಂದಸ್ಸಿನ ವಿವರಣೆ ಈ ಗ್ರಂಥದ ಬಹು ಮುಖ್ಯ ಭಾಗ. ಇದು ಕನ್ನಡ ಛಂದಸ್ಸಿನ ಅನೇಕ ವಿಷಯಗಳನ್ನು ಪುನರ್ವಿಮರ್ಶಿ ಸಿರುವುದಲ್ಲದೆ, ಹವ್ಯಕರ ಶೋಭಾನೆಗಳಲ್ಲಿ ಬರುವ ವಿವಿಧ ಛಂದೋರೂಪಗಳ ವಿವರಣೆಯನ್ನು ನೀಡುತ್ತದೆ. ಈ ಅಧ್ಯಾಯವನ್ನು ರಚಿಸುವುದು ಆಳವಾದ ಪಾಂಡಿತ್ಯವುಳ್ಳವರಿಗೆ ಮಾತ್ರ ಸಾಧ್ಯ.

ಶ್ರೀ ಕೇಶವ ಭಟ್ಟರಿಗೆ ಯಕ್ಷಗಾನದಲ್ಲಿ ಪಾತ್ರವಹಿಸುವ, ಅರ್ಥೈಸುವ, ಭಾಗವತಿಕೆ ಮಾಡುವ (ಹಾಡುವ), ಮದ್ದಳೆ ಚೆಂಡೆ ಬಾಜಿಸುವ ಎಲ್ಲ ಕ್ರಿಯೆಗಳ ಲ್ಲಿಯೂ ಆಳವಾದ ಅಭ್ಯಾಸವಿರುವುದರಿಂದ ಅವರು ಹೇಳಿರುವ ಮಾತುಗಳು ಹಾರಿಕೆಯ ಮಾತುಗಳಾಗದೆ, ಪರಿಶೀಲಿಸಬೇಕಾದ ಗಟ್ಟಿ ತೀರ್ಮಾನಗಳನ್ನು ಮುಂದಿಡು ತ್ತವೆ.

ಹವ್ಯಕರ ಮದುವೆಗಳ ವಿಚಾರವನ್ನೊಳಗೊಂಡ ನಾಲ್ಕನೆ ಅಧ್ಯಾಯವು ಆಧುನಿಕ ಸಮಾಜ ಶಾಸ್ತ್ರದ ಹಿನ್ನೆಲೆಯಲ್ಲಿ ಆಗಿರುವ ಶಾಸ್ತ್ರೀಯವಾದ ಅಧ್ಯಯನ. ಇಲ್ಲಿನ ವಿವರಣೆ ಸ್ವಸಂಪೂರ್ಣವಾಗಿದ್ದು ಈ ಗ್ರಂಥದಲ್ಲಿರುವ ಎಲ್ಲ ಹಾಡುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಬೇಕಾದ ಎಲ್ಲ ಹಿನ್ನೆಲೆಯನ್ನೂ ನೀಡುತ್ತದೆ.

ಪುಣ್ಯಾತ್ಮಕ ಕಥನಗಳನ್ನುಳ್ಳ ಐದನೆಯ ಅಧ್ಯಾಯದ ಬಗ್ಗೆ ಒಂದೆರಡು ವಿಶೇಷವಾದ ಮಾತನ್ನು ಹೇಳಬೇಕು. ಇಲ್ಲಿ ದಮಯಂತೀಕಲ್ಯಾಣದಲ್ಲಿ ಐದು ಸಾಲಿನ 68 ಪದ್ಯಗಳಿವೆ. ಧ್ರುವಚರಿತ್ರೆಯಲ್ಲಿ 9 ಸಾಲಿನ 38 ಪದ್ಯಗಳಿವೆ. ರಾಮಕೃಷ್ಣಚರಿತೆಯಲ್ಲಿ 4 ಸಾಲುಗಳ 16 ಪದ್ಯಗಳಿವೆ. ಪಾರಿಜಾತದ ಹಾಡಿನಲ್ಲಿ 4 ಸಾಲುಗಳ 94 ಪದ್ಯಗಳಿವೆ. ರಾವಣ ಮಂಡೋದರೀ ಸಂವಾದದಲ್ಲಿ 4 ಸಾಲು ಗಳ 20 ಪದ್ಯಗಳಿವೆ. ಶ್ರೀ ಕೃಷ್ಣಬಾಲಲೀಲೆ ಎಂಬ ಭಾಗದಲ್ಲಿ 4 ಸಾಲಿನ 83 ಪದ್ಯಗಳಿವೆ. ಇವುಗಳನ್ನು 'ಪದ್ಯ' ಅನ್ನುವುದಕ್ಕಿಂತ 'ಹಾಡಿನ ನುಡಿ' ಎಂದು ಹೇಳಬಹುದು. ಲೇಖಕರು ಇದನ್ನು 'ಹಾಡಿನ ಸೊಲ್ಲು' ಎಂದಿದ್ದಾರೆ. ಇವುಗಳಲ್ಲಿ ಒಂದೊಂದೂ ಉತ್ತಮ ಕಥನಕವನದಂತೆ ಇವೆ. ಧ್ರುವಚರಿತ್ರೆಯಂತೂ ಉತ್ತಮ ಕಾವ್ಯವಾಗಿದೆ.

ರಾವಣ ಮಂಡೋದರೀ ಸಂವಾದದಲ್ಲಿ ರಾವಣ ತನ್ನ ಹೆಂಡತಿಗೆ—'ಎನ್ನ ಮನವ ಒಲಿಸುವಂಥ ಕನ್ನಡಿಯ ಮುಖದವಳ, ನಿನ್ನ ಮೇಲೆ ತರುವೆ ನೋಡು' ಎನ್ನುತ್ತಾನೆ. ಮಂಡೋದರಿ ಬೇಡವೆಂದು ಅನೇಕ ಸಲ ಹೇಳುತ್ತಾಳೆ. ಅದರೂ.

ರಾವಣನು ಹಟಹಿಡಿದಾಗ, ಅವಳು—'ಇನಿಯನೆ ಇದೆಲ್ಲ ಮಾತ ಮೀರಿದ ಮೇಲಿನ್ನ ಪ್ರಾಣ ಉಳಿಯುವದುಂಟೆ ಎನ್ನುತ್ತ ಚರಣಕೆರಗುತ'-ಹೇಳುತ್ತಾಳೆ. ಆಗ ರಾವಣನು

'ಚರಣಕೆ ಎರಗಿದ ಸತಿಯ । ಕರವ ಪಿಡಿದಿರಿಸಿಕೊಂಡು
ಪುರಹರನ ಕರುಣ ನಮಗೆ । ಇರಲಿ ಎಂದನು–ಇರಲಿ ಎಂದನು'

ಇಲ್ಲಿಗೆ ಕಥೆ ಪೂರೈಸುತ್ತದೆ. ಹೆಣ್ಣಿನ ಹಾಡು ಇದು. ಇಲ್ಲಿ ಹೆಂಗುಸು ಗಂಡನ ಮನಸ್ಸನ್ನು ತನ್ನ ಕಡೆಗೆ ಮಾಡಿಕೊಂಡು ಮುಂದೆ ರಾಮಾಯಣದ ಕಥೆಯೇ ಇಲ್ಲದಂತೆ ಮಾಡಿಬಿಡುತ್ತಾಳೆ. ಹೆಣ್ಣಿಗೆ ಇದೇ ಸರಿಯಾದ ಕಥೆಯ ಮುಕ್ತಾಯ. ಇಂಥ ಹಾಡುಗಳಲ್ಲಿ ನಮ್ಮ ದೇಶದ ಶಿಷ್ಟ ಮನೆತನದ ಹೆಣ್ಣುಮಕ್ಕಳ ಸಂಸ್ಕೃತಿಯನ್ನು ತಿಳಿಯಬಹುದು. ಇದೊಂದು ಚಿಕ್ಕ ಚೊಕ್ಕ ಹಾಡು.

ಈ ಗ್ರಂಥದ ಕೊನೆಯಲ್ಲಿ ಬರುವ ಕೆಲವು ಶಬ್ದಾರ್ಥಗಳು ಉಪಯುಕ್ತವಾಗುವಂಥ ಒಂದು ಅನುಬಂಧ. ಜೊತೆಗೆ, ಅಚ್ಚಾಗಿರುವ ಶೋಭಾನೆಗಳ ಪುಸ್ತಕಗಳ ಪಟ್ಟಿಯಿದೆ. ಅದರಲ್ಲಿ 98 ಗ್ರಂಥಗಳ ವಿವರಗಳಿವೆ. ಹಾಡುಗಳನ್ನು ಹಾಡಿದ ಸ್ತ್ರೀಯರು 69 ಜನ. ಅವರ ವಯಸ್ಸು ವಿಳಾಸಾದಿಗಳನ್ನು ನೀಡಿದ್ದಾರೆ. ಆಕರ ಸಾಹಿತ್ಯದಲ್ಲಿ 60 ಗ್ರಂಥಗಳ ನಿರೂಪಣೆಯಿದೆ.

ಯು.ಜಿ.ಸಿ. ಧನಸಹಾಯದಿಂದ ಸುಮಾರು ನಾಲ್ಕೂವರೆ ವರ್ಷಗಳ ತೀವ್ರ ಗಮನದಿಂದ ಸಿದ್ಧವಾದ ಈ ಗ್ರಂಥವು ಪ್ರಕಟವಾಗಿರುವುದು ಸಂತೋಷದ ವಿಷಯ. 1986ರಲ್ಲಿ ಡಾ॥ ಹಾ. ಮಾ. ನಾಯಕರು ಬರೆದ ಒಂದು ಅಂಕಣದಲ್ಲಿ ('ಸಂಪ್ರತಿ' ಪ್ರಜಾವಾಣಿ, 31-8-1986) ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷರಾದ ಶ್ರೀ ಯಶಪಾಲರು ಹೇಳಿದ ಮಾತನ್ನು ಉದಾಹರಿಸಿದ್ದಾರೆ: 'ನೋಡಿ, ಕಳೆದ ಕೆಲವು ವರ್ಷಗಳಲ್ಲಿ ನೂರಾರು ಪುಸ್ತಕ ಬರೆಸಲು ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೇವೆ. ಬರೆದು ಮುಗಿಸಿರುವ ಪುಸ್ತಕಗಳು 32. **ಅಚ್ಚಾದುವು ಎರಡೇ ಎರಡು.**' (ಹಾಗಿದ್ದರೆ ಈ 'ಹವ್ಯಕರ ಶೋಭಾನೆಗಳು' ಮೂರನೆಯದು ಆಗಿರಬಹುದಲ್ಲವೆ?) ಈ ಮಾತನ್ನು ಮುಂದುವರಿಸಿ 'ಕನ್ನಡಿಗರಲ್ಲಿ ಪುಸ್ತಕ ಸಂಸ್ಕೃತಿ, ಪುಸ್ತಕ ಮನಸ್ಕತೆ – ಇವೆರಡೂ ದ್ರುತಗತಿಯಲ್ಲಿ ಹೆಚ್ಚಬೇಕಾದುದು ಅವಶ್ಯ. ಅದಕ್ಕಾಗಿ ಉತ್ತಮ ಪುಸ್ತಕಗಳು ಉತ್ತಮ ರೀತಿಯಲ್ಲಿ ಮುದ್ರಣವಾಗಿ ಹೊರಬರಬೇಕು' ಎಂದು ಹೇಳಿದ್ದಾರೆ. ಶ್ರೀ ಕೇಶವ ಭಟ್ಟರ ಈ ಮುದ್ರಿತ ಗ್ರಂಥ ಈ ಇಬ್ಬರು ಮಹನೀಯರಿಗೂ ಸಂತೋಷವನ್ನೂ ತೃಪ್ತಿಯನ್ನೂ ತರುತ್ತದೆಂದು ನಾನು ಭಾವಿಸುತ್ತೇನೆ.

ಗ್ರಂಥ ಮುದ್ರಣ, ಗ್ರಂಥಾಂತರಂಗ–ಈ ಎರಡರಲ್ಲೂ ತುಂಬ ಪರಿಷ್ಕಾರವಾಗಿರುವ ಈ ಗ್ರಂಥದ ಬಗ್ಗೆ ನಾನು ಶ್ರೀ ಟಿ. ಕೇಶವ ಭಟ್ಟರನ್ನು ಅಭಿನಂದಿಸುತ್ತೇನೆ.

—ಜಿ. ವೆಂಕಟಸುಬ್ಬಯ್ಯ

'ಕಾವೇರಿ'*—ಪ್ರಾಚೀನ ತುಳು ಕಾವ್ಯ ಪ್ರಕಟನೆ

ಅಜ್ಞಾತವಾಗಿದ್ದ ಈ ಪ್ರಾಚೀನ ತುಳು ಕಾವ್ಯವು ತುಳು ಭಾಷೆ, ನಾಡು ಮತ್ತು ಸಂಸ್ಕೃತಿಗೆ ಸಂಬಂಧಿಸಿದ (ಖಾಸಗಿ ಪ್ರಸಾರದ) ತ್ರೈಮಾಸಿಕವಾಗಿರುವ 'ತುಳುವ' (ಸಂ.: ಕು. ಶಿ. ಹರಿದಾಸ ಭಟ್ಟ) ಎಂಬ ಪತ್ರಿಕೆಯ ಸಂಪುಟ ೭, ಸಂಚಿಕೆ ೩–೪ (ಜನವರಿ, 1987)—ಇದರಲ್ಲಿ ಅಂತರ್ಗತವಾಗಿ ಪ್ರಕಟವಾಗಿದೆ. ಈ ಮೊದಲೇ ಕವಿ ವಿಷ್ಣುತುಂಗನ (ಕ್ರಿ.ಶ. 1639) 'ತುಳು ಭಾಗವತೊ' ಎಂಬ ಗ್ರಂಥ ಇದೇ ಸಂಪಾದಕರಿಂದ ಸಂಪಾದಿತವಾಗಿ ಈ ಮೊದಲೇ ಮಂಗಳೂರು ವಿಶ್ವವಿದ್ಯಾಲಯದ ಮೂಲಕ ಪ್ರಕಾಶಿತವಾಗಿದೆ.

ಪ್ರಕೃತ 'ಕಾವೇರಿ' ಎಂಬೀ ಪದ್ಯಕಾವ್ಯದ ತಾಡವಾಲೆ ಪ್ರತಿಯನ್ನು ಕಲ್ಲಿಕೋಟೆ ವಿಶ್ವವಿದ್ಯಾಲಯದಿಂದ ಪಡೆದು, ಸೂಕ್ತವಾದ ಪ್ರಸ್ತಾವನೆಯೊಂದಿಗೆ ಗ್ರಂಥಾಂತ್ಯದಲ್ಲಿ ಶಬ್ದಾರ್ಥಸೂಚಿಯೊಂದಿಗೆ ಸಂಪಾದಿಸಿ, ಪ್ರಕಟಿಸಲಾಗಿದೆ. "ತುಳು ಭಾಷೆಗೆ ಲಿಪಿಯಿಲ್ಲ. ತುಳುಭಾಷೆಯಲ್ಲಿ ಪ್ರಾಚೀನ ಲಿಖಿತ ಸಾಹಿತ್ಯವಿಲ್ಲ" ಎಂಬ ಜನವಾದದ ಮಾತನ್ನು ಸಂಪಾದಕರು ತಮ್ಮ ಎರಡು ತುಳು ಕಾವ್ಯಗಳ ಪ್ರಕಟನೆಯಿಂದ ಅಲ್ಲಗಳೆದಿದ್ದಾರೆ. ಇಲ್ಲಿ ಒಂದು ವಿಷಯ ಇನ್ನೂ ಸ್ಪಷ್ಟೀಕರಣಕ್ಕಾಗಿ, ಸಂಶೋಧಿತನಿರ್ಣಯಕ್ಕಾಗಿ ಕಾದಿದೆ. ಅದೇಂದರೆ:—ತುಳುಲಿಪಿ ವಿಚಾರ. 'ತುಳುಲಿಪಿ'ಗೆ 'ತಿಗಳಾರಿ ಲಿಪಿ' ಎಂತಲೂ ಹೆಸರಿದೆ. ಕೇರಳದಲ್ಲಿಯೂ ಈ ಲಿಪಿ ಶತಮಾನಗಳ ಹಿಂದೆಯೇ ಪ್ರಚಲಿತವಿದ್ದುದಾಗಿ ಸಂಪಾದಕರು ದೃಢಪಡಿಸಿರುತ್ತಾರೆ. ಈ ಲಿಪಿ "ವೈದಿಕ ಲೌಕಿಕ ಸಂಸ್ಕೃತ ಸಾಹಿತ್ಯಗಳ ಬರೆವಣಿಗೆಗಾಗಿ ಮಾತ್ರ ಬಳಸಲ್ಪಡುತ್ತಿತ್ತೇ ವಿನಾ ತುಳುಭಾಷೆಯ ಉಲ್ಲೇಖಕ್ಕೆ ಇದನ್ನು ಬಳಸುತ್ತಿರಲಿಲ್ಲ"–ಎಂದೂ ತಿಳಿಸಿರುತ್ತಾರೆ. ಇದು ನಿಜ. ನಾನು ಸ್ವತಃ ಕಂಡಿರುವಂತೆ, ಕರ್ಣಾಟಕದ ಹಲವೆಡೆ—ಸಾಗರ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿಯೂ, ಮಂತ್ರ ಜ್ಯೌತಿಷಾದಿ ರಹಸ್ಯ ಸಂಗತಿಗಳನ್ನು ಈ ತಿಗಳಾರಿಯಲ್ಲಿಯೇ ಬರೆದಿಡುತ್ತಿದ್ದರು. ತುಳು ಭಾಷೆಯನ್ನು ಇದು ಪ್ರತಿನಿಧಿಸುವುದು ಪ್ರಶ್ನಾರ್ಹವಾಗಿಯೇ ಇದೆ. ನನಗೆ ತಿಳಿದಿರುವಂತೆ, ಈ ಲಿಪಿಯಲ್ಲಿ ತುಳು ಭಾಷೆಗೆ ಅತ್ಯಂತ ಅವಶ್ಯವೆನಿಸುವ ಎ, ಒ,—ಎಂಬ ಹ್ರಸ್ವಸ್ವರಗಳಿಲ್ಲ. ಹೀಗಿರುವಾಗ, ತುಳುಭಾಷೆಯನ್ನು ಪ್ರತಿನಿಧಿಸದ ಲಿಪಿಗೆ 'ತುಳು' ಎಂಬ ಹೆಸರೇಕೆ? ಹೀಗೆ ವಿವರಣೆ ಕೊಡಬಹುದು—

ಈ ಲಿಪಿಯನ್ನು ಬ್ರಾಹ್ಮಣರು ಮಂತ್ರ–ಜ್ಯೋತಿಷಾದಿ ರಹಸ್ಯ ವಿಷಯಗಳನ್ನು ಅವುಗಳ ಕಲ್ಪಿತ ಶುಚಿತ್ವ ಕೆಡದಂತೆ ಬರೆದಿಡಲಿಕ್ಕಾಗಿ ಬಳಸುತ್ತಿದ್ದರು–

---

* ಕಾವೇರಿ:—ಸಂ: ವೆಂಕಟರಾಜ ಪುಣಿಂಚತ್ತಾಯ. ಪ್ರ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ - 576 102. ಪುಟಗಳು: 64+16 ಡೆಮ್ಮಿ 1/8; ಬೆಲೆ: ರೂ. 15. (1987)

ಎಂಬುದಿಲ್ಲಿ ಲಕ್ಷ್ಯಾರ್ಹ. ತುಳು ಆಡುನುಡಿಯಾಗಿರುವ ಜನಸಾಮಾನ್ಯರು ಮಂತ್ರ ಪಠನೆಗೆ ಹಾಗೂ ಜ್ಯೋತಿಷ ಶಾಸ್ತ್ರಾಧ್ಯಯನಕ್ಕೆ ಅಂತರಂಗ–ಬಹಿರಂಗ ಶುದ್ಧಿ ಸಾಲದವರಾಗಿದ್ದು, ಅಂಥವರು ಓದದಿರಲಿ ಎಂಬ ಉದ್ದೇಶವಿಟ್ಟು ಅವನ್ನು ತುಳು ಲಿಪಿಯಲ್ಲಿ ಬರೆದಿಡುತ್ತಿದ್ದು, ಇದೊಂದು ನಕಾರಾತ್ಮಕ ಪರಿಕಲ್ಪನೆಯಿಂದ 'ತುಳು ಲಿಪಿ' ಎಂಬ ನಾಮಾಂಕಿತವಾಯಿತೆಂದು ತೋರುತ್ತದೆ. 'ತುಳು' ಬರೆವಣಿಗೆಗೆ ಒಗ್ಗುವ ಭಾಷೆಯಾಗಿಯೇ ಕಂಡುಬರುವುದಿಲ್ಲ. ತುಳು ಭಾಗವತವನ್ನಾಗಲಿ, ಕಾವೇರೀ ಕಾವ್ಯವನ್ನಾಗಲಿ, ತುಳುವನ್ನು ಚೆನ್ನಾಗಿ ಬಲ್ಲಂಥವರಿಗೂ ಲೀಲಾಜಾಲವಾಗಿ ಓದಿ ಅರ್ಥಮಾಡಲು ಬರುವುದಿಲ್ಲ. ಇದಕ್ಕೆ ಕಾರಣವೇದರೆ ತುಳು ಇನ್ನೂ ಒಂದು ನಿರ್ದಿಷ್ಟ ಗ್ರಾಂಥಿಕ ಭಾಷಾರೂಪ ತಾಳಿಲ್ಲದಿರುವುದು. ತುಳು ಭಾಷೆಯ ಪ್ರಯೋಗ ದಲ್ಲಿ ತಪ್ಪೊಪ್ಪುಗಳ ವಿಚಾರವೇ ಕಂಡುಬರುವುದಿಲ್ಲ. ಒಂದು ಉದಾಹರಣೆ: ಕನ್ನಡದ 'ಸೊಪ್ಪು' ಎಂಬ ಶಬ್ದ ತುಳುವಿನಲ್ಲಿ ತಪ್ಪು, ಚಪ್ಪು, ಸಪ್ಪು, ಹಪ್ಪು–ಹೀಗೆ ನಾಲ್ಕು ರೂಪದಲ್ಲಿಯೂ ಕಂಡುಬರುತ್ತದೆ ಸೀಮೆ ಸೀಮೆಗೂ ಜಾತಿ ಜಾತಿಗೂ ತುಳುವಿನ ಭಾಷಾರೂಪ ವ್ಯತ್ಯಾಸವುಂಟು. ಈ ಕಾರಣದಿಂದಲೇ ಇರಬಹುದು, ಇದೊಂದು ಕಾವ್ಯಭಾಷೆ ಅಥವಾ ಶಿಷ್ಟಭಾಷೆಯಾಗಿಲ್ಲ. ಜಾನಪದ ಭಾಷೆಯಾಗಿಯೇ ಈಗಲೂ ಇದೆ.

ಕಾವೇರಿ ಕಾವ್ಯದ ಕಥೆ ಸಂಪಾದಕರು ತಿಳಿಸಿರುವಂತೆ, ಸಂಸ್ಕೃತದಲ್ಲಿ ಹದಿನೈದು ಅಧ್ಯಾಯಗಳುಳ್ಳುದು, ಸ್ಕಾಂದ ಪುರಾಣಾಂತರ್ಗತವಾದುದು. ಸಂಪಾದಕರಿಗೆ ದೊರೆತ ತಾಡವಾಲೆ ಪ್ರತಿಯಲ್ಲಿ ಎಷ್ಟೋ ಪುಟಗಳು ಕಳಚಿದ್ದು, ಸಮಗ್ರಕಾವ್ಯದ ಮೂರನೆಯ ಒಂದು ಭಾಗ ಮಾತ್ರ ಉಪಲಬ್ಧವಾಗಿದೆ. ನಷ್ಟಭಾಗದ ಕಾವ್ಯಕಥೆ ಯನ್ನು ಸಂಸ್ಕೃತದ ಮೂಲದ ಆಧಾರದಿಂದ ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಬರೆದ ಕವಿ ಯಾರೆಂದು ತಿಳಿದಿಲ್ಲ; ಶೈವನಿರಬಹುದೆಂದು ಅಭಿಪ್ರಾಯ. ವಿಷ್ಣುತುಂಗನ ತುಳುಭಾಗವತಕ್ಕೂ ಈ ಕಾವ್ಯಕ್ಕೂ ಇರುವ ತುಳುಭಾಷೆಯ ವ್ಯತ್ಯಾಸವನ್ನು ತಿಳಿಸ ಲಾಗಿದೆ; ಕಾವೇರಿ ಕಾವ್ಯದ ರಚನೆ ಬೇರೆ ಬೇರೆ ಮಾತ್ರಾಗಣಘಟಿತವಾದ ಚೌಪದಿ ರೂಪದಲ್ಲಿದ್ದು ದ್ವಿತೀಯಾಕ್ಷರ ಪ್ರಾಸಬದ್ಧವಾಗಿದೆ. ಪದ್ಯಗಳ ನಡೆ ಲಯಬದ್ಧ ವಾಗಿದೆ. ಗ್ರಂಥಸಂಪಾದನೆ ಸಾಹಸಪೂರ್ಣವೂ ಅಧ್ಯಯನಾತ್ಮಕವೂ ಸಂಪಾದಕರ ವಿಶೇಷ ಶ್ರಮ ಸಾಧ್ಯವೂ ಆಗಿ ತುಳುಸಾಹಿತ್ಯಕ್ಕೊಂದು ವಿಶೇಷದ ಕೊಡುಗೆಯಾಗಿದೆ.

—ಟಿ. ಕೇಶವ ಭಟ್ಟ

ಛಂದೋಗತಿ*

ಸಂಗೀತಶಾಸ್ತ್ರದ ಹಿನ್ನೆಲೆಯಲ್ಲಿ ಕನ್ನಡ ಛಂದಸ್ಸನ್ನು ಕುರಿತು ಆಳವಾಗಿ ಅಭ್ಯಾಸಮಾಡಿರುವ ಕೆಲವೇ ವಿದ್ವಾಂಸರಲ್ಲಿ ವಿದ್ವಾನ್ ಶ್ರೀ ಸೇಡಿಯಾಪು ಕೃಷ್ಣಭಟ್ಟ ಅವರು ಅಗ್ರಮಾನ್ಯರು. ಅವರು ಹೆಚ್ಚು ಬರೆದವರಲ್ಲ. ಆದರೆ ಅವರು ಬರೆದಿರುವದೆಲ್ಲ ಅಚ್ಚಬಂಗಾರ. ಶ್ರೀ ಸೇಡಿಯಾಪು ಅವರು ಸ್ವತಃ ಕವಿಯಾಗಿರುವರಲ್ಲದೆ ವ್ಯಾಕರಣ, ಭಾಷಾ ವಿಜ್ಞಾನ, ಛಂದಶ್ಶಾಸ್ತ್ರಗಳಲ್ಲಿ ನಿರಂತರವಾಗಿ ಸಂಶೋಧನೆ ನಡಸುತ್ತ ಬಂದಿದ್ದಾರೆ. ಸುಮಾರು ಅರ್ಧಶತಮಾನಕ್ಕೂ ಮಿಕ್ಕ ದೀರ್ಘಾವಧಿಯಲ್ಲಿ ಇವರು ನಡಸಿರುವ ಛಂದಶ್ಶಾಸ್ತ್ರ ವಿವೇಚನೆ ಅನನ್ಯವಾದುದು. ೧೯೩೨ರಷ್ಟು ಹಿಂದೆಯೇ ಇವರು 'ಕನ್ನಡ ಛಂದಸ್ಸು' ಎಂಬ ಪ್ರಬಂಧವನ್ನು ಆ ವರ್ಷ ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ಜರುಗಿದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನದಲ್ಲಿ ನಿವೇದನಮಾಡಿದರು. ಅದರಲ್ಲಿ, "ಛಂದೋಂಬುಧಿಯಲ್ಲಿ ನಿರೂಪಿಸಲ್ಪಟ್ಟಿರುವ ಕರ್ಣಾಟಕ ವಿಷಯ ಜಾತಿಗಳೊಳಗೆ ಮಾತ್ರಾ ನಿಯಮಬಾಹಿರವಾದ ಛಂದೋಬಂಧಗಳ 'ಧಾಟಿ'ಯ ಮತ್ತು ಆ ಬಂಧಗಳ ಘಟಕಗಳಾದ ಬ್ರಹ್ಮವಿಷ್ಣುರುದ್ರಗಣಗಳ ವಿಶಿಷ್ಟ ಸ್ವಭಾವದ ಹಾಗೂ ವ್ಯಾಪ್ತಿಯ ಕುರಿತು ಮಾಡಲಾದ ಮೊತ್ತಮೊದಲ ವಿಮರ್ಶೆ ಆದಾಗಿತ್ತು."[1] ಛಂದಶ್ಶಾಸ್ತ್ರವನ್ನು ಕುರಿತ ಅವರ ಎರಡನೆಯ ಕೃತಿಯೇ 'ಕನ್ನಡ ಗೀತಿಕೆಯ ಲಕ್ಷಣ ಮತ್ತು ಧಾಟಿ' ಎಂಬ ಎಂ. ಗೋವಿಂದ ಪೈ ಜ್ಞಾಪಕೋಪನ್ಯಾಸ. (ಈ ಉಪನ್ಯಾಸವನ್ನು ಪುಸ್ತಕ ರೂಪದಲ್ಲಿ 1977ರಲ್ಲಿ ಬೆಂಗಳೂರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಪ್ರಕಟಿಸಿದೆ.) ಈ ಉಪನ್ಯಾಸದಲ್ಲಾಗಲೇ ಅವರು 'ಛಂದೋಗತಿ' ಎಂದರೇನು ಎನ್ನುವುದನ್ನು ಸೂಚಿಸಿದ್ದಾರೆ. "ಪದ್ಯದ ವಿಶಿಷ್ಟ ಪ್ರಯೋಜನವೆಂದರೆ ಶ್ರವ್ಯತ್ವ.[2] ಪದ್ಯವನ್ನು ರಾಗಯುಕ್ತವಾಗಿ ಎಂದರೆ ಸ್ವರಾರೋಹಾವರೋಹಪೂರ್ವಕ ಹಾಡದೆ ಕೇವಲ ಓದಿದರೂ ಗದ್ಯದಲ್ಲಿಲ್ಲದ ಒಂದು ಗುಣವಿಶೇಷದ ಬೋಧವಾಗಿ, ನಮಗದು ಸುಖದಾಯಕವಾಗುತ್ತದೆ. ಈ ಸುಖದಾಯಕ ಗುಣವು ಆ ಪದ್ಯದ 'ಗತಿ'ಯಲ್ಲಿ

---

* 'ಛಂದೋಗತಿ': ಲೇಖಕರು : ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟರು : ಪ್ರಕಾಶಕರು : ಗೀತಾ ಬುಕ್ ಹೌಸ್, ಮೈಸೂರು-೧ ; ಪುಟಗಳು : ೨೭೭ ಡೆಮ್ಮಿ $\frac{1}{8}$; ಬೆಲೆ : ರೂ. 50. (೧೯೮೫).

1. ಈ ಪ್ರಬಂಧವು ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆಯ 18ನೆಯ ಸಂಪುಟದ 1-2 ಸಂಚಿಕೆಗಳಲ್ಲಿ (ಏಪ್ರಿಲ್, ಜುಲೈ 1933) ಪ್ರಕಟವಾಗಿದೆ.

2. ಕಾವ್ಯವನ್ನು ದೃಶ್ಯಕಾವ್ಯ ಶ್ರವ್ಯಕಾವ್ಯ ಎಂದು ಲಾಕ್ಷಣಿಕರು ವಿಭಜಿಸಿರುವರಷ್ಟೆ. ಇಲ್ಲಿ ಶ್ರವ್ಯ ಎಂದರೆ ಶ್ರೋತೃಗಳು ಕೇಳತಕ್ಕದ್ದು ಎಂದು ಮಾತ್ರವಲ್ಲದೆ, ಕಾವ್ಯ ತನ್ನ ಶಬ್ದಗುಣಗಳಿಂದ ಶ್ರವಣೇಂದ್ರಿಯಾಹ್ಲಾದಕಾರಕ ಎಂದೂ ತಿಳಿಯಬೇಕು.

ಅಡಗಿರುತ್ತದೆ. ಈ ಗತಿಯೇ ಎಂದರೆ ಬಳಕೆಯ ಮಾತಿನಲ್ಲಿ ಹೇಳುವುದಾದರೆ 'ಧಾಟಿ'ಯೇ ಛಂದೋನಿಯಮಗಳ ಲಕ್ಷ್ಯ ಮತ್ತು ಪರಿಣಾಮ." ಈ ಪರಿಣಾಮ ಸುಖವನ್ನವರು 'ಗತಿಸೌಂದರ್ಯ' ಎಂದು ಹೇಳಿ, ಇದೇ 'ಛಂದಸ್ಸೌಂದರ್ಯ' ಎಂದಿದ್ದಾರೆ. ಛಂದೋಗತಿ ಸೌಂದರ್ಯ ಮೀಮಾಂಸೆಯೇ 'ಛಂದೋಗತಿ' ಗ್ರಂಥದ ವಿಷಯ. ಲೇಖಕರು ನಿರ್ದೇಶಮಾಡಿರುವಂತೆ "ಛಂದಸ್ತತ್ತ್ವಗಳ ಹಾಗೂ ಗತಿ ಭೇದಗಳ ವಿವೇಚನೆ ಮತ್ತು ವಿವೃತಿ"ಯೆ ಗ್ರಂಥವಿಷಯ.

'ಛಂದೋಗತಿ'ಯಲ್ಲಿ ಒಟ್ಟು ಒಂಬತ್ತು ಪರಿಚ್ಛೇದಗಳಿವೆ. ಒಟ್ಟು 217 ಪುಟಗಳಲ್ಲಿ ಹರಡಿಕೊಂಡಿರುವ ವಿಷಯ ವಿವೇಚನೆಯಲ್ಲಿ ಲೆಕ್ಕಹಿಡಿಯುವ ಗೋಜಿಗೆ ಹೋಗದೆ ಅಂದಾಜಿನ ಮೇಲೆ ಹೇಳುವುದಾದರೆ ಕನಿಷ್ಠಪಕ್ಷ 60-70 ಪುಟಗಳಷ್ಟು ಸಣ್ಣ ಅಕ್ಷರವಲ್ಲಿ (ಎಂದರೆ 10 ಪಾಯಿಂಟ್) ಅಚ್ಚಾಗಿರುವ 97 ಅಡಿಟಿಪ್ಪಣಿಗಳು ಶಾಸ್ತ್ರಪರಿಚಯವಿರುವ ಓದುಗನಿಗೆ ಕೂಡ ದಿಗ್ಭ್ರಮ ಉಂಟುಮಾಡಿ, ವಿಷಯಾಂತರ ವಾಯಿತೇನೋ ಎಂಬ ಸಂದೇಹವನ್ನು ಹುಟ್ಟಿಸುವ ಮಟ್ಟಿಗೆ ದೀರ್ಘವಾಗಿವೆ. ಈ ಅಡಿಟಿಪ್ಪಣಿಗಳ ಪ್ರಮಾಣ ಅರ್ಧಪುಟದಿಂದ ಹಿಡಿದು 18 ಪುಟಗಳ ವರೆಗೆ ವ್ಯಾಪಿಸಿದೆ. ಈ ಅಡಿಟಿಪ್ಪಣಿಗಳು ಅನ್ಯಗ್ರಂಥಾಧಾರಗಳ ಸೂಚನೆಗಳಿಗೆ, ಅವತರಣಿಕೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಮುನ್ನುಡಿಯಲ್ಲಿ ಡಾ॥ ಶ್ರೀನಿವಾಸ ಹಾವನೂರರು ತಿಳಿಸಿರುವಂತೆ, ಇವುಗಳಲ್ಲಿ "ಸ್ವತಂತ್ರವಾಗಿ ಪ್ರತಿಪಾದಿತವಾದ ಹಲವು ಪೂರಕ ವಿಷಯಗಳಿವೆ. ಈ ಬಗೆಯ ಅಡಿಟಿಪ್ಪಣಿಗಳು ಅವರ ವ್ಯಾಸಂಗದ ವಿಸ್ತಾರವನ್ನು ತೋರ್ಪಡಿಸುವುದಲ್ಲದೆ, ಯಾವುದೊಂದು ಅಂಶವು ಮುಖ್ಯ ವಿಷಯಕ್ಕೆ ನೇರಸಂಬಂಧ ಇರುವುದರ ಅಥವಾ ಇಲ್ಲದಿರುವುದರ ಖಚಿತವಾದ ಪರಿಜ್ಞಾನವನ್ನು ಸೂಚಿಸಬಲ್ಲವುಗಳಾಗಿವೆ. ಹಾಗೆಂದು ಅವು ಅಮುಖ್ಯ ವಿಷಯಗಳು ಅಲ್ಲವೇ ಅಲ್ಲ. ಅಲ್ಲಿ ಬಂದಿರುವ ತಂತ್ರೀಲಯದ ವಿಚಾರ, 'ವೃತ್ತ' ಮತ್ತು 'ಜಾತಿ'ಯ ವಿಚಾರ, ವೈದಿಕ ಛಂದೋರೂಪಗಳ ಸ್ವಭಾವ ಹಾಗೂ ತ್ರೈಸ್ವರ್ಯದ ವಿಚಾರ— ಇವು ಒಂದೊಂದೂ ಪರಿಪೂರ್ಣ ವಿಷಯಗಳೇ ಆಗಿ ಮೂಡಿವೆ." ಹಾವನೂರರ ಈ ಮಾತನ್ನು ಅನುಮೋದಿಸಿ ಎತ್ತಿಹೇಳುವುದರೊಂದಿಗೆಯೇ ಅವರು ಮುಂದುವರಿಸಿ ಹೇಳಿರುವ ಮಾತನ್ನೂ ಅನುಮೋದಿಸಿ ಎತ್ತಿಹೇಳುವುದು ಉಚಿತ ವೆನಿಸುತ್ತದೆ :

"ಇದೇ ಸಂದರ್ಭದಲ್ಲಿ ಸುವಿಖ್ಯಾತ ಛಂದಃಶಾಸ್ತ್ರಜ್ಞ ವೇಲಣಕರರ ಕೆಲವು ಅಭಿಪ್ರಾಯಗಳ (ವೈದಿಕ ಕವಿಗಳಿಗೆ ತಾಳಪ್ರಜ್ಞೆ ಇರಲೇ ಇಲ್ಲ—ಇತ್ಯಾದಿ) ಖಂಡನೆ ಬಂದಿದೆ. ಅದರಂತೆ ಮೊನಿಯರ್ ವಿಲಿಯಮ್ಸ್ ತನ್ನ 'ಇಂಗ್ಲಿಷ್-ಸಂಸ್ಕೃತ ಶಬ್ದಕೋಶ'ದಲ್ಲಿ ರಿದಮ್, ಮೀಟರ್ ಇತ್ಯಾದಿ ಸಂಜ್ಞೆಗಳಿಗೆ ತಪ್ಪು ಅರ್ಥ ಕೊಟ್ಟಿದ್ದರ ಟೀಕೆಯೂ ಇದೆ. ಬೇರೆಯವರ ತಪ್ಪಾದ ಹೇಳಿಕೆ, ತಪ್ಪು ವಿಧಾನಗಳನ್ನು ಎತ್ತಿತೋರುವುದು ಇಂಥ ಗ್ರಂಥಗಳಲ್ಲಿ ಇರಬೇಕಾದ್ದೇ. ಮತ್ತು ತೀ.ನಂ.ಶ್ರೀ. ಅವರ ಹೇಳಿಕೆಯಲ್ಲಿನ ಒಂದೆರಡು ಲೋಪಗಳನ್ನು, ಕಿಟ್ಟೆಲ್ಲರ ಬುದ್ಧಿಪೂರ್ವಕ

ವಾದ ಒಂದು ಪ್ರಮಾದವನ್ನು ಹಾಗೆ ತೋರಿಸಿದ್ದೂ ಇದೆ. ಅದೇ, ವೇಲಣಕರ, ಮೋನಿಯರ್ ವಿಲಿಯಮ್ಸ್ ಇವರ ಕುರಿತಾದ ಆಕ್ಷೇಪಣೆ ತುಸು ಕಟುವಾಯಿತೆಂದು ಕೆಲವರಿಗೆ ಅನಿಸಲೂ ಬಹುದು. ಆದರೆ ವೇಲಣಕರರು ಛಂದಶ್ಶಾಸ್ತ್ರ ವಿಚಾರದಲ್ಲಿ ಒಬ್ಬ 'ಅಥಾರಿಟಿ' ಎಂದು ನಾವು ತಿಳಿಯುತ್ತಿರುವಾಗ, ಅವರು ಆ ರೀತಿಯ ಅಸಂಗತ ಹೇಳಿಕೆ ನೀಡಬಾರದಿತ್ತು – ಎಂಬ ವಿದ್ವದ್ವ್ಯಾಕುಲದಿಂದ ಕಟೂಕ್ತಿ ಬಂದಿರಬೇಕು—ಎಂದುಕೊಂಡಿದ್ದೇನೆ.''

ಹಾವನೂರರ ಇನ್ನೊಂದು ಮಾತೂ ಈ ಸಂದರ್ಭದಲ್ಲಿ ಗಮನಾರ್ಹ :

''ಇನ್ನೊಂದು ಎದ್ದು ಕಾಣುವ ಸಂಗತಿಯೆಂದರೆ, ಇದುವರೆಗೆ ಕನ್ನಡದಲ್ಲಿ ಛಂದಶ್ಶಾಸ್ತ್ರ ವಿವೇಚನೆಮಾಡಿದ ಆಧುನಿಕರು ಯಾರನ್ನೂ ಸೇಡಿಯಾಪು ಅವರು ಉಲ್ಲೇಖಿಸಲು ಅಥವಾ ಆಧರಿಸಲು ಹೋಗಿಲ್ಲ. ಅವರಿಗೆ ಅದರ ಅಗತ್ಯವಾದರೂ ಎಲ್ಲಿದೆ?''

ಸೇಡಿಯಾಪು ಅವರು ಪರಾಮರ್ಶೆ ಮಾಡಿರುವ ಛಂದೋಗ್ರಂಥಗಳ ಕರ್ತರಾದ ಆಧುನಿಕ ವಿದ್ವಾಂಸರಿಗೂ ಅವರಿಗೂ ಮತಭೇದವಿರುವಲ್ಲಿ ಮಾತ್ರ ಅವರು ಆ ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. (ತೀ.ನಂ.ಶ್ರೀ. ಅವರ 'ಸಮಾಲೋಕನ' ಮತ್ತು 'ಕನ್ನಡ ಕೈಪಿಡಿ'ಯಲ್ಲಿ ಕನ್ನಡ ಛಂದಸ್ಸನ್ನು ಕುರಿತು ಬಿ.ಎಂ.ಶ್ರೀ. ಅವರು ಬರೆದಿರುವ ಲೇಖನ—ಇವೆರಡನ್ನು ಮಾತ್ರ ಸೇಡಿಯಾಪು ಅವರು ಪರಿಶೀಲಿಸಿದ್ದಾರೆ. ವೆಂಕಟಾಚಲ ಶಾಸ್ತ್ರೀ, ಡಿ.ಎಸ್. ಕರ್ಕಿ, ವಿ. ಸೀ. ಇವರ ಬರೆಹಗಳು ಮಾನ್ಯ ಲೇಖಕರ ಗಮನಕ್ಕೆ ಬಂದಿಲ್ಲ.) ಒಂದೆರಡು ಅಂಶಗಳಲ್ಲಿಯಾದರೂ ಸ್ಥೂಲವಾಗಿ ಸಹಮತವಿರುವಾಗ ಆಧುನಿಕರ ಅಭಿಪ್ರಾಯಗಳನ್ನು ಉಲ್ಲೇಖಿಸಬೇಕಾಗಿದ್ದಿತೆಂದು ನಮಗೆ ತೋರುತ್ತದೆ. ಉದಾಹರಣೆಗೆ, ಲಯಸ್ವರೂಪದ ಬಗೆಗೆ ತೀ.ನಂ.ಶ್ರೀ. ಹೀಗೆ ಹೇಳಿದ್ದಾರೆ: "ನಿಯತವಾದ ಕಾಲದ ಅಂತರದಲ್ಲಿ ತಾಳಗಳು ಆವರ್ತನೆಯಾಗುವುದಕ್ಕೆ ಲಯ (Rhythm) ಎಂದು ಹೆಸರು. 'ಲಯ'ದ ಅರ್ಥವನ್ನು ಇನ್ನಷ್ಟು ಹಿಗ್ಗಲಿಸಿ, ಸದೃಶಕ್ರಿಯೆಗಳ ಪರಂಪರೆಯಲ್ಲಿ ನಿಯಮಬದ್ಧತೆ ಗೋಚರವಾದಾಗಲೆಲ್ಲ ಅದು ನಿಷ್ಪನ್ನವಾಗುವುದೆಂದು ಹೇಳಬಹುದು." (ಸಮಾಲೋಕನ, ಪು. ೧೮೨). ಲಯದ ಬಗೆಗೆ ಸೇಡಿಯಾಪು ಅವರ ಅಭಿಪ್ರಾಯ : "ಲಯವೆಂದರೆ, ಕ್ರಿಯಾಕಾಲ ಖಂಡಗಳ ಅನ್ಯೋನ್ಯ ಸಮತ್ವ. ಆ ಸಮತ್ವವೇ ತಾಳದ ಆಧಾರ; ಆದುದರಿಂದ, ಅದು ತಾಳದ ಅವಿಭಾಜ್ಯವಾದ ಅಂಗ." (ಛಂದೋಗತಿ, ಪು. ೩೧). ಈ ಎರಡೂ ವಾಕ್ಯಗಳಲ್ಲಿ ಮಾತುಗಳು ಬೇರೆಯಾಗಿದ್ದರೂ ಆಶಯ ಒಂದೇ ಆಗಿದೆ. ತೀ.ನಂ.ಶ್ರೀ. ಲಯ = Rhythm ಎಂದೇ ಬಗೆದಿರುವುದು ಸ್ಪಷ್ಟ. ಆದರೆ, ಸೇಡಿಯಾಪು ಅವರು ಈ ಸಮೀಕರಣವನ್ನು ಒಪ್ಪುವುದಿಲ್ಲ. Oxford ಕೋಶದ ಆಧಾರವನ್ನು ಹಿಡಿದು "Rhythm ಎಂದರೆ metrical movement ಎಂದು ಪ್ರೋಕ್ತ"ವಾಗಿರುವುದನ್ನು ಅವಲಂಬಿಸಿ, 'ಛಂದೋವಿಷಯಕವಾದ 'ರಿಧಮ್' ಎಂದರೆ 'ಛಂದೋಗತಿ' ಎಂದಾಯಿತು." "Rhythm ಎಂದರೆ 'ಒಂದು ಬಗೆಯ ಗತಿ' "—ಎಂಬ ನಿಲುವಿಗೆ ತಲಪುತ್ತಾರೆ.

ಸೇಡಿಯಾಪು ಅವರ ನಿಶ್ಚಿತದ ಮೇರೆಗೆ, "Rhythm ಎಂಬ ಪದದ ಅರ್ಥದೊಳಗೆ 'ಲಯ'ವೂ ಸೇರಬಹುದಾದರೂ 'ಲಯ' ಎಂಬುದರೊಳಗೆ rhythm ಅಡಕವಾಗಲಾರದು" (ಪು. 49). ತೀ.ನಂ.ಶ್ರೀ. ಅವರ ಪ್ರಕಾರ Rhythm = ಲಯ ಆದರೆ, ಸೇಡಿಯಾಪು ಅವರ ಪ್ರಕಾರ Rhythm = ಗತಿ. ಇದು ಸೇಡಿಯಾಪು ಅವರು ಮೊತ್ತಮೊದಲಿಗೆ ಗೊತ್ತುಹಚ್ಚಿ ಪ್ರತಿಪಾದಿಸಿರುವ ಈ ಎರಡು ಪರಿಕಲ್ಪನೆಗಳ ನಡುವಣ ಮೂಲಭೂತ ವ್ಯತ್ಯಾಸ, ಎಂದು ಭಾವಿಸಬಹುದೆ? ಕರ್ಕಿಯವರು ಈ ವ್ಯತ್ಯಾಸವನ್ನು ಗುರುತಿಸಿದ್ದಾರೆ ಎಂದು ನನಗೆ ತೋರುತ್ತದೆ. ಅವರು ಹೀಗೆ ಹೇಳಿದ್ದಾರೆ: "ಲಯದಿಂದ ಹಾಡಿಗೆ ಧಾಟಿಯುಂಟಾಗುವುದಾದರೂ ಲಯವೇ ಧಾಟಿಯಲ್ಲ. ಒಂದು ಪದ್ಯದಲ್ಲಿರುವ ಲಯವು ಒಂದೇ ವಿಶಿಷ್ಟವಾದ ಲಯ. ಆದರೆ ಆ ಪದ್ಯವನ್ನು ಹಲವು ರೀತಿಗಳಲ್ಲಿ ಹೇಳಬಹುದಾಗಿದೆ. ತ್ರಿಪದಿಯನ್ನು ನಾಲ್ಕಾರು ರೀತಿಗಳಲ್ಲಿ ಹೇಳುವುದನ್ನು ನಾವು ಕೇಳಿದ್ದೇವೆ." (ಕ. ಛಂದೋವಿಕಾಸ, ಪು. ೯).[3] ಕರ್ಕಿ ಅವರ ದೃಷ್ಟಿಯಲ್ಲಿ 'ಧಾಟಿ' ಎಂದರೆ 'ಗತಿ'ಯೆ. ಇಲ್ಲಿ ಮುಖ್ಯವಾಗಿ ಉದ್ಭವಿಸುವ ಪ್ರಶ್ನೆ ಏನೆಂದರೆ, ಲಯವು ಗತಿಯನ್ನು ನಿಯಂತ್ರಿಸುತ್ತದೆಯೆ, ಇಲ್ಲವೆ ಗತಿ ಲಯವನ್ನು ನಿಯಂತ್ರಿಸುತ್ತದೆಯೇ ಎನ್ನುವುದು. ಬೇರೆಯ ಮಾತಿನಲ್ಲಿ ಹೇಳುವುದಾದರೆ, ಲಯದ ವ್ಯಾಪ್ತಿ ಹಿರಿದೆ, ಗತಿಯ ವ್ಯಾಪ್ತಿ ಹಿರಿದೆ, ಎನ್ನುವುದು ಪ್ರಶ್ನೆ. ಈ ಪ್ರಶ್ನೆಗೆ ಉತ್ತರಿಸುವಾಗ, ಸೇಡಿಯಾಪು ಅವರ ಅಭಿಪ್ರಾಯವನ್ನು ಗಮನಿಸಬೇಕಾಗುತ್ತದೆ. 'ಲಯ' ಎಂದರೆ ವಸ್ತುತಃ "ಒಂದು ಬಗೆಯ ನಿಲುಗಡೆ" ಎಂದೂ Rhythm ಎಂದರೆ "ಒಂದು ಬಗೆಯ ಗತಿ" ಎಂದೂ, ಇವು ಪರಸ್ಪರ ವಿರೋಧಿಗಳು ಎಂದೂ ನಿರ್ಣಯಿಸಿ, ಅವರು ಹೀಗೆ ಹೇಳಿದ್ದಾರೆ:

> "'ಗತಿ' ಮತ್ತು 'ನಿಲುಗಡೆ' ಎಂಬವು ತಾತ್ತ್ವಿಕವಾಗಿ ಒಂದು ಇನ್ನೊಂದರ ಅಭಾವರೂಪವಾಗಿದ್ದರೂ – ಪ್ರಸ್ತುತ ವಿಷಯದಲ್ಲಿ ಅವೆರಡರೊಳಗೆ ಅಪರಿಹಾರ್ಯವಾದೊಂದು ಸಂಬಂಧವಿರುತ್ತದೆ. ಅದು ಹೇಗೆಂದರೆ: ಛಂದೋಗತಿ ಎಂಬುದು ಯಂತ್ರವಾಹನದ ಗತಿಯಂತೆ ಏಕಾಕಾರವಾದ ಅಖಂಡಗತಿಯಲ್ಲ; ಅದು ನಮ್ಮ ಕಾಲಿನ ನಡಿಗೆಯಂತೆ ಸಖಂಡಗತಿ: ಅದಕ್ಕೂ 'ಹಜ್ಜೆ'ಗಳಿವೆ. ಪ್ರತಿಯೊಂದು ಹಜ್ಜೆಗೂ ಒಂದು 'ನಿಲುಗಡೆ' ಇದೆ. ಆ ನಿಲುಗಡೆಗಳು ಸಮಕಾಲಿಕವಾಗಿದ್ದರೆ ಆ 'ಗತಿ' ಲಯಾನ್ವಿತವೆನಿಸುವುದೆಂದು

---

3. ತ್ರಿಪದಿಯನ್ನು ತಂತಮ್ಮ ಇಚ್ಛೆಯಂತೆ, ತಮ್ಮ ನಾಲಗೆ ನುಡಿದಂತೆ, ನಾಲ್ಕಾರಲ್ಲ ಎಂಟು ಹತ್ತು ರೀತಿಯಲ್ಲೂ ಹೇಳಬಹುದು, ಹಾಡಬಹುದು. ತಾಳ ದೃಷ್ಟಿಯಿಂದ ತ್ರಿಪದಿಯನ್ನು ಮುಖ್ಯವಾಗಿ ಮಿಶ್ರಛಾಪು, ಆದಿ, ರೂಪಕಗಳಲ್ಲಿ ಹೇಳಬಹುದು (ಮತ್ತು, ಸಾಂಗತ್ಯವನ್ನು ಕೂಡ). ಛಂದಶ್ಶಾಸ್ತ್ರರೀತ್ಯಾ ತ್ರಿಪದಿ ಎರಡು ಬಗೆಯ ಧಾಟಿಗೆ ಒದಗಿ ಬರುತ್ತದೆ: ಒಂದು (ಪಂಚ) ಮಾತ್ರಾಲಯ, ಇನ್ನೊಂದು ತ್ರಿಮೂರ್ತಿಗಣಗಳ ಅಂಶಲಯ. ಪಂಚಮಾತ್ರಾ ಲಯಕ್ಕೆ ತಿರುಗಿದಾಗ ಅದರ ತಾಳಲಯ ಝಂಪೆ ಆಗುತ್ತದೆ.

ನಮ್ಮ ಶಾಸ್ತ್ರಗಳು ಹೇಳುತ್ತವೆ. ಹಾಗೆ ಆಗಬೇಕಾದರೆ ಅವುಗಳ 'ಅಂತರ', ಎಂದರೆ ಆ ನಿಲುಗಡೆಗಳ ಮಧ್ಯದ ಉಚ್ಚಾರ ಕಾಲಾವಕಾಶ ಒಂದಕ್ಕೊಂದು ಸಮಾನವಾಗಿರಬೇಕಾಗುತ್ತದೆ. ಅವಕಾಶಗಳು ಅಸಮಾನವಾಗಿದ್ದರೆ ಆ ಗತಿ ಲಯರಹಿತವಾಗುತ್ತದೆ. ಹೀಗೆ, ಛಂದೋಗತಿಯು ಸಮಾನಾಂತರ ಗತಿ (=ಸಮಗತಿ) ಎಂದೂ, ಅಸಮಾನಾಂತರ ಗತಿ (=ವಿಷಮಗತಿ) ಎಂದೂ ದ್ವಿವಿಧವಾಗಿದೆ. ಈ ಎರಡೂ ಗತಿಯ ಛಂದೋಬಂಧಗಳು ನಮ್ಮ ಛಂದ ಶ್ಶಾಸ್ತ್ರಗ್ರಂಥಗಳಲ್ಲಿ ನಿರೂಪಿಸಲ್ಪಟ್ಟಿವೆ. ಮಾತ್ರಾಸಮಕ, ಷಟ್ಪದಿ ಮೊದಲಾದ ಎಲ್ಲಾ 'ಮಾತ್ರಾಬಂಧ'ಗಳೂ; ಭುಜಂಗಪ್ರಯಾತ, ಲಲಿತ ಪದ, ರಥೋದ್ಧತಾ ಇತ್ಯಾದಿ (ಹಾಗೂ ಹಿಂದೆ ಉದಾಹರಿಸಲಾದ ಲಲಿತ, ಲಯ ಗ್ರಾಹಿ ಇತ್ಯಾದಿ) 'ವೃತ್ತ'ಗಳೂ ಸಮಗತಿಬಂಧಗಳಾಗಿದ್ದು 'ಲಯಾನ್ವಿತ' ವಾಗಿವೆ. ಶಾರ್ದೂಲ ವಿಕ್ರೀಡಿತ, ಚಂಪಕಮಾಲಾ, ಸ್ರಗ್ಧರಾ, ಮಂದಾಕ್ರಾಂತಾ, ಮಾಲಿನಿ, ಶಾಲಿನಿ ಇತ್ಯಾದಿ ವೃತ್ತಗಳೂ ಅನುಷ್ಟುಪ್ ಶ್ಲೋಕ, ಉಪಜಾತಿ, ಕರಂಬಜಾತಿ ಇತ್ಯಾದಿ 'ಅಕ್ಷರ ಜಾತಿ'ಗಳೂ ವಿಷಮ ಗತಿ ಬಂಧಗಳಾಗಿದ್ದು ಲಯರಹಿತವಾಗಿವೆ."

ಮೇಲ್ಕಂಡ ಅವತರಣಿಕೆಯ ಹೇಳಿಕೆಯಲ್ಲಿ, ಷಟ್ಪದಿ ಮುಂತಾದ ಮಾತ್ರಾ ಬಂಧಗಳು 'ಸಮಗತಿ'ಯವು ಎಂದಿರುವುದು ಸರಿಯೆ ಎಂಬ ಪ್ರಶ್ನೆ ವಿಚಾರಾರ್ಹ ವಾಗಿ ಕಾಣುತ್ತದೆ. ಈ 'ಸಮಗತಿ' ಎಂದರೆ ತಾಳನಿಬದ್ಧ ಅಥವಾ ತಾಳಲಯಾನ್ವಿತ ಎಂದು ತಾನೆ ಅರ್ಥ? ಯಾವುದೇ ಮಾತ್ರಾಬಂಧವನ್ನು ಸಮಗತಿ ಎಂದರೆ ತಾಳ ಬದ್ಧವಾಗಿ ಎಲ್ಲ ಸಂದರ್ಭಗಳಲ್ಲಿಯೂ ಪಠಿಸಿದ್ದೇ ಆದರೆ 'ಛಂದೋಗತಿ'ಗೆ ಗೌರವ ಸಲ್ಲಿಸಿ ಬಂಧದ ಕಾವ್ಯ-ಶ್ರವ್ಯತ್ವಕ್ಕೆ— ಎಂದರೆ, ಅದರ ಅರ್ಥಗೌರವ, ಶಬ್ದ ಶ್ರವಣ ಸುಭಗತೆ (ಎಂದರೆ ಸುಶ್ರಾವ್ಯತೆ), ಭಾವರಮಣೀಯತೆ, ರಸಪ್ರತೀತಿ, ಇವಕ್ಕೆ ತಿಲಾಂಜಲಿ ಕೊಟ್ಟಂತೆಯೆ ಆಗುತ್ತದೆ. ಮಾತ್ರಾಬಂಧವಾಗಲಿ ವರ್ಣವೃತ್ತವಾಗಲಿ ಪದ್ಯವಾಚನದ ಗತಿ (ಎಂದರೆ, ನಡೆ, ಧಾಟಿ) ಮತ್ತು ಅದರ ನಿಲುಗಡೆಗಳು ಪದ್ಯದ ಅರ್ಥಾನುಗವಾಗಿರಬೇಕೇ ಹೊರತು 'ಲಯ' (= ತಾಳ) ವನ್ನು ಅನುಸರಿಸುವವು ಆಗಿರಕೂಡದು. ಲಯಾನುಸಾರಿ ಪದ್ಯವಾಚನ ಸು-ಗಮವಾಗಿರದು. ಗ್ರಂಥಾಂತ್ಯ ದಲ್ಲಿ ಮಾನ್ಯ ಲೇಖಕರು ಉದಾಹರಿಸಿರುವ ಪದ್ಯದ 'ಬಂಧಲಯ' (=ಗತಿ) ವನ್ನೂ 'ಪಾಠ್ಯಗತಿ'ಯನ್ನೂ ಬೇರ್ಪಡಿಸಿ ತೋರಿಸಲು ಪ್ರಯತ್ನಿಸುತ್ತೇನೆ:

ತೆಗೆದು।ದಗ್ಗದ । ತಂಪು, । ನದಿಸರ-।
ಸಿಗಳ । ತಡಿಯಲಿ । ಹಜ್ಜೆ।ಯಾಡುದು, ।
ಹಗಲ । ಹಾವಸೆ । ಪರಿದು।ದೋರಿ।ಸಿದುದು । ಹಿಮ ಜಲವ ॥

ಸೆಗಳಿ।ಕೆಗಳೇ।ರಿದವು ।, ನೋಟಕೆ ।
ಸೊಗಸಿ।ದವು ನೆಳ।ಲುಗಳು, । ತಂಗಾ-।
ಳಿಗೆ ವಿ।ಹಾರಿಸಿ,। ಮೆಯ್ಯ। ತೆತ್ತುದು । ಕೂಡೆ । ಜನನಿಕರ ॥

ನಾಟ್ಯ ಮತ್ತು ಸಂಗೀತ ಶಾಸ್ತ್ರಗಳ ಲಯತತ್ತ್ವವನ್ನು ಛಂದಶ್ಶಾಸ್ತ್ರದಲ್ಲಿ ಉಕ್ತವಾದ ಬಂಧಗಳಿಗೆ ಅನ್ವಯಿಸಿ ಹೇಳುವಾಗ ಮಾತ್ರಾಬಂಧಗಳ ವಿಷಯದಲ್ಲಿ ಗಣಾನುಸಾರಿಯಾದ 'ಲಯ'ವನ್ನೂ ಅರ್ಥಾನುಸಾರಿಯಾದ 'ಗತಿ'ಯನ್ನೂ ಸಮೀಕರಿಸುವುದು ಸರಿಯಲ್ಲ ಎಂದು ತೋರುತ್ತದೆ. ಎಂದರೆ, ಛಂದೋಬಂಧದ 'ಗಣವಾಸ'ವನ್ನು ಅರ್ಥಾನುಸಾರಿಯಾದ ಹಾಗೂ 'ಅರ್ಥಯತಿ'ಗೆ ಒಳಪಟ್ಟ 'ಗತಿ'ಯನ್ನು ಸಮೀಕರಿಸುವುದು ಸಲ್ಲದೆಂದೇ ನನ್ನ ಅಭಿಪ್ರಾಯ. ಗಣಗಳಿಗೆ ಸಂಬಂಧಪಟ್ಟಂತೆ 'ಗತಿ'ಯ ನಿಲುಗಡೆಗಳು ಅಸ್ಫುಟವಾಗಿದ್ದು ಅರ್ಥಾನುಗವಾದ ಯತಿಯಲ್ಲಿ (ಪದ್ಯದಲ್ಲಿ ಅಲ್ಪವಿರಾಮ ಉಪಯೋಗಿಸಿರುವ ಕಡೆಗಳಲ್ಲಿ) ಮಾತ್ರ ಸ್ಫುಟವಾಗಿರುತ್ತದೆ. ಅಡಿಗೆರೆಗಳನ್ನು ಹಾಕಿರುವ ಗಣಗಳ ನಿಲುಗಡೆಗಳನ್ನೂ ಹಾಕಿರದ ಗಣಗಳ ನಿಲುಗಡೆಗಳನ್ನೂ ಹೋಲಿಸಿ ನೋಡಿದಾಗ, ಛಂದೋಗತಿಗೂ ಛಂದೋಲಯಕ್ಕೂ ಇರುವ ಹೊಂದಾಣಿಕೆಯ ಸ್ವರೂಪ ಏನು ಎನ್ನುವುದು ಸ್ಪಷ್ಟವಾಗುತ್ತದೆ. 'ಹಗಲ । ಹಾವಸೆ' ಎನ್ನುವಲ್ಲಿ ಉಚ್ಚಾರಕಾಲ ಖಂಡದ (ಮಿಶ್ರಛಾಪು ತಾಳಲಯದ ಒಂದು ಆವರ್ತದ) ನಿಲುಗಡೆ ಸುವ್ಯಕ್ತವಾಗಿದೆ. 'ಹರಿದು।ದೋಕರಿ' ಎಂಬ ಆವರ್ತಕ್ಕೆ ಉಚ್ಚಾರವನ್ನು ನಿಲ್ಲಿಸಿದರೆ, ಶಬ್ದಾರ್ಥಕ್ಕೆ ಭಂಗ ಬರುತ್ತದೆ. 'ಹರಿದುದೋಕರಿಸಿದುದು' ಎಂಬಲ್ಲಿ ತಾಳಲಯದ ಒಂದೂವರೆ ಆವರ್ತ ಉಚ್ಚಾರ ದೃಷ್ಟಿಯಿಂದ ಏಕ ಖಂಡವಾಗಿದೆ. 'ಛಂದೋಲಯ' ಎನ್ನುವುದು ತಾಳಲಯಕ್ಕಿಂತ ಭಿನ್ನವಾದುದು ಎಂದು ನನ್ನ ಅಭಿಮತ. 'ಗತಿ'ಗೂ ಗಣಗಳ 'ತಾಳಲಯ'ಕ್ಕೂ ಹೊಂದಿಕೆಯಿದ್ದರೂ ಅರ್ಥಾನುಸಾರಿಯಾಗಿ ಉಚ್ಚಾರವಾಗುವ ಮಾತ್ರಾಕಾಲ ಖಂಡವೆ 'ಛಂದೋಲಯ' ಎನ್ನಿಸುತ್ತದೆ. ಹೀಗಿರುತ್ತ. ಛಂದೋಗತಿಯೇ ಬೇರೆ, ಛಂದೋಲಯವೇ ಬೇರೆ ಎನ್ನಬೇಕಾಗುತ್ತದೆ. ಸಮುದ್ರದ ತರಂಗ ಗತಿಯಂತೆ ಛಂದೋಲಯ. ಜೈಮಿನಿ ಭಾರತದ ಈ ಕೆಳಗಿನ ಪದ್ಯದಿಂದ ನನ್ನ ನಿಲವು ಹೆಚ್ಚು ಸ್ಪಷ್ಟವಾಗುವುದೆಂದು ನಂಬಿದ್ದೇನೆ :

ಚಪಲೆ, ಚಂ।ಚಲೆ, ಚಾಟು।ವತಿ, ಚಂಡಿ,। ಛಲವಾದಿ ।
ಕುಪಿತೆ, ಕು।ತ್ಸಿತೆ. ಕುಹಕೆ,। ಕುಜೆ, ಕಷ್ಟೆ,। ಕುಲಗೇಡಿ ।
ಕಪಟಿ, ಕಂ।ಟಕಿ, ಕಟುಕಿ, । ಕಡುದುಷ್ಟೆ । ಕಲಹಾರ್ಥಿ । ಪಿಸುಣೆ, ಪರಾ।ವಶೆ. ಪಾದರಿ ॥
ವಿಫಲೆ, ವಿ।ಹ್ವಲೆ, ವಿಷಮೆ । ವಿರಸೆ, ವಿಪ।ರೀತೆ, ಮಿಗೆ ।
ತಪಿತೆ, ತ।ಸ್ಕರೆ. ತವಕಿ।ತಾಪೆ ತಂದ್ರಿ। ತಾಮಸಿ. ಲೋ-।
ನೃಪ ವನಿತೆ।ಯರ ನಿಜಕೆ । ಸಿಲುಕಿ, ನಿಶ್ಚಯಿಸಿದೊಡೆ । ಬಳಿಕ ಬಳಿಕ ಹಾರದೆ ॥

ಈ ವಾರ್ಧಕ ಷಟ್ಪದಿಯಲ್ಲಿ ಝಂಪೆ ತಾಳ(ಲಯ)ದ ನಡೆ ಅಥವಾ ಗತಿ ಇದೆ. ಆದರೆ, "ನಿಲುಗಡೆಗಳು ಕಟ್ಟುನಿಟ್ಟಾದ ಸಮಕಾಲದಲ್ಲಿ ಗೋಚರಿಸುವ ಹಾಗೆ" ಇವೆ ಎಂದು ಅನ್ನಿಸುವುದಿಲ್ಲ. ಅಲ್ಪವಿರಾಮ ಇರುವಲ್ಲಿ ಅರ್ಥಾನುಸಾರಿಯಾದ ನಿಲುಗಡೆ ಇದೆ. 'ವರಯತಿಗೆ ಭಂಗಮಂ ತಾರದ' ಲಕ್ಷ್ಮೀಶನ ಹೇಳಿಕೆಯಲ್ಲಿಯ 'ವರಯತಿ'ಗೆ ಕನ್ನಡ ಪದ್ಯರಚನೆಗೆ ವಿಶಿಷ್ಟವಾದ 'ಅರ್ಥಯತಿ' ಎಂದೇ ಅರ್ಥಮಾಡಬೇಕಾಗುತ್ತದೆ. 'ವರಯತಿ' ಎಂದರೆ ಶ್ರೇಷ್ಠವಾದ ಯತಿ. ಇಲ್ಲಿ ಬೇರೆ ಯಾವ ಯತಿಯೂ ವಿವಕ್ಷಿತವಲ್ಲ.[4]

'ಲಯ' ಮತ್ತು 'ಗತಿ'ಯ ಬಗೆಗೆ ಶ್ರೀಯುತರ ಸಮರ್ಥವೂ ಶಾಸ್ತ್ರಾಧಾರಿತವೂ ಆದ ವಿಶ್ಲೇಷಣೆ ಒಂದು ಅತಿಶಯವಾದ ಸಾಧನೆ. ಆದರೆ, ಮಾತ್ರಾಬಂಧಗಳು ಸಮಗತಿ ಬಂಧಗಳು, ಲಯಾನ್ವಿತವಾಗಿವೆ ಎಂಬ ಹೇಳಿಕೆ ಮಾತ್ರ ವಿಚಾರಾರ್ಹ. ಲಯಕ್ಕೂ ಗತಿಗೂ ಅಪರಿಹಾರ್ಯವಾದ ಸಂಬಂಧ ಇದೆ ಎಂಬ ಮಾತು ಒಪ್ಪತಕ್ಕದ್ದೆ.

ಆಂಗ್ಲಭಾಷೆಯ ಛಂದಶ್ಶಾಸ್ತ್ರದ Iambic, Trochee, Anapaestic, Dactylic ಎಂಬ ನಾಲ್ಕು ಪ್ರಕಾರದ ಗಣಗಳ ಬಗೆಗೆ ವಿಚಾರ ಮಾಡುತ್ತ, ಆ ಛಂದೋಗತಿಯ ವಿಶಿಷ್ಟಲಕ್ಷಣವಾದ accent ಎಂದರೆ 'ಸ್ವರಭರ' ಎಂಬ ಛಂದಸ್ಸಿನ ಅಂಶ ನಮ್ಮ ಛಂದೋಗತಿಯಲ್ಲಿ ಇಲ್ಲ ಎಂದು ಲೇಖಕರು ಭಾವಿಸಿರುವಂತಿದೆ. ಈ ವಿಚಾರವನ್ನು ಪ್ರಸ್ತಾವಿಸಿರುವ ತೀ.ನಂ.ಶ್ರೀ.ಯವರು ಹೀಗೆ ಹೇಳಿದ್ದಾರೆ: "ಇಂಗ್ಲಿಷಿನಲ್ಲಿರುವ ಹಾಗೆ ಕನ್ನಡದಲ್ಲಿ ಸ್ವರಾಘಾತವು (Accent) ಪ್ರಮುಖವಾಗಿಲ್ಲವೆಂಬುದು ನಿಜ; ಆದರೆ ಕನ್ನಡದಲ್ಲಿ ಅದು ಇಲ್ಲವೇ ಇಲ್ಲವೆಂದು ಹೇಳುವಂತಿಲ್ಲ. ನಮ್ಮಲ್ಲಿ ಸಾಮಾನ್ಯವಾಗಿ ಪದದ ಮೊದಲನೆಯ ಸ್ವರದ ಮೇಲೆ ಆಘಾತವಿರುತ್ತದೆಂದು ಸ್ಥೂಲವಾಗಿ ಹೇಳಬಹುದು. ಪ್ರತ್ಯಯಗಳು ಈ ದೃಷ್ಟಿಯಿಂದ ದುರ್ಬಲ, ಸ್ವರವು ಗುರುವಾಗಿದ್ದರೆ ಮಾತ್ರ, ಪದದಲ್ಲಿ ಯಾವ ಸ್ಥಾನದಲ್ಲಿದ್ದರೂ ಆಘಾತವನ್ನು ತಡೆಯಬಲ್ಲದು." (ಸಮಾಲೋಕನ, ಪು. ೧೯೦). ಧ್ವನಿಶಾಸ್ತ್ರವನ್ನು (Phonetics) ಅಧ್ಯಯನಮಾಡಿದ್ದ ತೀ.ನಂ.ಶ್ರೀ.ಯವರ ಮಾತು ಗಮನಾರ್ಹ. ತೀ.ನಂ.ಶ್ರೀ.ಯವರ ಅಭಿಪ್ರಾಯವನ್ನು ಒಪ್ಪುವುದಾದರೆ, ಛಂದೋಗತಿಯಲ್ಲಿ ಕಾಲಮಾನದ

---

4. "ತಾಳಬೇಕು। ತಕ್ಕ। ಮೇಳ ಬೇಕು॥ ಯತಿ ಪ್ರಾಸವಿರಬೇಕು। ಗತಿಗೆ ನಿಲ್ಲಿಸಬೇಕು" ಎಂಬ ಪುರಂದರದಾಸರ ಕೀರ್ತನೆಯಲ್ಲಿ 'ಗತಿ' ಶಬ್ದಪ್ರಯೋಗ ಗಮನಾರ್ಹ. ಇಲ್ಲಿ 'ಗತಿ' ಶಬ್ದದ ಅರ್ಥ ಏನು ಎನ್ನುವುದು ಸ್ಪಷ್ಟವಾಗುವುದಿಲ್ಲ. ಇದು ಛಂದೋಗತಿಯಂತೂ ಅಲ್ಲ. ತಾಳಲಯದ ನಿಲುಗಡೆಗೆ 'ಗತಿ' ಎಂದಿರಬಹುದು ದಾಸರು; ಚರಣಾಂತ್ಯದ ನಿಲುಗಡೆ ಯತಿ ಎಂದು ತೋರುತ್ತದೆ, ದಾಸರ ದೃಷ್ಟಿಯಲ್ಲಿ.

ಜೊತೆಗೆ ಅಕ್ಷರೋಚ್ಚಾರದ ಆಘಾತ ಅಥವಾ ಏರಿಕೆಯೂ ಒಂದು ಪ್ರಮುಖ ಗುಣಲಕ್ಷಣವಾಗುತ್ತದೆ. ಮೇಲೆ ಉದಾಹರಿಸಿರುವ ಪದ್ಯದ ಮೊದಲ ಸಾಲಿನಲ್ಲಿ ಛಂದೋಗತಿಯ ನಿಲುಗಡೆಗಳನ್ನೂ ಸ್ವರಾಘಾತಗಳನ್ನೂ ಈ ಕೆಳಗಿನಂತೆ ತೋರಿಸಬಹುದು :

ಚಪಲೆ, ಚಂ।ಚಲೆ, ಚಾಟು।ವತಿ, ಚಂಡಿ, । ಛಲವಾದಿ.

ಯಾವುದೇ ಷಟ್ಪದಿಯಲ್ಲಿ ಮೇಲೆ ಸೂಚಿಸಿರುವಂತೆ ಆಂಗ್ಲಭಾಷೆಯಲ್ಲಿಯಷ್ಟು ಸುಸ್ಪಷ್ಟವಲ್ಲದಿದ್ದರೂ ಅಸ್ಪಷ್ಟಗೋಚರವಾದ 'ಸ್ವರಭಾರ' ಮತ್ತು ಅರ್ಥಾನುಸಾರಿಯಾದ ಯತಿ—ಇವು ಛಂದೋಗತಿಯನ್ನು (=ಪಠನಕ್ರಮವನ್ನು) ಉನ್ಮೀಲನ ಮಾಡುತ್ತವೆ. ಈ 'ಗತಿ' ಓದುಗನ ಅನುಭವಕ್ಕೆ ಬರತಕ್ಕುದು ; ಇಲ್ಲವೆ ಗಟ್ಟಿಯಾಗಿ ಓದಿತೋರಿಸಿದಾಗ ಓದುಗನ ಹಾಗೂ ಕೇಳುಗನ ಅನುಭವಕ್ಕೆ ಬರತಕ್ಕದ್ದು.

ಛಂದಶ್ಶಾಸ್ತ್ರದಲ್ಲಿ 'ಲಯ'ಭಿನ್ನವಾದ **ಛಂದೋಗತಿ** ಎಂಬ ಒಂದು ಅಂಶ ಉಂಟು ಎಂಬ ಮಹತ್ತ್ವದ ವಿಚಾರವನ್ನು ಶೋಧಮಾಡಿದ ಮಾನ್ಯ ಲೇಖಕರ ಪ್ರಯತ್ನಪಟುತ್ವ ಕೇವಲ ಅಭಿನಂದನೀಯ ಎಂಬ ಬಗೆಗೆ ಭಿನ್ನಾಭಿಪ್ರಾಯ ಇರಬೇಕಾಗಿಲ್ಲ. ಇವೆರಡರ ಸಂಬಂಧದ ಬಗೆಗೆ ಮಾತ್ರ ಅವರ ನಿಲುವಿಗೂ ನನ್ನ ನಿಲುವಿಗೂ ಇರುವ ದೃಷ್ಟಿಭೇದವನ್ನು ವಿದ್ವಾಂಸರು ವಿಚಾರವಿಮರ್ಶೆಮಾಡಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬಹುದಾಗಿದೆ.

ಮೇಲಿನ ವಿಚಾರ ವಿಮರ್ಶೆ ಮೊದಲ ಮೂರು ಪರಿಚ್ಛೇದಗಳಿಗೆ ಸಂಬಂಧಪಟ್ಟದ್ದು. "ಛಂದಸ್ ಮತ್ತು ಗತಿ—ಛಂದಃಪದಾರ್ಥ ವಿವೇಚನೆ" ನಾಲ್ಕನೆಯ ಪರಿಚ್ಛೇದದ ವಿಷಯ. ಛಂದಸ್ ಎಂಬ ಶಬ್ದಕ್ಕೆ ಪ್ರಾಚೀನ ವಿದ್ವಾಂಸರು ಹೇಳಿರುವ ಬೇರೆ ಬೇರೆ ಅರ್ಥಗಳನ್ನೂ ಶಬ್ದದ ನಿಷ್ಪತ್ತಿಯನ್ನೂ ಕೂಲಂಕಷವಾಗಿ, ಸಮಗ್ರವಾಗಿ ಪರಿಚಯ ಮಾಡಿಕೊಟ್ಟು, ಛಂದಸ್ ಶಬ್ದಾರ್ಥದ ಬಗೆಗೆ ಭಾರತ ಜಯಕೀರ್ತಿಗಳ ಅಭಿಪ್ರಾಯ ಒಂದೇ ಆಗಿದೆ ಎಂದು ಹೇಳಿ, ಅದನ್ನು ಸ್ವೀಕರಿಸಿ, "ತಾತ್ತ್ವಿಕವಾಗಿ...'ಛಂದಸ್' ಎಂಬುದು ಗುರು ಲಘುಗಳ 'ವಿನ್ಯಾಸ'. ಇದು ಸಮಸ್ತ ವಾಙ್ಮಯಕ್ಕೆ ಅನ್ವಯಿಸುವ, ಎಂದರೆ ಪದ್ಯದಲ್ಲಿಯೂ ಗದ್ಯದಲ್ಲಿಯೂ ಅರ್ಥಾತ್ ಸಕಲ ಶಬ್ದಗಳಲ್ಲಿ ಇರುವ ಒಂದು ಗುಣ ಅಥವಾ ಲಕ್ಷಣ"[5] ಎಂದು ಛಂದಸ್ ಶಬ್ದಾರ್ಥದ ನಿಜವಾದ ವ್ಯಾಪ್ತಿಯನ್ನು ತಿಳಿಸಿ ; "ಛಂದಸ್ ಎಂಬುದು 'ನಿಬದ್ಧ'ವೆಂದೂ 'ಅನಿಬದ್ಧ'ವೆಂದೂ ಎರಡು ವಿಧವಾಗಿದೆ. ಛಂದಸ್ಸಿನ ನಿಬದ್ಧರೂಪವೇ

---

5. ಆಧುನಿಕ ಪಾಶ್ಚಾತ್ಯ ಛಂದಶ್ಶಾಸ್ತ್ರ ವಿವೇಚನೆಯಲ್ಲಿ Prose Rhythm Speech Rhythm ಎಂಬ ಶಬ್ದಗಳ ಬಳಕೆಯನ್ನೂ 'ಪದ್ಯಗಂಧಿ ಗದ್ಯ' ಎಂದು ನಾವು ಹೇಳುವುದನ್ನೂ ಈ ಸಂದರ್ಭದಲ್ಲಿ ನೆನೆಯಬಹುದು.

'ಪದ್ಯ'; ಛಂದಸ್ಸಿನ ಅನಿಬದ್ಧ ರೂಪವೇ 'ಗದ್ಯ'" ಎಂಬ ಸುಗ್ರಾಹ್ಯವಾದ ತೀರ್ಮಾನಕ್ಕೆ ಬಂದಿದ್ದಾರೆ ಲೇಖಕರು.

ನಾಲ್ಕನೆಯ ಪರಿಚ್ಛೇದದಲ್ಲಿ 'ಛಂದಸ್ ಗುರು ಲಘು ವಿನ್ಯಾಸ' ಎಂದು ಲೇಖಕರು ತಿಳಿಸಿರುವರಷ್ಟೆ; ಐದನೆಯ ಪರಿಚ್ಛೇದದಲ್ಲಿ 'ಗತಿ' ಭೇದಗಳನ್ನು ವಿವರಿಸಿದ್ದಾರೆ. ಗುರು ಲಘುಗಳು 'ಛಂದೋದ್ರವ್ಯ' (=ಛಂದೋವಿನ್ಯಾಸದ ಘಟಕದ್ರವ್ಯ) ಎಂದು ಸರಿಯಾಗಿಯೆ ನಿರ್ಧರಿಸಿರುವ ಸಂದರ್ಭದಲ್ಲಿ, ಅಕ್ಷರಗಳನ್ನು 'ಶಬ್ದದ್ರವ್ಯ' ಎಂದು ಹೇಳಿ, ತಮ್ಮ ಹೇಳಿಕೆಗೆ 'ಶಬ್ದಮಣಿದರ್ಪಣ'ದ ಎರಡು ಸೂತ್ರಗಳನ್ನು (೯, ೪೪) ಆಧಾರವಾಗಿ ಅಡಿಟಿಪ್ಪಣಿಯಲ್ಲಿ ಉದ್ಧರಿಸಿಕೊಟ್ಟಿದ್ದಾರೆ.[6]

"ನಮ್ಮನ್ನು ಸೆಳೆಯಬಲ್ಲ" (ಎಂದರೆ ಅಸಾಮಾನ್ಯತೆಯ ಕಾರಣದಿಂದ ಆಕರ್ಷಕವಾಗಿರುವ) "ಛಂದಸ್ಸರಣಿಯೇ 'ಗತಿ' ಎಂದು ಕರೆಯಲ್ಪಡುವುದಾಗಿದೆ" ಎಂದು ಹೇಳಿ, ಶಾರ್ಙ್ಗದೇವನು ತನ್ನ 'ಸಂಗೀತರತ್ನಾಕರ'ದಲ್ಲಿ ಮಾಡಿರುವ ಗದ್ಯಗತಿ ಭೇದಗಳನ್ನು ಗಮನಿಸಿ, "ಒಂದು ವ್ಯವಸ್ಥೆಗೆ ಒಳಪಟ್ಟ, ಅತ ಏವ ಆಕರ್ಷಕವಾದ, ಗುರು ಲಘು ಯೋಜನೆಯ ಪರಿಣಾಮವೇ ಗತಿ ಎಂಬುದು ಪೂರ್ವಾಚಾರ್ಯರ ಮತವಾಗಿತ್ತು" ಎಂದು ತಿಳಿಸಿ, ಆ ಗತಿಭೇದಗಳನ್ನು ಸವಿವರವಾಗಿ, ಉದಾಹರಣ ಪೂರ್ವಕ, ವ್ಯಾಖ್ಯಾನಿಸಿದ್ದಾರೆ, ಶ್ರೀ ಸೇಡಿಯಾಪು ಅವರು. ಅವು ಯಾವುವೆಂದರೆ: ದ್ರುತಗತಿ, ವಿಲಂಬಿತಗತಿ, ಮಧ್ಯಗತಿ, ದ್ರುತಮಧ್ಯಗತಿ, ದ್ರುತವಿಲಂಬಿತಗತಿ, ಮಧ್ಯವಿಲಂಬಿತಗತಿ. ಈ ಗತಿಭೇದಗಳು ಸಂಪೂರ್ಣವಾಗಿ ಸಂಗೀತಪ್ರಪಂಚಕ್ಕೆ ಸೇರಿದವು, ಸಂಕುಚಿತ ವ್ಯಾಪ್ತಿಯುಳ್ಳ ಅವು ಒಂದು ಪಾರಿಭಾಷಿಕ ಸಂಜ್ಞೆ, ಎಂಬುದನ್ನು ಮರೆಯಬಾರದು. ಇದನ್ನು ನಮ್ಮ ಗಮನಕ್ಕೆ ತರಲು ಶ್ರೀಯುತರಾದರೂ ಮರೆತಿಲ್ಲವೆಂಬುದು ಗಮನಾರ್ಹ. ಈ ಸಂಬಂಧದ ಅಡಿಟಿಪ್ಪಣಿ (35, ಪು. ೬೧) ಯಲ್ಲಿ, "ಇಲ್ಲಿ ಪ್ರೋಕ್ತವಾದ ದ್ರುತ ವಿಲಂಬಿತಾದಿಗಳು ಛಂದಸ್ತತ್ತ್ವಕ್ಕೆ ನೇರವಾಗಿ ಅನ್ವಯಿಸುವವುಗಳು. ಈ ಗತಿಭೇದಗಳು ಗದ್ಯವನ್ನನುಲಕ್ಷಿಸಿ ಹೇಳಲ್ಪಟ್ಟವುಗಳಾದರೂ, ಇವು ಪದ್ಯಕ್ಕೆ ಬಹಿರ್ಭೂತವಾದವುಗಳಲ್ಲ. ಪರೀಕ್ಷಿಸಿ ನೋಡಿದರೆ ಇಲ್ಲಿ ಪ್ರೋಕ್ತವಾದ ಎಲ್ಲ ಗತಿಭೇದಗಳನ್ನು ಪದ್ಯಗಳಲ್ಲಿಯೂ ಕಾಣಬಹುದು" ಎಂದು ಹೇಳಿ, ಆರು ಗತಿಭೇದಗಳಿಗೂ ಗುರುಲಘು ಪ್ರಸ್ತಾರಸಮೇತ ಉದಾಹರಣೆಗಳನ್ನು ಕೊಟ್ಟಿದ್ದಾರೆ. 'ದ್ರುತಗತಿ'ಗೆ ಉದಾಹರಣೆ:

UUUUUU UUUU UUUU –
ಸು ರ ಪು ರ ಗ ಣ ಮೊ ಸೆ ದಿ ರೆ ಜ ಲ ನಿ ಧಿ ಯೊ ಳ್ ॥ (ಛಂದೋಂಬುಧಿ)

---

6. ನನ್ನ ಅಲ್ಪಮತಿಗೆ ತೋರುವಂತೆ, ಕೇಶಿರಾಜನ ಸೂತ್ರದಲ್ಲಿ 'ಶಬ್ದ'ದ (ಪದದ) 'ದ್ರವ್ಯ' ಎನ್ನುವುದು 'ನಾದ'ವನ್ನು ಕುರಿತುದಾಗಿದೆ. ಅಕ್ಷರಗಳು (ಅಥವಾ ವರ್ಣಗಳು) ಶಬ್ದದ ಘಟಕಗಳು.

ಈ ಷಡ್ವಿಧ 'ಛಂದೋಗತಿ ಭೇದ'ಗಳನ್ನು ಸಂಗೀತ ಶಾಸ್ತ್ರ ಗ್ರಂಥಗಳಲ್ಲಿ ಹೇಳಿರುವ ಉಚ್ಚಾರವೇಗ ಭೇದಗಳಾದ ದ್ರುತ-ಮಧ್ಯ-ವಿಲಂಬಿತ ಎಂಬ ಮೂರು ಲಯಭೇದಗಳೆಂದು ಭ್ರಮಿಸಕೂಡದೆಂಬ ಶ್ರೀಯುತರ ಎಚ್ಚರಿಕೆಯ ಮಾತು ಅವರ ಛಂದೋಗತಿ ಪ್ರಜ್ಞೆ ಮತ್ತು ವಿವೇಕಗಳನ್ನು ಪ್ರತಿಬಿಂಬಿಸುತ್ತದೆ.

ಈ ಪರಿಚ್ಛೇದದಲ್ಲಿಯೇ ಶಾರ್ಙ್ಗದೇವಪ್ರೋಕ್ತ ದ್ರುತವಿಲಂಬಿತಾದಿ ಷಡ್ವಿಧ ಗತಿಗಳ ಸೂಕ್ಷ್ಮಗಳನ್ನು ವಿವರಿಸಿದ ತರುವಾಯ, ಪಿಂಗಳ ಛಂದಶ್ಶಾಸ್ತ್ರದ ಪಂಚಮಾಧ್ಯಾಯದ ಆರಂಭದ ಒಂಬತ್ತು ಸೂತ್ರಗಳಲ್ಲಿ 'ಗ್ಲಿತಿ ಸಮಾನೀ', 'ಲ್ಗಿತಿ ಪ್ರಮಾಣೀ', 'ವಿತಾನಮನ್ಯತ್' ಎಂಬೀ ಮೂರು ಸೂತ್ರಗಳು 'ವೃತ್ತ'ಗಳ ಗತಿಯ ಕುರಿತಾಗಿಯೇ ಹೇಳಲ್ಪಟ್ಟವುಗಳೆಂಬ ಅಂಶವನ್ನು ಗುರುತಿಸಿರುವುದು ಒಂದು ಮುಖ್ಯ ಶೋಧ ವೆಂದೇ ಹೇಳಬಹುದು. ಇವುಗಳ ಲಕ್ಷಣವನ್ನು ಶ್ರೀಯುತರು ಗೊತ್ತುಹಚ್ಚಿ ವಿವರಿಸಿದ್ದಾರೆ. ಸಮಾನೀ ಪ್ರಮಾಣೀಗಳು ಸತಾನಗಳೆಂದು ಹೇಳಿ, ಗಾಲ, ಗಾಲ.... (– ◡, – ◡) ಎಂದು ಏಕಪ್ರಕಾರವಾಗಿ (ಸತಾನವಾಗಿ) ಸಾಗುವ ಛಂದೋರೂಪವು ಸಮಾನೀ ಎಂದೂ ಲಗಂ, ಲಗಂ (◡ –, ◡ –) ಎಂದು ಏಕಪ್ರಕಾರವಾಗಿ ಸಾಗುವದು ಪ್ರಮಾಣೀ ಎಂದೂ ವಿಶದಪಡಿಸಿದ್ದಾರೆ. ಒಂದೆಡೆ ದ್ರುತವಾಗಿದ್ದು, ಇನ್ನೊಂದೆಡೆ ವಿಲಂಬಿತವಾಗಿ ಸಾಗುವುದಾದರೆ ಅದು 'ವಿತಾನ' ಛಂದೋರೂಪ. ತಾನ ಎಂದರೆ ಗತಿಯ ಏಕರೂಪತೆ. "ಪಿಂಗಲೋಕ್ತವಾದ ಸಮಾನೀ ಪ್ರಮಾಣೀ ಎಂಬುವು 'ವೃತ್ತನಾಮ'ಗಳಲ್ಲ; ಅವು ವೃತ್ತಗಳ ಗತಿ ಭೇದ ಸೂಚಕ ಸಂಜ್ಞೆಗಳು" ಎಂಬುದು ಸೇಡಿಯಾಪು ಅವರ ಸುನಿಶ್ಚಿತ. ಪಿಂಗಲೋಕ್ತ ಈ ಗತಿಗಳ ಜೊತೆಗೆ, ಅವನೇ ಹೇಳುವ ಎಂಟು ಅಕ್ಷರಗಣಗಳೊಳಗೆ ಮಗಣದ ಅಥವಾ ನಗಣದ ಪುನರಾವರ್ತನದಿಂದ ಹುಟ್ಟುವ ಗತಿಗಳು ಏಕತಾನಿಗಳಾಗುವುವೆಂದೂ ಉಳಿದ ಆರು ಗಣಗಳ (ಎಂದರೆ, ಯಗಣ, ತಗಣ, ರಗಣ, ಜಗಣ, ಭಗಣ, ಸಗಣ) ಪುನರಾವರ್ತನದಿಂದ ಹುಟ್ಟುವ ಗತಿಗಳನ್ನು 'ದಂಡಕ ಗತಿ'ಗಳೆಂದೂ ಕರೆಯಬಹುದೆಂದೂ ಅವರು ಸೂಚಿಸುತ್ತಾರೆ. ಮೂರಕ್ಷರಗಳಿಗಿಂತ ಅಧಿಕಾಕ್ಷರದ ಛಂದಃಖಂಡದ ಪುನರಾವರ್ತನವಿರುವಲ್ಲಿ ಅದನ್ನು 'ಅತಿದಂಡಕಗತಿ' ಎಂದು ಕರೆಯಬಹುದು ಎನ್ನುತ್ತಾರೆ. ಈ ಎಲ್ಲ ವಿವರವನ್ನೂ ಶಾಸ್ತ್ರೀಯವಾಗಿ ಕ್ರೋಢೀಕರಣ ಮಾಡಿ, ಛಂದೋಂಬುಧಿ ಮುಂತಾದ ಗ್ರಂಥಗಳಿಂದ ಉದಾಹರಣೆಗಳನ್ನು ನೀಡಿ, ತಮ್ಮ ಸಿದ್ಧಾಂತವನ್ನು ಯಶಸ್ವಿಯಾಗಿ ನಿದರ್ಶನಗೊಳಿಸಿದ್ದಾರೆ. ಒಂದು ಉದಾಹರಣೆ— 'ದಂಡಕಗತಿ'ಯಲ್ಲಿ 'ಯಗಣ' ಗತಿಗೆ ('ಛಂದೋಂಬುಧಿ'ಯಿಂದ ಆಯ್ದ 'ಭುಜಂಗ ಪ್ರಯಾತ' ವೃತ್ತ) :

◡ – – ◡ – – ◡ – – ◡ – –
"ಕು ಶಂ ವಾ । ಧಿ ರ್ ಪ ಯಾ ರ್ । ಯು ಮು ಕ್ಕಂ । ವಿ ರಾ ಮಂ,"

ಆ ಬಳಿಕ, ಪಿಂಗಳನು ಹೇಳುವ ‘ಉದ್ಗತಾ’ ಮತ್ತು ‘ತನುಮಧ್ಯಾ’ ವೃತ್ತಗಳ ಗತಿಸೌಂದರ್ಯವನ್ನು ಹಲಾಯುಧನ ವ್ಯಾಖ್ಯಾನದ ಆಶಯವನ್ನು ಗ್ರಹಿಸಿ ಉನ್ಮೀಲನಮಾಡಿ ತೋರಿಸಿರುವುದರಲ್ಲೂ ‘ತನುಮಧ್ಯಾ’ ವೃತ್ತದ ಶೀರ್ಷಿಕೆಯ ಸಾರ್ಥಕತೆಯನ್ನು (‘ತನುಮಧ್ಯಾ’ = ‘ನಡುಸಣ್ಣ’: – – । ∪ ∪ । – –) ಮನಗಾಣಿಸಿರುವುದರಲ್ಲೂ ಪ್ರವರ್ತಿಸಿರುವ ಸೇಡಿಯಾಪು ಅವರ ವಿದ್ವತ್‌ಪ್ರತಿಭೆಯು ಅಸಾಧಾರಣವಾದದ್ದು ; ಅದನ್ನು ಗುರುತಿಸಬಲ್ಲ ಛಂದೋವಿಜ್ಞಾನಿಗಳಿಗೆ ಮಾತ್ರ ವೇದ್ಯವಾಗಬಲ್ಲದ್ದು ಗತಿಸೌಂದರ್ಯ ಸ್ವರೂಪ.

ಆರನೆಯ ಪರಿಚ್ಛೇದದಲ್ಲಿ, ಸಮಗತಿಯ ಪದ್ಯಗಳಲ್ಲಿ “ಪದ್ಯದ ಪಾದಾವಯವಗಳ ಉಚ್ಚಾರಕಾಲ ಪರಿಮಾಣವನ್ನು ಅವಲಂಬಿಸಿದ ದ್ರುತತ್ವಾದಿಗಳು ಆ ಪದ್ಯಗಳ ಗತಿಯಲ್ಲಿ ಸ್ಫುಟವಾಗಿ ವ್ಯಕ್ತವಾಗುತ್ತವೆ” ಎಂದು ಹೇಳಿ, ಅವು ಮೇಲೆ ಪ್ರಸ್ತಾವಿಸಿರುವ ಶಾರ್ಙ್ಗದೇವೋಕ್ತ “ಗತಿಭೇದಗಳಿಗೆ ಬಹಿರ್ಭೂತವಾದವುಗಳೆಂದೂ, ಬೇರೆಯ ಕಾರಣದಿಂದ ಉನ್ಮೀಲಿತವಾಗುವಂಥವುಗಳೆಂದೂ” ಸಿದ್ಧಪಡಿಸಿದ್ದಾರೆ, ಶ್ರೀ ಸೇಡಿಯಾಪು ಅವರು. ಪಠನಕಾಲದಲ್ಲಿ ಎಲ್ಲರ ಅನುಭವಕ್ಕೂ ಬಂದೇ ಬರುವುವಾದರೂ ಈ ಗತಿಭೇದಗಳನ್ನು ಈ ವರೆಗೆ ಯಾವ ಕನ್ನಡ ಛಂದೋಗ್ರಂಥಗಳಲ್ಲಿಯೂ ಉಕ್ತವಾಗದಿರುವುದರಿಂದ ಇವು ಶ್ರೀಯುತರ ಸ್ವೋಪಜ್ಞವಾದ ಹೊಸ ಶೋಧವೆಂದೇ ಹೇಳಬಹುದು. (1) ‘ವಾರ್ಧಕ ಷಟ್ಪದಿ’, ‘ಲಲಿತ ವೃತ್ತ’ (ಸತಾನವಾದ ಸಮವೃತ್ತ) : (2) ‘ಪರಿವರ್ಧಿನಿ ಷಟ್ಪದಿ’, ‘ವನಮಂಜರಿ’ (ಸತಾನವಾದ ಸಮವೃತ್ತ), ‘ಪಣವಕ’ (ವಿತಾನವಾದ ಸಮವೃತ್ತ) ; (3) ‘ಭೋಗಷಟ್ಪದಿ’, ‘ಮಹೋತ್ಸವ’ (ಸತಾನವಾದ ಸಮವೃತ್ತ)—ಈ ಛಂದೋಬಂಧಗಳ ಉದಾಹರಣೆಗಳನ್ನು ಕೊಟ್ಟು, ಈ ವರ್ಗಗಳಲ್ಲಿ ಕಂಡುಬರುವ ಗತಿಭೇದ ಸ್ವರೂಪವನ್ನು ವಿಶ್ಲೇಷಿಸಿದ್ದಾರೆ. ಈ ಮೂರು ಪ್ರಕಾರಗಳ ಛಂದೋಬಂಧಗಳ ಛಂದಃಖಂಡಗಳ ಮಾತ್ರಾಸಂಖ್ಯೆಗಳು ಅನುಕ್ರಮವಾಗಿ 5, 4, 3 ಎಂದಿವೆ :

– ∪ ∪ ∪ – ∪ ∪ ∪ – ∪ – ∪ ∪ ∪ –
ವಾರ್ಧಕ : ಶ್ರೀ ವ ಧು ವಿ । ಸಂ ಬ ಕ ಚ । ಕೋ ರ ಕಂ । ಪೂ ರೆ ಯ ಭ । ಕ್ತಾ....

– ∪ ∪ ∪ ∪ – ∪ ∪ ∪ ∪ ⌒ ∪ –
ಪರಿವರ್ಧಿನಿ : ಬಂ ದಿ ರೆ । ಪ ರಿ ಣಾ । ಮ ವೆ ಮ ನೆ । ಯೊ ಳ ಗ । ಕ್ಕಂ ದಿ ರ....

∪ ∪ ∪ – ∪ – ∪ – ∪
ಭೋಗ : ತಿ ರು ಕ । ನೊ ರ್ವ । ನೂ ರ । ಮುಂ ದೆ ।

ಸಂಗೀತಶಾಸ್ತ್ರದಲ್ಲಿ ಉಕ್ತವಾದ ದ್ರುತ ವಿಲಂಬಿತಾದಿ “ತ್ರಿವಿಧ ಲಯ”ಗಳು ಉಚ್ಚಾರದ ವೇಗಭೇದಗಳ ಪರಿಣಾಮರೂಪವಾಗಿರುವುದರಿಂದ ಸಂಗೀತ ಸಂಪ್ರದಾಯದಲ್ಲಿ ಇವು

ತ್ರಿವಿಧ ವೇಗಗಳು, ಈ ವೇಗಭೇದಗಳು ವಾಸ್ತವಿಕ ಕಾಲಪ್ರಮಾಣಭೇದಗಳು ಎಂಬ ಅಂಶವನ್ನು ತಿಳಿಸಿ, ಛಂದೋಗತ 'ದ್ರುತಾದಿಗತಿಭೇದಗಳು' ವಾಸ್ತವಿಕ ಕಾಲಭೇದ ಗಳಾಗಿರದೆ ಕೇವಲ **'ಪ್ರಾತಿಭಾಸಿಕ'** (illusory) ವೇಗಭೇದಗಳು ಎಂಬ ಹೊಸ ಸಂಗತಿಯನ್ನು ಶ್ರೀಯುತರು ಪ್ರಸ್ಥಾಪಿಸಿದ್ದಾರೆ. ಮುಂದುವರಿದು ಶ್ರೀಯುತರು ಪುನಃ ಸ್ಪಷ್ಟಪಡಿಸುವ ಪ್ರಕಾರ, ಶಾರ್ಙ್ಗದೇವಪ್ರೋಕ್ತ ದ್ರುತತ್ವಾದಿ ಗತಿಭೇದಗಳು ಗುರುಲಘುವಿನ್ಯಾಸಪ್ರಕಾರಗಳ ಫಲವಾಗಿ ಭಾಸವಾಗುವಂಥವಾಗಿದ್ದು, ಈ ವರ್ಗದ ಗತಿಭೇದಗಳು **'ಅಕ್ಷರ ಗತಿಭೇದಗಳು'** ಎನ್ನಿಸಿಕೊಳ್ಳುತ್ತವೆ; ಸೇಡಿಯಾಪು ಅವರು ಗುರುತಿಸಿರುವ ಎರಡನೆಯ ವರ್ಗದ ಗತಿಭೇದಗಳು ಗುರು ಲಘು ವಿನ್ಯಾಸ ಸ್ವರೂಪ ನಿರಪೇಕ್ಷವಾಗಿ, ಸಮಾನಮಾತ್ರಾಕಾಲದ ಛಂದಃಖಂಡಗಳ ಪುನಃ ಪುನರಾವರ್ತನ ವನ್ನು ಅವಲಂಬಿಸಿರುವುದರಿಂದ ಇವು **"ಆವರ್ತಗತಿಭೇದಗಳು"** ಎಂದು ನಿರ್ದಿಷ್ಟ ವಾಗಿವೆ. (ಅಡಿಟಿಪ್ಪಣಿ 51, ಪು. ೮೯–೯೦ರಲ್ಲಿ ಯಾವ ಬಂಧಗಳಲ್ಲಿ ಎಂಟು ಮಾತ್ರೆಗಳಿಗೆ ಮೀರದಿರುವ ಆವರ್ತಗಳು ಉನ್ಮೀಲಿತವಾಗುತ್ತವೋ ಅಂತಹ ಛಂದೋಬಂಧಗಳನ್ನು ಮಾತ್ರ ಲಯಾನ್ವಿತವಾದ ಛಂದೋಬಂಧಗಳೆನ್ನಬೇಕೇ ವಿನಾ ಆ ಮಿತಿಯನ್ನು ಮೀರಿದವನ್ನಲ್ಲ ಎಂಬ ವಿಚಾರವನ್ನು ಸಕಾರಣವಾಗಿ ಚರ್ಚಿಸಿದ್ದಾರೆ.) "ಲಯಾನ್ವಿತವಾದ ಎಲ್ಲಾ ಛಂದೋಬಂಧಗಳಲ್ಲಿಯೂ ಯಾವುದೊಂದು ಆವರ್ತಗತಿ ರೂಪವು ಇದ್ದೇ ಇರುತ್ತದೆ ... ಆವರ್ತಗಳಿಲ್ಲದಿದ್ದರೆ ಲಯಪ್ರತೀತಿಯೂ ಇಲ್ಲ." ಇದು ಸೇಡಿಯಾಪು ಅವರ ಸ್ಪಷ್ಟವಾದ ನಿಲವು.

ಲಯಾನ್ವಿತವಾದ ಛಂದೋಬಂಧಗಳಲ್ಲಿ (ಎಂದರೆ ಪದ್ಯಗಳಲ್ಲಿ) ಮುಖ್ಯವಾಗಿ ಆರು ವಿಧದ ಗತಿಭೇದಗಳು ಉನ್ಮೀಲಿಸುತ್ತವೆ, ಎಂದು ಶ್ರೀ ಸೇಡಿಯಾಪು ಅವರು ತಿಳಿಸಿ, ಅವುಗಳನ್ನು ಈ ರೀತಿ ವರ್ಗೀಕರಿಸಿದ್ದಾರೆ :

(೧) **ದ್ರುತಾವರ್ತ ಗತಿ** : ಮೂರು ಮಾತ್ರೆಯ ಛಂದಃಖಂಡ (=ಗಣ) ಗಳ ಪುನರಾವರ್ತನದ ಪರಿಣಾಮವಾಗಿ ಉನ್ಮೀಲಿಸುವಂಥದು. (ಉದಾ., ಪಂಚಚಾಮರ, ಮುಂತಾದ 'ಸತಾನ' ವೃತ್ತಗಳು; 'ಸುಮಾಲತೀ' ಮುಂತಾದ ವಿತಾನ ವೃತ್ತಗಳು ; ಕರ್ಣಾಟಕ ವಿಷಯ ಜಾತಿಗೆ ಸೇರಿದ 'ಉತ್ಸಾಹ', ಪಂಚವಿಧ ಲಯೋತ್ತರ, ಭೋಗಷಟ್ಪದಿ ಮುಂತಾದ ಮಾತ್ರಾ ಬಂಧಗಳು. (೨) **ಮಧ್ಯಾವರ್ತ ಗತಿ** : ನಾಲ್ಕುಮಾತ್ರೆಯ ಗಣಗಳ ಪದ್ಯ ಗಳು (ಉದಾ., ವನಮಂಜರಿ, ತೋಟಕ, ಮುಂತಾದ ಸತಾನ ವೃತ್ತಗಳು ; ಕ್ರೀಡಾವೃತ್ತ, ಮತ್ತಮಯೂರ ಇತ್ಯಾದಿ ವಿತಾನ ವೃತ್ತಗಳು ; ಕರ್ಣಾಟ ವಿಷಯ ಜಾತಿಯ 'ಅಕ್ಕರಿಕೆ', ಪರಿವರ್ಧಿನಿ, ಮಂದಾನಿಲ ರಗಳೆ ಮುಂತಾದ ಮಾತ್ರಾಬಂಧಗಳು. (೩) **ವಿಲಂಬಿತಾವರ್ತ ಗತಿ** : ಐದು ಮಾತ್ರೆಯ ಗಣಗಳ ಪದ್ಯಗಳು (ಉದಾ., ಭುಜಂಗಪ್ರಯಾತ, ಶಂಭುನಟನ, ಇತ್ಯಾದಿ

ಸತಾನ ವೃತ್ತಗಳು ; ವಿಚಿತ್ರಲಲಿತ, ಲಲಿತಪದ ಇತ್ಯಾದಿ ವಿತಾನ ವೃತ್ತಗಳು; ವಾರ್ಧಕ ಷಟ್ಪದಿ, ಕುಸುಮ ಷಟ್ಪದಿ, ಲಲಿತ ರಗಳೆ, ಮುಂತಾದ ಮಾತ್ರಾ ಬಂಧಗಳು. (೪) **ದ್ರುತಮಧ್ಯಾವರ್ತ ಗತಿ** (ಉದಾ., 3+4 ಮಾತ್ರೆಯ ಗಣಗಳವು) : ಮಲ್ಲಿಕಾ ಮಾಲೆ, ಇತ್ಯಾದಿ ವೃತ್ತಗಳು ; ಭಾಮಿನೀ ಷಟ್ಪದಿ; ತ್ರಿಪದೆ, ಮುಂತಾದವು. (೫) **ಸಂಕಲಿತ ದ್ರುತಾವರ್ತ ಗತಿ** : (4+2, 2+4 ಎಂದು ವಿಭಕ್ತವಾಗುವ 6 ಮಾತ್ರೆಯ ಗಣಗಳ ಪದ್ಯಗಳು) : ಮೃಗ ನೇತ್ರ, ಶ್ಯಾಮಾಂಗಿ, ಇತ್ಯಾದಿ ವೃತ್ತಗಳು ; ಕರ್ಣಾಟ ವಿಷಯ ಜಾತಿಯ 'ಮದನವತಿ' ; ಇವನ್ನು ಹೋಲುವ ಯಕ್ಷಗಾನದ, ಹಾಗೂ ಆಧುನಿಕ ಪದ್ಯ ಗಳು ; (೬) **ಸಂಕಲಿತ ಮಧ್ಯಾವರ್ತಗತಿ** : 4+4 ಮಾತ್ರೆಗಳ ರಚನೆಯಲ್ಲಿ ರಗಳೆ ಮಾತ್ರೆಗಳ ರಚನೆಯಲ್ಲಿ ಫಲಿಸುವ 8 ಮಾತ್ರೆಗಳ ಛಂದಃಖಂಡವು 3+5 ಎಂದೋ 5+3 ಎಂದೋ ವಿಭಕ್ತವಾಗುವ ಛಂದಃಖಂಡಗಳು ಇರುವ ಪದ್ಯಗಳು [ಉದಾ., ರಥೋದ್ಧತಾ, ಚಂದ್ರವರ್ತ್ಮ, ತರಂಗ ಇತ್ಯಾದಿ ವೃತ್ತಗಳು ಮತ್ತು ಪಂಪಭಾರತದ ರಗಳೆ (ಪಂಪಭಾರತ, ೩–೨೨)].

ಮೇಲೆ ತಿಳಿಸಿದ ಆರು ಬಗೆಯ ಆವರ್ತಗತಿಗಳಲ್ಲಿ ಮೊದಲನೆಯ ನಾಲ್ಕು "ಕೇವಲ ಮಾತ್ರಾಸಂಖ್ಯಾಪರಿಮಿತಿಯುಳ್ಳ ಛಂದಃಖಂಡಗಳ ಪುನಃ ಪುನರಾವರ್ತನದಿಂದಲೇ ಉನ್ಮೀಲಿಸಬಲ್ಲವುಗಳಾದಕಾರಣ, ಇವನ್ನು 'ಶುದ್ಧಾವರ್ತಗತಿ'ಗಳೆಂದು ಹೆಸರಿಸಬಹು ದಾಗಿದೆ" ; ಕಡೆಯ "ಎರಡು ಆವರ್ತಗತಿಗಳು ಅಕ್ಷರಗತಿವಿಶೇಷದ ಅಥವಾ ಯತಿಯ ಸಹಯೋಗದಿಂದ ಉತ್ಪನ್ನವಾಗುವ ಕಾರಣ, ಅವನ್ನು 'ಮಿಶ್ರಾವರ್ತಗತಿ'ಗಳೆಂದು ಕರೆಯಬಹುದಾಗಿದೆ."

ಮಾನ್ಯಲೇಖಕರು ಈ ಮೇಲ್ಕಂಡ ಗತಿಭೇದಗಳಿಗೆ ಯಥೋಚಿತ ಉದಾಹರಣೆ ಗಳನ್ನು ಕೊಟ್ಟು ಗತಿಸ್ವರೂಪಗಳನ್ನು ಮನದಟ್ಟಾಗುವಂತೆ ವಿವರಿಸಿದ್ದಾರೆ. ಕಂದ ಪದ್ಯದಲ್ಲಿ ಯತಿನಿಯಮ ಹಾಗೂ ಜಗಣನಿಷಿದ್ಧಸ್ಥಾನಗಳು ಇರುವುದರಿಂದ "ಇದು ವಿಶಿಷ್ಟವಾದೊಂದು 'ಸಂಶ್ಲಿಷ್ಟಗತಿ'ಯ (=ಆವರ್ತಗತಿ ಹಾಗೂ ಅಕ್ಷರಗತಿಗಳ ಸಂಶ್ಲೇಷಣದಿಂದ ಉನ್ಮೀಲಿಸುವ ಗತಿ) ಛಂದೋಬಂಧವಾಗಿರುತ್ತದೆ...ವಿಧವಿಧದ ಗತಿವೈಚಿತ್ರ್ಯಗಳನ್ನು ಪ್ರಕಟಿಸಬಲ್ಲ ಅದ್ಭುತವಾದೊಂದು ಪದ್ಯಭೇದವಾಗಿದೆ" ಎಂದು ತೀರ್ಮಾನಿಸಿ, 'ಕವಿರಾಜಮಾರ್ಗ'ದಿಂದ 5 ಪದ್ಯಗಳ ಮೂಲಕ ಆ ವೈವಿಧ್ಯಸ್ವರೂಪ ವನ್ನು ಪ್ರಸ್ತಾರ ಮುಖೇನ ವಿಶದಪಡಿಸಿದ್ದಾರೆ. ಕಂದಪದ್ಯಸಂಬಂಧವಾಗಿ ಅಡಿ ಟಿಪ್ಪಣಿಯಲ್ಲಿ (63) ಹೆಚ್ಚಿನ ವಿವೇಚನೆ ನಡಸಿದ್ದಾರೆ. ಇಲ್ಲಿ, "ನಾನಾ ವಿಧದ ಗತಿ ವೈಚಿತ್ರ್ಯಗಳನ್ನು ಲೀಲಾಜಾಲವಾಗಿ ಹೊಮ್ಮಿಸಬಲ್ಲ ಶಕ್ತಿಯಲ್ಲಿ ಕಂದಪದ್ಯಕ್ಕೆ ಸರಿದೊರೆಯಾದ ಬೇರೊಂದು ಛಂದೋಬಂಧವು ಕನ್ನಡದಲ್ಲಿ ಈ ವರೆಗೆ ಕಾಣಿಸಿ ಕೊಂಡಿಲ್ಲ" ಎಂದಿರುವ ಅವರ ಮಾತು ಅವರ ಅಧ್ಯಯನದ ಸಮಗ್ರ ವ್ಯಾಪ್ತಿಯ

ದ್ಯೋತಕವಾಗಿದೆ. ಕಂದಪದ್ಯದ ಛಂದೋಬಂಧದ ಈ ಶಕ್ತಿಯು ರಹಸ್ಯವಾದರೂ ಏನು ? ಇದನ್ನವರು ಸರಿಯಾಗಿಯೇ ಗುರುತಿಸಿದ್ದಾರೆ : "ಕಂದಪದ್ಯದ ಗತಿಚಮತ್ಕೃತಿಗಳೆಲ್ಲವೂ ಅದರಲ್ಲಿ ಅಡಕವಾಗುವಂತಹ ಅಕ್ಷರಗತಿರೂಪಗಳ ಹಾಗೂ ಯತಿಸ್ಥಾನ ಭೇದಗಳ ಫಲವಾಗಿ ಉದ್ಭೂತವಾಗುವವೇ ಹೊರತು, ಅದರ ಆವರ್ತಗತಿಯಲ್ಲಿ ಅಂತಹ ಚಮತ್ಕೃತಿಯೇನೂ ಇಲ್ಲ ; ಅದು ಕೇವಲ ಸರಳವಾದ ಮಧ್ಯಾವರ್ತಗತಿ."

ಏಳನೆಯ ಪರಿಚ್ಛೇದದಲ್ಲಿ 'ಪದ್ಯಗತಿ'ಯನ್ನು ಕುರಿತು ವಿಚಾರಮಾಡಲಾಗಿದೆ. ಪದ್ಯದ ಗತಿಯಲ್ಲಿ 'ಪದಗತಿ'ಯು ನಿರ್ಣಾಯಕ ಪಾತ್ರವಿರುವುದನ್ನು ಗಮನಿಸಿ, 'ಪದಗತಿ'ಯು ಸ್ವರೂಪವೇನೆಂಬುದನ್ನು ವಿವರಿಸಲಾಗಿದೆ. ಪದದ "ಅಕ್ಷರೋಚ್ಚಾರಗಳ ಸ್ಫುಟತ್ವ ತಾರತಮ್ಯದ ಫಲವಾಗಿ ಶ್ರವಣಗೋಚರವಾಗುವ ಒಂದು ಬಗೆಯ ಧ್ವನಿಸರಣಿ"ಯೆ 'ಪದಗತಿ'. "ಪದ್ಯದ ಛಂದೋಗತಿಯನ್ನು ವಿರೂಪಗೊಳಿಸದೆ ಪಠನಮಾಡುವಾಗ ಅರ್ಥವು ವ್ಯಕ್ತವಾಗಬೇಕಾದರೆ ಪ್ರತಿಯೊಂದು ಪದದ ಆದ್ಯಕ್ಷರವನ್ನು ಆ ಪದದ ಇತರ ಅಕ್ಷರಗಳಿಗಿಂತ ಕಿಂಚಿತ್ ಸ್ಫುಟತರವಾಗಿ ಉಚ್ಚರಿಸಬೇಕಾಗುತ್ತದೆ." (ಈ ಉಚ್ಚಾರಸ್ಫುಟತ್ವ ಆಂಗ್ಲಛಂದಸ್ಸಿನ stress ಅಥವಾ accent ಅಲ್ಲ ಎಂಬುದನ್ನು ಅಡಿಟಿಪ್ಪಣಿ 65ರಲ್ಲಿ ವಿಶದಪಡಿಸಿದ್ದಾರೆ. ಈ ವಿಚಾರದಲ್ಲಿ ತೀ.ನಂ. ಶ್ರೀ. ಅವರ ಅಭಿಪ್ರಾಯವನ್ನು ಈ ಹಿಂದೆಯೇ ತಿಳಿಸಿದ್ದಾಗಿದೆ.) "ಪದ್ಯಗತಿ ಎಂಬುದರಲ್ಲಿ (ಮುಖ್ಯವಾಗಿ ಲಯಾನ್ವಿತವಾದುದರಲ್ಲಿ, ಕ್ವಚಿತ್ ಲಯರಹಿತವಾದುದರಲ್ಲಿಯೂ) 'ಛಂದಃಪದ'ಗಳ ಗತಿ (ಎಂದರೆ, ಛಂದಸ್ಸಿನ ಹಜ್ಜೆ =metrical foot ಗಳ ಗತಿ) ಮತ್ತು 'ಭಾಷಾಪದ' (word) ಗಳ ಗತಿ (=ಭಾಷೆಯ ಹಜ್ಜೆಗಳ ಗತಿ) ಎಂಬೀ ದ್ವಿವಿಧಗತಿಗಳು ಸಮಾವಿಷ್ಟವಾಗಿರುತ್ತವೆ. ಈ ಎರಡು ಗತಿಗಳೊಳಗೆ ಒಂದು ಬಗೆಯ 'ಮೇಳ' ಎಂದರೆ 'ಮೈತ್ರಿ' ಇಲ್ಲದಿದ್ದರೆ 'ಪದ್ಯಗತಿ' ಸುಗಮವಾಗಿ ಸಾಗುವುದಿಲ್ಲ." ['ಪದ' ಎಂಬುದರ ನಿಜವಾದ ಅರ್ಥವು 'ಭಾಷಾಪದ' (=ಭಾಷೆಯ ಹಜ್ಜೆ) ಎಂದೇ ಆಗಿರುತ್ತದೆ. 'ಪದಗತಿ' (=ಭಾಷಾ ಪದಗತಿ) ಎಂಬುದನ್ನು 'ಭಾಷಾಗತಿ' ಎಂದೂ ಹೆಸರಿಸಬಹುದಾಗಿದೆ—ಎಂದು 66ನೆಯ ಅಡಿಟಿಪ್ಪಣಿಯಲ್ಲಿ ವಿಶದಪಡಿಸಿದ್ದಾರೆ ಲೇಖಕರು.] ವಿಲಂಬಿತಾವರ್ತಗತಿಯ 'ವಾರ್ಧಕ ಷಟ್ಪದಿ'ಯ ಉದಾಹರಣಮೂಲಕ 'ಛಂದಃಪದಗತಿ'ಗೂ 'ಭಾಷಾಪದಗತಿ'ಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿದ್ದಾರೆ :

ಛಂದಃಪದಗತಿ ಸ್ವರೂಪ :

ವಿದ್ವತ್ಸ।ಭಾವಲಯ।ಮರಿಯೆ ವಿರ।ಚಿಸಿದಂ ಭ-।
ರದ್ವಾಜ।ಗೋತ್ರಭವ।ನಣ್ಣಮಾಂ।ಕನ ಸುತಂ ।

ಭಾಷಾಪದಗತಿ ಸ್ವರೂಪ :

ವಿದ್ವತ್।ಸಭಾ।ವಲಯ।ಮರಿಯೆ।ವಿರಚಿಸಿದಂ । ಭ-
ರದ್ವಾಜ । ಗೋತ್ರಭವ।ನಣ್ಣಮಾಂಕನ । ಸುತಂ ।

ಇಲ್ಲಿ ಎರಡು ಗತಿಗಳಿಗೂ 'ಮೈತ್ರಿ' ಗಮಿಸಿರುವ ಕಾರಣ 'ಪದ್ಯಗತಿ' ಸುಗಮವಾಗಿದೆ. (ಛಂದಃ ಖಂಡ ಗತಿ ಸಮಗತಿಯಾದರೂ 'ಭಾಷಾಪದಗತಿ' ವಿಷಮಗತಿಯದಾಗಿದೆ.) "ಈ ಮೈತ್ರಿ ಪರ್ಯಾಪ್ತವೋ ಅಲ್ಲವೋ ಎಂಬುದಕ್ಕೆ ಪಠನಸಂಪ್ರದಾಯ ಪ್ರಭಾವಿತವೂ ಪರಿಷ್ಕೃತವೂ ಆದ ಗತಿಪ್ರಜ್ಞೆಯೇ ಪರಮಪ್ರಮಾಣ" ಎಂಬ 68ರ ಅಡಿಟಿಪ್ಪಣಿಯಲ್ಲಿನ ಶ್ರೀಯುತರ ಮಾತು ಗಮನಾರ್ಹ. (ಛಂದಸ್ಸಿನ ಅನೇಕ ವಿಚಾರಗಳು 'ಛಂದಃಪ್ರಜ್ಞೆ'ಗೆ ಒಳಪಟ್ಟಿವೆ. ಈ ಗತಿಪ್ರಜ್ಞೆ ಛಂದಃಪ್ರಜ್ಞೆಯ ಒಂದು ಎಳೆ.)

ಇದೇ 'ಪದಗತಿ' ವಿವೇಚನೆಯ ಪ್ರಕರಣದಲ್ಲಿ 'ಯತಿ'ಯ ಮಾತೂ ಪ್ರಾಸ್ತಾವಿಕವಾಗಿ ಬಂದಿದೆ. "ಪದ್ಯವನ್ನು ಅದರ ಛಂದೋಗತಿಗನುಗುಣವಾಗಿ ಪಠಿಸುವಾಗ ತದ್ಗತಪದಸ್ವರೂಪವು ಹೊಳೆಯದಂತಿದ್ದರೆ, ಆ ರಚನಾದೋಷವು 'ಯತಿಭಂಗ'ವೆನಿಸಿಕೊಳ್ಳುತ್ತದೆ. 'ಯತಿಭಂಗ'ವೆಂದರೆ ವಸ್ತುತಃ 'ಪದಗತಿಭಂಗ'ವೇ ಆಗಿದೆ. 'ಪದಗತಿ'ಗೆ ಭಂಗವುಂಟಾದರೆ 'ಪದ್ಯಗತಿ' ಭಗ್ನವಾಗಿಹೋಗುತ್ತದೆ." (ಈ ಹೇಳಿಕೆ ಕಂದಪದ್ಯವೊಂದರ 'ಯತಿಭಂಗ'ಕ್ಕೆ ಸಂಬಂಧಪಟ್ಟಿದೆ. 'ಆರಾರೇರರ್.." ಎಂಬ ಪ್ರಸಿದ್ಧವಾದ ಷಡಕ್ಷರಿಯ ಕಂದಪದ್ಯವನ್ನು ಕಿಟ್ಟೆಲ್ ಮಹಾಶಯ ತನ್ನ ಇಷ್ಟಾನುಸಾರ.–ಯತಿಸ್ಥಾನವುಳ್ಳ "ಮಾ।ರಾರಿಯ ಕೃಪೆಯಿಲ್ಲ*ದಂಗೆ" ಎಂದಿರುವುದನ್ನು "ತೇಜೋರೂಪ ಕೃಪೆಯಿರ*ದಂಗೆ" — ಎಂದು ಮಾರ್ಪಡಿಸಿದ್ದಾರೆ. ಪದಗತಿಗೆ ಹೇಗೆ ಭಂಗವುಂಟಾಗಿದೆ ಎಂಬ ಅಂಶವನ್ನು ಶ್ರೀಯುತರು ತಮ್ಮ ಗತಿಪ್ರಜ್ಞೆಯಿಂದ ವಿಶದಪಡಿಸಿದ್ದಾರೆ.) (ಒಂದು ವಿಷಯ ವಿವೇಚನೆಯಲ್ಲಿ ತಮ್ಮ ಅಭಿಪ್ರಾಯದ ಸ್ಪಷ್ಟೀಕರಣಕ್ಕಾಗಿ ಎಷ್ಟೆಲ್ಲ ಕಡೆಯಿಂದ ಸಾಮಗ್ರಿಯನ್ನು ಸಂಗ್ರಹಿಸಬಲ್ಲುದು ಶ್ರೀ ಸೇಡಿಯಾಪು ಅವರ ಅಧ್ಯಯನ ವ್ಯಾಪ್ತಿ ಎಂಬುದು ಆಶ್ಚರ್ಯಾವಹವಾಗಿದೆ.)

ಎಂಟನೆಯ ಪರಿಚ್ಛೇದವು ವಿಷಮಗತಿಯ ಛಂದೋಬಂಧಗಳಿಗೆ ಮೀಸಲಾಗಿದೆ. ಸಮಗತಿಯ ಛಂದೋಬಂಧಗಳು ಆವರ್ತಗಳುಳ್ಳವಾದ್ದರಿಂದ ವಿಷಮ ಗತಿಯ ಛಂದೋಬಂಧಗಳು ನಿರಾವರ್ತಗಳಾಗಿರುತ್ತವೆ. ಸಮಗತಿಯ ಛಂದೋಬಂಧದ ಗತಿಯನ್ನು ಆವರ್ತಗಳು ನಿಯಂತ್ರಿಸುತ್ತವೆ; "ಛಂದೋಗತಿಯಲ್ಲಿ ನಿಷ್ಠಿತವಾಗಿರುವ 'ಯತಿ'ಗಳೇ 'ನಿರಾವರ್ತಗತಿ' (=ವಿಷಮಗತಿ) ಯ ನಿಯಂತ್ರಗಳಾಗಿವೆ." (69ನೆಯ ಅಡಿಟಿಪ್ಪಣಿಯಲ್ಲಿ 'ಯತಿ' ಎಂಬ ಸಂಜ್ಞೆಯ ಅರ್ಥವ್ಯಾಪ್ತಿಯ ಸಂಕ್ಷೇಪವಾದರೂ ನಿಷ್ಕೃಷ್ಟವಾದ ವ್ಯಾಖ್ಯೆ ಇದೆ. ಅಲ್ಲದೆ, "ಈ ನಿಬಂಧದಲ್ಲಿ ಆವಶ್ಯವೆಂದು ಕಂಡ ಎಡೆಗಳಲ್ಲೆಲ್ಲ 'ಯತಿ' ಎಂದಿಷ್ಟೇ ಹೇಳದೆ–ಛಂದೋಯತಿ, ಪದಯತಿ ಇತ್ಯಾದಿಯಾಗಿ ಸ್ಪಷ್ಟೀಕರಿಸಿ ಹೇಳಲಾಗಿದೆ," ಎಂಬ ಸೂಚನೆಯೂ ಇದೆ. ಅರ್ಥಯತಿ ಎಂಬ ಶಬ್ದವನ್ನು ಎಲ್ಲಿಯೂ ಬಳಸಿದಂತೆ ಕಂಡುಬರುವುದಿಲ್ಲ.)

ನಿರಾವರ್ತ ಛಂದೋಬಂಧಗಳಲ್ಲಿ 'ವೃತ್ತ'ಗಳು ಸೇರುತ್ತವೆಯಷ್ಟೆ. ವೃತ್ತ

ಗಳಲ್ಲಿಯೂ 'ಗತಿ'ಯ ಹಜ್ಜೆಗಳಿರುವುವಾದರೂ ಅವು ಮಾತ್ರಾಬಂಧಗಳ 'ಗತಿ'ಯ ಹಜ್ಜೆಯ ಗತಿಗಳು ಮಾತ್ರಾಗಣಗಳಿಗೆ ಅನುಗುಣವಾಗಿ ಇರುವಂತೆ ವೃತ್ತಗಳ ಗತಿಯ ಹಜ್ಜೆಗಳು ಅಕ್ಷರಗಣಗಳಿಗನುಗುಣವಾಗಿ ಇರುತ್ತಿವೆ ಎಂದು ಭ್ರಮಿಸಬಾರದು ಎಂಬ ಎಚ್ಚರಿಕೆಯ ಮಾತನ್ನು ಹೇಳುವ ಸಂದರ್ಭದಲ್ಲಿ, (ಪಿಂಗಳನೂ ಅವನ ಅನುಯಾಯಿಗಳೂ ನಿರೂಪಿಸಿರುವ) 'ಮಯರಸತಜಭನ' ಎಂಬ ಅಕ್ಷರಗಣ ವಿಧಾನದಲ್ಲಿ ಲಕ್ಷಣಕಾರರು ಈ ಗಣಗಳನ್ನು ಮೂರಕ್ಷರಗಣಗಳನ್ನಾಗಿ ಏಕೆ ಕಲ್ಪಿಸಿದರು? ಎರಡೋ ನಾಲ್ಕೋ ಅಕ್ಷರದವುಗಳಾಗಿ ಏಕೆ ಕಲ್ಪಿಸಲಿಲ್ಲ? ಎಂಬ ಸಮಸ್ಯೆಯನ್ನು ಬಹಳ ಶಾಸ್ತ್ರೀಯವಾಗಿ ವಿವೇಚನೆ ಮಾಡಿರುವುದು ಮೆಚ್ಚತಕ್ಕದ್ದೆ ಆಗಿದೆ. ಎಚ್. ಡಿ. ವೇಲಣಕರರ ವಿವರಣೆಯೂ ಇದೇ ಆಗಿದೆ.[7] ಎಚ್. ಡಿ. ವೇಲಣಕರರು 'ತ್ರಿ' ಸಂಖ್ಯೆಗೆ ಶಾಸ್ತ್ರೀಯವಾದ ವಿವರಣೆಯನ್ನು ಕೊಟ್ಟಿದ್ದರೂ ಭಾರತೀಯ ತತ್ತ್ವಜ್ಞಾನಾದಿ ವಾಙ್ಮಯದಲ್ಲಿ ಮೂರರ ಸಂಖ್ಯೆಗೆ ಇರುವ ಸ್ಥಾನಮಹತ್ತ್ವವೆ ಪಿಂಗಳನ ತ್ರಿಕ ವ್ಯವಸ್ಥೆಗೆ ಹೇತುವಾಗಿದ್ದಿತು ಎಂದಿರುವುದು ಮಾತ್ರ ಶ್ರೀ ಸೇಡಿಯಾಪು ಅವರ 'ವ್ಯಾಜ ಸ್ತುತಿ' ರೂಪದ ಟೀಕೆಗೆ ಒಳಗಾಗಿದೆ. "ವೇಲಣಕರರ ಪ್ರತಿಪಾದನೆಯಲ್ಲಿ ಛಂದಸ್ತತ್ತ್ವ ಯಾವುದೂ ಪ್ರಕಾಶಿತವಾಗಿಲ್ಲ" ಎಂದಿರುವುದಷ್ಟೆ ಸಾಕಾಗಿತ್ತು. ಆದರೂ, 'ಛಂದಸ್ತತ್ತ್ವ ಯಾವುದೂ ಪ್ರಕಾಶಿತವಾಗಿಲ್ಲ' ಎಂಬ ಶ್ರೀಯುತರ ಮಾತನ್ನು ಒಪ್ಪುವುದು ಕಷ್ಟವಾಗುತ್ತದೆ. ವೇಲಣಕರರು 'a matter of principle' ಎಂದು ಸೂಚ್ಯವಾಗಿ ಹೇಳಿರುವುದರಲ್ಲಿ, principle of prosody (ಛಂದಸ್ತತ್ತ್ವ) ಅಲ್ಲದೆ ಬೇರೆ ಯಾವ ತತ್ತ್ವ ಸೂಚಿತವಾಗುತ್ತದೆ?[8]

---

7. ',The Number 3 was generally regarded as the convenient basic unit for the measuring of multiplicity in all spheres. As a matter of fact, multiplicity was considered as a starting point with the number 3 and not with number 2. The smallest number which constitutes 'Bahulatva' is 3 even according to Panini. So, both as a matter of principle and for the sake of convenience, a new unit of three letters called 'Trika' having eight different forms of music or rhythm, was adopted for metrical scanning and also as a basis for defining the many different varieties of sound variation produced by the alteration of short and long letters in different ways that constituted shorter or longer metrical lines in Sanskrit metres.'' (H. D, Velanakar; *Jayadaman*, P. 17).

8. ಸೂಕ್ಷ್ಮವಾದ ಕಲಾಪ್ರಜ್ಞೆ, ಛಂದಃಪ್ರಜ್ಞೆ ಹೊಂದಿದ್ದ ಎ.ಸೀ. ಅವರೂ ಮೂರಕ್ಷರ ಗಣದ (ತ್ರಿಕ ಗಣದ) ವಿಚಾರವಾಗಿ ವಿವೇಚನೆಮಾಡಿದ್ದಾರೆ. ವೇಲಣಕರರ ಮಾತನ್ನೇ ಅವರೂ

ವಿಷಮಗತಿಯ ವೃತ್ತಗಳ ವಿಚಾರವನ್ನು ಮುಂದುವರಿಸುತ್ತ ಶ್ರೀ ಸೇಡಿಯಾಪು ಅವರು ಆ ಬಗೆಗೆ ನಡಸಿರುವ ವಿಚಾರ ವಿಮರ್ಶೆಯನ್ನು ಹೀಗೆ ಸಂಕ್ಷೇಪಿಸಿ ಹೇಳ ಬಹುದು : (೧) ಗುರು ಲಘು ಸ್ಥಿರವಾದ ಅಕ್ಷರಸಂಖ್ಯಾನಿಯಮವುಳ್ಳ 'ವೃತ್ತ' ಗಳದ್ದು ಒಂದು ವರ್ಗ. ಅಕ್ಷರಸಂಖ್ಯಾನಿಯಮವುಳ್ಳವಾದರೂ, ಗುರು ಲಘು ಸ್ಥಿರತೆ (ಪರಿಪೂರ್ಣವಾಗಿ) ಇಲ್ಲದ ಅಕ್ಷರಜಾತಿಗಳದು ಇನ್ನೊಂದು ವರ್ಗ. (ಇಲ್ಲಿ, ಪದ್ಯ ಗಳ ಎರಡು ಪ್ರಕಾರಗಳಾದ ವೃತ್ತ ಮತ್ತು ಜಾತಿಗಳ ಸ್ವರೂಪವನ್ನು ಸವಿವರವಾಗಿ ತಿಳಿಸಿರುವ 20ನೆಯ ಅಡಿಟಿಪ್ಪಣಿಯ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ. ಈ ಟಿಪ್ಪಣಿ ಬಹಳ ಸಮರ್ಥವೂ ಉಪಯುಕ್ತವೂ ಆದ ವಿಷಯ ವಿವೇಚನೆಯನ್ನು ಒಳಗೊಂಡಿದೆ.) ಎರಡನೆಯದಾದ 'ಅಕ್ಷರಜಾತಿ'ಗಳಲ್ಲಿ ಪಾದಾಂತವು ಮಾತ್ರ ಯತಿಸ್ಥಾನ. ಒಂದನೆಯ ವರ್ಗದ ವೃತ್ತಗಳಲ್ಲಿ ಪಾದಮಧ್ಯದಲ್ಲಿ ಯತಿಸ್ಥಾನಗಳಿರು ತ್ತವೆ. "ವಿಷಮಗತಿ ಪದ್ಯಗಳ ಛಂದೋಗತಿಯ ನಿಜರೂಪದ ಅರಿವು ನಮಗೆ ಆಗಬೇಕಾದರೆ, ಪದ್ಯದ ಪದಗತಿಯ 'ಜಾಲ'ದಿಂದ ಅದರ ಛಂದೋಗತಿಯನ್ನು ಬಿಡಿಸಿಕೊಳ್ಳಬೇಕು. ಹಾಗೆ ಬಿಡಿಸಿಕೊಳ್ಳುವ ಉಪಾಯವೇನೆಂದರೆ—ಅರ್ಥಹೀನ ವಾದ ಅಕ್ಷರೋಚ್ಚಾರಗಳ ಮೂಲಕ, ಉದ್ದಿಷ್ಟವಾದ ಪದ್ಯದ ಛಂದೋರೂಪವನ್ನು ಉನ್ಮೀಲನಗೊಳಿಸುವುದಾಗಿದೆ. ಉದಾಹರಣೆಯಾಗಿ ಶಾಲಿನೀ ವೃತ್ತ("ಮತತಗಂ ಗಂ") ವನ್ನು ತೆಗೆದುಕೊಂಡು, ಗತಿಪ್ರಜ್ಞೆಯ ನೆರವಿನಿಂದ ಯತಿಸ್ಥಾನವನ್ನು ಗುರುತಿಸಿ, ವೃತ್ತದ ಛಂದೋಗತಿ ರೂಪವನ್ನು ನಿಶ್ಚಯಿಸಿದ್ದಾರೆ. ಅದು ಹೀಗೆ :

— — —|— — ◡|— — ◡|— —
ನಾನಾನಾ|ನಾನಾನ|ನಾನಾನ|ನಾನಾ
ಮ ತ ತ ಗಂ ಗಂ
ನಾನಾನಾನಾ ⁝ ನಾನನಾನಾನನಾನಾ

ವಿಷಮಗತಿಯ ಹಲಕೆಲವು ವೃತ್ತಗಳಲ್ಲಿ ಯತಿಸ್ಥಾನನಿರ್ಣಯದ ಮೂಲಕ

ಹೇಳಿದ್ದಾರೆ. "ಉಚ್ಚಾರಣೆಯ ಸ್ಪಷ್ಟತೆಗೆ ಸ್ಥೈರ್ಯಕ್ಕೆ, 3 ಅಕ್ಷರ ಒಂದು ಖಚಿತವಾದ ಉಚ್ಚಾರಖಂಡ. ಸಂಖ್ಯೆ ಮೂರು ವಿಶಿಷ್ಟವಾದದ್ದು. ("There is the first number at which a sequence becomes perceptible and a sequence of more than three masses would, in a painting, tend to be too obvious." — H. Read). –ತ್ರಿಮೂರ್ತಿ, ತ್ರಿಲೋಕ, ತ್ರಿಕರಣ, ತ್ರಿಕಲ, ತ್ರಿಕಾಲ, ತ್ರಿವರ್ಗ, ತ್ರಿಶೂಲ, ತ್ರಿಭಂಗಿ, ತ್ರಿಗುಣ, ತ್ರಿಸ್ಥಾನ, ಇತ್ಯಾದಿ. ನಾದ ಬಿಂದು ಕಲಾ, ಪಶು ಪತಿ ಪಾಶ, ಹೀಗೆ. ಪಾಣಿನಿ ಬಹುಳತ್ವವನ್ನು ಮೂರರಿಂದ ಆರಂಭಿಸುತ್ತಾನೆ ಎನ್ನುತ್ತಾರೆ. –ಮೂರರಕ್ಕೆ ಯೋಗದ ಮತ್ತು ಸಂಕೇತದ ಒಂದು ಪ್ರಾಮುಖ್ಯವು ದೊರಕಿದೆ." (ವಿ. ಸೀತಾರಾಮಯ್ಯನವರು ಸಂಪಾದಿಸಿದ 'ಕವಿ ಕಾವ್ಯಪರಂಪರೆ' : 'ಒಂದನೆಯ ನಾಗವರ್ಮ'ದಲ್ಲಿ 'ಸಮೀಕ್ಷೆ' ; 1973 ; ಪು. 145–146). ಶ್ರೀ ಸೇಡಿಯಾಪು ಅವರು ವಿ.ಸೀ.ಯವರ ಈ ಬರಹವನ್ನು ಗಮನಿಸಿಲ್ಲ.

ಪದ್ಯದ ಛಂದೋಗತಿಯನ್ನು ಉನ್ಮೀಲನಗೊಳಿಸುವಲ್ಲಿ ಇರುವ ತೊಡಕುಗಳನ್ನೂ ಅವುಗಳ ಸ್ವರೂಪವನ್ನೂ ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿ, ಈ ಪ್ರಯತ್ನದ ಫಲಿತಾಂಶವನ್ನು ಹೀಗೆ ನಿರೂಪಿಸಿದ್ದಾರೆ: "ಛಂದಃಪದಗಳ ಪರಿಮಾಣ ವನ್ನು ನಿರ್ಧರಿಸುವವುಗಳು (ಪಾದಮಧ್ಯ ಹಾಗೂ ಪಾದಾಂತ) ಯತಿಸ್ಥಾನಗಳು. ಆ ಸ್ಥಾನಗಳಲ್ಲಿ ಪದಯತಿಯೂ ಇರುವುದಾದರೆ ಛಂದೋಯತಿ ಪ್ರಸ್ಫುಟವಾಗು ವುದು ಮಾತ್ರವಲ್ಲ, ಪದ್ಯಪಠನವು ಸುಕರವೂ ಆಗುತ್ತದೆ; ಅಲ್ಲದೆ, ಛಂದೋಗತಿಗೂ ಪದಗತಿಗೂ ಪರಿಪೂರ್ಣವಾದ ಮೈತ್ರಿ ಅಲ್ಲಿ ಏರ್ಪಟ್ಟು, ಪದ್ಯಗತಿ ಸುಕುಮಾರ ಸುಂದರವಾಗುತ್ತದೆ." ಈ ಕಾರಣದಿಂದಲೇ, ಈ ಗತಿ ಸುಕರತೆ ಇರುವುದರಿಂದಲೇ, "ಅನೇಕರು, ಮುಖ್ಯವಾಗಿ ಕನ್ನಡ ಕವಿಗಳು – 'ಯತಿ' ಎಂಬುವರ ಗೊಡವೆಯೇ ಇಲ್ಲದೆ (ವಿಷಮಗತಿ) ವೃತ್ತಗಳನ್ನು ರಚಿಸುವ ಸಾಹಸವನ್ನು ಮಾಡಿರುವುದಾಗಿದೆ" ಎಂಬ ತೀರ್ಮಾನದ ಮಾತು ಬಲುಮಟ್ಟಿಗೆ ಒಪ್ಪತಕ್ಕದ್ದೆ ಆಗಿದೆ. ಕಂದಪದ್ಯದಲ್ಲಿ ಪಾದಮಧ್ಯ ಯತಿಯನ್ನು ಎಚ್ಚರದಿಂದ ಕಾಪಾಡಿಕೊಂಡು ಬಂದ ಕನ್ನಡ ಕವಿಗಳು, "ಯತಿಃ ಸರ್ವತ್ರ ಪಾದಾಂತೇ" ಎಂಬ ಪುರಾತನೋಕ್ತಿಯನ್ನು ಪಾಲಿಸದೆ, ವೃತ್ತ ಗಳಲ್ಲಿಯೂ ಕಂದಪದ್ಯದಲ್ಲಿಯೂ ಪಾದಾಂತ ಯತಿಯನ್ನು ಏಕೆ ಮೀರಿರಬಹುದು ಎಂಬುದಕ್ಕೆ ಕವಿರಾಜಮಾರ್ಗಕಾರನು–"ದೋಸಮನೆ ಗುಣದವೋಲುದ್ಭಾಸಿಸಿ ಕನ್ನಡ ದೊಳೊಲ್ದು ಪೂರ್ವಾಚಾರ್ಯರ್ ॥ ದೇಸಿಯನೆ ನಿಜಿಸಿ ಖಂಡ।ಪ್ರಾಸಮನತಿಶಯ ಮಿದೆಂದು ಯತಿಯಂ ಮಿಕ್ಕರ್" ಎಂಬ ಪದ್ಯದಲ್ಲಿ ಹೇಳಿರುವ ಕಾರಣವನ್ನು ಅತ್ಯಂತ ಸಮರ್ಥವಾಗಿ ಸುಮಾರು ಎಂಟೂವರೆ ಪುಟಗಳಷ್ಟು ದೀರ್ಘವಾದ ಅಡಿಟಿಪ್ಪಣಿ ಯಲ್ಲಿ ವ್ಯಾಖ್ಯಾನಿಸಿದ್ದಾರೆ. ದಾಕ್ಷಿಣಾತ್ಯ ಸಂಗೀತ ಸಂಪ್ರದಾಯದಲ್ಲಿ ರೂಢಮೂಲ ವಾಗಿರುವ 'ಪದಗರ್ಭ'ವು ಪಾದಾಂತ ಯತಿಭಂಗವೇ ಆಗಿದೆ ಎಂದು ಹೇಳಿ, ಪದ ಗರ್ಭಕ್ಕೆ ದ್ವಿತೀಯಾಕ್ಷರ ಪ್ರಾಸವು ಅಂಟಿರುವಲ್ಲಿ ಮಾತ್ರ ಅದು ಖಂಡಪ್ರಾಸ ಎಂದು ನಿರ್ಣಯಿಸಿರುವುದು ಗಮನಾರ್ಹ. ಅಂದರೆ, "(ಪೂರ್ವಪಾದಾಂತ) ಯತಿಭಂಗ ಸಹಿತವಾದ (ಉತ್ತರ ಪಾದದ) ದ್ವಿತೀಯಾಕ್ಷರ ಪ್ರಾಸವನ್ನು ಮಾತ್ರ 'ಖಂಡಪ್ರಾಸ' ವೆಂದು ಕವಿರಾಜಮಾರ್ಗಕಾರ ಹೆಸರಿಸಿರುವುದು ನಿಸ್ಸಂದಿಗ್ಧ ಎಂದಿರುವುದಲ್ಲದೆ, 'ಖಂಡಪ್ರಾಸ' ಎಂಬ ಪದ 'ದ್ವಿತೀಯಾಕ್ಷರ ಪ್ರಾಸ' ಎಂಬ ಪದದ ಪರ್ಯಾಯ ಎಂಬುದು ತಪ್ಪುಕಲ್ಪನೆ ಎಂದಿದ್ದಾರೆ. ಉತ್ತರಪಾದದ ದ್ವಿತೀಯಾಕ್ಷರ ಪ್ರಾಸವನ್ನು ನಿರ್ಧರಿಸುವುದು ಪೂರ್ವಪಾದದ ದ್ವಿತೀಯಾಕ್ಷರ ತಾನೆ? ಎರಡೂ ಪಾದಗಳ ದ್ವಿತೀಯಾಕ್ಷರಗಳು ಸಮಾನಾಕ್ಷರಗಳಾಗಿರದಿದ್ದರೆ 'ಪ್ರಾಸ'ವಾದರೂ ಹೇಗೆ ಘಟಿಸು ತ್ತದೆ? ಖಂಡಪ್ರಾಸಕ್ಕೆ ಪೂರ್ವೋತ್ತರ ಪಾದಗಳೆರಡೂ ಅಗತ್ಯವಾದ್ದರಿಂದ 'ಖಂಡ ಪ್ರಾಸ'ವನ್ನು 'ದ್ವಿತೀಯಾಕ್ಷರ ಪ್ರಾಸ' ಇಲ್ಲವೆ 'ಆದಿ ಪ್ರಾಸ' ಎನ್ನಲು ಪ್ರತ್ಯವಾಯ ಯಾವುದೂ ಇಲ್ಲ ಎಂದು ನನಗೆ ತೋರುತ್ತದೆ.

ವಿಷಮಗತಿ ವೃತ್ತಗಳ ಛಂದೋಗತಿಸೂಕ್ಷ್ಮತೆಗಳನ್ನು ತಳಮುಟ್ಟಿ ವಿಚಾರ

ಮಾಡಿಯೂ, ಅವುಗಳ ಗತಿಸೌಂದರ್ಯಸಿದ್ಧಿ ವಿಧಿವಿಧಾನಗಳಿಗೆ ಸಿಲುಕತಕ್ಕದ್ದಲ್ಲ, "ಪ್ರಬುದ್ಧವಾದ ಛಂದಃಪ್ರತಿಭೆಗೆ ಮಾತ್ರ ಮೈಪಿಡಿರಬಲ್ಲ ಛಂದಃಕಲಾತಥ್ಯಗಳು" ಎಂಬ ಸತ್ಯವಾದ ಮಾತನ್ನೇ ಶ್ರೀ ಸೇಡಿಯಾಪು ಅವರು ನುಡಿದಿದ್ದಾರೆ.

ಒಂಬತ್ತನೆಯ ಪರಿಚ್ಛೇದದಲ್ಲಿ, ಅಕ್ಷರಸಂಖ್ಯಾ ನಿಯಮಬದ್ಧವಾಗಿದ್ದರೂ ಗುರು ಲಘು ಸ್ಥಿರತೆ (ಪರಿಪೂರ್ಣವಾಗಿ) ಇರದ, ವಿಷಮಗತಿಬಂಧಕ್ಕೆ ಸೇರಿದ, 'ಅಕ್ಷರ ಜಾತಿ' ವರ್ಗದ ಛಂದೋಬಂಧಗಳ ವಿಚಾರ ವಿಮರ್ಶೆ ನಡೆದಿದೆ. 'ಅಕ್ಷರ ಜಾತಿ' ಗಳಲ್ಲಿ ಪ್ರಧಾನವಾದ 'ಅನುಷ್ಟುಪ್ ಶ್ಲೋಕ'ದ ಛಂದೋವಿನ್ಯಾಸವನ್ನು ಸಮಗ್ರ ವಾಗಿ ಪರಿಶೀಲನೆ ಮಾಡಿದ್ದಾರೆ–ಶ್ರೀಯುತರು. ಶ್ಲೋಕವು ಪಾದಪರಿಮಾಣ ದೃಷ್ಟಿ ಯಿಂದ ಸಮಚತುಷ್ಪದ ಬಂಧವಾದರೂ, ಛಂದೋಗತಿಗನುವಾಗಿ ಅದನ್ನು ಒಂದು 'ದ್ವಿಪದ ಬಂಧ'ವೆಂದು ಹೇಳಲೂ ಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಛಂದೋಗ್ರಂಥಗಳಲ್ಲಿ ಅನುಷ್ಟುಪ್ ಶ್ಲೋಕವನ್ನು "ವಿಷಮ ವೃತ್ತ" ಗಳ ವರ್ಗಕ್ಕೆ ಸೇರಿಸಿರುವುದನ್ನು ಅಲ್ಲಗಳೆದು, ಗುರುಲಘುಸ್ಥಿರವಲ್ಲದ ಅನುಷ್ಟುಪ್ ಶ್ಲೋಕ "ವೃತ್ತ"ವೇ ಅಲ್ಲವೆಂದು ಶ್ರೀಯುತರು ಸಾಧಿಸಿದ್ದಾರೆ. ಸಮತ್ವ ವಿಷಮತ್ವ ಗಳು ಗುರುಲಘುಸ್ಥಿರತ್ವವುಳ್ಳ ಛಂದೋಬಂಧಗಳಿಗೆ ಮಾತ್ರ ಅನ್ವಯಿಸತಕ್ಕವು; ಗುರುಲಘುಸ್ಥಿರವಲ್ಲದ 'ಜಾತಿಬಂಧ'ಗಳಿಗೆ ಅನ್ವಯಿಸತಕ್ಕವಲ್ಲ (ಅಡಿಟಿಪ್ಪಣಿ 87). ಅನಂತರ, ಗುರ್ವಕ್ಷರಪ್ರಾಧಾನ್ಯದ ಮಧ್ಯಗತಿಯನ್ನುಳ್ಳ ಲೌಕಿಕ ಸಂಸ್ಕೃತದ ಜಾಯಮಾನಕ್ಕೆ ಅನುಷ್ಟುಪ್ ಶ್ಲೋಕಬಂಧವು ಸಹಜವಾಗಿ ಒಗ್ಗಿರುವ ಹಾಗೆ ಲಘ್ವಕ್ಷರಗಳ ಪ್ರಾಧಾನ್ಯವಿರುವ ಪದಗಳುಳ್ಳ ಕನ್ನಡಕ್ಕೆ ಸಹಜವಾಗಿಯೇ ಒಗ್ಗಿ ಬಂದಿಲ್ಲ ಎಂಬ ಮಾತು ಒಪ್ಪತಕ್ಕದ್ದು. ಅನುಷ್ಟುಪ್ ಶ್ಲೋಕದಲ್ಲಿ ಕಾಣಬರುವ ಗುರ್ವಕ್ಷರಗಳ ಪ್ರಾಧಾನ್ಯವನ್ನು ಉದಾಹರಣೆಗಳ ಮೂಲಕ ತೋರಗೊಟ್ಟಿದ್ದಾರೆ. ವಾಸ್ತವವಾಗಿ ದ್ವಿಪಾದಬಂಧವಾಗಿರುವ ಅನುಷ್ಟುಪ್ ಶ್ಲೋಕದ ಬಗೆಗೆ ಶ್ರೀಯುತರು ಹೇಳಿರುವ ಕೊನೆಯ ಮಾತು ಗಮನಾರ್ಹ: "ಉಕ್ತಪರಿಮಿತಿಗಳೊಳಗೆ ಯಥಾಕ್ಷರ ಗುರು ಲಘುವಾಗಿಯೇ ಪಠಿಸಲ್ಪಡುವ ೩೨ ಅಕ್ಷರಗಳ ಸಮುದಾಯವಾಗಿರುವ ಮತ್ತು ವಿಭಿನ್ನ ಕಾಲಪರಿಮಾಣದ ಹಾಗೂ ವಿಭಿನ್ನ ಗುರು ಲಘು ವಿನ್ಯಾಸದ ಈ ವಿಷಮಗತಿಬಂಧದ ನಾನಾ ಶ್ಲೋಕಗಳೊಳಗೆ ಸಮಾನವೆಂದೇ ಭಾಸವಾಗುವ 'ಧಾಟಿ'ಯೊಂದು ಆವಿರ್ಭವಿಸಿ ನೆಲೆಗೊಂಡಿರುವುದು ಅನಿರ್ವಚನೀಯವೂ ವಿಸ್ಮಯಾ-ವಹವೂ ಆದೊಂದು ಗತಿತತ್ತ್ವರಹಸ್ಯವಾಗಿದೆ." ಸೇಡಿಯಾಪು ಅವರಂಥ ಛಂದಃ-ಪರಿಣತರ ಗತಿಪ್ರಜ್ಞೆಗೂ ದಕ್ಕದಿರುವುದೇ ಅನುಷ್ಟುಪ್ ಶ್ಲೋಕದ ಗತಿಸೌಂದರ್ಯ!

ಶ್ರೀ ಸೇಡಿಯಾಪು ಅವರು ಸಂಸ್ಕೃತವಾಙ್ಮಯದಲ್ಲಿ ವಿಪುಲವಾಗಿ ಪ್ರಯುಕ್ತ ವಾಗಿರುವ 'ಉಪಜಾತಿ' ಬಂಧಗಳ ವಿಚಾರವಾಗಿ ಪರಾಮರ್ಶೆಮಾಡುವ ಸಂಬಂಧ ದಲ್ಲಿ, ಕನ್ನಡದಲ್ಲಿ ಈ ಉಪಜಾತಿಗಳಿಗೆ ಸ್ಥಾನ ಲಭಿಸದಿರುವುದಕ್ಕೆ ಕನ್ನಡ ಪದ್ಯಗಳಲ್ಲಿ 'ಪ್ರಾಸ'ವು ನಿರಪವಾದವಾಗಿ ಇರಲೇಬೇಕಾದ ಒಂದು ನಿಯಮವೆ ಕಾರಣವೆನ್ನು

ತ್ತಾರೆ. ಪ್ರಾಸದ ಪ್ರಸ್ತಾವ ಬಂತೋ ಇಲ್ಲವೋ, ತಟ್ಟನೆ ಪ್ರಾಸಲಕ್ಷಣದ ಕಡೆಗೆ ಅವರ ಗಮನ ಹರಿಯುತ್ತದೆ. ಆ ಕುರಿತು ಜಯಕೀರ್ತಿ ಹೇಳಿರುವ ಪ್ರಾಸಲಕ್ಷಣವನ್ನು ವಿವರಿಸಿ, "ಪ್ರಾಸವೆಂಬುದು ಪಾದಾದಿಯ ಛಂದೋವಿನ್ಯಾಸ ವನ್ನೂ ನಿಯಂತ್ರಿಸುವ ಕಾರಣ, ಅದು ಅನುಪ್ರಾಸದಂತೆ ಕೇವಲ ಅಲಂಕಾರಶಾಸ್ತ್ರ ವಿಷಯಕವಾಗಿ ಉಳಿಯದೆ, ಛಂದಃಶಾಸ್ತ್ರದ ಕ್ಷೇತ್ರವನ್ನೂ ಪ್ರವೇಶಿಸಿರುವ ಶಬ್ದಾಲಂಕಾರ ವಿಶೇಷವಾಗಿರುತ್ತದೆ" ಎಂಬ ಹೊಸ ಸಂಗತಿಯೊಂದನ್ನು ಮುಂದಿಡು ತ್ತಾರೆ. ಇದು ವಿಚಾರಾರ್ಹವಾದ ವಿಷಯ : ಕನ್ನಡ ಕಾವ್ಯಗಳಲ್ಲಿ ಬಳಕೆಯಾಗಿ ರುವ ಯಾವುದೇ ಛಂದೋಬಂಧದ ಪಾದಾದಿಯ ಗಣದ ಛಂದೋವಿನ್ಯಾಸ (ಗುರು ಲಘು ಸ್ಥಾನಗಳು) ಪೂರ್ವನಿಶ್ಚಿತ. ಆದಿಯಲ್ಲಿ ಒಂದು ಗುರು ಇಲ್ಲವೆ ಗುರುಸ್ಥಾನ ದಲ್ಲಿ ಎರಡು ಲಘು (– ∪, ∪∪∪ ; – ∪∪, ∪∪ – ಇತ್ಯಾದಿ) ಇದ್ದೇ ತೀರಬೇಕು. ಪ್ರಥಮ ಪಾದದ ಗಣವಿನ್ಯಾಸಕ್ಕೆ ತಕ್ಕಂತೆ ಒಂದು ಪದ ನಿಕ್ಷಿಪ್ತ ವಾಗಿರುತ್ತದೆ ; ಈ ಪದದ ದ್ವಿತೀಯಾಕ್ಷರವಾದ ಪ್ರಾಸಾಕ್ಷರವನ್ನು ಅನುಸರಿಸಿಯೇ ಉಳಿದ ಪಾದಗಳ ಪ್ರಾಸಾಕ್ಷರವು ನಿಯೋಜಿತವಾಗುತ್ತದೆ. ಹೀಗಿರುವುದರಿಂದ, ಛಂದೋವಿನ್ಯಾಸವೇ ಪ್ರಾಸವನ್ನು ನಿಯಂತ್ರಿಸುತ್ತದೆ, ಎಂಬುದು ನನ್ನ ಅಭಿಪ್ರಾಯ. ಪ್ರಾಸರಹಿತವಾಗಿಯೂ ಯಾವುದೇ ಪದ್ಯವನ್ನು ಬರೆಯಲು ಶಕ್ಯವಿರುವುದರಿಂದ ಪ್ರಾಸವನ್ನು ಸಂಪೂರ್ಣವಾಗಿ ಶಬ್ದಾಲಂಕಾರವೆಂದೇ ಪರಿಗಣಿಸಬೇಕಾಗುತ್ತದೆ. ಹೀಗೆ ಹೇಳಿದ್ದರಿಂದ, ಕನ್ನಡ ಪದ್ಯರಚನೆಯಲ್ಲಿ ಪ್ರಾಸಕ್ಕಿರುವ ಸ್ಥಾನಮಹತ್ವವನ್ನು ನಾನು ಅಲ್ಲಗಳೆಯುತ್ತಿಲ್ಲ.

ಒಂಬತ್ತನೆಯ ಪರಿಚ್ಛೇದದಲ್ಲಿ ಶ್ರೀ ಸೇಡಿಯಾಪು ಅವರ ವಿಚಾರಪೂರ್ಣ ಪರಾಮರ್ಶೆಗೆ ಒಳಗಾಗಿರುವ ಒಂದು ಮುಖ್ಯ ಛಂದಸ್ತತ್ತ್ವ ವೈದಿಕ ಪದ್ಯಗಳ ಉದಾತ್ತಾದಿ 'ತ್ರೈಸ್ವರ್ಯ' ವಿಧಾನ. ಇದನ್ನು ಕುರಿತು ಶ್ರೀ ವೇಲಣಕರರು— "ವೈದಿಕ ಪದ್ಯಗಳ ಛಂದಸ್ಸೌಂದರ್ಯವು (=ಛಂದೋಗತಿಸೌಂದರ್ಯ=ಶ್ರವ್ಯತ್ವ= metrical music) 'ಸ್ವರಪರಿವರ್ತನ'ವನ್ನು ಆಧರಿಸಿದೆ ಹೊರತು, ಆ ಸೌಂದರ್ಯದ ನಿಷ್ಪತ್ತಿಯಲ್ಲಿ ಅಕ್ಷರೋಚ್ಚಾರದ ಕಾಲಪರಿಮಾಣಕ್ಕೆ ಮಹತ್ತ್ವವಿಲ್ಲ"[9] — ಎಂದಿರು

9. "All these Vedic metres are based on 'swarasangita' or the music of Voice-modulation, where the time element plays no important role in the production of the metrical music" (Jayadaman, p. 9). ("ಶ್ರೀ ವೇಲಣಕರರು—ವೈದಿಕ ಪದ್ಯಗಳ ಛಂದೋ ಗತಿ ಸೌಂದರ್ಯವು 'ಕಾಲತತ್ತ್ವ' ನಿರಪೇಕ್ಷವೆಂದೂ, ಅದು ಕೇವಲ ಸ್ವರಪರಿವರ್ತನಾವಲಂಬಿ ಯೆಂದೂ ಹೇಳುತ್ತಾರಲ್ಲಾ!" (ಪು. ೧೮೭) ಎಂದು ಶ್ರೀ ಸೇಡಿಯಾಪು ಅವರು ಹೇಳಿರುವುದರಲ್ಲಿ, ಅವರು ವೇಲಣಕರರ ಆಶಯವನ್ನು ಸರಿಯಾಗಿ ಗ್ರಹಿಸಿಲ್ಲ ಎಂದು ತೋರುತ್ತದೆ. ವೇಲಣಕರರ ಹೇಳಿಕೆಯನ್ನು ಗಮನವಿಟ್ಟು ಓದಿದ್ದೇ ಆದರೆ, 'ಸ್ವರಪರಿವರ್ತನ'ದಲ್ಲಿ ಕಾಲಪರಿಮಾಣದ ಪಾತ್ರ

ವುದನ್ನು ಶ್ರೀಯುತರು "ಶ್ರೀ ವೇಲಣಕರರು – ವೈದಿಕಪದ್ಯಗಳ ಛಂದೋಗತಿ ಸೌಂದರ್ಯವು 'ಕಾಲತತ್ತ್ವ' ನಿರಪೇಕ್ಷವೆಂದೂ, ಕೇವಲ ಸ್ವರಪರಿವರ್ತನಾವಲಂಬಿ ಯೆಂದೂ ಹೇಳುತ್ತಾರೆ" ಎಂಬಲ್ಲಿ ಪ್ರಬಲವಾಗಿ ಖಂಡಿಸಿದ್ದಾರೆ. ವೇದವಾಙ್ಮಯದ ಈಷತ್ಪರಿಚಯವೂ ಇಲ್ಲದ ನಾನು ಈ ಸಂಬಂಧದಲ್ಲಿ ಶ್ರೀ ಸೇಡಿಯಾಪು ಅವರು ವ್ಯಕ್ತಪಡಿಸಿರುವ ವಿಚಾರಧಾರೆಯ ಬಗೆಗೆ ಏನೇ ಹೇಳಿದರೂ ಅದು ಬಾಲಿಶ ವಾಗಿ ಕಾಣಬಹುದು; ಆದರೆ, ತ್ರೈಸ್ವರ್ಯ ವಿಷಯಕವಾಗಿ ಶ್ರೀಯುತರು ಅಧಿಕಾರವಾಣಿಯಿಂದ ನಡಸಿರುವ ಚರ್ಚೆ ಉನ್ನತಮಟ್ಟದ್ದೇ ಆದರೂ 'ತ್ರೈಸ್ವರ್ಯ ವಿಧಾನ'ದಲ್ಲಿ ವೇಲಣಕರರನ್ನು ಮೇಲಕ್ಕೆತ್ತಿ ಕೆಳಕ್ಕಿಳಿಸಿರುವುದು ಸರಿಯಲ್ಲ ಎನ್ನಿಸು ತ್ತದೆ. ವೈದಿಕಛಂದಗಳ ಪರಾಮರ್ಶೆಮಾಡುವ ವಿಚಾರಕ್ಕೆ ಸಂಬಂಧಪಟ್ಟಂತೆಯೇ ಮರಾಠಿ ಭಾಷೆಯಲ್ಲಿ ಪ್ರಚಲಿತವಿದ್ದ ಪ್ರಾಚೀನ ಛಂದೋರೂಪವಾದ 'ಓವಿ'ಯ ಬಗೆಗೂ ವಿಚಾರಮಾಡಿದ್ದಾರೆ. ಈ ಸಂಬಂಧದ ಅಡಿಟಿಪ್ಪಣಿಯಲ್ಲಿ (97, ಪು. ೨೧೪) ಮಾನ್ಯ ಲೇಖಕರು ವ್ಯಕ್ತಪಡಿಸಿರುವ ಅಭಿಪ್ರಾಯವು ವೈದಿಕ ಛಂದಗಳ ಸ್ವರೂಪ ವನ್ನು ಯಥಾವತ್ತಾಗಿ ತಿಳಿಸುತ್ತದೆ: "ವೈದಿಕ ಛಂದಗಳ ಈ ಸ್ವಚ್ಛಂದತೆಯಿಂದಾಗಿ ಅವುಗಳ ರೂಪವು ಅವ್ಯವಸ್ಥಿತವಾಗಿ ಪರಿಣಮಿಸಿತಾದರೂ, ಅವುಗಳಲ್ಲಿ ಯಾದೃಚ್ಛಿಕ ವಾಗಿ ಅಲ್ಲಲ್ಲಿ ಉನ್ಮೀಲಿಸಿದ–ಲಯರಹಿತವಾದರೂ ಆಕರ್ಷಕವಾದ–ಅಕ್ಷರಗತಿರೂಪ ಗಳು, (ಇತರ ಯಾವ ಭಾಷೆಯಲ್ಲಿಯೂ ಹುಟ್ಟದ) ವಿಷಮಗತಿ ಬಂಧಗಳಿಗೆ ಲೌಕಿಕ ಸಂಸ್ಕೃತದಲ್ಲಿ ಜನ್ಮವಿತ್ತವು: ಮತ್ತು ಛಂದಃ ಸುವ್ಯವಸ್ಥೆಯ ಹಾಗೂ ಛಂದೋಗತಿ ಸೌಂದರ್ಯದ ಪರಾಕಾಷ್ಠೆಯನ್ನು ಮುಟ್ಟಿರುವ 'ವೃತ್ತಗಳ' ಆವಿರ್ಭಾವಕ್ಕೂ ಕಾರಣವಾದವು."

ಶ್ರೀ ಸೇಡಿಯಾಪು ಕೃಷ್ಣಭಟ್ಟರ ಸರ್ವಂಕಷವೂ ಅಗಾಧವೂ ಛಂದಃಪ್ರತಿಭಾ-ನ್ವಿತವೂ ಆದ ಛಂದಶ್ಶಾಸ್ತ್ರ ಪಾಂಡಿತ್ಯದ ಫಲ ಈ 'ಛಂದೋಗತಿ' ಎಂಬ ಶಾಸ್ತ್ರ ಸಾಹಿತ್ಯ ರತ್ನ. ಛಂದೋಗತಿ ಪರಾಮರ್ಶೆ ಒಂದು ವಟವೃಕ್ಷದಂತಿದ್ದು, ಛಂದೋಗತಿ ವೈವಿಧ್ಯ ಪೃಥಕ್ಕರಣ ಆ ವೃಕ್ಷದ ಶಾಖೋಪಶಾಖಾವಳಿಯಂತಿದೆ; ವಿಷಯಾಂತರ ವೆಂದು ಭಾಸವಾಗುವ ಅಡಿಟಿಪ್ಪಣಿಗಳು ಆ ಶಾಖೆಗಳು ಬಿಟ್ಟ ಬಿಳಲುಗಳು. ಈ ವೃಕ್ಷಚ್ಛಾಯೆಯನ್ನು ಆಶ್ರಯಿಸಿ ಛಂದೋಗತಿಸೌಂದರ್ಯಾನುಭವವನ್ನು ಪಡೆಯ ಬಲ್ಲವರು ಕಾವ್ಯಾನುಭವಿಗಳೂ ಆಗಲುಳ್ಳವರು.

ಗ್ರಂಥದಲ್ಲಿ ಪಾರಿಭಾಷಿಕ ಪದಗಳ ಅಕಾರಾದಿ ಇಲ್ಲದಿರುವುದು ಒಂದು ಕೊರತೆ. ಗ್ರಂಥಸೌಲ್ಯಕ್ಕೆ ಒಪ್ಪಾಗುವಂತೆ ಅಚ್ಚುಕಟ್ಟಾಗಿ ಗ್ರಂಥವನ್ನು ಹೊರತಂದಿರುವ ಮೈಸೂರಿನ ಗೀತಾ ಬುಕ್ ಹೌಸ್ ಅಭಿನಂದನೆಗೆ ಪಾತ್ರರು.

—ಎಂ. ವಿ. ಸೀತಾರಾಮಯ್ಯ

ಮುಖ್ಯವಲ್ಲ ಎಂದಿರುವುದರ ತಾತ್ಪರ್ಯ 'ಅದರ ಪಾತ್ರ ಗೌಣ' ಎಂದಾಗುತ್ತದೆಯೇ ಹೊರತು 'ಇಲ್ಲವೆ ಇಲ್ಲ' ಎಂದಾಗುವುದಿಲ್ಲ.)

ವಸ್ತು ಸಂಗ್ರಹ

ರೈಸರ ಜನ್ಮಸ್ಥಳ

"ಶಾಸನತಜ್ಞ ರೈಸರು ಹುಟ್ಟಿದ್ದು ಜರ್ಮನಿಯಲ್ಲಿ ಮತ್ತು ಅವರು ಮದ್ರಾಸ್ ಮೂಲಕ ಬೆಂಗಳೂರಿಗೆ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಬಂದರು." ಎಂಬ ತಮ್ಮ ನಿಲುವನ್ನು ಶ್ರೀ ಧೂಲೇಕರ, ಚಂದ್ರಶೇಖರರು ದಿನಾಂಕ 15-2-87ರ 'ಕನ್ನಡ ಪ್ರಭ'ದಲ್ಲಿ ಪುನರುಚ್ಚರಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡ ರೈಸ್ ಒಬ್ಬರಲ್ಲ, ಮೂರು ಜನ. ಒಬ್ಬ ರೈಸ್ ಶಾಸನತಜ್ಞರು. ಅವರ ತೊಟ್ಟಿಲ ಹೆಸರು ಲೂಯಿ ರೈಸ್. ಇನ್ನೊಬ್ಬರು ಇಂಗ್ಲಿಷಿನಲ್ಲಿ ಕನ್ನಡ ಸಾಹಿತ್ಯದ ಚರಿತ್ರೆ ಬರೆದ ಇ. ಪಿ. ರೈಸ್. ಮೂರನೆಯವರು ಪಾದ್ರಿಗಳು. ಅವರ ಪೂರ್ಣ ಹೆಸರು ಬೆಂಜಮಿನ್ ಹೋಲ್ಟ್ ರೈಸ್. ಇವರ ಖಾಸಾ ಮಗನೇ 'ಲೂಯಿ'. ಈ ರೆವರೆಂಡ್ ರೈಸ್‌ರ ಸುದೀರ್ಘ ಚರಿತ್ರೆಯನ್ನು ಇ. ಪಿ. ರೈಸ್ ಬರೆದಿದ್ದಾರೆ, ಈ ಅಧಿಕೃತ ಚರಿತ್ರೆಯ ಪ್ರಕಾರ ರೆವರೆಂಡ್ ರೈಸ್ ಹುಟ್ಟಿದ್ದು ಜರ್ಮನಿಯಲ್ಲಿ. ಮದ್ರಾಸ್ ಮೂಲಕವಾಗಿ ಬೆಂಗಳೂರಿಗೆ ಬಂದದ್ದೂ ಅವರೇ. ಅದರ ದಿನಾಂಕ 5-1-1837. ಬರುವಾಗ ಗರ್ಭಿಣಿಯಾದ ಪತ್ನಿಯನ್ನೂ ಕರೆತಂದಿದ್ದರು. ಹಾಗೆ ಅವರಿಗೆ 17 ಜುಲೈ 1837ರಂದು ಹಿರಿಯ ಮಗನಾದ ಲೂಯಿ ರೈಸ್ ಹುಟ್ಟಿದ. ಬೆಂಗಳೂರಿನ 'ಕೋಟೆ' ಪ್ರದೇಶದಲ್ಲಿ ಅವರು ವಾಸವಾಗಿದ್ದ (ಎಂದರೆ ಲೂಯಿ ಜನಿಸಿದ್ದು) ಮನೆಯ ಹೆಸರನ್ನೂ ಹೇಳಬಹುದು, 'ಸೇಂಟ್ ಮಾರ್ಕ್ಸ್ ಹೌಸ್' (ಈ ವಿವರಗಳಿಗೆ ಇನ್ನಷ್ಟು ಖಚಿತ ಬೇಕಿದ್ದರೆ, ಬೆಂಗಳೂರಿನ ಯು.ಟಿ.ಸಿ. ಕಾಲೇಜಿನಲ್ಲಿರುವ ಲಂಡನ್ ಮಿಶನ್‌ಗೆ ಸಂಬಂಧಿಸಿದ ಮೂಲ ದಾಖಲೆಗಳನ್ನೂ ನೋಡಬಹುದು). ಲೂಯಿ ಬೆಂಗಳೂರಲ್ಲಿ ಹೀಗೆ ತನ್ನ ಶೈಶವವನ್ನು ಕಳೆದ ಮೇಲೆ 1848ರಲ್ಲಿ ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಹೋದ. ತರುಣ ವಯಸ್ಸಿನಲ್ಲಿ ಮರಳಿ ಬೆಂಗಳೂರಿಗೆ ಬಂದ.

ಈ ತಂದೆ-ಮಕ್ಕಳ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಶ್ರೀ ಐ. ಮಾ. ಮುತ್ತಣ್ಣ ಮೊದಲಿಗೆ ತಪ್ಪು ಮಾಡಿದರು. (ಅವರು ಮಾಡಿದ ಇನ್ನೂ ಇಂಥ ಅನೇಕ ತಪ್ಪುಗಳ ಸರಮಾಲೆಯೇ 'ಪ್ರಬುದ್ಧಕರ್ಣಾಟಕ'ದ 1970ರ ಒಂದು ಸಂಚಿಕೆಯಲ್ಲಿ ಬಂದಿದೆ. ಇರಲಿ. ಅವರನ್ನು ಮುಖ್ಯವಾಗಿ ಆಧರಿಸಿದ್ದರಿಂದಲೇ ಧೂಲೇಕರರು ತಪ್ಪಾಗಿ ಗ್ರಹಿಸಿದ್ದಾರೆ.

ಲೂಯಿ ರೈಸ್ 1927ರಲ್ಲಿ ತೀರಿಕೊಂಡಮೇಲೆ. ಅವರನ್ನು ಕುರಿತು ಅಧಿಕೃತವಾದ ಲೇಖನಗಳು ಇಂಗ್ಲೆಂಡ್ ಭಾರತಗಳಲ್ಲಿ ಪ್ರಕಟವಾದವು. ಅವುಗಳಲ್ಲಿ,

'ಪ್ರಬುದ್ಧ ಕರ್ಣಾಟಕ'ದ ಸಂಚಿಕೆ 34ರಲ್ಲಿ ಆಗಿನ ಸಂಪಾದಕ ಎ. ಆರ್. ಕೃಷ್ಣಶಾಸ್ತ್ರಿಗಳು ಬರೆದ ಲೇಖನದಲ್ಲಿ, ರೈಸ್ ಅವರ ಜನ್ಮಸ್ಥಳ ಬೆಂಗಳೂರು ಎಂದೇ ಇದೆ.

ಈ ಕುರಿತು ಇನ್ನುಮುಂದೆ ಸಂದೇಹ, ವಿವಾದ ಏಳಬೇಕಾದದ್ದಿಲ್ಲ.

—ಶ್ರೀನಿವಾಸ ಹಾವನೂರ, ಮುಂಬಯಿ
(ಕೃಪೆ: 'ಕನ್ನಡ ಪ್ರಭ'; 1-3-1987)

ಲೆನಿನ್‌ಗ್ರಾದ್ ದ್ರಾವಿಡ ಭಾಷಾಧ್ಯಯನ ಪೀಠ

ರಶಿಯದಲ್ಲಿ ಭಾರತೀಯ ಭಾಷೆಗಳ ಅಧ್ಯಯನವನ್ನು ೧೯ನೆಯ ಶತಮಾನದ ಮಧ್ಯಭಾಗದಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ನ (ಈಗಿನ ಲೆನಿನ್‌ಗ್ರಾದ್) ವಿಶ್ವವಿದ್ಯಾಲಯದಲ್ಲಿ ಆರಂಭಿಸಲಾಗಿತ್ತು. ಪಶ್ಚಿಮ ಯೂರೋಪಿನಲ್ಲಿಯಂತೆ ಮೊದಲು ಭಾರತದ ಮತ್ತು ಅದರ ಸಂಸ್ಕೃತಿಯ, ಮುಖ್ಯವಾಗಿ ಅದರ ಪ್ರಾಚೀನ ಭಾಷೆಗಳ ವಿಷಯಕ್ಕೆ ಮುಖ್ಯ ಗಮನ ನೀಡಲಾಗಿತ್ತು. ಆದರೆ ಆ ಕಾಲದಲ್ಲೇ ರಶಿಯನ್ ಇಂಡಾಲಜಿಯ ಸಂಸ್ಥಾಪಕ ಇವಾನ್ ಪಾವ್ಲೊವಿಚ್ ಮಿನಾಯೇವ್ (೧೮೪೦-೧೮೯೦) ಅವರು ಭಾರತೀಯ ಜೀವಂತ ಭಾಷೆಗಳ ಅಧ್ಯಯನ ಮಾಡುವುದು ಸಹ ಅತ್ಯವಶ್ಯವೆಂದು ಹೇಳಿದ್ದರು.

ಕ್ರಮೇಣ ದ್ರಾವಿಡ ಭಾಷೆಗಳ, ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿ ಸಂಪತ್ತು ಹಾಗೂ ಮೂಲರೂಪ ಇವು ಜಗತ್ತಿನ ಬೇರೆ ಭಾಗಗಳ ಗಮನವನ್ನೂ ಸೆಳೆಯತೊಡಗಿದವು. ಅವುಗಳ ಅಧ್ಯಯನ ಮಾಡುವುದು ಅಗತ್ಯವೆಂಬ ಭಾವನೆ ರಶಿಯದಲ್ಲಿ ೨೦ನೆಯ ಶತಮಾನದ ಆರಂಭದಲ್ಲೇ ಸ್ಪಷ್ಟವಾಗಿ ವ್ಯಕ್ತಗೊಳ್ಳತೊಡಗಿತು.

ನರಕುಲ ಮತ್ತು ಬುಡಕಟ್ಟು ಶಾಸ್ತ್ರ ಮ್ಯೂಸಿಯಮ್ಮು ತನ್ನ ೨೦೦ನೆಯ ವಾರ್ಷಿಕೋತ್ಸವದ (ಇದನ್ನು ಮಹಾನ್ ಪೀಟರನು ೧೭೧೪ರಲ್ಲಿ ಸ್ಥಾಪಿಸಿದ್ದ) ಸಂದರ್ಭದಲ್ಲಿ ಒಂದು ವಿಶೇಷ ನಿಯೋಗವನ್ನು ಭಾರತಕ್ಕೆ ಕಳಿಸಿಕೊಡಲಾಗಿತ್ತು. ದಕ್ಷಿಣ ಭಾರತದ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡುವುದು ಆ ನಿಯೋಗದ ಮುಖ್ಯ ಉದ್ದೇಶವಾಗಿತ್ತು. ಲ್ಯೂದ್ಮಿಲಾ ಮತ್ತು ಅಲೆಕ್ಸಾಂದರ್ ಮೆರ್ವರ್ತ್ ಎಂಬ ದಂಪತಿಗಳು ಆ ನಿಯೋಗದಲ್ಲಿದ್ದರು.

ಮದರಾಸು, ಅವರು ಭೇಟಿ ನೀಡಿದ ಮೊದಲ ಭಾರತೀಯ ನಗರವಾಗಿತ್ತು. ಆ ವಿದ್ವಾಂಸರುಗಳು ನಾಲ್ಕು ವರ್ಷಗಳವರೆಗೆ ಭಾರತದಲ್ಲಿದ್ದರು. ಅವರು ದಕ್ಷಿಣೋತ್ತರಗಳಲ್ಲಿ ಪ್ರವಾಸ ಮಾಡಿದರು. ಅನೇಕ ಸಾಂಸ್ಕೃತಿಕ ಕೇಂದ್ರಗಳಿಗೆ ಭೇಟಿಕೊಟ್ಟರು ಮತ್ತು ನಗರ ಹಾಗೂ ಗ್ರಾಮ ಬದುಕನ್ನು ವೀಕ್ಷಿಸಿದರು. ತಮಿಳರ,

ಮಲಯಾಳಿಗಳ ಮತ್ತು ಇತರ ಇಂಡಿಯನ್ ಜನತೆಗಳ ನಿತ್ಯ ಬದುಕಿಗೆ, ಕಲೆಗೆ ಸಂಬಂಧಪಟ್ಟ ಅನೇಕ ಪರಂಪರಾಗತ ವಸ್ತುಗಳನ್ನೊಳಗೊಂಡು ಸುಮಾರು ೫,೮೦೦ ದಷ್ಟು ವಸ್ತುಗಳನ್ನು ಅವರು ಸಂಗ್ರಹಿಸಿದರು.

ಆ ನಿಯೋಗದವರು ದಕ್ಷಿಣಭಾರತದಲ್ಲಿ ಜೀವನದ ರೀತಿ, ಸಂಸ್ಕೃತಿ ಮತ್ತು ಸ್ಥಳೀಯ ಭಾಷೆಗಳ ಬಗ್ಗೆ ಅಧ್ಯಯನ ಮಾಡಿದರು. ಅಲೆಕ್ಸಾಂದರ್ ಮೆರ್ವರ್ತ್ (೧೮೮೪–೧೯೩೨) ಅವರು ತಮಿಳು ಭಾಷೆಯ ವಿಷಯದಲ್ಲಿ ಮೊತ್ತಮೊದಲನೆಯ ರಶಿಯನ್ ಪರಿಣತರಾದರು. ಅವರ ಪ್ರಯತ್ನದಿಂದಾಗಿ ತಮಿಳು ಭಾಷಾಧ್ಯಯನ ವನ್ನು ಇಪ್ಪತ್ತರ ದಶಕದ ಮಧ್ಯಭಾಗದಲ್ಲಿ ವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ಸೇರಿಸಲಾಯಿತು. ೧೯೨೯ರಲ್ಲಿ ಅವರು **ಸ್ಪೋಕನ್ ತಮಿಳ್ ಗ್ರಾಮರ್** (ತಮಿಳು ಆಡುಭಾಷಾ ವ್ಯಾಕರಣ) ಎಂಬ ಪುಸ್ತಕವನ್ನು ಪ್ರಕಟಿಸಿದರು. ಇಂದಿಗೂ ಆ ಪುಸ್ತಕ ಭಾಷಾ ಶಾಸ್ತ್ರೀಯ ಮೌಲ್ಯವನ್ನು ಕಳೆದುಕೊಂಡಿಲ್ಲ.

೧೯೩೦ರ ದಶಕದಲ್ಲಿ ಹಿಂದಿ, ಮರಾಠಿ, ಉರ್ದು ಮತ್ತು ಬಂಗಾಲಿ ಭಾಷೆ ಗಳನ್ನೂ ಲೆನಿನ್‌ಗ್ರಾದ್ ವಿಶ್ವವಿದ್ಯಾಲಯದ ಭಾರತೀಯ ಭಾಷಾಶಾಸ್ತ್ರ ವಿಭಾಗದ ಪಾಠಕ್ರಮದಲ್ಲಿ ಸೇರಿಸಲಾಯಿತು. ಅಧ್ಯಯನದ ಭಾಷೆಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಲು ಯೋಜಿಸಲಾಗಿತ್ತು. ಆದರೆ ಎರಡನೆಯ ಜಾಗತಿಕ ಯುದ್ಧದಿಂದಾಗಿ ಆ ಯೋಜನೆ ನೆರವೇರಲಿಲ್ಲ,

ಅನೇಕ ವರ್ಷಗಳು ಹಾಗೇ ಕಳೆದ ತರುವಾಯ ಬೇರೆ ಬೇರೆ ಭಾಷೆಗಳ ಬೋಧನೆಯನ್ನು ಪುನಃ ಮೊದಲಿನಿಂದ ಆರಂಭ ಮಾಡಬೇಕಾಯಿತು. ಸಾಹಿತ್ಯಿಕ ಮತ್ತು ಆಡುತಮಿಳು ಭಾಷೆಗಳೆರಡರ ಬೋಧನೆಯನ್ನೂ ಸಂಘಟಿಸುವ ಮೂಲಕ ಸೆಮ್ಯೋನ್ ರೂದಿನ್ ಅವರು ಲೆನಿನ್‌ಗ್ರಾದ್ ಇಂಡಾಲಜಿಯ ದ್ರಾವಿಡಿಯನ್ ಪ್ರವಣತೆಗೆ ಹೊಸ ಜೀವ ತುಂಬಿದರು. ಅವರು ತಮಿಳು ಭಾಷೆಯಲ್ಲಿ ಕವನಗಳನ್ನು ಸಹ ರಚಿಸಿದರು. ೧೯೭೨ರಲ್ಲಿ ಪ್ರಕಟವಾದ **ದಿ ಮಾರ್ಫಲಾಜಿಕಲ್ ಸ್ಟ್ರಕ್ಚರ್ ಆಫ್ ತಮಿಳ್ ಲ್ಯಾಂಗ್ವೇಜ್** (ತಮಿಳು ಭಾಷೆಯ ಶಬ್ದರೂಪರಚನ ಶಾಸ್ತ್ರ) ಎಂಬುದು ಅವರ ಪ್ರಧಾನ ಕೃತಿ.

ಮದರಾಸು ವಿಶ್ವವಿದ್ಯಾಲಯದ ಪ್ರೊ॥ ಎಂ. ಆದಿಲಕ್ಷ್ಮಿ (೧೯೩೩–೧೯೬೨) ಅವರು ಸಹ ಲೆನಿನ್‌ಗ್ರಾದ್‌ನಲ್ಲಿ ದ್ರಾವಿಡ ಭಾಷೆಗಳನ್ನು ಕಲಿಸುವುದರಲ್ಲಿ ಮಹತ್ವದ ಪಾತ್ರ ನಿರ್ವಹಿಸಿದರು. ಐವತ್ತರ ದಶಕದ ಕೊನೆಯಲ್ಲಿ ಭಾರತೀಯ ಭಾಷಾಶಾಸ್ತ್ರ ವಿಷಯಕ ವಿಭಾಗದಲ್ಲಿ ಕಾರ್ಯಕ್ಕಾಗಿ ಅವರನ್ನು ಲೆನಿನ್‌ಗ್ರಾದ್ ವಿಶ್ವವಿದ್ಯಾಲಯ ಆಮಂತ್ರಿಸಿತ್ತು. ಆಕೆ ತಮಿಳು ಭಾಷೆಯನ್ನು ಕಲಿಸಿದರು ಮತ್ತು ತೆಲುಗು ಭಾಷಾ ಕೋರ್ಸನ್ನು ಆರಂಭಿಸಿದರು. ಪ್ರೊ॥ ಆದಿಲಕ್ಷ್ಮಿ ಅವರು ತೆಲುಗು ಭಾಷೆಯಲ್ಲಿ ತಮ್ಮ ಸ್ನಾತಕೋತ್ತರ ವಿದ್ಯಾರ್ಥಿ ನಿಕಿತಾ ಗುರೋವ್‌ರನ್ನು ತರಬೇತುಗೊಳಿಸಿದರು.

ಬೋಧನ ಕಾರ್ಯದ ಜೊತೆಯಲ್ಲೇ ಪ್ರೊ॥ ಆದಿಲಕ್ಷ್ಮಿ ಅವರು ಸಂಶೋಧನಾ ಕಾರ್ಯವನ್ನು ನಿರ್ವಹಿಸಿದರು. ಆಕೆ ತೆಲುಗು ಐತಿಹ್ಯಗಳ ಕುರಿತು ಲೇಖನಗಳನ್ನು ಬರೆದರು; ತಮಿಳು-ರಶಿಯನ್ ಮತ್ತು ತೆಲುಗು-ರಶಿಯನ್ ಶಬ್ದಕೋಶಗಳನ್ನು ರಚಿಸಿದರು.

ದುರದೃಷ್ಟವಶಾತ್, ಈ ಶ್ರೇಷ್ಠ ವ್ಯಕ್ತಿಗಳು ಈಗ ನಮ್ಮ ಮಧ್ಯೆ ಇಲ್ಲ. ಆದರೆ ಅವರ ಉದಾತ್ತ ಪ್ರಯತ್ನಗಳು ಗಮನಾರ್ಹ ಫಲಿತಾಂಶಗಳನ್ನು ನೀಡಿವೆ. ಅವರು ತಮ್ಮ ಜ್ಞಾನವನ್ನು ನಮಗೆ ನೀಡಿದ್ದಾರೆ. ಅವರು ಬರೆದ ಪುಸ್ತಕಗಳು ಮತ್ತು ಲೇಖನಗಳು ನಮ್ಮ ಬಳಿ ಇವೆ. ಅವರ ವಿದ್ಯಾರ್ಥಿಗಳು ಬೇರೆ ಬೇರೆ ಕ್ಷೇತ್ರಗಳಲ್ಲಿ ಅನುವಾದಕರುಗಳಾಗಿಯೋ, ಸಂಪಾದಕರುಗಳಾಗಿಯೋ, ಬಾನುಲಿ ಅನೌನ್ಸರುಗಳಾಗಿಯೋ, ಸಂಶೋಧನಾ ಕಾರ್ಯಕರ್ತರುಗಳಾಗಿಯೋ ಕಾರ್ಯಮಾಡುತ್ತಿದ್ದಾರೆ, ಪ್ರೊ॥ ಆದಿಲಕ್ಷ್ಮಿಯವರಿಂದ ಶಿಕ್ಷಣ ಪಡೆದ ನಿಕಿತಾ ಗುರೊವ್ ಇಂದು ಸುಪರಿಚಿತ ವಿದ್ವಾಂಸರಾಗಿದ್ದಾರೆ. ಅವರು ಭಾರತೀಯ ಭಾಷಾಶಾಸ್ತ್ರ ವಿಭಾಗದಲ್ಲಿ ತಮಿಳು ಮತ್ತು ತೆಲುಗು ಭಾಷೆಗಳನ್ನು ಕಲಿಸುತ್ತಿದ್ದಾರೆ.

ಮಹಾನ್ ಪೀತರ್ ನಾಮಾಂಕಿತ ನರಕುಲ ಮತ್ತು ಬುಡಕಟ್ಟು ಶಾಸ್ತ್ರ ಮ್ಯೂಸಿಯಮಿನಲ್ಲೂ ದ್ರಾವಿಡ ಭಾಷಾಧ್ಯಯನಗಳನ್ನು ನಡೆಸಲಾಗುತ್ತದೆ, ಸೆಮ್ಯೋನ್ ರೂದಿನ್‌ರ ಶಿಷ್ಯೆ ಮಾರ್ಗರಿತಾ ಅಲ್ಬೆದಿಲ್ ಮಧ್ಯಕಾಲೀನ ತಮಿಳು ಸಾಹಿತ್ಯದ ಮೇರು ಕೃತಿ ತಿರುವಾಚಕಮ್ ಅನ್ನು ಅನುವಾದಿಸುತ್ತಿದ್ದಾರೆ ಮತ್ತು ವಿಶ್ಲೇಷಿಸುತ್ತಿದ್ದಾರೆ.

ಆಕೆ ತುಲನಾತ್ಮಕ ದ್ರವಿಡಿಯನ್ ಸಮಸ್ಯೆಗಳ ಬಗ್ಗೆ ಸಂಶೋಧನೆ ಮಾಡುತ್ತಿದ್ದಾರೆ. ೧೯೨೦ರ ದಶಕದಲ್ಲಿ ಸಿಂಧೂನದಿ ಕಣಿವೆಗಳಲ್ಲಿ ಪತ್ತೆಹಚ್ಚಲಾದ ಪ್ರಾಚೀನ ನಾಗರಿಕತೆಯ ಅವಶೇಷಗಳ ಮೇಲಿನ, ಜೇಡಿಮಣ್ಣಿನ ಮತ್ತು ಇತರ ವಸ್ತುಗಳ ಮೇಲಿನ ಪ್ರಾಗ್-ಭಾರತೀಯ ಪಾಠಗಳನ್ನು ಗುರುತಿಸುವುದಕ್ಕಾಗಿ ತುಲನಾತ್ಮಕ ದ್ರವಿಡಿಯನ್ ಸಮಸ್ಯೆಗಳ ಸಂಶೋಧನೆ ಮಾಡುವುದು ಅಗತ್ಯವಾಗಿದೆ.

ನರಕುಲ ಮತ್ತು ಬುಡಕಟ್ಟು ಶಾಸ್ತ್ರೀಯ ಮ್ಯೂಸಿಯಮ್‌ನಲ್ಲಿ ವಿದ್ವಾಂಸರುಗಳ ಒಂದು ತಂಡವು ಆ ಪ್ರಾಚೀನ ನಾಗರಿಕತೆಯ ರಹಸ್ಯಗಳನ್ನು ಭೇದಿಸಲು ಪ್ರಯತ್ನಿಸುತ್ತಿದೆ. ಪ್ರಾಚೀನ ಕಾಲದ ಬರಹಗಳನ್ನು ಗುರುತಿಸುವುದರಲ್ಲಿ ಪರಿಣತರಾದ ಯೂರಿ ಕ್ನೊರೊಜೊವ್ ಈ ತಂಡದ ನೇತೃತ್ವವಹಿಸಿದ್ದಾರೆ. ಸಮಕಾಲೀನ ದ್ರವಿಡಿಯನರ ಪೂರ್ವಜರೇ ಆ ನಾಗರಿಕತೆಯನ್ನು ನಿರ್ಮಾಣ ಮಾಡಿದ್ದರೆಂದು ಈ ತಂಡವು ಸಮರ್ಥಿಸಿದೆ. ಈ ತಂಡದವರು ಈಗಾಗಲೆ ಬಹಳಷ್ಟು ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಿದ್ದಾರೆ.

(ಕೃಪೆ: 'ಸೋವಿಯತ್ ನಾಡು')

[ಲೆನಿನ್‌ಗ್ರಾಡ್ ದ್ರಾವಿಡಭಾಷಾ ಅಧ್ಯಯನ ಪೀಠದಲ್ಲಿ ಕನ್ನಡಕ್ಕೆ ಇನ್ನೂ ಸ್ಥಾನ ದೊರಕಿಲ್ಲ. ತಮಿಳನ್ನು ಬಿಟ್ಟರೆ ಅತ್ಯಂತ ಪ್ರಾಚೀನ ಸಾಹಿತ್ಯಿಕ ಭಾಷೆಯಾದ ಕನ್ನಡವನ್ನುಳಿದ ದ್ರಾವಿಡಭಾಷಾ ಅಧ್ಯಯನ ಸಮಗ್ರವೆನಿಸದು. ಮುಂದಾದರೂ ಈ ಪೀಠದಲ್ಲಿ ಕನ್ನಡಕ್ಕೂ ಯಥೋಚಿತ ಸ್ಥಾನಮಾನ ದೊರಕುವುದೆಂದು ಆಶಿಸುತ್ತೇವೆ. —ಸಂ.]

ಜನ್ಮಶತಮಾನೋತ್ಸವಗಳು

ಈ ವರ್ಷ ಮೂವರು ಸಾಹಿತಿಗಳ ಜನ್ಮಶತಮಾನೋತ್ಸವಗಳು ಕೂಡಿಬಂದಿವೆ. ಅವರುಗಳು ಯಾರೆಂದರೆ, ನಂಜನಗೂಡು ತಿರುಮಲಾಂಬಾ, ಡಾ॥ ಡಿ. ವಿ. ಗುಂಡಪ್ಪ ಮತ್ತು ನಾರಾಯಣ ಶ್ರೀನಿವಾಸ ರಾಜಪುರೋಹಿತ.

ತಿರುಮಲಾಂಬಾ : ನಂಜನಗೂಡಿನಲ್ಲಿ ಶ್ರೀವೈಷ್ಣವ ಕುಟುಂಬದಲ್ಲಿ ಜನಿಸಿದ ಶ್ರೀಮತಿ ತಿರುಮಲಾಂಬಾ ಬಾಲ್ಯದಲ್ಲಿಯೇ ವಿಧವೆಯಾದದ್ದು ಆಕಸ್ಮಿಕ ಘಟನೆಯಾಗಿದ್ದು, ಕನ್ನಡ ಸಾಹಿತ್ಯ ಲೋಕಕ್ಕೆ ಅವರು ಪ್ರವೇಶಿಸಲು ಪ್ರೇರಕ ಸನ್ನಿವೇಶವಾಗಿ ಪರಿಣಮಿಸಿತು. ಹೆಚ್ಚಿನ ಶಿಕ್ಷಣ ಪಡೆಯುವ ಅನುಕೂಲತೆ ಇಲ್ಲದಿದ್ದ ಸನ್ನಿವೇಶದಲ್ಲಿ ಲಭ್ಯವಿದ್ದಷ್ಟು ಶಿಕ್ಷಣವನ್ನೂ ಭಾಷಾಸೇವೆಯ ಉತ್ಸಾಹವನ್ನೂ ಬಂಡವಾಳವಾಗಿ ಇಟ್ಟುಕೊಂಡು, ಮಹಿಳಾಸಾಹಿತ್ಯದ ವಾತಾವರಣವೇ ಇಲ್ಲದಿದ್ದ ಕಾಲದಲ್ಲಿ ಗ್ರಂಥ ರಚನೆ ಮತ್ತು ಪ್ರಕಾಶನ ಕಾರ್ಯವನ್ನು ಕೈಕೊಂಡು, ಸುಮಾರು 40 ವರ್ಷಗಳ ಕಾಲ ಸಾಹಿತ್ಯತಪಸ್ವಿನಿಯಾಗಿ ತಮ್ಮ ಒಂಟಿ ಬದುಕನ್ನು ಸಾರ್ಥಕಮಾಡಿಕೊಂಡರು ; ಮಹಿಳಾಲೋಕಕ್ಕೆ ಮಾರ್ಗದರ್ಶಿನಿ ಆದರು ; ಮಹಿಳಾ ಸಾಹಿತ್ಯದ ಆದ್ಯ ಪ್ರವರ್ತಿಕೆ ಆದರು. ಬರೆದದ್ದು ಮಾತ್ರವಲ್ಲದೆ, ತಮ್ಮ ಬರಹವನ್ನು ತಾವೇ ಪ್ರಕಟಿಸುವ ಸಾಹಸಕ್ಕೆ ಕೈಹಾಕಿ, ಕೀರ್ತಿಕಾಮನೆಯಿಲ್ಲದೆ ಲಾಭದಾಸೆಗೆ ಸೋಲದೆ, ನಿಷ್ಕಾಮ ಸಾಹಿತ್ಯಕರ್ಮವನ್ನು ಮಾಡಿದರು. 'ಕರ್ನಾಟಕ ನಂದಿನಿ' (1921 ರ ವರೆಗೆ), 'ಸನ್ಮಾರ್ಗದರ್ಶಿನಿ' ಎಂಬ ಮಾಸಪತ್ರಿಕೆಗಳನ್ನು ಕೆಲಕಾಲ ನಡಸಿ, ಕರ್ನಾಟಕದ ಏಕಮೇವ ಆದ್ಯ ಮಹಿಳಾ ಪತ್ರಿಕೋದ್ಯಮಿಯಾದರು ; 'ಸನ್ಮಾರ್ಗ ಗ್ರಂಥಾವಳಿ', 'ಸತೀ ಹಿತೈಷಿಣೀ ಮಾಲೆ'ಗಳ ಮೂಲಕ ಅನೇಕ ಗ್ರಂಥಗಳನ್ನು ಪ್ರಕಟಿಸಿದರು.

ತಿರುಮಲಾಂಬಾ ವಿಧವೆಯಾದದ್ದರಿಂದಲೋ ಏನೋ 'ವಿಧವಾ ತತ್ತ್ವ' ಎಂಬ ವಿಧವಾ ಧರ್ಮ ವಿವೇಚನೆಯ ಲೇಖನದಿಂದ ತಮ್ಮ ಬರಹದ ಬದುಕನ್ನು ಪ್ರಾರಂಭಿಸಿದರು. 'ಅಬಲಾ ದೌರ್ಜನ್ಯ' (1939), 'ಪೂರ್ಣಕಲಾ' (1917), 'ಅಜಮಿಳೋಪಾಖ್ಯಾನ', – ಇವು ತಿರುಮಲಾಂಬಾ ಅವರ ಧರ್ಮ ತತ್ತ್ವಚಿಂತನೆಗೆ ಸಂಬಂಧಪಟ್ಟ ಇನ್ನೆರಡು ಗ್ರಂಥಗಳು. ನಾಟಕರಚನೆಯಲ್ಲಿಯೂ ಕಾವ್ಯರಚನೆಯಲ್ಲಿಯೂ ಕೈಯಾಡಿಸಿದ ತಿರುಮಲಾಂಬಾ ಅವರು ವಿಶೇಷವಾಗಿ ಕೃಷಿಮಾಡಿದ ಸಾಹಿತ್ಯಪ್ರಕಾರ ಎಂದರೆ, ಕಾದಂಬರಿ. ಅವರು ಕಾದಂಬರೀ ರಚನೆಗೆ ತೊಡಗಿದ

ಕಾಲಕ್ಕಾಗಲೇ ವೆಂಕಟಾಚಾರ್ಯರ ಕಾದಂಬರಿಗಳು ಜನಪ್ರಿಯವಾಗಿದ್ದವು. ವೆಂಕಟಾಚಾರ್ಯರು ಕೆಲಕಾಲ ನಂಜನಗೂಡಿನಲ್ಲಿಯೂ ಉದ್ಯೋಗಸ್ಥರಾಗಿದ್ದರು. ತಿರುಮಲಾಂಬಾ ಅವರಿಗೆ ಕಾದಂಬರೀರಚನೆಯಲ್ಲಿ ವೆಂಕಟಾಚಾರ್ಯರು ಪರೋಕ್ಷವಾಗಿ ಪ್ರೇರಣೆ ನೀಡಿದ್ದಿರಬಹುದೆಂದು ಊಹಿಸಿದರೆ ತಪ್ಪಾಗಲಾರದು. ತಿರುಮಲಾಂಬಾ ಅವರಿಗೆ ಖುದ್ದಾಗಿ ಏನಾದರೂ ಉತ್ತೇಜನ ನೀಡಿದ್ದರೇ ಎಂಬ ಬಗೆಗೆ ಶೋಧನೆ ನಡಸಬೇಕು. ಅದು ಹೇಗಾದರೂ ಇರಲಿ, ಸಂಖ್ಯಾದೃಷ್ಟಿಯಿಂದ ಮಾತ್ರವಲ್ಲದೆ, ಆಗಿನ ದಿನಗಳ ಕನ್ನಡ ಕಾದಂಬರೀ ಪ್ರಕಾರದ ಸ್ವರೂಪದೃಷ್ಟಿಯಿಂದ, ಬೆಳವಣಿಗೆಯ ಆರಂಭಕಾಲದ ಪರಿಸರವನ್ನು ದೃಷ್ಟಿಯಲ್ಲಿಟ್ಟುಕೊಂಡು, ಹೇಳುವುದಾದರೆ ಗುಣಮಟ್ಟದ ದೃಷ್ಟಿಯಿಂದಲೂ ಈ ಸಾಹಿತ್ಯಶೀಲೆಯ ಕಾದಂಬರಿಗಳು ಗಮನಾರ್ಹವಾಗಿವೆ; ಚಾರಿತ್ರಿಕ ಮಹತ್ತ್ವವುಳ್ಳವಾಗಿವೆ. ಗಿರಿಜಾಬಾಯಿ (1921), ನಭಾ (1914), ನಿಶಾಕಾಂತ (1922), ಮಣಿಮಾಲೆ (1939), ಮಾತೃನಂದಿನೀ (1915), ವಿದ್ಯುಲ್ಲತಾ, ವಿರಾಗಿಣಿ (1914), ಸುಶೀಲೆ ((1916) – ಇವು ತಿರುಮಲಾಂಬಾ ಅವರ ಕೆಲವು ಪ್ರಮುಖ ಕಾದಂಬರಿಗಳು.

ಪ್ರೊ॥ ಚಿ. ನಾ. ಮಂಗಳಾ ಅವರು ತಾವು ಅಭ್ಯುದಯಕ್ಕೆ ತಂದ ಕಾಲೇಜಿನಲ್ಲಿ 'ಶಾಶ್ವತೀ' ಎಂಬ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ತಿರುಮಲಾಂಬಾ ಅವರ ಹೆಸರನ್ನು ಶಾಶ್ವತಗೊಳಿಸಿರುವುದಲ್ಲದೆ ನಂಜನಗೂಡಿನಲ್ಲಿ ಅವರ ಜನ್ಮಶತಾಬ್ದಿಯನ್ನು ಆಚರಿಸಿ ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಡಾ॥ ಡಿ. ವಿ. ಗುಂಡಪ್ಪನವರು : (ಜನನ : 17–3–1887 ; ನಿಧನ : 7–10–1975) ಆಧುನಿಕ ಕನ್ನಡ ಸಾಹಿತ್ಯದ ಯುಗಪ್ರವರ್ತಕರಲ್ಲಿ ಒಬ್ಬರಾದ ದೇವನಹಳ್ಳಿ ವೆಂಕಟರಾಮಯ್ಯನವರ ಗುಂಡಪ್ಪನವರು ತಮ್ಮ ಸಾಹಿತ್ಯ ಸಂಗಡಿಗರಾದ ಬಿ.ಎಂ.ಶ್ರೀ., ಟಿ. ಎಸ್. ವೆಂಕಣ್ಣಯ್ಯ, ಎ.ಆರ್.ಕೃ., ಮಾಸ್ತಿ, ಎಂ.ಆರ್. ಶ್ರೀ., ವಿ.ಸೀ.—ಇವರುಗಳಂತೆ ಕಾಲೇಜು ಶಿಕ್ಷಣ ಪಡೆದವರಲ್ಲ. ಹಾಗೆ ನೋಡಿದರೆ, ಮೆಟ್ರಿಕ್ಯುಲೇಷನ್ ಪರೀಕ್ಷೆ ತೆಗೆದುಕೊಂಡರೂ ಅದರಲ್ಲಿ ತೇರ್ಗಡೆಯಾಗಲಿಲ್ಲ. ಕೋಲಾರ ಜಿಲ್ಲೆ ಮುಳಬಾಗಿಲಲ್ಲಿ ನೆಲಸಿದ್ದ ಇವರ ಪೂರ್ವಜರು ಎಲ್ಲರೂ ಸಾಮಾನ್ಯರು ; ವಿದ್ವಾಂಸರಲ್ಲ, ಧನಿಕರಲ್ಲ. ಊರಿನ ಪರಿಸರದಲ್ಲಿ ಮಾತ್ರ ಧಾರ್ಮಿಕ, ಸಾಂಸ್ಕೃತಿಕ ವಾತಾವರಣ. ರಾಮಾಯಣ, ಭಾರತ. ಭಾಗವತ ಪುರಾಣಗಳ ಪ್ರವಚನ, ಗಮಕವಾಚನ,—ಮುಳಬಾಗಿಲ ಆಂಜನೇಯನ ಸನ್ನಿಧಿಯಲ್ಲಿ. ಎಳಹರಯದಲ್ಲಿ ಈ ಸನಾತನ ಧಾರ್ಮಿಕ ಆಧ್ಯಾತ್ಮಿಕ ವಾತಾವರಣದಲ್ಲಿ ಬೆಳೆದ ತರುಣ ಡಿ.ವಿ.ಜಿ. ರಕ್ತದಲ್ಲಿ ಅವುಗಳ ಮೌಲ್ಯ ಬೆರೆತುಹೋಯಿತು. ಶಿಕ್ಷಣದಲ್ಲಿ ಮುಂದುವರಿಯದ ಡಿ.ವಿ.ಜಿ. ಸಹಜವಾಗಿಯೆ ದಿಕ್ಕುಗಾಣದ ನಿರುದ್ಯೋಗಿಯಾಗಿ, ದಾರಿಹೋಕನಾಗಿ ಜೀವನಯಾತ್ರೆಯನ್ನು ಪ್ರಾರಂಭಿಸಿದರೂ ಪತ್ರಿಕೋದ್ಯಮದಲ್ಲಿ ನೆಲೆ

ಗಂಡರು. ಅದನ್ನು ವೃತ್ತಿಯಾಗಿ ಸ್ವೀಕರಿಸಿದ್ದರಿಂದ, ಅದರಲ್ಲಿಯೇ ಮುಂದುವರಿಯು ದಿದ್ದರೂ, ಮೈಸೂರಿನ ರಾಜಕೀಯದಲ್ಲಿ ಸ್ವತಂತ್ರಮನೋಧರ್ಮದ ರಾಜಕೀಯಸ್ಥ ರಾಗಿ, ಕೆಲಕಾಲ ಕಾಂಗ್ರೆಸ್ಸಿಗರಾಗಿ, ಮೈಸೂರು 'ತಾತಯ್ಯ', ದಿವಾನರು ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಇವರ ಗೌರವಕ್ಕೆ ಪಾತ್ರ ರಾದರು. ಈ ಗೌರವವನ್ನು ಸಂಪಾದಿಸಿಕೊಟ್ಟದ್ದು ವೇದಾಂತಶಾಸ್ತ್ರದ ಹಿನ್ನೆಲೆಯಲ್ಲಿ ರೂಪುಗೊಂಡ ಅವರ ರಾಜ್ಯಶಾಸ್ತ್ರಜ್ಞಾನ, ರಾಜಕೀಯ ವಿವೇಕ. ಈ ವಿಶಿಷ್ಟ ಪ್ರಕಾರದ ಆಧ್ಯಾತ್ಮಿಕ ರಾಜಕೀಯಕ್ಕೆ ಪ್ರೇರಕ ಶಕ್ತಿ, ವಿದ್ಯಾರಣ್ಯರು ಹಾಗೂ ಗೋಪಾಲಕೃಷ್ಣ ಗೋಖಲೆ. ಹೈಸ್ಕೂಲಿನಲ್ಲಿದ್ದಾಗಲೇ ಕಂದಪದ್ಯಗಳನ್ನು ಬರೆಯುವ ಸಾಮರ್ಥ್ಯವನ್ನು ಮೆರೆದಿದ್ದ ಡಿ.ವಿ.ಜಿ., ಹಳಗನ್ನಡ ಮತ್ತು ಸಂಸ್ಕೃತ ಕಾವ್ಯಗಳನ್ನು ಸ್ವಂತವ್ಯಾಸಂಗದಿಂದ ಆಲೋಡನೆಮಾಡಿದ್ದರಿಂದ, ಕಾವ್ಯರಚನೆಯಲ್ಲಿ ತಮ್ಮದೇ ಆದ ಪ್ರೌಢ ಶೈಲಿಯನ್ನು ರೂಪಿಸಿಕೊಂಡಿದ್ದರು. ಕನ್ನಡ ಸಂಸ್ಕೃತಗಳಂತೆ ಇಂಗ್ಲಿಷ್ ಭಾಷೆ ಸಾಹಿತ್ಯಗಳಲ್ಲಿಯೂ ಅವರದ್ದು ಸ್ವಂತ ವ್ಯಾಸಂಗ, ಪ್ರೌಢಿಮೆಯ ಗಳಿಕೆ. ಮಾರ್ಲೆ, ಮಿಲ್, ಆರ್‌ನಲ್ಡ್, ಗ್ಲಾಡ್‌ಸ್ಟನ್, ಷೇಕ್ಸ್‌ಪಿಯರ್, ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ವಾಲ್ಮೀಕಿ, ವ್ಯಾಸ, ಕಾಳಿದಾಸ, ಭವಭೂತಿ, ಗೋಖಲೆ, ಗಾಂಧಿ, ಶಂಕರಾಚಾರ್ಯ, ವಿದ್ಯಾರಣ್ಯ ;—ಈ ಮಹಾ ಚೇತನಗಳ ಪ್ರಭಾವದ ಪರಿಣಾಮ ಫಲರೂಪವೆ ಮಹಾ ಸಾಹಿತಿ, ಮಹಾ ರಾಜ್ಯಶಾಸ್ತ್ರಜ್ಞ, ಧೀಮಂತ ವ್ಯಕ್ತಿ ಡಿ.ವಿ.ಜಿ. 'ನಿವೇದನ', 'ಕೇತಕೀವನ', 'ಅಂತಃಪುರ ಗೀತಗಳು'—ಡಿವಿಜಿ ಅವರ ಅಪ್ಪಟ ಕವಿಪ್ರತಿಭಾ ಕುಸುಮಗಳು ; ಪತ್ರಿಕಾ ಧರ್ಮವನ್ನು 'ವೃತ್ತಪತ್ರಿಕೆ' ಪ್ರತಿಬಿಂಬಿಸಿದರೆ, 'ರಾಜ್ಯಶಾಸ್ತ್ರ' ಇವರ ವಿಶಾಲ ರಾಜಕೀಯ ಪ್ರಜ್ಞೆಯ ರನ್ನಗನ್ನಡಿ ; 'ರಾಮ ಪರೀಕ್ಷಣ', 'ಕೃಷ್ಣಪರೀಕ್ಷಣ', 'ಗೀತಶಾಕುಂತಲ', 'ಶೃಂಗಾರ ಮಂಗಳ'—ಇವು ತಾತ್ತ್ವಿಕ ಚಿಂತನದ ಹಿನ್ನೆಲೆಯಲ್ಲಿ ಮಾನವಧರ್ಮದ ನೆಲೆ-ಬೆಲೆಗಳನ್ನು ಗುರುತಿಸ ಹೊರಟ ಉತ್ತುಂಗ ಪರ್ವತಾರೋಹಿ ಪ್ರಯತ್ನಗಳು. 'ಸಾಹಿತ್ಯ ಮತ್ತು ಜನ ಜೀವನ', 'ಸಾಹಿತ್ಯ ಶಕ್ತಿ'–ಇವು, ಡಿವಿಜಿ ಸ್ವೀಕರಿಸಿದ ಸಾಹಿತ್ಯ ಧರ್ಮದರ್ಪಣಗಳು. ಮತ ಧರ್ಮ–ಜೀವನ ಧರ್ಮ–ವೇದಾಂತ ವಿಜ್ಞಾನ–ಭೌತ ವಿಜ್ಞಾನ–ದೈವತ್ವ–ವಿಧಿ – ಪೌರುಷ ಇವೆಲ್ಲವನ್ನೂ ಸಮನ್ವಯಮಾಡಿಕೊಂಡ ಡಿವಿಜಿ ಅವರ ಸಮ್ಯಗ್ದರ್ಶನದ ಸಾಹಿತ್ಯರೂಪ 'ಮಂಕುತಿಮ್ಮನ ಕಗ್ಗ'ವಾದರೆ, ಗೀತೆಯನ್ನು ಆಧರಿಸಿ ಮಾಡಿದ ವ್ಯಾಖ್ಯಾನರೂಪವೇ 'ಭಗವದ್ಗೀತಾ ತಾತ್ಪರ್ಯ'. ನಾನಾ ಸ್ತರಗಳ ಜನ-ಸಂಪರ್ಕಾನುಭವ ನವನೀತವೇ (ಎಂಟು ಸಂಪುಟಗಳ) 'ಜ್ಞಾಪಕ ಚಿತ್ರಶಾಲೆ'.

ಇವರ ಪತ್ರಿಕೋದ್ಯಮಕ್ಕೆ ಸಂದ ಗೌರವ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷಪದವಿ ಹಾಗೂ ಪ್ರಥಮ ಪತ್ರಿಕಾಕರ್ತರ ಸಮ್ಮೇಳನದ ಅಧ್ಯಕ್ಷ ಪದವಿ. ಸಾಹಿತ್ಯಸೇವೆಗೆ ಸಂದ ಗೌರವ ಮಡಿಕೇರಿ ಸಾಹಿತ್ಯ ಸಮ್ಮೇಳನದ (1932) ಅಧ್ಯಕ್ಷ ಪದವಿ ; ನಾನಾ ವಿಧದಲ್ಲಿ ದೇಶಸೇವೆಗೆ ಸಂದ ಗೌರವ, 'ಪದ್ಮಭೂಷಣ' ಪ್ರಶಸ್ತಿ ;

ಅಸಾಧಾರಣ ವಿದ್ವತ್ತಿಗೆ ಸಂದ ಗೌರವ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ.

ಇಂಥ ಕನ್ನಡ ಸಾರಸ್ವತ ಲೋಕದ ಧೀಮಂತ ದಿಗ್ಗಜ ಡಿ.ವಿ.ಜಿ. ಅವರ ಜನ್ಮಶತಮಾನೋತ್ಸವವನ್ನು ಅವರೇ ಸ್ಥಾಪಿಸಿ ಬೆಳಸಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಅದರ ಸದ್ಯದ ಗೌರವ ಕಾರ್ಯದರ್ಶಿಗಳಾದ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರ ಮಾರ್ಗದರ್ಶನದಲ್ಲಿ ಶತಾಬ್ದಿವರ್ಷಪೂರ್ತಿ ನಾಡಿನಾದ್ಯಂತ ವಿಚಾರಗೋಷ್ಠಿ, ಉಪನ್ಯಾಸ, ಸಾಹಿತ್ಯ ಸ್ಪರ್ಧೆ, ಸ್ಮರಣ ಸಂಪುಟಗಳ ಪ್ರಕಟನೆ, ಡಿ.ವಿ.ಜಿ. ಗ್ರಂಥಗಳ ಪ್ರಕಟನೆ–ಇವುಗಳ ಮೂಲಕ ವೈವಿಧ್ಯಪೂರ್ಣವಾಗಿ ಆಚರಿಸಲು ನಿರ್ಧರಿಸಿ, ಆಚರಿಸುತ್ತಿದೆ. ಬಿ.ಎಂ.ಶ್ರೀ. ಜನ್ಮಶತಮಾನೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ನಡಸಲು ತಮ್ಮ ಕಾರ್ಯದಕ್ಷತೆಯನ್ನು ವಿನಿಯೋಗಿಸಿದ ಶ್ರೀ ಜಿ. ನಾರಾಯಣ ಅವರೇ ಈ ಉತ್ಸವದ ಕಾರ್ಯಾಧ್ಯಕ್ಷರಾಗಿ ಹೊಣೆ ಹೊತ್ತಿರುವುದು ನಮ್ಮ ಸುದೈವ. ಈ ಉತ್ಸವದಲ್ಲಿ ಸಹಕರಿಸಿ ಅಲ್ಪಸೇವೆ ಸಲ್ಲಿಸುವ ಅವಕಾಶವನ್ನು ದೊರಕಿಸಿಕೊಟ್ಟ ಉತ್ಸವ ಸಮಿತಿಗೆ ಪ್ರತಿಷ್ಠಾನ ಕೃತಜ್ಞವಾಗಿದೆ. ಸಂಸ್ಥೆ ಸ್ಥಾಪಿತವಾದಂದಿನಿಂದ ಅನೇಕ ಮಹನೀಯರ ಜನ್ಮಶತಾಬ್ದಿಗಳನ್ನು ಸಂದರ್ಭೋಚಿತವಾಗಿ ಆಚರಿಸುವ ಭಾಗ್ಯ ಪ್ರತಿಷ್ಠಾನದ ಪಾಲಿನದಾಗಿದೆ.

ನಾರಾಯಣ ಶ್ರೀನಿವಾಸ ರಾಜಪುರೋಹಿತ : ಕರ್ನಾಟಕ ಏಕೀಕರಣ ಪೂರ್ವ ಯುಗದಲ್ಲಿ, ಮುಂಬಯಿ ಕರ್ನಾಟಕ ಎಂದು ಪ್ರಸಿದ್ಧವಾಗಿದ್ದ ಇಂದಿನ ಉತ್ತರ ಕರ್ನಾಟಕದ ಹಾವೇರಿ ತಾಲೂಕಿನ ಅಗಡಿಯಲ್ಲಿ ಹುಟ್ಟಿದ (ಜನನ : 17-7-1987 ; ನಿಧನ : 24-8-1953) ನಾರಾಯಣ ಶ್ರೀನಿವಾಸ ರಾಜಪುರೋಹಿತರು ಧಾರವಾಡದಲ್ಲಿ ನೆಲಸಿ, ಜೀವನದುದ್ದಕ್ಕೂ ದಟ್ಟದಾರಿದ್ರ್ಯವನ್ನು ಅನುಭವಿಸುತ್ತ, ಬದುಕಿನ ಎಡರು ತೊಡರುಗಳ ನಡುವೆಯೂ ಸಂಶೋಧನೆಯನ್ನು ತಮ್ಮ ಜೀವನದ ಕರ್ತವ್ಯ ಕರ್ಮವೆಂದು ಸ್ವೀಕರಿಸಿ, ಕೊನೆಯುಸಿರೆಳೆಯುವ ವರೆಗೂ ಅದನ್ನು ವ್ರತಶೀಲರಾಗಿ ನಡಸಿಕೊಂಡು ಹೋದ ಧೀಮಂತ ವಿದ್ವಾಂಸರು, ಕೆಲವು ಕಾಲ ಶಾಲಾ ಮಾಸ್ತರರಾಗಿ ಕೆಲಸಮಾಡಿದ ರಾಜಪುರೋಹಿತರು ಸ್ವತಂತ್ರ ಜೀವನವನ್ನು ಪ್ರಾರಂಭಿಸಿ, 'ಸಂಶೋಧನ ವೃತ್ತಿ'ಯನ್ನು ಕೈಗೊಂಡು, 'ಕರ್ತವ್ಯಾನಂದ' ಎಂಬ 'ಕೃತಿನಾಮ' ದಡಿಯಲ್ಲಿ ತಮ್ಮ ಕೆಲವು ಬರಹಗಳನ್ನು ಪ್ರಕಟಿಸತೊಡಗಿದರು. ಆ ಹೆಸರು ಅನ್ವರ್ಥಕವಾಗಿಯೂ ಅವರಿಗೆ ಸಲ್ಲುತ್ತದೆ. ಕಥೆ ಕಾದಂಬರಿ ಕಾವ್ಯ ನಾಟಕ ಮುಂತಾದ ಸಾಹಿತ್ಯ ಕೃತಿ ರಚನೆಗೇ ಆರ್ಥಿಕವಾಗಿ ಉತ್ತೇಜನ ಇಲ್ಲದಿದ್ದ ಕಾಲದಲ್ಲಿ–ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ–ಸಂಶೋಧನೆಯನ್ನು ಕೇಳುವವರೇ ಇರಲಿಲ್ಲ. ಸಂಶೋಧನ ಲೇಖನಗಳನ್ನು ಪ್ರಕಟಿಸಲು ಕೆಲವು ಪತ್ರಿಕೆಗಳಲ್ಲಿ ಸ್ಥಳಾವಕಾಶ ದೊರಕುತ್ತಿತ್ತು ಎನ್ನುವುದೇ ದೊಡ್ಡ ಮಾತು. ಹೀಗಿದ್ದೂ, ತಮ್ಮ ಸಂಶೋಧನೆಯ

ಫಲವಾದ ಲೇಖನಗಳನ್ನು ಪರಿಷತ್ಪತ್ರಿಕೆ, ಜಯಕರ್ನಾಟಕ, ಪ್ರಬುದ್ಧ ಕರ್ಣಾಟಕ, ವಾಗ್ಭೂಷಣ, ಕರ್ಮವೀರ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಲ್ಲದೆ, ಧರ್ಮ ಮತ್ತು ಧಾರ್ಮಿಕ ಮಹಾಪುರುಷರನ್ನು ಕುರಿತು, 'ದಾನ ಧರ್ಮ ಪದ್ಧತಿ' (1910), 'ಶ್ರೀಮತ್ ಸುರೇಶ್ವರಾಚಾರ್ಯರ ಚರಿತ್ರೆಯು' (1922), 'ಕರ್ನಾಟಕದ ವರ್ಣನೆಯೂ ಇತಿಹಾಸವೂ' (1930), 'ಶ್ರೀಮನ್ಮಧ್ವಾಚಾರ್ಯರು' ಹಾಗೂ 'ಶ್ರೀ ಯಾಜ್ಞವಲ್ಕ್ಯ ಮಹಾಮುನಿಗಳ ಚರಿತ್ರೆಯು' (1939) ಮುಂತಾದ ಕೃತಿಗಳನ್ನು ಪ್ರಕಟಿಸಿದರು. ಸಂಶೋಧಕರಾದ ರಾಜಪುರೋಹಿತರು ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಸ್ಥಾಪನೆ (1914) ಯಲ್ಲಿ ಪಾಲ್ಗೊಂಡದ್ದಲ್ಲದೆ, ಅದರ ಕಾರ್ಯಕಲಾಪಗಳಲ್ಲಿ ಭಾಗಿಯಾಗಿದ್ದು 'ಅಭ್ಯಾಸಮಂಡಲ'ವನ್ನು ನಡೆಸಿದರು, 'ಪ್ರಾಚೀನ ಕರ್ನಾಟಕ' (1932) ವನ್ನು ಆರಂಭಿಸಿದರು. ಪ್ರಯಾಣ ಕಷ್ಟಕರ ವಾಗಿದ್ದ ದಿನಗಳಲ್ಲಿ ತಮ್ಮ ಸಂಶೋಧನೆಗಾಗಿ ಹಳ್ಳಿಹಳ್ಳಿಯನ್ನೂ ಸುತ್ತಾಡಿದರು; ಶಿಲಾಶಾಸನಗಳ ಪ್ರತ್ಯಕ್ಷ ಪರಿಶೀಲನೆಯ ಸಾಕ್ಷ್ಯಾಧಾರಗಳಿಂದ ತಮ್ಮ ಐತಿಹಾಸಿಕ ಶೋಧನೆಗಳನ್ನು ಯುಕ್ತಿಯುಕ್ತವಾಗಿ ಪ್ರತಿಪಾದಿಸಿದರು. ವಿಜಯನಗರದ ರಾಮರಾಯನ ಕಾಲದಲ್ಲಿ ನಡೆದ ಯುದ್ಧ ತಾಳಿಕೋಟೆಯಲ್ಲಿ ನಡೆಯಿತು ಎಂದು ಸಾಮಾನ್ಯವಾಗಿ ಗೃಹೀತವಾಗಿದ್ದ ನಿಶ್ಚಯವನ್ನು ನಿರಾಕರಿಸಿ, ಅದು ನಡೆದದ್ದು ರಕ್ಕಸತಂಗಡಿಗಿಯಲ್ಲಿ ಎಂದು ಸಾಧಿಸಿ ತೋರಿಸಿದ್ದು ಅವರ ಮಹತ್ತ್ವದ ಶೋಧನೆ ಎಂದು ಮನ್ನಣೆ ಪಡೆದಿದೆ.

ಇಂಥ ಮಹಾ ಸಂಶೋಧಕನ ಜನ್ಮಶತಮಾನೋತ್ಸವ ವರ್ಷ (1987-88) ಇದಾಗಿದೆ. ಕರ್ನಾಟಕದ ಪ್ರಮುಖ ಸ್ಥಳಗಳಲ್ಲಿ ರಾಜಪುರೋಹಿತ ಜನ್ಮಶತಾಬ್ದ್ಯುತ್ಸವವನ್ನು ಸಂಘಸಂಸ್ಥೆಗಳು ಆಚರಿಸಿ, ಅವರ ನೆನಪು ಅವರ ಸಂಶೋಧನ ಕಾರ್ಯದ ಮುಂದುವರಿಕೆಗೆ ಸ್ಫೂರ್ತಿದಾಯಕವಾಗಲಿ ಎಂದು ಹಾರೈಸುತ್ತೇವೆ. ಕರ್ನಾಟಕ ಸರ್ಕಾರ ಡಿವಿಜಿ ಕೃತಿಗಳ ಸಮಗ್ರ ಸಂಪುಟಗಳನ್ನು ಪ್ರಕಟಿಸುತ್ತಿರುವ ರೀತಿಯಲ್ಲಿ ರಾಜಪುರೋಹಿತರ ಲೇಖನಗಳ ಸಂಗ್ರಹವನ್ನು ತಾನೇ ಪ್ರಕಟಿಸಲಾಗ ದಿದ್ದರೂ ಪ್ರಕಟಿಸಲು ಮುಂದೆ ಬರುವ ಸಂಘಸಂಸ್ಥೆಗಳಿಗೆ ಧನಸಹಾಯ ನೀಡ ಬೇಕಾದ್ದು ಕರ್ತವ್ಯ ಎಂದು ಭಾವಿಸುತ್ತೇವೆ.

—ಎಂ.ವಿ.ಸೀ.

ಮುದ್ದಣ ಕವಿಸ್ಮರಣೆ

ದಿನಾಂಕ 16-5-1987 ಕವಿಸ್ಮರಣೆಯ ದಿನಗಳಲ್ಲಿ ಒಂದು ಐತಿಹಾಸಿಕ ದಿನ ವೆನಿಸಿದೆ. ಅಂದು, ದ.ಕ. ಜಿಲ್ಲೆಯ ನಂದಳಿಕೆ ಎಂಬ ಊರಿನಲ್ಲಿ **ಕವಿಮುದ್ದಣ ಸ್ಮಾರಕ ಭವನದ ಉದ್ಘಾಟನೋತ್ಸವ** ಮತ್ತು **ಮುದ್ದಣ ಸಾಹಿತ್ಯೋತ್ಸವ** ಕಾರ್ಯ ಕ್ರಮಗಳು ತುಂಬ ಯಶಸ್ವಿಯಾಗಿ ನೆರವೇರಿದುವು. ಅದೇ ಸಂದರ್ಭದಲ್ಲಿ

'ಮನೋರಮಾ' ಎಂಬ ನೆನಪಿನ ಸಂಚಿಕೆಯೂ ಪ್ರಕಟವಾಗಿದೆ. ಈ ಎಲ್ಲ ಕಾರ್ಯಗಳಿಗೆ ಕಾರಣರಾದವರು 'ಕವಿಮುದ್ದಣ ಸ್ಮಾರಕ ಮಿತ್ರ ಮಂಡಳಿಯವರು'.

ನಂದಳಿಕೆ ಎಂಬುದು ಮಂಗಳೂರಿನಿಂದ 52 ಕಿ. ಮೀ. ದೂರದಲ್ಲಿ ಕುದುರೆಮುಖಕ್ಕೆ ಹೋಗುವ ರಸ್ತೆಯ ಎಡಗಡೆಯ ಒಂದು ಹಳ್ಳಿ. ಇಲ್ಲಿ ಮುದ್ದಣ 24–1–1870ರಲ್ಲಿ ಜನಿಸಿದನು. ಬಡತನದಲ್ಲಿ ಬೆಳೆದು ಶಾಲೆಯಲ್ಲಿ ವ್ಯಾಯಾಮ ಉಪಾಧ್ಯಾಯನಾಗಿದ್ದು ತನ್ನ ವಿಶೇಷಾಭಿರುಚಿಯಿಂದಲೇ ಕನ್ನಡದಲ್ಲಿ ವಿಶೇಷ ಪ್ರೌಢಿಮೆಯನ್ನೂ ಕವಿತಾಶಕ್ತಿಯನ್ನೂ ಗಳಿಸಿ, ಸೊಗಸಾದ ಪದ್ಯ ಗದ್ಯ ಕೃತಿಗಳನ್ನು ರಚಿಸಿ ಪ್ರಸಿದ್ಧಿಪರಾಙ್ಮುಖತೆಯಲ್ಲೇ ದಿನಗಳೆದ ಸತ್ಕವಿ ಇವನು. ಇನ್ನೆಷ್ಟೋ ಅತ್ಯುಜ್ವಲ ಸಾಹಿತ್ಯ ರಚನೆ ಮಾಡುವ ಮೊದಲೇ ಅಂದರೆ, ತನ್ನ 31 ವರ್ಷದ ಪ್ರಾಯದಲ್ಲೇ (15–2–1901) ಕಾಲನ ಕರೆಗೆ ಓಗೊಟ್ಟನು. ಅವನ ಎರಡು ಯಕ್ಷಗಾನ ಕೃತಿಗಳು ಮತ್ತು ಮೂರು ಕಾವ್ಯಕೃತಿಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಮರಕೃತಿಗಳಾಗಿವೆ. ಸಾಹಿತ್ಯರಚನೆಯಲ್ಲಿ ಹಳೆಯದರ ತಳಹದಿಯಲ್ಲಿ ಹೊಸತರ ನಿರ್ಮಾಣಕ್ಕೆ ಬೆಳಕು ತೋರಿಸುವ ತನ್ನ ರಚನೆಗಳಿಂದ 'ಹೊಸಗನ್ನಡದ ಮುಂಗೋಳಿ' ಎನಿಸಿದನು. ಅಂತಹ ಮುದ್ದಣ ಕವಿಯ ಹುಟ್ಟೂರಿನಲ್ಲಿ 1976ರಲ್ಲಿ ಕವಿಯ 75ನೆಯ ವರ್ಷದ ಸ್ಮಾರಕೋತ್ಸವ ನಡೆದಿದೆ. ಆ ಸಂದರ್ಭದಲ್ಲಿ ಹೊರತಂದ **ಮುದ್ದಣ ಪ್ರಶಸ್ತಿ** ಎಂಬ ಗ್ರಂಥದ ಸಂಪಾದಕನಾಗಿದ್ದ ಈ ಲೇಖಕನಿಗೆ 16–5–1987 ರಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಲಾದುದು ಒಂದು ಸುಯೋಗ.

ಮುದ್ದಣ ಕವಿಯ ಸ್ಮಾರಕ ಭವನದ ನಿರ್ಮಾಣ ಭರವಸೆಯ ಮಾತುಗಳು 1976ರಂದು ನಡೆದ ಸ್ಮಾರಕೋತ್ಸವದಲ್ಲಿಯೆ ಬಂದಿದ್ದವು. ಇಂತಹದೊಂದು ಮಹತ್ಕಾರ್ಯಕ್ಕಾಗಿಯೆ 1957ರಲ್ಲಿ ಹುಟ್ಟಿಕೊಂಡ ಕವಿ ಮುದ್ದಣ ಸ್ಮಾರಕ ರೈತ ಸಂಘ 1979ರಲ್ಲಿ ಕವಿ ಮುದ್ದಣ ಸ್ಮಾರಕ ಮಿತ್ರಮಂಡಳಿಯಾಗಿ, ಪಟ್ಟ ಶ್ರಮದಿಂದ, ಮಾಡಿದ ಸಾಹಸದಿಂದ, ಸರಕಾರದ ಧನಸಹಾಯವನ್ನೂ ಸಾರ್ವಜನಿಕರ ನೆರವನ್ನೂ ಪಡೆದು ಪ್ರಗತಿಗೊಂಡ ಕಥೆಯನ್ನು ಒಂದು ದೃಶ್ಯಕಾವ್ಯವಾಗಿ ನಿರೂಪಿಸುವಂತಿದೆ– ಇದೀಗ ಉದ್ಘಾಟನೆಗೊಂಡ ಸುಭವ್ಯವಾದ ಸ್ಮಾರಕ ಭವನ ಹಾಗೂ ಅದರಲ್ಲಿ ಅಡಕವಾದ ಸ್ಮಾರಕ ಗ್ರಂಥಭಂಡಾರ. ಈ ಉದ್ಘಾಟನೆಯ ಸಮಾರಂಭಕ್ಕೆ ಹಾಗೂ ಸಾಹಿತ್ಯೋತ್ಸವಕ್ಕೆ ಆಹ್ವಾನಿತರಾದವರಲ್ಲಿ ಈ ಲೇಖಕನೂ ಒಬ್ಬ.

ಈ ಕಾರ್ಯಕ್ರಮಕ್ಕಾಗಿ ದೂರದ ಊರಿನಿಂದ ಬಂದ ವಿದ್ವಾಂಸರಿಗೆ ಮೂಲ್ಕಿಯಲ್ಲಿ ಸುಯೋಗ್ಯ ಆತಿಥ್ಯ ವ್ಯವಸ್ಥೆ ಮಾಡಲಾಗಿತ್ತು. ಅಂದು (16–5–1987) ಪೂರ್ವಾಹ್ನ ಮೊತ್ತಮೊದಲು ಸ್ಮಾರಕಭವನದ ಉದ್ಘಾಟನೆ. ಯಕ್ಷಗಾನದ ರೀತಿಯಲ್ಲಿ ಮಂಗಲಾಚರಣೆ. ಮುದ್ದಣನ 'ಕುಮಾರ ವಿಜಯ'ದ ಮಂಗಲಾಚರಣೆಯ ಸ್ತುತಿಪದಗಳನ್ನು ಚೆಂಡೆ ಮದ್ದಳೆಗಳ ಹಿಮ್ಮೇಳದೊಂದಿಗೆ ಭಾಗವತರು ಹಾಡುವ

ಮೂಲಕವೇ ಪ್ರಾರ್ಥನೆ ಸಲ್ಲಿಸಲಾಯಿತು. ಅನಂತರ, ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಉದ್ಘಾಟನಭಾಷಣ ಮಾಡಿದರು. ಆ ಮೇಲೆ ಗ್ರಂಥಭಂಡಾರದ ಉದ್ಘಾಟನೆ, ಸ್ಮರಣೀಯರ ಹಾಗೂ ಉದಾರ ಸಹಾಯಕರ ಚಿತ್ರಗಳ ಅನಾವರಣ, ಹಲವಾರು ಮಂದಿ ಮುಖ್ಯ ಅತಿಥಿಗಳ ಭಾಷಣಗಳು ಪ್ರಭಾವಿಯಾಗಿ ನೆರವೇರಿದುವು. ಅಪರಾಹ್ನ ನಡೆದ ಮುದ್ದಣ ಸಾಹಿತ್ಯೋತ್ಸವದಲ್ಲಿ ಕವಿಯ ಕೃತಿಗಳ ಸಮೀಕ್ಷಾತ್ಮಕವಾದ ಹಲವು ಉಪನ್ಯಾಸ ಗಳಾದವು. ಶ್ರೀ ಕೇಶವ ಉಚ್ಚಿಲ, ಶ್ರೀರಾಮಚಂದ್ರ ಉಚ್ಚಿಲ, ಶ್ರೀ ಅಮೃತ ಸೋಮೇಶ್ವರ ಮುಂತಾದ ವಿದ್ವಾಂಸರಿಂದ ಮುದ್ದಣ ಕವಿಯ ಕೃತಿಗಳ ಸಮೀಕ್ಷೆ ಗಳಾದವು. ಮುದ್ದಣನ 'ಶ್ರೀರಾಮ ಪಟ್ಟಾಭಿಷೇಕ'ವನ್ನು ಕುರಿತು ಉಪನ್ಯಾಸ ಮಾಡುವ ಅವಕಾಶ ಈ ಲೇಖಕನದಾಗಿತ್ತು. ಶ್ರೀ ಎಂ. ರಾಜಗೋಪಾಲಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯನಂತರ, ಕವಿಗೋಷ್ಠಿ, ರಾತ್ರಿ 'ಕುಮಾರವಿಜಯ' ಪ್ರಸಂಗದ ಬಯಲಾಟವಿದ್ದಿತು.

ಮುದ್ದಣ ಕವಿ ಸ್ಮಾರಕ ಮಿತ್ರಮಂಡಳಿ ಕಾಂತಾವರ ಕನ್ನಡ ಸಂಘದೊಂದಿಗೆ ಸಂಬಂಧವುಳ್ಳದ್ದು. ಕಾಂತಾವರ ಕನ್ನಡ ಸಂಘ 1979ರಿಂದಲೇ ಪ್ರಾರಂಭಗೊಂಡು ಪ್ರತಿವರ್ಷವೂ ಮುದ್ದಣ ಕಾವ್ಯಪ್ರಶಸ್ತಿ ರೂಪದಲ್ಲಿ ಶ್ರೇಷ್ಠ ಅಪ್ರಕಟಿತ ಕವನ ಸಂಕಲನವೊಂದಕ್ಕೆ ಪ್ರಕಟನೆಗಾಗಿ ರೂ. 500 ಬಹುಮಾನ ಕೊಡುತ್ತಿದೆ. ಈ ಮಿತ್ರ ಮಂಡಳಿಯ ಗೌರವಾಧ್ಯಕ್ಷರಾಗಿ ಶ್ರೀ ಎನ್. ಬಾಲಚಂದ್ರ ರಾವ್ ಅವರು ಮತ್ತು ಈಗ ನಡೆದ ಉತ್ಸವಸಮಿತಿಯ ಪ್ರಕಟನೆಯಾಗಿರುವ 'ಮನೋರಮಾ' ಸಂಚಿಕೆಯ ಪ್ರಧಾನ ಸಂಪಾದಕರಾಗಿರುವ ಕವಿ ಡಾ॥ ನಾ. ಮೊಗಸಾಲೆ ಅವರೂ ವಿಶೇಷ ಉಲ್ಲೇಖನೀಯರಾಗಿದ್ದಾರೆ. ಮುದ್ದಣ ಕವಿ ಸ್ಮಾರಕ ಮಿತ್ರಮಂಡಳಿ ಸಾಹಿತ್ಯಾಭಿ-ವೃದ್ಧಿಗಾಗಿ, ಸಾರ್ವಜನಿಕ ಹಿತಕ್ಕಾಗಿ ಎಷ್ಟೆಷ್ಟೋ ಯೋಜನೆಗಳನ್ನು ಹಮ್ಮಿ ಕೊಂಡಿರುವುದು ಕಂಡುಬರುತ್ತದೆ. ಅಂತಹ ಕಾರ್ಯಗಳಿಗೆಲ್ಲ ಸಾಧ್ಯತೆ ಮತ್ತು ಒಲವು ಇರುವ ಬಗೆಯಲ್ಲಿ ನೆರವಾಗುವುದು, ಜಯವನ್ನು ಹಾರೈಸುವುದು ನಮ್ಮೆಲ್ಲರ ಸಂತೋಷದ ಕರ್ತವ್ಯ.

—ಟಿ. ಕೇಶವ ಭಟ್ಟ

ಕರ್ನಾಟಕ ಇತಿಹಾಸ ಅಕಾಡೆಮಿ

ಬೆಂಗಳೂರಿನಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ಸ್ಥಾಪನೆಗೊಂಡ ಒಂದು ವರ್ಷದಲ್ಲಿಯೇ ಅಸಾಧಾರಣವಾದ ಸದಸ್ಯಸಂಪತ್ತನ್ನು ಸಂಪಾದಿಸಿ, ಮೇ ತಿಂಗಳಿನಲ್ಲಿ ಪ್ರಥಮ ವಾರ್ಷಿಕ ಸಮ್ಮೇಳನವನ್ನು ಯಶಸ್ವಿಯಾಗಿ ನಡಸಿತು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ, ಖ್ಯಾತ ಸಂಶೋಧಕ, ಡಾ॥ ಎಂ. ಚಿದಾನಂದಮೂರ್ತಿಯವರು ಈ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ

ಯಾದದ್ದು ಅಭಿಮಾನಾಸ್ಪದ ಸಂಗತಿ. ಅವರು ತಮ್ಮ ಅಧ್ಯಕ್ಷಭಾಷಣದಲ್ಲಿ ಸಮಗ್ರ ಕರ್ನಾಟಕ ಇತಿಹಾಸ ರಚನೆ ಆಗಬೇಕಾಗಿರುವ ಅಗತ್ಯವನ್ನು ಒತ್ತಿಹೇಳಿದರು.

ಕರ್ನಾಟಕ ವಿಶ್ವವಿದ್ಯಾನಿಲಯದ ನಿವೃತ್ತ ಇತಿಹಾಸ ಪ್ರಾಧ್ಯಾಪಕರಾದ ಡಾ॥ ಜಿ. ಎಸ್. ದೀಕ್ಷಿತರು ಅಕಾಡೆಮಿಯ ಅಧ್ಯಕ್ಷರಾಗಿರುವುದು ಸಂಸ್ಥೆಯ ಉಜ್ವಲ ಭವಿಷ್ಯಕ್ಕೆ ನಾಂದಿಯಾಗಿದೆ. ಈ ವಿದ್ವಾಂಸರ ಮಾರ್ಗದರ್ಶನದಲ್ಲಿ ಇತಿಹಾಸ ಅಕಾಡೆಮಿ 'ಕರ್ನಾಟಕ ಇತಿಹಾಸದಲ್ಲಿ ಆಗಬೇಕಾದ ಸಂಶೋಧನೆ'ಯನ್ನು ಕೈಗೊಳ್ಳು ವುದಲ್ಲದೆ, ಸಂಶೋಧನೆಯ ಫಲ ವಿದ್ವಾಂಸರಿಗೆ ದೊರಕುವಂತೆ ಪತ್ರಿಕಾ ಪ್ರಕಟನೆ, ಗ್ರಂಥರಚನೆ, ಮುಂತಾದ ಉಪಯುಕ್ತ ಕಾರ್ಯಗಳನ್ನು ಕಾಲಕ್ರಮದಲ್ಲಿ ನಡಸ ಲಾಗುವಂತಾಗಲಿ ಎಂದು ಹಾರೈಸಿ, ಈ ಸೋದರ ಸಂಸ್ಥೆಗೆ ಅಭ್ಯುದಯವನ್ನು ಬಯಸುತ್ತೇವೆ.

ಅಭಿನಂದನೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ನೂತನ ಅಧ್ಯಕ್ಷರು–ಡಾ॥ ಜಿ.ಎಸ್.ಎಸ್.: ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅದರ ನಿರ್ದೇಶಕರೂ ಕನ್ನಡ ಪ್ರಾಧ್ಯಾಪಕರೂ ಆಗಿದ್ದು ಈಚೆಗೆ ನಿವೃತ್ತರಾದ ಡಾ॥ ಜಿ. ಎಸ್. ಶಿವರುದ್ರಪ್ಪನವರನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಿರುವುದು ಸ್ವಾಗತಾರ್ಹವಾದ ಸಂತೋಷದ ಸಂಗತಿ. ಈ ಸಂದರ್ಭ ದಲ್ಲಿ ಶ್ರೀಯುತರಿಗೆ ನಮ್ಮ ಅಭಿನಂದನೆಗಳನ್ನು ತಿಳಿಸುತ್ತಾ, ಅವರ ಅಧ್ಯಕ್ಷಾಧಿಕಾರಾ- ವಧಿಯಲ್ಲಿ ಸಾಹಿತ್ಯ ಅಕಾಡೆಮಿ ಈಗಾಗಲೇ ಸ್ಥಿರವಾಗಿ ನಡೆಯುತ್ತಿರುವ ಒಳ್ಳೆಯ ಯೋಜನೆಗಳ ಜೊತೆಗೆ ಹೊಸ ಯೋಜನೆಗಳನ್ನು ಕೈಗೊಂಡು ಪ್ರಗತಿಪಥದಲ್ಲಿ ಸಾಗಲಿ ಎಂದು ಹಾರೈಸುತ್ತೇವೆ.

ಕೇರಳದ ಗಾಂಧಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ॥ ಯು. ಆರ್. ಅನಂತಮೂರ್ತಿ: ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರೂ ಚಿಂತನಶೀಲ ಬರಹ ಗಾರರೂ ವಿಮರ್ಶಕರೂ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರೂ ಆಗಿರುವ ಡಾ॥ ಯು. ಆರ್. ಅನಂತಮೂರ್ತಿ ಅವರು ಕೇರಳದ ಗಾಂಧಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕಗೊಂಡಿರುವುದು ಕನ್ನಡಿಗ ರೆಲ್ಲರೂ ಹೆಮ್ಮೆಪಡಬೇಕಾದ ವಿಚಾರ. ಅವರ ಅಧಿಕಾರದ ಅವಧಿಯಲ್ಲಿ ಈ ನೂತನ ವಿಶ್ವವಿದ್ಯಾನಿಲಯ ಪ್ರವರ್ಧಮಾನಕ್ಕೆ ಬರಲಿ. ಅವರು ಕೇರಳೀಯರ ಗೌರವ ಕೃತಜ್ಞತೆಗಳಿಗೆ ಪಾತ್ರರಾಗಿ ಕರ್ನಾಟಕಕ್ಕೆ ಕೀರ್ತಿಯನ್ನು ತರಲಿ. —ಎಂದು ಹಾರೈಸುತ್ತೇವೆ.

ಪ್ರಖ್ಯಾತ ಕವಿ, ವಿದ್ವಾಂಸ, ಪ್ರೊ|| ಬಿ. ಎಚ್. ಶ್ರೀಧರ ಅವರಿಗೆ ಸನ್ಮಾನ: ಹಲವಾರು ಕಾವ್ಯಗಳನ್ನೂ ಕವಿತಾಸಂಕಲನಗಳನ್ನೂ ಶಾಸ್ತ್ರಗ್ರಂಥಗಳನ್ನೂ ಬರೆದು ಪ್ರಖ್ಯಾತರಾಗಿರುವ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ತೀ.ನಂ.ಶ್ರೀ. ಸ್ಮಾರಕ ಬಹುಮಾನ, ದೇವರಾಜ ಬಹದ್ದೂರ್ ಸಾಹಿತ್ಯ ಬಹುಮಾನ ಮುಂತಾಗಿ ಹಲವಾರು ಪ್ರಶಸ್ತಿಗಳನ್ನೂ ಬಹುಮಾನಗಳನ್ನೂ ಪಡೆದು ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ವಿದ್ವದ್ವಲಯದಲ್ಲೂ ಸಾಹಿತ್ಯಲೋಕದಲ್ಲೂ ಸುವಿಖ್ಯಾತರಾದ ಪ್ರೊ|| ಬಿ. ಎಚ್. ಶ್ರೀಧರರಿಗೆ 70 ವರ್ಷ ಸಂದ ಸಂದರ್ಭದಲ್ಲಿ ಶಿರಸಿಯಲ್ಲಿ ಅವರನ್ನು ಸನ್ಮಾನಿಸಲಾಯಿತು. 26-4-1987ರಂದು ಬಿ.ಎಚ್.ಶ್ರೀ. ಸನ್ಮಾನ ಸಮಿತಿ ಸನ್ಮಾನ ಸಮಾರಂಭವನ್ನು ವ್ಯವಸ್ಥೆ ಮಾಡಿತ್ತು. ಶ್ರೀ ಬಿ. ಎಚ್. ಶ್ರೀಧರರು ಸಂಸ್ಕೃತ, ಇಂಗ್ಲಿಷ್, ಕನ್ನಡ—ಈ ಮೂರೂ ಭಾಷೆಗಳಲ್ಲಿ ಪೂರ್ಣ ಪಾಂಡಿತ್ಯ ಪಡೆದವರು. ಕಾವ್ಯಶಾಸ್ತ್ರವನ್ನು ಕುರಿತು ಆಳವಾದ ಅಧ್ಯಯನ ನಡಸಿ, ಸ್ವೋಪಜ್ಞ ಚಿಂತನಶೀಲ ಪ್ರಬಂಧಗಳನ್ನು ಬರೆದಿರುವ ಶ್ರೀಯುತರು ಭಾರತೀಯ ಸಂಸ್ಕೃತಿಯ ಬಗ್ಗೆ, ಕರ್ನಾಟಕ ಇತಿಹಾಸ ಸಂಸ್ಕೃತಿಗಳ ಬಗ್ಗೆ ಅಪಾರ ಅಭಿಮಾನ ಹೊಂದಿ, ಆ ಬಗ್ಗೆ ಬೆಲೆಯುಳ್ಳ ವಿಚಾರಪೂರ್ಣ ಲೇಖನಗಳನ್ನೂ ಗ್ರಂಥಗಳನ್ನೂ ಬರೆದಿದ್ದಾರೆ. ಇವರ ಕೃತಿಗಳ ಸಮಗ್ರ ಸಂಪುಟ ಪ್ರಕಟವಾಗಿ ಕನ್ನಡಿಗರಿಗೆ ದೊರಕಲಿ ಎಂದು ಹಾರೈಸುತ್ತ, ಶ್ರೀಯುತರಿಗೆ ಶುಭಾಶಯಪೂರ್ವಕ ಅಭಿನಂದನೆಯನ್ನು ತಿಳಿಸುವುದು ನಮ್ಮ ಸಂತೋಷದ ಕರ್ತವ್ಯ.

—ಎಂ. ಎ. ಹೆ.

ಕುಮಾರ ಆಶನ್ ಸಮ್ಮಾನ: ಜನಪ್ರಿಯವಾದ. ಹತ್ತಾರು ಪುನರ್ಮುದ್ರಣಗಳನ್ನು ಕಂಡ 'ಮೈಸೂರು ಮಲ್ಲಿಗೆ'ಯ ಖ್ಯಾತಿಯ ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರ ಸಮಗ್ರ ಕವಿತಾ ಸಂಪುಟ 'ಮಲ್ಲಿಗೆಯ ಮಾಲೆ'ಗೆ ಪ್ರಸಕ್ತವರ್ಷದ ಆಶನ್ ಸಮ್ಮಾನ ದೊರೆತದ್ದು ಕನ್ನಡ ಕಾವ್ಯಕ್ಕೇ ದೊರೆತ ಪ್ರಶಸ್ತಿ.

'ಗ್ರಂಥಲೋಕದ ವರ್ಷದ (1986) ಲೇಖಕ ಪ್ರಶಸ್ತಿ ಸುಪ್ರಸಿದ್ಧ ಕಾದಂಬರಿಕಾರರಾದ ಡಾ|| ಎಸ್. ಎಲ್. ಭೈರಪ್ಪನವರಿಗೆ ದೊರೆತಿದೆ.

ಡಾ|| ಸಿದ್ಧಯ್ಯ ಪುರಾಣಿಕ್ ಅವರು ವ್ಯವಸ್ಥೆ ಮಾಡಿರುವ **'ಕಾವ್ಯಾನಂದ'** ಪ್ರಶಸ್ತಿ ಶ್ರೀಮತಿ ವಾಗೀಶ್ವರೀ ಶಾಸ್ತ್ರೀ ಅವರ ಕನ್ನಡ ಸಂಪ್ರದಾಯದ ಹಾಡುಗಳ ಸಂಕಲನ 'ಹೃದಯ ಸಂಪುಟ'ಕ್ಕೆ ದೊರೆತಿದೆ.

ಇವರೆಲ್ಲರಿಗೂ ಪ್ರತಿಷ್ಠಾನದ ಪರವಾದ 'ಲೋಚನ'ದ ಹಾರ್ದಿಕ ಶುಭಾಶಯಪೂರ್ವಕ ಅಭಿನಂದನೆಗಳು.

ಶ್ರದ್ಧಾಂಜಲಿ

ಪ್ರೊ॥ ಥಾಮಸ್ ಬರೋ : ಆಧುನಿಕ ದ್ರಾವಿಡ ಭಾಷಾ ವಿಜ್ಞಾನದ ಬೆಳವಣಿಗೆಗೆ ಅಪಾರ ಸೇವೆ ಸಲ್ಲಿಸಿದ್ದ, ಸಲ್ಲಿಸುತ್ತಿದ್ದ, ಪ್ರೊ॥ ಥಾಮಸ್ ಬರೋ ಅವರ ನಿಧನ (1986ರ ಜೂನ್ 8 ; ಅವರ ಮರಣವಾರ್ತೆ ಭಾರತಕ್ಕೆ ಮುಟ್ಟಿದ್ದು ಆರು ತಿಂಗಳ ತರುವಾಯ !) ದ್ರಾವಿಡ ಭಾಷಾ ವಿಜ್ಞಾನ ಪ್ರಪಂಚಕ್ಕೆ ತುಂಬಲಾಗದ ನಷ್ಟ. D.E.D. ಎಂದು ಪ್ರಸಿದ್ಧವಾಗಿರುವ Dravidian Etymological Dictionary ಎಂಬ ಅತ್ಯಮೂಲ್ಯ ಗ್ರಂಥ, Bulletin of the School of Oriental and African Studies ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ದ್ರಾವಿಡ ಭಾಷಾ ವಿಜ್ಞಾನ ಪ್ರಪಂಚದಲ್ಲಿ ಕ್ರಾಂತಿಯನ್ನೆ ಉಂಟುಮಾಡಿದುವು. ಇವರು ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳೆರಡರಲ್ಲಿಯೂ ಕಂಡುಬರುವ ಸಾವಿರಾರು ಸಮಾನ ಪದಗಳು ದ್ರಾವಿಡಮೂಲದವೆಂದು ಶಾಸ್ತ್ರೀಯವಾಗಿ ಸ್ಥಾಪಿಸಿ, 19ನೆಯ ಶತಮಾನದ ಇಂಡೋ-ಯೂರೋಪಿಯನ್ ಭಾಷಾಶಾಸ್ತ್ರಜ್ಞರ ಅನೇಕ ಸಿದ್ಧಾಂತಗಳನ್ನು ಅಲ್ಲಗಳೆದಿದ್ದರು. ದ್ರಾವಿಡ ಭಾಷಾವಿಜ್ಞಾನದ ಬೆಳವಣಿಗೆಯನ್ನು ಪ್ರಸ್ತಾವಿಸುವಾಗ ಬರೋ ಅವರ ಹೆಸರಿನೊಂದಿಗೆ ಎಂ. ಬಿ. ಎಮೆನೋ ಅವರ ಹೆಸರನ್ನು ಹೇಳದೆ ಇರುವುದು ಸಾಧ್ಯವೇ ಇಲ್ಲ. ಇವರಿಬ್ಬರೂ ಜೊತೆಗೂಡಿ ದುಡಿದದ್ದರ ಫಲವೇ DED. ಈ ಮೇರುಕೃತಿಯನ್ನು ರಚಿಸುವ ಮುನ್ನವೇ 1937ರಿಂದ 1958ರ ವರೆಗೆ ದ್ರಾವಿಡ ಭಾಷಾಧ್ಯಯನಕ್ಕೆ ಸಂಬಂಧಪಟ್ಟ 8-10 ಮೌಲಿಕ ಪ್ರಬಂಧಗಳನ್ನು ಬರೋ ಅವರು ಬರೆದಿದ್ದರು. ಇವುಗಳ ಪೈಕಿ—Notes on Convertability of Surds and Sonants, (ಘೋಷ ಅಘೋಷ ಧ್ವನಿಗಳ ಪರಿವರ್ತನೆಯ ಬಗೆಗಿನ ಟಿಪ್ಪಣಿಗಳು), Initial Y and n̈ in Dravidian (ದ್ರಾವಿಡ ಭಾಷಾ ಶಬ್ದಗಳಲ್ಲಿ ಪದಾದಿಯ 'ಯ' ಮತ್ತು 'ಞ'), Some Dravidian Words in Sanskrit, Some Loan Words in Sanskrit, Further Dravidian Words in Sanskrit, Sanskrit and the Pre-Aryan Tribes and Languages, ಎಂಬೀ ಲೇಖನಗಳು ಗಮನಾರ್ಹವಾದವು. The Parji Language: A Dravidian Language of Bastar, Ollari : A Dravidian Speech, ಇವು, ಬರೋ ಅವರು ರಚಿಸಿದ ಗ್ರಂಥಗಳ ಪೈಕಿ ದ್ರಾವಿಡ ಭಾಷಾ ವಿಜ್ಞಾನಕ್ಕೆ ಸಂಬಂಧಪಟ್ಟವಾಗಿವೆ. ಮೂಲತಃ ಸಂಸ್ಕೃತ ಭಾಷಾ ವಿದ್ವಾಂಸರಾದ ಥಾಮಸ್ ಬರೋ ಅವರು ದ್ರಾವಿಡ ಭಾಷಾವಿಜ್ಞಾನಕ್ಕೆ ಸಲ್ಲಿಸಿರುವ ಸೇವೆ ಗಣ್ಯವಾದುದು.

(ಆಧಾರ: 'ಭಾಷಾಲೋಕ', ಸಂಪುಟ ೧, ಸಂಚಿಕೆ ೫–೬, ಸೆಪ್ಟೆಂಬರ್, ಡಿಸೆಂಬರ್ 1986)

ಪ್ರೊ|| ಎಸ್. ವಿ. ರಂಗಣ್ಣ : ಇಂಗ್ಲಿಷ್ ಮತ್ತು ಕನ್ನಡ, ಈ ಉಭಯ ಭಾಷೆಗಳಲ್ಲಿ ಘನವಿದ್ವಾಂಸರೂ ಪ್ರತಿಷ್ಠಾನದ ಗೌರವ ಸದಸ್ಯರೂ ಆಗಿದ್ದ ಪ್ರೊ|| ಎಸ್. ವಿ. ರಂಗಣ್ಣನವರ ನಿಧನದಿಂದ (17–2–1987) ವಿದ್ವತ್‌ಪ್ರಪಂಚಕ್ಕೂ ಸಾರಸ್ವತ ಲೋಕಕ್ಕೂ ಅಪಾರ ನಷ್ಟವುಂಟಾಗಿದೆ.

24–12–1898ರಲ್ಲಿ ಹಾಸನ ಜಿಲ್ಲೆಯ ಸಾಲಗಾಮೆಯಲ್ಲಿ ಜನಿಸಿದ ಶ್ರೀ ರಂಗಣ್ಣನವರು ಬೆಂಗಳೂರು ಮೈಸೂರುಗಳಲ್ಲಿ ಕಾಲೇಜು ಶಿಕ್ಷಣವನ್ನು ಮುಗಿಸಿ, ಮೈಸೂರು ಮಹಾರಾಜರವರ ಕಾಲೇಜು ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜು ಗಳಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಮಹಾರಾಜರವರ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರಾದರು.

ಬಿ. ಎಂ. ಶ್ರೀಕಂಠಯ್ಯನವರ ಶಿಷ್ಯರಾದ ರಂಗಣ್ಣನವರು ಅವರ ಪ್ರಭಾವಕ್ಕೆ ಒಳಗಾಗಿ ಕನ್ನಡ ಭಾಷೆ ಸಾಹಿತ್ಯಗಳಲ್ಲಿ ಆಸಕ್ತಿಯನ್ನು ಬೆಳಸಿಕೊಂಡು, ಸ್ವಂತ ವ್ಯಾಸಂಗದಿಂದ ಹಳಗನ್ನಡ ನಡುಗನ್ನಡ ಸಾಹಿತ್ಯದಲ್ಲಿ ಪ್ರಭುತ್ವವನ್ನು ಸಂಪಾದಿಸಿ ಕೊಂಡು, ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟಂತೆ ಅನೇಕ ಮೌಲಿಕ ಗ್ರಂಥಗಳನ್ನು ರಚಿಸಿದರು. 25ಕ್ಕೂ ಮೀರಿದ ಇವರ ಕೃತಿಗಳಲ್ಲಿ, 'ಶೈಲಿ', 'ರಂಗಬಿನ್ನಪ', 'ಗಂಭೀರ ನಾಟಕ', ಇವು ತುಂಬ ಪ್ರಸಿದ್ಧವಾದವು. ಆಧುನಿಕ ವಚನ ರಚನೆಗೆ ಹೆದ್ದಾರಿ ಕಲ್ಪಿಸಿದ 'ರಂಗಬಿನ್ನಪ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ. ಶಿವಮೊಗ್ಗದಲ್ಲಿ ನಡೆದ 49ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದವಿ ಇವರ ಸಾಹಿತ್ಯಸೇವೆಗೆ ಸಂದ ಅಖಿಲ ಕರ್ನಾಟಕದ ಗೌರವ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿಯೂ ಇದ್ದ ರಂಗಣ್ಣನವರು, ಸ್ಕೌಟ್ ಸೇವಾ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸಿ ಉನ್ನತ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಸದಾ ಹಸನ್ಮುಖಿಗಳಾದ ಇವರು ಮುಖಸ್ತುತಿಯನ್ನು ಸಹಿಸುತ್ತಿರಲಿಲ್ಲ. ಎಂತಲೇ ಇವರ ಸಾಹಿತ್ಯ ವಿಮರ್ಶೆ ನಿಷ್ಪಕ್ಷಪಾತವೂ ವಸ್ತುನಿಷ್ಠವೂ ಆಗಿರುತ್ತ, ಕನ್ನಡದಲ್ಲಿ ವಿಮರ್ಶೆಗೆ ಒಂದು ಹೊಸ ತಿರುವನ್ನು ನೀಡಿತು.

ಗಂಗಾಧರ ಚಿತ್ತಾಲ : ವಿಶಿಷ್ಟ ಮನೋಧರ್ಮದ, ವಿಶಿಷ್ಟ ಸಾಧನೆಯ ಕವಿ ಗಂಗಾಧರ ಚಿತ್ತಾಲರು 1987 ಜನವರಿ 28ರಂದು ಮುಂಬಯಿಯಲ್ಲಿ ತೀರಿ ಕೊಂಡದ್ದು ಈ ಕಾಲದ ಕಾವ್ಯಲೋಕಕ್ಕೆ ದೊಡ್ಡ ನಷ್ಟ. ಸುಪ್ರಸಿದ್ಧ ಕತೆಗಾರ, ಕಾದಂಬರಿಕಾರ, ಶ್ರೀ ಯಶವಂತ ಚಿತ್ತಾಲರು ಗಂಗಾಧರರ ಕಿರಿಯ ಸಹೋದರರು. ಉತ್ತರಕನ್ನಡ ಜಿಲ್ಲೆಯ ಹನೇಹಳ್ಳಿ ಗಂಗಾಧರ ಚಿತ್ತಾಲರ ಹುಟ್ಟೂರು. ಇವರ ವಿದ್ಯಾಭ್ಯಾಸವೆಲ್ಲ ಹನೇಹಳ್ಳಿ (ಪ್ರಾಥಮಿಕ), ಕುಮಟ (ಪ್ರೌಢಶಾಲೆ) ಗಳಲ್ಲಿ; ಪದವೀಪೂರ್ವ, ಪದವಿ ಶಿಕ್ಷಣಗಳು ಧಾರವಾಡ, ಸಾಂಗ್ಲಿ ಮತ್ತು ಮುಂಬಯಿಗಳಲ್ಲಿ.

ಐ.ಎ. ಎಂಡ ಎಸ್. ಪರೀಕ್ಷೆ ಮಾಡಿ ಭಾರತ ಸರ್ಕಾರದಲ್ಲಿ ಮುಖ್ಯ ಆಡಿಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸಿ, ವಿದೇಶಗಳಲ್ಲಿಯೂ ಸೇವೆ ಸಲ್ಲಿಸಿದರು. ಇಂಗ್ಲಿಷ್ ಕಾವ್ಯ ದಿಂದ ಪ್ರಭಾವಿತರಾಗಿ, ಕಾವ್ಯರಚನೆಗೆ ತೊಡಗಿ, 'ಕಾಲದ ಕರೆ' (1948) ಎಂಬ ಪ್ರಥಮ ಕವಿತಾ ಸಂಕಲನವನ್ನು ಪ್ರಕಟಿಸಿದರು. ಈ ಸಂಕಲನವಲ್ಲದೆ ಬೇರೆ ಬೇರೆ ವರ್ಷಗಳಲ್ಲಿ ಪ್ರಕಟವಾದ 'ಮುನುಕುಲದ ಹಾಡು' (1961), 'ಹರಿವ ನೀರು' (1970), 'ಸಂಪರ್ಕ' (1983)—ಇವೆಲ್ಲ ಒಟ್ಟಾಗಿ 1985ರಲ್ಲಿ ಗಂಗಾಧರ ಚಿತ್ತಾಲರ ಕಾವ್ಯದ 'ಸಮಗ್ರ ಸಂಪುಟ' ಪ್ರಕಟವಾಯಿತು. 1983ರಲ್ಲಿ ಚಿತ್ತಾಲ ರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತು. ಸಾಹಿತ್ಯದ ಬೇರೆ ಯಾವ ಪ್ರಕಾರದಲ್ಲಿಯೂ ಕೈಯಾಡಿಸದೆ ಕೇವಲ ಕಾವ್ಯಕ್ಕೇ ತಮ್ಮ ಬರವಣಿಗೆ ಯನ್ನು ಮೀಸಲಿಟ್ಟು, ಕವಿಯಾಗಿ ಬೆಳೆದು, ಪ್ರಮುಖ ಆಧುನಿಕ ಕನ್ನಡ ಕವಿ ಎಂದು ಪ್ರಖ್ಯಾತರಾಗಿದ್ದ ಇವರ ನಿಧನದಿಂದ ಕನ್ನಡ ಕಾವ್ಯಕ್ಕೆ ತುಂಬಲಾಗದ ನಷ್ಟ ವಾಗಿದೆ.

ಪ್ರತಿಷ್ಠಾನ ವಾರ್ತೆ

ಮಾಸ್ತಿ ಸ್ಮರಣೆ

ಸಹೃದಯ ಗೋಷ್ಠಿ ನಡಸಿಕೊಂಡು ಬರುತ್ತಿದ್ದ ಈ ಯೋಜನೆ ಜೂನ್ ತಿಂಗಳಿನಲ್ಲಿ ಕೊನೆಗೊಂಡಿತು. ಸಾಧ್ಯವಾದವಟ್ಟಿಗೂ, ಪ್ರತಿತಿಂಗಳೂ ಒಂದೊಂದು ಕಾರ್ಯಕ್ರಮವನ್ನು ಗೋಷ್ಠಿ ನಡಸಿತು. ಒಟ್ಟು ಹನ್ನೊಂದು ಉಪನ್ಯಾಸಗಳನ್ನು ಯಶಸ್ವಿಯಾಗಿ ಪೂರೈಸಿ ಕೊನೆಯ ಕಾರ್ಯಕ್ರಮದಲ್ಲಿ 'ಮಾಸ್ತಿ ಸ್ಮರಣೆ' ಹೆಸರಿನ ಗ್ರಂಥವನ್ನು ಬಿಡುಗಡೆ ಮಾಡುವುದರ ಮೂಲಕ ಯೋಜನೆಯನ್ನು ಸಮಾಪ್ತಿ ಗೊಳಿಸಿತು.

10–12–1986 ರಂದು ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯಂ ಅವರು ಬಿ.ಎಂ.ಎಸ್. ಮಹಿಳಾ ಕಾಲೇಜಿನಲ್ಲಿ ಮಾಸ್ತಿ ಸ್ಮರಣೆ ಉಪನ್ಯಾಸ ನೀಡಿದರು. ಹಾಗೆಯೇ 13–12–1987ರಂದು ಮಹಾರಾಣಿ ಕಲಾ ಕಾಲೇಜಿನಲ್ಲಿ ಡಾ॥ ಜಿ. ವಿ. ನಾರಾಯಣ ಮತ್ತು ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಉಪನ್ಯಾಸಗಳನ್ನು ನೀಡಿದರು.

15–6–1987ರಂದು ಗೋಖಲೆ ಸಂಸ್ಥೆಯ ಸಭಾಂಗಣದಲ್ಲಿ ಮಾಸ್ತಿ ಸ್ಮರಣೆ ಉಪನ್ಯಾಸಮಾಲೆಯ ಸಮಾರೋಪ ಸಮಾರಂಭ ಮತ್ತು 'ಮಾಸ್ತಿ ಸ್ಮರಣೆ' ಕೃತಿಯ ಬಿಡುಗಡೆ ಕಾರ್ಯಕ್ರಮಗಳು ನಡೆದವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ರಾದ ಶ್ರೀ ಎಂ. ಪಿ. ಪ್ರಕಾಶ್ ಅವರು ಪುಸ್ತಕ ಬಿಡುಗಡೆ ಮಾಡುತ್ತ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಸರ್ಕಾರದ ವತಿಯಿಂದ 'ಕೆಲಸ ವಹಿಸಿ ಕೊಡುವ' ಭರವಸೆ ನೀಡಿದರು. ಮುಖ್ಯ ಅತಿಥಿಗಳಾದ ಶ್ರೀ ಜಿ. ನಾರಾಯಣ ಅವರು ಪ್ರತಿಷ್ಠಾನದ ಕಾರ್ಯಗಳನ್ನು ಶ್ಲಾಘಿಸಿ ಇಂಥ ಸಂಸ್ಥೆಗಳ ಮೂಲಕ ಸರ್ಕಾರ ಕೆಲಸ ಮಾಡಿಸಬೇಕೆಂದು ಹೇಳುತ್ತ, ಪಾಂಡಿತ್ಯದ ಕೆಲಸದ ಜೊತೆಗೆ ಕೆಲವು ಜನಪರವಾದ ಸಾಹಿತ್ಯ ಯೋಜನೆಗಳನ್ನು ಪ್ರತಿಷ್ಠಾನ ಹಾಕಿಕೊಳ್ಳಬೇಕೆಂದರು. ಅಧ್ಯಕ್ಷತೆ ವಹಿಸಿದ್ದ ಡಾ॥ ಸಿದ್ಧಯ್ಯ ಪುರಾಣಿಕ ಅವರೂ ಇದಕ್ಕೆ ದನಿಗೂಡಿಸಿದರು. ಪ್ರಾಸ್ತಾವಿಕ ಭಾಷಣ ಮಾಡಿದ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರು ಪ್ರತಿಷ್ಠಾನದ ಸ್ಥಿತಿಗತಿ ಗಳನ್ನು ವಿವರಿಸಿದರು. ಮಾಸ್ತಿ ಸ್ಮರಣೆ ಉಪನ್ಯಾಸಮಾಲೆಯ ವರದಿಯನ್ನು ಸಹೃದಯಗೋಷ್ಠಿಯ ಸಂಚಾಲಕ ಶ್ರೀ ಗೀತಾಚಾರ್ಯ ಅವರು ಓದಿ, ಕಾರ್ಯಕ್ರಮ ವನ್ನು ನಡಸಿಕೊಟ್ಟರು.

ಬಿಡುಗಡೆಯಾದ 'ಮಾಸ್ತಿ ಸ್ಮರಣೆ' ಗ್ರಂಥದಲ್ಲಿ ಉಪನ್ಯಾಸಮಾಲೆಯಲ್ಲಿ ನಡೆದ ಕೆಲವು ಉಪನ್ಯಾಸಗಳೂ, ಮಾಸ್ತಿಯವರ ನಿಧನಾನಂತರ ಪತ್ರಿಕೆಗಳಲ್ಲಿ ಬಂದ

ಕೆಲವು ಗಣ್ಯರ ನೆನಪಿನ ಲೇಖನಗಳೂ, ಪ್ರತಿಷ್ಠಾನದ ಸಹೃದಯ ಗೋಷ್ಠಿ ನಡಸಿದ 'ಕಾವ್ಯಾಂಜಲಿ' ಕಾರ್ಯಕ್ರಮದಲ್ಲಿ ಓದಿದ್ದ ಮಾಸ್ತಿಯವರನ್ನು ಕುರಿತ ಕೆಲವು ಕವನಗಳೂ ಮತ್ತು ಮಾಸ್ತಿಯವರು ಅಧ್ಯಕ್ಷತೆ ವಹಿಸಿದ್ದ ಬೆಳಗಾವಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣದಲ್ಲಿ ಕನ್ನಡದ ಏಳಿಗೆಯ ವಿಷಯಕ್ಕೆ ಸಂಬಂಧಿಸಿದ ಭಾಗಗಳೂ ಹಾಗೂ ಮಾಸ್ತಿಯವರನ್ನು ಕುರಿತ ಲೇಖನಗಳ ಸೂಚಿಯೂ ಇವೆ.

ಇದೇ ಸಂದರ್ಭದಲ್ಲಿ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರಕ್ಕೆ ಶ್ರೀ ಎಸ್. ರಾಮಚಂದ್ರ ಅವರ ಮೂಲಕ ಬಂದಿದ್ದ ಬಿ.ಎಂ.ಶ್ರೀ. ಅವರ ಅಪರೂಪದ ಒಂದು ಇಂಗ್ಲಿಷ್ ಉಪನ್ಯಾಸ 'ದಿ ಇಂಪ್ರೂವ್‌ಮೆಂಟ್ ಆಫ್ ಕನ್ನಡ' ಎಂಬ ಕಿರುಪುಸ್ತಕದ ದ್ವಿತೀಯ ಮುದ್ರಣವನ್ನು ಬಿಡುಗಡೆ ಮಾಡಲಾಯಿತು. ಬಿ.ಎಂ.ಶ್ರೀ. ಅವರು ಸರ್ ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ 1911ರಲ್ಲಿ ನಡೆದ ಮೈಸೂರು ಎಕನಾಮಿಕ್ ಕಾನ್ಫರೆನ್ಸಿನ ಶಿಕ್ಷಣ ಸಮಿತಿಯಲ್ಲಿ ಮಾಡಿದ್ದ ಉಪನ್ಯಾಸದ ಪರಿಮಿತ ಸಂಖ್ಯೆಯ ಪ್ರಥಮ ಮುದ್ರಣದ ಪ್ರತಿಗಳು ದುರ್ಲಭವಾಗಿದ್ದವು. ಇದೀಗ ಕಿರು ಪುಸ್ತಕರೂಪದಲ್ಲಿ ಅಚ್ಚಾಗಿದೆ. ಇದರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಕನ್ನಡದ ಅಭಿವೃದ್ಧಿಗೆ ಮಾಡಬೇಕಾದ ಕಾರ್ಯ ಇತ್ಯಾದಿ ವಿಷಯಗಳ ಬಗೆಗೆ ಕಳಕಳಿಯ ಮಾತುಗಳಿವೆ.

ಈ ಎರಡೂ ಪುಸ್ತಕಗಳನ್ನು ಪ್ರತಿಷ್ಠಾನದ ಸದಸ್ಯರೂ ಸಹೃದಯ ಗೋಷ್ಠಿಯ ಸದಸ್ಯರೂ (ಇವರುಗಳಿಗಾಗಿ ನೀಡುವ ರಿಯಾಯಿತಿ ದರದಲ್ಲಿ)* ಕೊಂಡುಕೊಂಡು ನೆರವಾಗಬೇಕಾಗಿ ಕೋರಲಾಗಿದೆ.

ಶ್ರೀಕೃಷ್ಣಬಾಲಲೀಲೆ ಭಾಗ 1 : ಬಿಡುಗಡೆ ಸಮಾರಂಭ

1984–85ನೇ ಸಾಲಿನ ಕೇಂದ್ರಸರ್ಕಾರದ ಯೋಜನೆಯಡಿ ಮುದ್ರಣವಾಗಿದ್ದ ತಿಮ್ಮಪ್ಪದಾಸರ ಶ್ರೀಕೃಷ್ಣಬಾಲಲೀಲೆ ಭಾಗ–1 ಅವರ ಗುರುಗಳೂ ಪಿತಾಮಹರೂ ಆದ ವಾಸುದೇವಾರ್ಯರ ಸ್ಥಳವಾದ ತುಮಕೂರು ಜಿಲ್ಲೆ ಚಿಕ್ಕ-ನಾಯ್ಕನ ಹಳ್ಳಿಯಲ್ಲಿ ದಿನಾಂಕ 26–7–1987ರಂದು ವಿಜೃಂಭಣೆಯಿಂದ ಬಿಡುಗಡೆಯಾಯಿತು. ಡಿ.ವಿ.ಜಿ. ಜನ್ಮಶತಮಾನೋತ್ಸವ ಸಮಿತಿ, ಚಿಕ್ಕನಾಯ್ಕನ ಹಳ್ಳಿಯ ಜಿ.ವಿ.ನಾ. ಟ್ರಸ್ಟ್ ಮತ್ತು ಪ್ರತಿಷ್ಠಾನಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಡಿ.ವಿ.ಜಿ. ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಈ ಗ್ರಂಥ ಬಿಡುಗಡೆಯಾದುದು

---

* 'ಮಾಸ್ತಿ ಸ್ಮರಣೆ': ಡೆಮಿ 150 ಪುಟಗಳು. ಬೆಲೆ: ರೂ. 15–00; 'The Improvement of Kannada': ಕ್ರೌನ್ ಅಷ್ಟದಳ 24 ಪುಟಗಳು; ಬೆಲೆ: ರೂ. 6–00. (ಪ್ರತಿಷ್ಠಾನದ ಸದಸ್ಯರಿಗೆ ಶೇ. 25 ರಿಯಾಯಿತಿ; ಸಹೃದಯ ಗೋಷ್ಠಿ ಸದಸ್ಯರಿಗೆ ಶೇ. 15; ಇತರರಿಗೆ ಶೇ. 10.)

ತುಂಬ ಔಚಿತ್ಯಪೂರ್ಣವಾಗಿತ್ತು. ಪ್ರತಿಷ್ಠಾನದ ಅಧ್ಯಕ್ಷರೂ ಗ್ರಂಥದ ಸಂಪಾದಕರೂ ಆದ ಪ್ರೊ|| ಎಂ.ವಿ.ಸೀ. ಅವರು ಗ್ರಂಥ ಪರಿಚಯ ಮತ್ತು ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀ ಜಿ. ನಾರಾಯಣ ಅವರು ಕೃತಿಯನ್ನು ಬಿಡುಗಡೆ ಮಾಡಿದರು. ಪ್ರೊ|| ಅ.ರಾ. ಮಿತ್ರ ಅವರು ಡಿ.ವಿ.ಜಿ. ಅವರನ್ನು ಕುರಿತು ಉಪನ್ಯಾಸ ನೀಡಿದರು. ಸ್ಥಳೀಯ ಸಾಹಿತಿಗಳಾದ ಶ್ರೀ ಆರ್. ಬಸವರಾಜ್ ಅವರು ಈ ಸ್ಮರಣೀಯ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಸ್ಥಳೀಯ ಮಾಜಿ ಸಚಿವರಾದ ಶ್ರೀ ಎನ್. ಬಸವಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಚಿಕ್ಕನಾಯ್ಕನ ಹಳ್ಳಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ತೀ.ನಂ.ಶ್ರೀ. ಸಭಾಂಗಣದಲ್ಲಿ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಶ್ರೀ ಕೃಷ್ಣಬಾಲಲೀಲೆ ಭಾಗ–1 ಡೆಮ್ಮಿ ಅಷ್ಟದಳಾಕಾರದ ಸುಮಾರು 800 ಪುಟಗಳಷ್ಟಿದೆ. ಇದರ ಬೆಲೆ 75–00 ರೂಪಾಯಿಗಳು. ಪ್ರತಿಷ್ಠಾನದ ಸದಸ್ಯರಿಗೆ ಶೇ. 50ರಷ್ಟು ರಿಯಾಯಿತಿಯಲ್ಲಿ ಇದು ದೊರೆಯುತ್ತದೆ. ಇದೇ ಗ್ರಂಥದ ಮುಂದುವರಿದ ಭಾಗ–2 ಮುದ್ರಣವಾಗುತ್ತಿದ್ದು ಇದೂ ಸಹ ಸರಿಸುಮಾರು 800 ಪುಟಗಳಷ್ಟೇ ಆಗುತ್ತದೆ. ಕೀರ್ತನೆಗಳ ರೂಪದಲ್ಲಿರುವ ಈ ಕೃತಿ ಸಂಸ್ಕೃತ ಭಾಗವತ ದಶಮಸ್ಕಂಧದ ಕನ್ನಡ ರೂಪಾಂತರ. ಈ ಗೇಯಕಾವ್ಯ 19ನೇ ಶತಕದ ಒಂದು ಅಪೂರ್ವ ಕೃತಿ. ಇದರ ಬೆಲೆಯೂ ರೂ. 75. (ಎರಡೂ ಸಂಪುಟಗಳಿಗೆ ಮುಂಗಡವಾಗಿ ಹಣ ಕಳಿಸುವ ಪ್ರತಿಷ್ಠಾನದ ಸದಸ್ಯರಿಗೆ ಅವುಗಳನ್ನು 60 ರೂಪಾಯಿಗಳಿಗೆ ಕೊಡಲಾಗುವುದು. ಅಂಚೆ ಮೂಲಕ ಕಳಿಸಿದರೆ ಅಂಚೆ ವೆಚ್ಚವನ್ನು ಸದಸ್ಯರೇ ವಹಿಸಿಕೊಳ್ಳಬೇಕು.)

ಸಾಹಿತ್ಯ ಸೇವೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಉದ್ದೇಶಗಳಲ್ಲಿ 'ಸಾಹಿತ್ಯ ಸೇವೆ'ಯೂ ಒಂದು. ಸಾಹಿತ್ಯ, ಸಂಶೋಧನಾ ಕೆಲಸಗಳನ್ನು ತಾನೇ ನೇರವಾಗಿ ಮಾಡುವುದರ ಜೊತೆಗೆ, ಇತರ ಸಾಹಿತ್ಯಾಸಕ್ತರಿಗೂ ವಿದ್ವಾಂಸರಿಗೂ ಸಂಸ್ಥೆಗಳಿಗೂ ಆ ಪ್ರಕಾರದ ಕೆಲಸಗಳಲ್ಲಿ ಸಹಕಾರವನ್ನೂ ನೆರವನ್ನೂ ನೀಡುತ್ತ ಬಂದಿದೆ. ಅದರಂತೆ ಪ್ರಸ್ತುತ ಈ ಕೆಳಕಂಡ ಎರಡು ಸೇವಾ ಕಾರ್ಯಗಳನ್ನು ಕೈಗೊಂಡಿದೆ :

1. **'ಮಲೆಯರಾಜನ ಕಾವ್ಯ' ಸಂಪಾದನೆ :** ವಾರ್ಧಕ ಷಟ್ಪದಿಯಲ್ಲಿರುವ ಈ ಕಾವ್ಯವನ್ನು ಹಸ್ತಪ್ರತಿಯಿಂದ ಪ್ರತಿಮಾಡಿ, ಪಾಠಾಂತರ ಸಂಕಲನ ಮಾಡಿ, ಪರಿಷ್ಕರಿಸಿ ಸಂಪಾದಿಸಿಕೊಡುವ ಕಾರ್ಯವನ್ನು ಡಾ|| ಸಿದ್ದಯ್ಯ ಪುರಾಣಿಕ ಅವರ ಕೋರಿಕೆಯ ಮೇರೆಗೆ ಅವರಿಗಾಗಿ ಮಾಡಲಾಗುತ್ತಿದೆ. ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್ ಮತ್ತು ಪ್ರೊ|| ಎಂ.ವಿ.ಸೀ. ಅವರು ಈ ಕೆಲಸವನ್ನು ಮಾಡುತ್ತಿದ್ದಾರೆ.

2. **ಡಿ.ವಿ.ಜಿ. ಜನ್ಮಶತಮಾನೋತ್ಸವ ಸಮಿತಿಗೆ ಕಾರ್ಯಾಲಯದ ನೆರವು :** ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಇಡೀ ವರ್ಷ ನಾಡಿನಾದ್ಯಂತ ನಡಸುತ್ತಿರುವ ಡಿ.ವಿ.ಜಿ. ಜನ್ಮಶತಮಾನೋತ್ಸವ ಕಾರ್ಯಕಲಾಪಗಳಿಗಾಗಿ ಗೋಖಲೆ ಸಂಸ್ಥೆ ರಚಿಸಿರುವ 'ಡಿ. ವಿ. ಜಿ. ಜನ್ಮಶತಮಾನೋತ್ಸವ ಸಮಿತಿ'ಯ ಕೋರಿಕೆಯ ಮೇರೆಗೆ ಪ್ರತಿಷ್ಠಾನದ ಕಚೇರಿಯ ಹಾಗೂ ಸಿಬ್ಬಂದಿಯ ನೆರವನ್ನು ನೀಡಲಾಗಿದೆ. ಪ್ರತಿಷ್ಠಾನದ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ ಸಿಬ್ಬಂದಿಯ ಮತ್ತು ಕಚೇರಿಯ ಯಂತ್ರೋಪಕರಣಗಳ ಸೇವೆಯನ್ನು ಎರವಲಾಗಿ ನೀಡಲಾಗಿದೆ. ಈ ಸೇವೆಗಾಗಿ ಉತ್ಸವ ಸಮಿತಿ ಪ್ರತಿಷ್ಠಾನಕ್ಕೆ ಸೂಕ್ತ ಸೇವಾ ಶುಲ್ಕವನ್ನು ನೀಡುತ್ತಿದೆ.

ಹೊಸ ಸದಸ್ಯರು

ಸಾಮಾನ್ಯ ಸದಸ್ಯರು : ಶ್ರೀಯುತರುಗಳಾದ ಎಸ್. ಕೃಷ್ಣಮೂರ್ತಿ (ಆನೇಕಲ್ ಕೃಷ್ಣಮೂರ್ತಿ ಕಾಟಿ), ಗುರುರಾಜ ಕುಲಕರ್ಣಿ, ಡಿ. ಆರ್. ಭಾಷ್ಯಾಕಾರ್, (ಶ್ರೀಮತಿ) ಡಾ॥ ಅನುಪಮಾ ನಿರಂಜನ, ಎಸ್. ವಿ. ಶ್ರೀನಿವಾಸ ರಾವ್ (ಬೆಂಗಳೂರು) ; ಡಾ॥ ಆರ್. ಎಸ್. ಶಿವಗಣೇಶಮೂರ್ತಿ (ಮೈಸೂರು) ; ಜಿ. ಸುಬ್ರಹ್ಮಣ್ಯ ಶ್ರೌತಿ (ಗರ್ಗೇಶ್ವರಿ).

ಸಾಮಾನ್ಯದಿಂದ ಆಜೀವಕ್ಕೆ ಪರಿವರ್ತನೆಯಾದವರು : ಶ್ರೀಯುತರುಗಳಾದ ಡಾ॥ ನ. ಸುಬ್ರಹ್ಮಣ್ಯ, (ಶ್ರೀಮತಿ) ವಸಂತಲಕ್ಷ್ಮೀ ಕೋ., ಬಿ. ಎಸ್. ರಾಮ ಪ್ರಸಾದ್, ದೇವರಕೊಂಡಾ ರೆಡ್ಡಿ, ಮಾವಿನಕೆರೆ ರಂಗನಾಥನ್ (ಬೆಂಗಳೂರು).

ಆಜೀವ ಸದಸ್ಯರು : ಶ್ರೀಯುತರುಗಳಾದ ಡಾ॥ ತಾಳ್ತಜೆ ವಸಂತಕುಮಾರ್ (ಮುಂಬಯಿ) ; ಟಿ. ಚಂದ್ರಶೇಖರ್, ಬಿ.ಜಿ. ಮಳಲಿಗೌಡ, ಗ.ಬ. ನಾಗಭೂಷಣ್, (ಶ್ರೀಮತಿ) ಹೆಚ್. ಜಯಮ್ಮ (ಬೆಂಗಳೂರು).

ವೆಂಕಟರಂಗಪ್ಪ ಸ್ಮಾರಕ ದತ್ತಿನಿಧಿ ಸ್ಥಾಪನೆ

ಶ್ರೀ ಎ. ನರಸಿಂಹಮೂರ್ತಿ, ಬೆಂಗಳೂರು ಅವರು ಶ್ರೀ ವೆಂಕಟರಂಗಪ್ಪ ಅವರ ಹೆಸರಿನಲ್ಲಿ ಪ್ರತಿಷ್ಠಾನದಲ್ಲಿ 3,000–00 ರೂ.ಗಳ ದತ್ತಿಯನ್ನು ಸ್ಥಾಪಿಸಿದ್ದಾರೆ. ಈ ದತ್ತಿನಿಧಿಯಲ್ಲಿ ಪ್ರತಿವರ್ಷ ಅವರ ಆಶಯದಂತೆ ಹೊಸಗನ್ನಡ ಸಾಹಿತ್ಯ, ವಿಮರ್ಶೆಯ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಂದೊಂದು ಉಪನ್ಯಾಸವನ್ನು ಏರ್ಪಡಿಸಲಾಗುವುದು. ಪ್ರತಿಷ್ಠಾನದಲ್ಲಿ ತಮ್ಮ ತಾತನವರ ಹೆಸರಿನಲ್ಲಿ ದತ್ತಿನಿಧಿಯನ್ನು ಸ್ಥಾಪಿಸಲು ನೆರವಾಗಿರುವುದಕ್ಕಾಗಿ ಶ್ರೀಯುತರಿಗೆ ಪ್ರತಿಷ್ಠಾನ ಕೃತಜ್ಞವಾಗಿದೆ.

ಮುದ್ರಿತ ಪುಸ್ತಕಗಳ ದಾನ

ಡಾ॥ ಕೆ. ಶ್ರೀಕಂಠಯ್ಯನವರು 221-00 ರೂ. ಮೌಲ್ಯದ ತಮ್ಮ ಗ್ರಂಥಗಳನ್ನು ಪ್ರತಿಷ್ಠಾನಕ್ಕೆ ನೀಡಿ ಅದರ ಲಾಭಾಂಶವನ್ನು 'ಶ್ರೀ ಭವನ ನಿಧಿ'ಗೂ ಟಿ. ಎಸ್. ವೆಂಕಣ್ಣಯ್ಯ ನಿಧಿಗೂ ಕೂಡಿಸಿಕೊಳ್ಳಲು ಸೂಚಿಸಿದ್ದಾರೆ.

ಶ್ರೀ ಎಂ. ವಿ. ವೆಂಕಟೇಶಮೂರ್ತಿ ಮತ್ತು ಎಂ. ವಿ. ಸತ್ಯನಾರಾಯಣ ಅವರು ವಿ.ಸೀ. ಅವರ 'ಪಟ್ಟಬಂಧ' ಎಂಬ ನಾಟಕಕೃತಿಯ 90 ಪ್ರತಿಗಳನ್ನು (ಒಂದು ಪ್ರತಿಯ ಬೆಲೆ 6-00 ರೂ.) ಪ್ರತಿಷ್ಠಾನಕ್ಕೆ ನೀಡಿ ಅದರ ಮಾರಾಟದಿಂದ ಬಂದ ಹಣವನ್ನು ತಾವು ಸ್ಥಾಪಿಸಲಿರುವ ವಿ.ಸೀ. ದತ್ತಿನಿಧಿಗೆ ಸೇರಿಸಿಕೊಳ್ಳಲು ಸೂಚಿಸಿದ್ದಾರೆ.

ಈ ಮಹನೀಯರಿಗೆ ಪ್ರತಿಷ್ಠಾನ ಕೃತಜ್ಞವಾಗಿದೆ.

ಹಸ್ತಪ್ರತಿಗಳ ದಾನ

1. ಶ್ರೀ ಅಜ್ಜನಕೋಡಿ ಗಣಪತಿ ಭಟ್, ಅಜ್ಜನಕೋಡಿ ಮನೆ, ಕಾಸರಗೋಡು—ಇವರಿಂದ (ಶ್ರೀ ಕೆ. ಪಿ. ರಾಜಗೋಪಾಲ್, ಬೆಂಗಳೂರು, ಇವರ ಮೂಲಕ) 3 ಓಲೆಗರಿ ಗ್ರಂಥಗಳು ಬಂದಿವೆ. ಇದರಲ್ಲಿ ಎರಡು ತಿಗಳಾರಿ ಲಿಪಿಯಲ್ಲಿಯೂ ಒಂದು ಕನ್ನಡ ಲಿಪಿಯಲ್ಲಿಯೂ ಇವೆ.

2. ಶ್ರೀ ಆರ್. ಕೃಷ್ಣರಾವ್, ಬೆಂಗಳೂರು, ಅವರು 'ತಿಲಕ' ವ್ಯಾಖ್ಯಾನ ಇರುವ, 1805ರ ಮುಂಬಯಿ ಮುದ್ರಣದ 'ವಾಲ್ಮೀಕಿ ರಾಮಾಯಣ'ದ ಅಪೂರ್ವ ಪ್ರತಿಯೊಂದನ್ನು ಉದಾರವಾಗಿ ನೀಡಿದ್ದಾರೆ.

3. ಶ್ರೀ ಬಿ. ಸುಬ್ರಹ್ಮಣ್ಯ ಶ್ರೌತಿ, ಗರ್ಗೇಶ್ವರಿ, ಅವರು ತಮ್ಮಲ್ಲಿದ್ದ 'ಸಹಸ್ರಾಯು' ಎಂಬ ಹಳೆಯ ಮುದ್ರಿತ ಪ್ರತಿಯನ್ನು, ಅಪರ ಪ್ರಯೋಗ, ಪ್ರಯೋಗ ಮತ್ತು ಇತರ ವಿಧಿಗಳು, ಯಜುರ್ವೇದ ಅರಣ್ಯಕ, ಗುಣಹೋಮ, ಧರ್ಮಶಾಸ್ತ್ರ, ಪ್ರಾಚೀನ ವ್ರತಚೂಡಾಮಣಿ ಮತ್ತು ಖಾದಿರ ಗೃಹ್ಯಸೂತ್ರ ಎಂಬ ಏಳು ದೇವನಾಗರಿ ಲಿಪಿಯ ಹಸ್ತಪ್ರತಿಗಳನ್ನು ಉದಾರವಾಗಿ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರಕ್ಕೆ ನೀಡಿದ್ದಾರೆ.

ಈ ಎಲ್ಲ ಮಹನೀಯರಿಗೂ ಪ್ರತಿಷ್ಠಾನ ಹೃತ್ಪೂರ್ವಕವಾದ ಕೃತಜ್ಞತೆಯ ವಂದನೆಗಳನ್ನು ಅರ್ಪಿಸುತ್ತದೆ.

ಗ್ರಂಥ ದಾನ

'ಅಭಿಜಾತ' (3 ಪ್ರತಿ)—ಶ್ರೀಮತಿ ಜಯಲಕ್ಷ್ಮೀ ನಾರಾಯಣ, 'ಅಮೃತ ಧಾರೆ' ಮತ್ತು 'ಸೀಪಲ್ಲಿ ಸಮ್ಮವರೆ' — ಶ್ರೀ ಓ. ಮ. ನಾಗಯ್ಯ: 'ಕಣಾದ'

(ಸಂಪಾದಿತ)-- ಕನ್ನಡ ಸಾಂಸ್ಕೃತಿಕ ಸಂಘ ; 'ಋತುಶಾಂತ್ಯನುಷ್ಠಾನ'—ಪ್ರಸಾದ ಪ್ರಕಾಶನ; 'ಯಕ್ಷಗಾನ ಛಂದೋ ವಿವೇಕ'—ಶ್ರೀ ಸೀತಾರಾಮ ಕೆದಿಲ್ಲಾಯ, ಕ.ಪು.; 'ಅಪ್ಸರೆ' (ಕವನ ಸಂಕಲನ) — ಶ್ರೀ ಆನೇಕಲ್ ಕೃಷ್ಣಮೂರ್ತಿ, 'ಕಾಟಿ'; 'ಶಾಮರಾಯನ ಸತ್ಯ'—ಅಂಕಣ ಪ್ರಕಾಶನ ; 'ನನ್ನ ಪಾಡಿಗೆ ನಾನು' (2 ಪ್ರತಿ), 'ಬಹುಮಾನಿತ ಲೇಖನಗಳು', 'ಅಂಕಣ' (ಮಾಸ್ತಿ ವಿಶೇಷಾಂಕ) — ಅಂಕಣ ಪ್ರಕಾಶನ; 'ಹಕ್ಕಿ ಪಲ್ಟಿ'—ಶ್ರೀ ಎಸ್. ಮಂಜುನಾಥ; 'ಹವ್ಯಕರ ಶೋಭಾನೆಗಳು' —ಶ್ರೀ ಟಿ. ಕೇಶವ ಭಟ್ಟ ; 'ಕೆ. ವೆಂಕಟಪ್ಪ : ಸವಿನೆನಪು', 'ಹಿತಚಿಂತನ' ಮತ್ತು 'ಶೃಂಗಾರ ವಿಹಾರ' — ಪ್ರೊ॥ ಎಂ. ವಿ. ಸೀತಾರಾಮಯ್ಯ ; 'ಕವನ ಸೌರಭ'— ಕರ್ನಾಟಕ ಲೇಖಕಿಯರ ಸಂಘ (ರಿ.) ; 'ಸಾಹಿತ್ಯ ಸಮುಚ್ಚಯ'—ವಿದ್ವಾನ್ ಕೆ. ವೆಂಕಟರಾಯಶಾಚಾರ್ಯ : ಇವುಗಳ ಜೊತೆಗೆ—

ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸು. ರೂ. 400-00 ಬೆಲೆಯ ಬೇರೆ ಬೇರೆ ಲೇಖಕರ 70 ಪುಸ್ತಕಗಳನ್ನು ದಾನಮಾಡಿರುತ್ತಾರೆ.

ಗ್ರಂಥದಾನ ಮಾಡಿದ ಈ ಎಲ್ಲರಿಗೂ ಪ್ರತಿಷ್ಠಾನ ಕೃತಜ್ಞವಾಗಿದೆ.

ದಾನಿಗಳು

ಕಟ್ಟಡ ನಿಧಿ

1.	ಶ್ರೀಮತಿ ಎಚ್. ಪ್ರಭಾ, ಬೆಂಗಳೂರು	ರೂ. 200-00

ಶಾಶ್ವತ ನಿಧಿ

1.	ಪ್ರೊ॥ ಎಂ. ವಿ. ಸೀತಾರಾಮಯ್ಯ, ಬೆಂಗಳೂರು	ರೂ. 100-00
2.	ಪ್ರಸನ್ನ, ರಾಮನಗರಂ, ಬೆಂಗಳೂರು	ರೂ. 10-00
3.	ನಾ. ಗೀತಾಚಾರ್ಯ	ರೂ. 10-00

ಪ್ರತಿಷ್ಠಾನಕ್ಕೆ ಸಹಾಯಧನ

1.	ಶ್ರೀ ಕಚ್ಚಿಗೆರೆ ಸಿದ್ದೇಗೌಡರು, ಮಂಡ್ಯ	ರೂ. 101-00
2.	ಶ್ರೀ ಶೇಷಾದ್ರಿ ಅಯ್ಯಂಗಾರ್, ಬೆಂಗಳೂರು	ರೂ. 250-00

ಈ ಎಲ್ಲ ದಾನಿಗಳಿಗೂ ಪ್ರತಿಷ್ಠಾನ ಕೃತಜ್ಞವಾಗಿದೆ.

ತಿಮ್ಮಪ್ಪದಾಸರ
ಶ್ರೀ ಕೃಷ್ಣಬಾಲಲೀಲೆ

ಸಂಪಾದಕ : ಪ್ರೊ॥ ಎಂ. ವಿ. ಸೀತಾರಾಮಯ್ಯ

ಶ್ರೀಮದ್ಭಾಗವತದ ದಶಮ ಸ್ಕಂಧವನ್ನು ಅನುಸರಿಸಿ ಸ್ವತಂತ್ರ ಕೃತಿ ಎನ್ನುವ ಮಟ್ಟಿಗೆ ರಾಗ ತಾಳ ಸಹಿತವಾದ ಕೀರ್ತನೆಗಳ ರೂಪದಲ್ಲಿ ಬರೆದಿರುವ ಬೃಹತ್ಕೃತಿ. (ಸಂಪಾದಕರ ಕವಿಕೃತಿವಿಷಯಕ ಪೀಠಿಕೆ, ಯಥೋಚಿತ ಟಿಪ್ಪಣಿಗಳೂ ಇವೆ.)

ಇದು ಎರಡು ಸಂಪುಟಗಳಲ್ಲಿ ಪ್ರಕಟವಾಗುವುದು. ಡೆಮಿ $\frac{1}{8}$ ಆಕಾರದಲ್ಲಿ ಮುದ್ರಣವಾಗುವ ಪ್ರತಿ ಸಂಪುಟವೂ ಸುಮಾರು 800 ಪುಟಗಳಷ್ಟಿರುತ್ತದೆ.

ಪ್ರತಿ ಸಂಪುಟದ ಬೆಲೆ ರೂ. 75-00.

ಪ್ರತಿಷ್ಠಾನದ ಸದಸ್ಯರಿಗೆ ಶೇ. 50 ರಿಯಾಯಿತಿ ಉಂಟು.

ಮೊದಲ ಸಂಪುಟ ಈಗ ಬಿಡುಗಡೆಯಾಗಿ, ಪ್ರತಿಗಳು ಮಾರಾಟಕ್ಕಿವೆ.

ಇದೇ ನೊವೆಂಬರ್ 30 ರೊಳಗೆ ಮುಂಗಡವಾಗಿ ಹಣ ಕಳಿಸಿಕೊಡುವ ಪ್ರತಿಷ್ಠಾನದ ಸದಸ್ಯರಿಗೆ, ಎರಡು ಸಂಪುಟಗಳನ್ನೂ ಒಟ್ಟಿಗೆ ಕೊಂಡುಕೊಂಡರೆ, ಎರಡೂ ಸಂಪುಟಗಳನ್ನು 60 ರೂ.ಗಳಿಗೆ ಕೊಡಲಾಗುವುದು ; ಇತರರಿಗೆ 80 ರೂ. ಗಳಿಗೆ ಕೊಡಲಾಗುವುದು.

ಅಂಚೆ ವೆಚ್ಚ ಪ್ರತ್ಯೇಕ.

ಶ್ರೀ ಲಕ್ಷ್ಮೀ ಪ್ರಿಂಟರ್ಸ್, ಕತ್ರಿಗುಪ್ಪೆ ಹತ್ತಿರ, ಬೆಂಗಳೂರು-೫೬೦ ೦೮೫.

ಇತರ ಪ್ರಕಟನೆಗಳು

(ಇವುಗಳ ಮಾರಾಟದಿಂದ ಬಂದ ಹಣ ಪ್ರತಿಷ್ಠಾನದ ನಿಧಿಗೆ ಸೇರುತ್ತದೆ.)

1.	ಅಧ್ಯಯನ (ಡಾ॥ ಶಂ. ಬಾ. ಜೋಶಿ ಅಭಿನಂದನ ಗ್ರಂಥ) (ಡಾ॥ ಶಂ. ಬಾ. ಜೋಶಿ ಅಭಿನಂದನ ಸಮಿತಿ ಕೊಡುಗೆ)	50-00
2.	ಕವಿಜಿಹ್ವಾಬಂಧನ (ಶ್ರೀಮತಿ ಕೆ. ಶಾಂತ ಅವರ ಕೊಡುಗೆ)	2-00
3.	ಆಸ್ವಾದ (ಪ್ರೊ॥ ಎಂ.ವಿ.ಸೀ. ಅಭಿನಂದನ ಗ್ರಂಥ)	75-00
4.	ಕಾಣಿಕೆ (ಕವನ ಸಂಕಲನ)	5-00
5.	ಹಳೆ ಬೇರು ಹೊಸ ಚಿಗುರು (ಕವನ ಸಂಕಲನ)	5-00
6.	ಪಟ್ಟಬಂಧ (ನಾಟಕ) ವಿ.ಸೀ.	6-00
6.	ಪ್ರೊ॥ ಎಂ.ವಿ.ಸೀ. ಅವರ ಪುಸ್ತಕಗಳು :	
	[ಸೆಟ್ ಪುಸ್ತಕ ಕೊಂಡರೆ	35-00]
	1. ಕವಿಯ ಹೆಂಡತಿ (ನಾಟಕ)	2-00
	2. ಸ್ವಯಂವರ (ನಾಟಕ)	2-00
	3. ಸ್ನೇಹದ ಕಾಣಿಕೆ (ಕಾದಂಬರಿ)	3-00
	4. ಕನ್ನಡಮ್ಮನ ಕೊರಗು	8-00
	5. ಹೊಸಗನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು	5-00
	6. ರಾಘವ ಕವನ ಕೋಶ (7, 8, 9ರ ಕವನಗಳ ಸಂಗ್ರಹ)	20-00
	7. ಗೀತಭಾರತಿ	5-00
	8. ಹಂಸ ಪಥ	10-00
	9. ಮುಗಿಯದ ಮಾಯೆ	5-00
	10. ನಿಲ್ದಾಣಗಳ ನಡುವೆ (ಕಥಾಸಂಗ್ರಹ) (ಸೆಟ್‌ಗೆ 6 ಅಥವಾ 7, 8, 9ನ್ನು ಕೊಡಲಾಗುತ್ತದೆ)	20-00
7.	ನಾಡೋಜ ಬಿ.ಎಂ.ಶ್ರೀ.	5-00

ಸಿದ್ಧತೆಯಲ್ಲಿ

1. ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (ಅಚ್ಚಿನಲ್ಲಿ)
2. ಶ್ರೀ ಕೃಷ್ಣಬಾಲಲೀಲೆ : ಭಾಗ 2 (ಅಚ್ಚಿನಲ್ಲಿ)
   (ತಿಮ್ಮಪ್ಪದಾಸರ ಕೀರ್ತನರೂಪದ ಭಾಗವತ ಗ್ರಂಥ)
3. ರಸಮಂಜರಿ (ಜಾಯೇಂದ್ರನ ಲಕ್ಷಣ ಗ್ರಂಥ)
4. ಕುಮಾರವ್ಯಾಸ ಭಾರತ ಸಂಗ್ರಹ (ಬಿ.ಎಂ.ಶ್ರೀ. ಮತ್ತು ಟಿ.ಎಸ್.ವೆಂ. ಸಂಪಾದಿಸಿದ್ದು)

ಲೋಚನ (ಷಾಣ್ಮಾಸಿಕ ವಿದ್ವತ್ ಪತ್ರಿಕೆ) ಬಿಡಿ ಪ್ರತಿ ರೂ. 6-00

ಪ್ರತಿಷ್ಠಾನದ ಸದಸ್ಯರಿಗೆ ಉಚಿತ. ವಾರ್ಷಿಕ ಚಂದಾ 10-00

ಆಜೀವ 100-00

ಪ್ರತಿಷ್ಠಾನದ ಸದಸ್ಯತ್ವ ವಾರ್ಷಿಕ ರೂ. 25. ಆಜೀವ ರೂ. 250.

ಸಹೃದಯ ಗೋಷ್ಠಿ ಸದಸ್ಯತ್ವ ವಾರ್ಷಿಕ ರೂ. 10. ಆಜೀವ ರೂ. 100.

ಪ್ರತಿಷ್ಠಾನದ ಪ್ರಕಟನೆಗಳು

1.	ಮಣಿಹ (ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ)	50–00
2.	ಬೇಂದ್ರೆ ಸ್ಮೃತಿ (ಸಾಹಿತ್ಯ ಭಂಡಾರದಲ್ಲೂ ದೊರೆಯುತ್ತದೆ)	5–00
3.	ಸರ್ವಜ್ಞ ವಚನಗಳು*	15–00
4.	ಸೂತ ಭಾರತ*	15–00
5.	ಶ್ರೀ ಕೃಷ್ಣದೇವರಾಯ ದಿನಚರಿ*	10–00
6.	ಹಸ್ತಪ್ರತಿ ಶಾಸ್ತ್ರ*	15–00
7.	ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯ	4–00
8.	ಭಾರತದ ಶ್ರೀಕೃಷ್ಣ	6–00
9.	ಮಾಸ್ತಿ ಸ್ಮರಣೆ	15–00

ದತ್ತಿ ಉಪನ್ಯಾಸ ಮಾಲೆ

10,	ಮೂರು ದತ್ತಿ ಉಪನ್ಯಾಸಗಳು	10–00
11.	ವೈವಸ್ವತ ಮನು	5–00
12.	ಮೂರು ದತ್ತಿ ಉಪನ್ಯಾಸಗಳು—೧೯೮೪	10–00
13.	ದತ್ತಿ ಉಪನ್ಯಾಸಗಳು—೧೯೮೬	10–00

ತಿಮ್ಮಪ್ಪದಾಸ ಪ್ರಕಾಶನ ಮಾಲೆ

14.	ಕೀರ್ತನ ಕುಸುಮಾಂಜಲಿ	10–00
15.	ಧ್ರುವ ಚರಿತ್ರೆ*	15–00
16.	ಶ್ರೀ ಕೃಷ್ಣಬಾಲಲೀಲೆ ಭಾಗ - ೧*	75–00

ಶ್ರೀ ಜನ್ಮಶತಾಬ್ದಿ ಕೃತಿಮಾಲೆ

17.	ಶ್ರೀವಾಣಿ (ಸೂಕ್ತಿ ಸಂಗ್ರಹ)	1–00
18.	ಆಚಾರ್ಯ ಬಿ.ಎಂ.ಶ್ರೀ. (ಜೀವನ ಚಿತ್ರ)	2–00
19.	ಕನ್ನಡ ಕಣ್ವ ಬಿ.ಎಂ.ಶ್ರೀ. (ಮಕ್ಕಳಿಗೆ)	1–50
20.	ಶ್ರೀಯವರ ಆಯ್ದ ಕವನಗಳು	2–00
21.	ಶ್ರೀನಿಧಿ (ಸಂಸ್ಮರಣ ಸಂಪುಟ)	60–00
22.	B.M.S. The Man and His Mission	25–00
23.	ಶ್ರೀಗಂಧ (ಸಂಸ್ಮರಣ ಸಂಚಿಕೆ)	10–00
24.	ಇಂಗ್ಲಿಷ್ ಗೀತಗಳು (ಅಂಗ್ಲ ಮೂಲ ಕವನಗಳೊಂದಿಗೆ)	20–00
25.	ಲೋಚನ ('ಶ್ರೀ' ವಿಶೇಷಾಂಕ)	10–00
26.	The Improvement of Kannada—B·M.Sri	6–00

---

* ಈ ಪುಸ್ತಕಗಳಿಗೆ ಪ್ರತಿಷ್ಠಾನದ ಸದಸ್ಯರಿಗೆ ಶೇ. 50 ರಿಯಾಯಿತಿ.